Canar

150.

ÆSOP'S FABLES.

THIRD EDITION.

ಈಸೋಪನ ನೀತಿಕಥೆಗಳು.

ಮೂರನೇ ಛಾಪೆ.

MANGALORE:
PFLEIDERER & RIEHM, MISSION BOOK-SHOP.
1865.

ÆSOP'S FABLES

IN CANARESE.

ಈಸೋಪನ

ನೀತಿಕಥೆಗಳು.

THIRD EDITION.



MANGALORE:
PFLEIDERER & RIEHM, MISSION BOOK-SHOP.
1865.

PRINTED BY PLEBST & STOLZ,
BASEL MISSION PRESS,
MANGALORE.

ಇಸೋಪನ

ನೀತಿಕಥೆಗಳು.

(ಈ ಇಸೋಪನು ೨೪೦೦ ವರುಷಗಳ ಹಿಂದೆ ಯವನರಲ್ಲಿದ್ದ ಒಬ್ಬ ವಿದ್ವಾಂಸನು.)

೧. ನೀತಿಕಥೆ.

ನಾಯಿಯೂ ಅದರ ನೆರಳೂ.

ಒಂದಾನೊಂದು ನಾಯಿ ತನ್ನ ಬಾಯ್ಯೊಳಗೆ ಮಾಂಸದ ಕರಣಿ ಕಚ್ಚಿ ಕೊಂಡು ಹೊಳೆ ದಾಟಿ ಆಚೇ ಕಡೆಗೆ ಹೋಗೋ ಸಮಯದಲ್ಲಿ ನೀರೊಳಗೆ ತನ್ನ ನೆರಳ ತಾನೆ ಕಂಡು, ಇದು ಎರಡನೇ ನಾಯಿ, ಮಾಂಸವ ಕಚ್ಚಿ ಕೊಂಡು ಹೋಗುತ್ತದೆಂದು ನೆನಿಸಿ ಅದರ ಬಾಯ್ಯೊಳಗಿನ ಮಾಂಸವ ಕಸುಕೊಳ್ಳ ಬೇಕೆಂಬ ಕಾರ್ಪಣ್ಯಮನಸ್ಸು ಹಿಡಿದು ತನ್ನ ಬಾಯ್ಯಿ ತೆರದು, ಅದರನ್ನ ಹಿಡಿಯಲಿಕ್ಕೆ ಹೋಗೋಣದರಿಂದ ತನ್ನ ಬಾಯ್ಯೊಳಗಿದ್ದ ಮಾಂಸದ ಕರಣಿ ನೀರೊಳಗೆ ಬಿದ್ದು ಹರಿದು ಹೋಯಿತು. ಮತ್ತು ತನ್ನ ಮೋರೆ ನೀರೊಳಗೆ ಮುಳಿಗಿಸೋದರಿಂದ ಎರಡನೇ ನಾಯಿ ಕಾಣಿಸದೇ ಹೋಯಿತು.

ತಾತ್ಪರ್ಯ.

ದೇವರು ತನಗೆ ಕೊಟ್ಟದ್ದರಲ್ಲೇ ಸಂತೋಷವಾಗದೆ ದಾವನು ಎರಡನೆಯವರ

ವಿಷಯಕ್ಕೆ ಅಪೇಕ್ಷಿಸುತ್ತಾನೋ ಅವನಿಗೆ ಆ ವಿಷಯ ಪ್ರಾಪ್ತಿಯಾಗೋದಿಲ್ಲ. ಆಶೆ ಇದ್ದ ಮೂಲ ತನ್ನ ಹತ್ತೀಲಿ ಇದ್ದದ್ದನ್ನು ಕಳಕೊಳ್ಳುತ್ತಾನೆ.

---

೨. ನೀತಿಕಥೆ.

ಎತ್ತೂ ಕಪ್ಪೆಯೂ.

ಒಂದಾನೊಂದು ಅರಣ್ಯದಲ್ಲಿ ಒಂದು ಎತ್ತು ಹುಲ್ಲುಗಡ್ಡೆಯೊಳಗೆ ಮೇಯುತ್ತಾ ಇರಲಾಗಿ, ಆ ಸ್ಥಳದಲ್ಲಿ ಸಣ್ಣ ಸಣ್ಣ ಕಪ್ಪೇ ಮರಿಗಳು ಆಡುತ್ತಿದ್ದವು. ಅದರೊಳಗೆ ಒಂದು ಮರಿಯು ಆ ಎತ್ತಿನ ಕಾಲ ಬುಡಕ್ಕೆ ಬಿದ್ದು ಸತ್ತು ಹೋಯಿತು. ಆ ವರ್ತಮಾನವನ್ನು ಉಳಿದ ಮರಿಗಳು ತಮ್ಮ ಮನೆಗೆ ಹೋಗಿ ತಾಯಿಗೆ ಹೇಳುತ್ತಿದ್ದವು. ಹ್ಯಾಗಂದರೆ, ಏ ಅವ್ವಾ ಕೇಳು, ಇಂಥಾ ದೊಡ್ಡ ಪ್ರಾಣಿಯನ್ನು ನಾವು ಎಂದೂ ನೋಡಿದ್ದಿಲ್ಲ ಎನ್ನಲಾಗಿ, ತಾಯಿಯು ಈ ಮಾತು ಕೇಳಿ ಹೊಟ್ಟೆ ಉಬ್ಬಿಸಿ ಕೊಂಡು, ಇಷ್ಟು ದೊಡ್ಡದಾದೀತೆ? ಹ್ಯಾಗೆ ಎನ್ನಲಾಗಿ, ಆ ಸಣ್ಣ ಕಪ್ಪೆಗಳು ಅನ್ನುತ್ತಾವೆ: ಅವ್ವಾ ಇದಕ್ಕೂ ಬಲು ದೊಡ್ಡದು ಅಂಬೋಣ, ಆ ಹಿರೇ ಕಪ್ಪೆ ಪುನಹಾ ಹೊಟ್ಟೆ ಉಬ್ಬಿಸಿ, ಇನ್ನಾದರೂ ಅದಕ್ಕೆ ಸರಿಯಾದೀತೆ ಎನ್ನಲಾಗಿ, ತಾಯಿಯೇ, ಹೊಟ್ಟೆ ಒಡಿಯೋ ತನಕ ಉಬ್ಬಿಸಿ ಕೊಂಡರೂ, ಅದರಂತೆ ಆಗಲಿಕ್ಕಿಲ್ಲ ಎಂಬೋಣ, ಆ ಹಿರೇ ಕಪ್ಪೆಯು ಗರ್ವದಿಂದ ಮತ್ತು ಹೊಟ್ಟೆ ಹೆಚ್ಚಿಗೆ ಉಬ್ಬಿಸುತ್ತಿರಲಾಗಿ, ಹೊಟ್ಟೆಯೊಡದು ಸತ್ತು ಹೋಯಿತು.

ತಾತ್ಪರ್ಯ.

ಬಲಹೀನ ಪುರುಷನು ತನ್ನ ಸಾಮರ್ಥ್ಯವನ್ನು ನೋಡಿ ಕೊಂಡು ಖರ್ಚು

ವೆಚ್ಚ ಮಾಡ ಬೇಕಲ್ಲದೆ ಶ್ರೀಮಂತನ ಸಮಾನವಾಗ ಬೇಕೆಂದು ಇಚ್ಛೈಸಿದರೆ ಆ ಹೆಣ್ಣುಕಪ್ಪೆಯಂತೆ ನಾಶ ಹೊಂದ್ಯಾನು.

---

೩. ನೀತಿಕಥೆ.

ನರಿಯೂ ದ್ರಾಕ್ಷಾಫಲವೂ.

ಒಂದಾನೊಂದು ನರಿಯು ಹಸಿದು ತಿರುಗುತ್ತಿರಲಾಗಿ ಒಂದು ದ್ರಾಕ್ಷೀ ಮಂಟಪದೊಳಗೆ ಹೊಕ್ಕು, ಮೇಲಕ್ಕೆ ನೋಡುವ ಸಮಯದಲ್ಲಿ ಬಹಳ ಸೌಂದರ್ಯವಾದ ದ್ರಾಕ್ಷೆಯ ಗೊನೆಗಳು ಜೋತಾಡುತ್ತಿದ್ದವು. ಅದನ್ನು ಕಂಡು ಆ ಮಂಟಪವು ಉನ್ನತವಾಗಿದ್ದ ಕಾರಣ ಕೈಗೆ ನಿಲುಕದೆ ಇರುವದರಿಂದ ಹಾರಿ ಹಾರಿ ನರಿಯು ದಣಿಯುವಂಥಾದ್ದಾಯಿತೇ ಹೊರ್ತು ಒಂದು ದ್ರಾಕ್ಷೆಯಾದರೂ ಪ್ರಾಪ್ತಿಯಾಗಲಿಲ್ಲ. ಕಟ್ಟ ಕಡೆಗೆ ಸ್ವಲ್ಪ ದೂರ ದ್ರಾಕ್ಷೆಯ ಕಡೆಗೆ ನಿಂತು ಕೊಂಡು ಹೇಳಿದ್ದೇನಂದರೆ: ಈ ದ್ರಾಕ್ಷೆಯನ್ನು ಯಾವನಾದರೂ ಯಾಕೆ ತಕ್ಕೊಳ್ಳವಲ್ಲ? ಇವು ಕಸಗಾಯಿ ಹುಳಿ ಎಂದು ನಾನು ಮಾತ್ರ ಬಿಟ್ಟು ಹೋಗುತ್ತೇನೆ ಎಂದು ಹೊರಟು ಹೋಯಿತು.

ತಾತ್ಪರ್ಯ.

ಕೆಲವು ಜನರು ಹೀಗೆ ಇರುತ್ತಾರಲ್ಲ; ತಮಗೆ ಯಾವ ವಸ್ತು ಕೈ ಸೇರುವದಿಲ್ಲವೋ, ಆ ವಸ್ತುವಿಗೆ ಏನಾದರೂ ದುರ್ಗುಣವ ಯೋಚಿಸಿ ಕುಂದನ್ನಿಡುತ್ತಾರೇ ಹೊರ್ತು ತಮ್ಮಲ್ಲಿ ಹಗುರತನ ತೋರಿಸುವದಿಲ್ಲ.

---

೪. ನೀತಿಕಥೆ.

ಮರ ಕೊರಿಯುವ ಹುಳವೂ ಅರ್ನವೂ.

ಕಟ್ಟಿಗೆ ಕೊರಿಯುವ ಒಂದಾನೊಂದು ಹುಳವು ಕಮ್ಮಾರಸಾಲೆಗೆ

ಹೋಗಿ ಏನಾದರೂ ತಿಂಬೋ ಪದಾರ್ಥವನ್ನು ಕೆಳಗೆ ಮೇಲೆ ನೋಡಿ ಕೊಂಬೋ ಸಮಯದಲ್ಲಿ ಅಲ್ಲಿದ್ದ ಕಮ್ಮಾರನ ಸಾಮಾನಿನೊಳಗೆ ಒಂದು ಅರ್ನವನ್ನು ಕಂಡು, ಅದನ್ನು ತಿನ್ನ ಬೇಕೆಂಬ ಅಪೇಕ್ಷೆಯಿಂದ ಹವಣಿಸುತ್ತಿರಲಾಗಿ, ಆ ಅರ್ನವು ಹುಳವಿನ ಸಂಗಡ ಮಾತಾಡಿತು, ಏನಂದರೆ: ನೀನು ನನ್ನ ಹಾದಿ ಹಾಯ ಬೇಡ; ಯಾಕಂದರೆ ನಾನು ಕಬ್ಬಿಣ ಉಕ್ಕು ಇವುಗಳಿಂದ ಆದಂಥಾದ್ದು. ನನ್ನನ್ನು ನೀನು ಕಚ್ಚಿದರೆ ಹಲ್ಲು ಬಿದ್ದು ನಾಶ ಹೊಂದಿ ಹೋದಿ.

ತಾತ್ಪರ್ಯ.

ದಾವನಿಗಾದರೂ ಅವನ ಸಾಮರ್ಥ್ಯವ ನೋಡಿ ಉಪದ್ರ ಮಾಡ ಬೇಕು; ದಾವ ಪುರುಷನಿಗೆ ಸರ್ವ ಜನರು ಮನ್ನಿಸಿ ಅವನು ಹೇಳಿದ ಹಾಗೆ ಕೇಳುತ್ತಾರೊ, ಅಂಥವನಿಗೆ ವಿರೋಧ ಮಾಡಿದರೆ ತನ್ನ ನಾಶನಕ್ಕೆ ಕಾರಣವಾದೀತು. ಹಾಗೆಯೇ ಜಾಣತನದ ಬಲದಿಂದ ದೊಡ್ಡವರನ್ನು ಧಿಕ್ಕರಿಸಿದರೆ ತನ್ನ ಮೂರ್ಖತ್ವವು ಸರ್ವರಿಗೂ ತೋರಿಸಿ ಕೊಂಡೀತು.

---

೫. ನೀತಿಕಥೆ.

ನರಿಯೂ ಹೋತೂ.

ಒಂದು ನರಿಯು ನೀರು ಕುಡಿಯೋ ಅಪೇಕ್ಷೆಯಿಂದ ಬಂದು ಬಾವೀ ಕಟ್ಟೇ ಮೇಲೆ ಹೋಗಿ ಬಾವಿಯೊಳಗೆ ಬಿದ್ದು ಮೇಲೆ ಬರುವದಕ್ಕೆ ಬಹಳ ಪ್ರಯತ್ನ ಮಾಡಿದ ಕಾಲಕ್ಕೂ ಹೊರಗೆ ಹೊರಡೋದಕ್ಕೆ ದಾರಿ ಶಿಕ್ಕಲಿಲ್ಲವು. ಅಷ್ಟರೊಳಗೆ ಒಂದು ಹೋತು ಬಾವಿಯ ಮೇಲೆ ಬಂದು ಬಾವಿಯೊಳಗಿನ ನರಿಯ ಕಂಡು ಮಾತನಾಡುತ್ತದೆ: ಎಲೋ ನರಿಯೇ, ಈ ನೀರು ಚೆಲೋದೋ ಹ್ಯಾಗೆ? ಎನ್ನಲು, ನರಿಯು, ಎಲೇ ಗೆಳೆಯನೇ, ಚೆಲೋದೆಂತ ನಾನೇನು ಹೇಳಲಿ, ಈ ನೀರು ಅಮೃತದೋಪಾದಿಯಲ್ಲಿ

ಇರುವದರಿಂದ ಕುಡಿದು ಕುಡಿದು ಬೇಸತ್ತರೂ ನನ್ನ ಇಚ್ಛೆ ತೃಪ್ತಿಯಾಗ ವಲ್ಲದು, ಈ ಸ್ಥಳವನ್ನು ಬಿಟ್ಟು ಹೋದೇನೆಂಬ ಮನಸ್ಸೂ ಆಗವಲ್ಲದು ಎನ್ನಲು, ಆ ಮಾತು ಕೇಳಿ ಆ ಹೋತು ಬಾವಿಯಲ್ಲಿ ಹಾರಿತು. ಅದರ ಕೋಡುಗಳು ಉನ್ನತವಾಗಿದ್ದದರಿಂದ ಅವುಗಳ ಮೇಲೆ ನರಿಯು ಕಾಲು ಗಳನ್ನಿಟ್ಟು ಹಾರಿ ಮೇಲಕ್ಕೆ ಬಂದು ಹೋಗೋದಾಯಿತು. ಆ ಹೋತು ನೀರೊಳಗೆ ಮುಳುಗಿ ಹೋಗೋದಾಯಿತು.

ತಾತ್ಪರ್ಯ.

ಜನರು ಏನೇನು ಮಾಡುತ್ತಾರೋ, ಅದರೊಳಗೆ ತಮ್ಮ ಸ್ವಾರ್ಥವ ನೋಡು ತ್ತಾ ಇರುತ್ತಾರೆ. ಎರಡನೆಯವರಿಗೆ ಹಿತ ಕಾರಣದಿಂದ ಉದ್ಯೋಗ ಮಾಡುವಂ ಥ ಪುರುಷರು ಕ್ವಚಿತ್ತೆಂದು ತಿಳಿದು ಯಾವನಾದರೂ ಏನಾದರೂ ಲಾಭ ತೋರಿಸಿ ಮಾತನಾಡಿದರೆ ಆ ಮನುಷ್ಯನ ಯಥಾರ್ಥವ ತಿಳಿಯದ ಹೊರ್ತು ಆತನ ಮಾ ತಿನ ವಿಶ್ವಾಸವನ್ನು ಹಿಡಿಯಲಿಕ್ಕೆ ಕೂಡದು.

---

೬. ನೀತಿಕಥೆ.

ಒಕ್ಕಲಮಗನೂ ಸರ್ಪವೂ.

ಒಂದು ಹಳ್ಳಿಯೊಳಗೆ ಒಬ್ಬ ಒಕ್ಕಲಮಗನು ಛಳಿಗಾಲದಲ್ಲಿ ತನ್ನ ಹಿತ್ತಲ ಒಳಗೆ ಕೆಲಸ ಮಾಡುವ ಸಮಯದಲ್ಲಿ ಹಣಜಿಯೊಳಗೆ ಒಂದು ಸರ್ಪ ಬಹಳ ಛಳಿ ಹತ್ತಿ ವ್ಯಾಕುಲವಾಗಿ, ಮುಂದೆ ಘಳಿಗೆ ಅರ್ಧ ಘಳಿ ಗೆಯೊಳಗೆ ಮರಣವಾಗುವಂಥಾದರನ್ನ ಕಂಡು ದಯ ಹುಟ್ಟಿ, ಆ ಸರ್ಪ ವನ್ನು ತೆಗದು ಕೊಂಡು ತನ್ನ ಮನೆಗೆ ವೈದು ಅಗ್ಗಿಷ್ಟಿಕೆಯ ಸಮೀಪದಲ್ಲಿ ಇಡುತ್ತಿರಲಾಗಿ, ಆ ಉಷ್ಣದಿಂದ ಸರ್ಪವು ಜಾಗ್ರತೆಯಾಗಿ ಎದ್ದು ನಿಂತು ಹೂಂಕಾರದಿಂದ ಬುಸುಗುಟ್ಟಿ ಆ ಒಕ್ಕಲಮಗನ ಹುಡುಗರ ಹಾಗೂ ಹೆಂಗಸರ ಮೈ ಮೇಲೆ ಹಾರುವಂಥಾದ್ದಾಯಿತು. ಅವರೆಲ್ಲಾ ಘಾಬರಿ

ಯಾಗಿ ಹೊರಗೆ ಓಡಿ ಹೋದರು. ಹಿತ್ತಲೊಳಗಿದ್ದ ಆ ಗೃಹಸ್ಥನು ಈ ಗದ್ದಲವನ್ನು ಕೇಳಿ, ಕೈಯಲ್ಲಿ ಕೊಡಲಿ ಹಿಡುಕೊಂಡು ಓಡುತ್ತಾ ಬಂದು, ಒಂದೇ ಕಡತಕ್ಕೆ ಎರಡು ತುಂಡು ಆಗುವ ಹಾಗೆ ಆ ಹಾವು ಕಡಿಯುವಾಗ ಅವನು ಹೇಳಿದ್ದೇನಂದರೆ: ಎಲೋ ದುಷ್ಟ ಪ್ರಾಣಿಯೇ, ಯಾವಾತ ನಿನ್ನ ಪ್ರಾಣ ಕಾಯ್ದನೋ ಅವನಿಗೆ ಈ ಬಗೆ ಉಪಕಾರ ತೀರಿಸಿದಿಯಾ? ಈಗ ನಿನಗೆ ಮರಣವೇ ಯೋಗ್ಯವದೆ; ಪರಂತು ಮಹಾ ಪಾಪಿಷ್ಠನೇ, ನಿನ್ನ ಅಪರಾಧಕ್ಕೆ ಮರಣಕ್ಕಿಂತಲು ಹೆಚ್ಚಿಗೆ ಶಾಸನವಾದರೂ ಉತ್ತಮವೇ ಸರಿ.

ತಾತ್ಪರ್ಯ.

ತನ್ನ ಹಿತಕಾರಿಯಾದವಗೆ ಘಾತ ಮಾಡುವವನು ಹಾಗೂ ತನಗೆ ಅನ್ನ ಕೊಟ್ಟವನ ಮೇಲೆ ತಿರಿಗಿ ಬೀಳುವವನು ಅವನೇ ಅಕೃತಜ್ಞ, ಅವನೇ ಮಹಾ ಪಾಪಿ; ಅಂಥವನು ಸಾಯುವದೇ ಉತ್ತಮ; ಅವನ ಮುಖಾವಲೋಕನ ಮಾಡ ಬಾರದು.

---

೭. ನೀತಿಕಥೆ.

ಗುಡ್ಡವು ಹಡಿಯುವಾಗ ಮೂಷಕ ಬಿದ್ದದ್ದು.

ಒಂದಾನೊಂದು ಪರ್ವತವು ಹಡಿಯೋ ಸಮಯದಲ್ಲಿ ಬಹಳ ಕಷ್ಟದಿಂದ ದೊಡ್ಡ ಧ್ವನಿ ಮಾಡಿ ಒದರುವ ಶಬ್ದಕ್ಕೆ ಸಮೀಪದಲ್ಲಿದ್ದವರೂ ದೂರಿದ್ದವರೂ ಪಾತ್ರರಾಗಿ ಆ ಗುಡ್ಡದ ಹೊಟ್ಟೆಯೊಳಗಿಂದ ಏನಾದರೂ ಉತ್ತಮ ವಸ್ತು ಹೊರಟೀತು ಎಂದು ಕಾಂಕ್ಷಿತರಾಗಿ ಬಹಳ ಹೊತ್ತು ಆಸಕ್ತಿಯಿಂದ ನೋಡುತ್ತಿರಲಿಕ್ಕೆ, ಆ ಗುಡ್ಡದೊಳಗಿಂದ ಒಂದು ಇಲಿ ಹೊರಗೆ ಬರೋದಾಯಿತು.

ತಾತ್ಪರ್ಯ.

ರಾಜ್ಯಾಧಿಕಾರ ಮಾಡುವ ಕೆಲವು ಪುರುಷರು ಅನೇಕ ಪ್ರಕಾರದಿಂದ ರಾಜ್ಯದ ಜನರುಗಳಿಗೆ ಕಲ್ಯಾಣ ಮಾಡ ಬೇಕೆಂದು ಭಾವಾಭಾವಗಳ ತೋರಿಸುತ್ತಿರುತ್ತಾ

ಕೆ. ಜನರುಗಳು ಅದಕ್ಕೆ ಮೋಹಿಸಿ ಬಹಳ ಭರವಸ ತಾಳುತ್ತಾರೆ; ಪರಂತು ಆ ಅಧಿಕಾರಿಗಳು ತಮ್ಮ ಸ್ವಾರ್ಥವನ್ನು ಸಾಧಿಸಿ ಕೊಂಬೋದಲ್ಲದೆ ಜನರ ಹಿತಕೃತ್ಯವನ್ನು ಏನೇನೂ ಮಾಡುವದಿಲ್ಲ.

---

೮. ನೀತಿಕಥೆ.

ಅರಣ್ಯವೂ ಕಟ್ಟಿಗೆಹೊರೆಯವನೂ.

ಒಂದಾನೊಂದು ದಿವಸದಲ್ಲಿ ಕಟ್ಟಿಗೆ ಕಡಿಯುವವನು ಅಡಿವಿಯಲ್ಲಿ ಸುತ್ತ ಮುತ್ತಲೂ ನೋಡಿ ಮಹಾ ದುಃಖ ಮಾಡುವದನ್ನು ಗಿಡಗಳು ಕಂಡು ಅವನ ಸಂಗಡ ಮಾತನಾಡುತ್ತವೆ, ಏನಂದರೆ: ಎಲೋ ಪ್ರಾಣಿಯೇ, ನಿನಗೆ ಏನು ಬೇಕು ಎಂದು ಕೇಳಲಾಗಿ, ಅವನು ಅಂದದ್ದು — ನನ್ನ ಕೊಡಲಿಗೆ ಕಾವು ಇಲ್ಲ, ಅದಕ್ಕೆ ಒಂದು ಸಣ್ಣದಾದ ತುಂಡು ಸಿಕ್ಕಿದರೆ ಚಲೋದಾದೀತು ಎನ್ನಲಾಗಿ, ಆ ವೇಳೈ ಸರ್ವ ಗಿಡಗಳು ಕೂಡಿ ವಿಚಾರ ಮಾಡಿ ಒಂದು ಹುಣಿಶೇ ಕಟ್ಟಿಗೆಯ ತುಂಡು ಆ ಮನುಷ್ಯಗೆ ಕೊಡುವಂಥವಾದವು. ಅವನು ಆ ಕಟ್ಟಿಗೆಯನ್ನು ಕೊಡಲಿಗೆ ಕಾವು ಮಾಡಿ ಕೊಂಡು, ಸಣ್ಣ ದೊಡ್ಡ ಗಿಡಗಳ ಸಹಾ ಕಡಿದು ಹಾಕಿದನು. ಆ ವೇಳೈದಲ್ಲಿ ನಾನಾ ಕುಲದ ವೃಕ್ಷಗಳು ಕೂಡಿ ಒಂದಕ್ಕೊಂದು ಅಂದದ್ದು: ಎಲಾ ವೃಕ್ಷಗಳಿರಾ ನೀವು ನಿಮ್ಮ ಕೈಯಿಂದ ಅನರ್ಥಕ್ಕೆ ಸಾಧನ ಮಾಡಿ ಕೊಂಡಿರಿ. ಎರಡನೆಯವರ ಮೇಲೆ ಶಬ್ದವಿಲ್ಲ.

ತಾತ್ಪರ್ಯ.

ಶತ್ರುಗಳಿಗೆ ಯಾವ ಪುರುಷನು ದಯಾಬುದ್ಧಿಯಿಂದ ಸಾಹಿತ್ಯ ಪೂರೈಸಿ ಕೊಡುತ್ತಾನೋ ಅವನು ಕಡೆಗೆ ತಾನೇ ಪಶ್ಚಾತ್ತಾಪಕ್ಕೆ ಬೀಳುತ್ತಾನೆ. ಶತ್ರುಗಳಿಗೆ ಉಪಕಾರ ಮಾಡ ಬೇಕು ಅಂದರೆ ದೊಡ್ಡಸ್ಥಿಕೆ ಬರುತ್ತದೆ. ಪರಂತು ಆ ಶತ್ರು ಬಲ

ವಂತನಾಗಿ ತಿರಿಗಿ ಆ ಉಪದ್ರ ಮಾಡಲಿಕ್ಕೆ ಹತ್ತಿದನಂದರೆ ಆಗ್ಗೆ ತಾನು ಮಾಡಿದ್ದು ತನಗೆ ಮೂರ್ಖತನವೆಂದು ತೋರುತ್ತದೆ.

---

೯. ನೀತಿಕಥೆ.

ಕುದುರೆಯೂ ಕಡವೆಯೂ.

ಒಂದು ಕುದುರೆಯೂ ಒಂದು ಕಡವೆಯೂ ಕೂಡಿ ಹುಲ್ಲು ಬೆಳಸಿದ ಗದ್ದೆಯೊಳಗೆ ಏಕವಾಗಿ ಮೇಯುತ್ತಿದ್ದವು. ಒಂದಾನೊಂದು ದಿವಸ ಅವು ತಮ್ಮೊಳಗೆ ವಿಕಲ್ಪಿಸಿ ಕೊಂಡವು. ಕಡವೆಯು ತನ್ನ ಕೋಡಿನ ಬಲದಿಂದ ಕುದುರೆಯನ್ನು ಹುಲ್ಲುಗದ್ದೆ ಬಿಡಿಸಿ ಹೊರಗೆ ಹಾಕಿತು. ಆ ಮೇಲೆ ಕುದುರೆಯು ಮಹಾ ಕ್ರೂರತ್ವದಿಂದ ಈ ಕಡವೆಯನ್ನು ಶಿಕ್ಷಿಸ ಬೇಕೆಂದು ಒಬ್ಬ ಮನುಷ್ಯನ ಆಶ್ರಯ ಮಾಡಿ ನನ್ನ ಪಕ್ಷಾ ವಹಿಸಿ ಸಂರಕ್ಷಣೆ ಮಾಡ ಬೇಕೆಂದು ಪ್ರಾರ್ಥನೆ ಮಾಡಿ ಕೊಂಡಲ್ಲಿ, ಆ ಮನುಷ್ಯನು ಆ ಕುದುರೆಯ ಬೆನ್ನ ಮೇಲೆ ತಡಿ ಹಾಕಿ ಬಾಯಿಗೆ ಲಗಾಮನ್ನು ಹಾಕಿ ಮೇಲೆ ಏರಿ ಕೊಂಡು ವೈಹಾಳಿ ಮಾಡುವ ವೇಳ್ಯದಲ್ಲಿ ಆ ಕುದುರೆಯು ಕುಡಿಯಳ್ಳಿಯ ಮೇಲೆ ಚಬಕು ಹೊಡೋಣದರಿಂದ ವೇದನೆ ತಾಳಿ ಕೊಂಡು ಆ ಮನುಷ್ಯನ ಕೈಯಿಂದ ಆ ಕಡವೆಯನ್ನು ಪರಾಜಯ ಮಾಡಿಸುವಂಥಾದ್ದಾಯಿತು. ಆ ಮೇಲೆ ಆ ಕುದುರೆ ಮಾತನಾಡುತ್ತದೆ: ಎಲೋ ಮನುಷ್ಯನೇ, ನನ್ನ ಕಾರ್ಯವಾಗಿ ನಿನ್ನಿಂದ ನನಗೆ ಬಹಳ ಉಪಕಾರವಾಯಿತು. ಇನ್ನು ಮೇಲೆ ಈ ತಡಿ ಲಗಾಮು ತೆಗದು ನನಗೆ ಅಪ್ಪಣೆ ಕೊಡು ಎಂಬೋಣ, ಆ ಮನುಷ್ಯನು ಮಾತನಾಡುತ್ತಾನೆ: ಎಲೋ ಕುದುರೆಯೇ, ನೀನು ಇಷ್ಟು ಉಪಯೋಗಿ ಎಂಬದು ನನಗೆ ತಿಳಿದಿದ್ದಿಲ್ಲ; ಇನ್ನು ನೀನು ಈ ಬಂಧನದಿಂದ ಮುಕ್ತನಾಗಿ ಹೊರಟು ಹೋದೀ ಎಂಬದು ನನಗೇನೂ ಕಾಣಿಸುವದಿಲ್ಲ.

ತಾತ್ಪರ್ಯ.

ಶತ್ರುವಿನ ಪಾರುಪತ್ಯ ಮಾಡ ಬೇಕೆಂದು ಮತ್ತೊಬ್ಬ ಬಲವಂತನ ಶರಣು ಹೋಗ ಬೇಕಾದರೆ ಬಹಳ ವಿಚಾರ ಮಾಡ ಬೇಕು. ಒಂದು ವೇಳ್ಯದಲ್ಲಿ ಬಲಿಷ್ಠನ ಅಂಕೆಯಲ್ಲಿ ಶಿಕ್ಕಿದ ಬಳಿಕ ಪುನಹಾ ಬಿಡುಗಡೆಯಾದೀತೆಂಬ ಭರವಸವಿಲ್ಲವು.

---

೧೦. ನೀತಿಕಥೆ.

ಸಿಂಹದ ವೇಷವೂ ಕತ್ತೆಯೂ.

ಒಂದಾನೊಂದು ಕತ್ತೆಗೆ ಸಿಂಹದ ತೊಗಲು ಶಿಕ್ಕಿತು. ಆ ತೊಗಲನ್ನು ಮೈ ಮೇಲೆ ಹಾಕಿ ಕೊಂಡು ಆ ಕತ್ತೆಯು ಅರಣ್ಯದಲ್ಲಿ ತಾನು ಮೇಯುವ ಸ್ಥಳಕ್ಕೆ ಹೋಗುತ್ತಿರಲಾಗಿ, ಅಲ್ಲಿದ್ದ ಮೃಗಗಳು ಇದನ್ನು ನೋಡಿ ಜಯದಿಂದ ಓಡಿ ಹೋಗುತ್ತಿದ್ದವು. ಒಂದು ಸಮಯದಲ್ಲಿ ಆ ಕತ್ತೆಗೆ ತನ್ನ ಧಣಿಯ ಭೇಟಿಯಾಯಿತು. ಅವನನ್ನು ಅಂಜಿಸಲಿಕ್ಕೆ ಹೋಯಿತು. ಆಗ ಅವನು ಅದರ ದೊಡ್ಡ ಕಿವಿಗಳನ್ನು ಕಂಡು ಇದು ತನ್ನ ಕತ್ತೆಯು ಎಂದು ಗುರುತು ಹಿಡಿದು ಕೈಯೊಳಗೆ ಒಂದು ಬಡಗಿಯ ತಕ್ಕೊಂಡು ಆ ಕತ್ತೆಗೆ ಚಂನಾಗಿ ಶಿಕ್ಷೆ ಕೊಟ್ಟು, ನೀನು ಸಿಂಹದ ತೊಗಲನ್ನು ಹೊದ್ದು ಕೊಂಡಾಗ್ಯೂ ನೀನು ನನ್ನ ಕತ್ತೆ ಇದ್ದೀ ಎಂದು ನನಗೆ ತಿಳದದೆ ಎಂದನು.

ತಾತ್ಪರ್ಯ.

ಯಾವನಾಗಲಿ ತನ್ನಲ್ಲಿ ಯೋಗ್ಯತೆ ಇಲ್ಲದೆ ಶೂರತ್ವ ಬಾಯಿಬಡಿಕತನ ಅಥವಾ ಸಂಪತ್ತಿನ ಆಡಂಬರ ತೋರಿಸೋಣದರಿಂದ ದುರ್ಬಲವಾದ ಅಜ್ಞಾನಜನಕ್ಕೆ ಮಾತ್ರ ಭಯಂಕರ ಕಾಣಿಸುತ್ತದೆ. ಪರಂತು ಬಲ್ಲವರ ಘಟಣೆ ಬಿದ್ದರೆ ಅವನ ಸ್ವರೂಪ ತಿಳಿದು ಅಪಹಾಸ್ಯ ಮಾಡುತ್ತಾರೆ.

---

೧೧. ನೀತಿಕಥೆ.

ದೊಡ್ಡ ವೃಕ್ಷವೂ ಸಣ್ಣ ವೃಕ್ಷವೂ.

ಒಂದು ದೊಡ್ಡ ಗಿಡವು ನದಿತೀರದಲ್ಲಿ ಇರುತ್ತಿರಲಾಗಿ ಒಂಮಿಂದೊಂಮೆ ಪ್ರಚಂಡ ಘಾಳಿಯಿಂದ ಬೇರು ಸಹಾ ಕಿತ್ತು ಆ ನದಿಯ ನೀರಿನ ಶೆಳವಿನಲ್ಲಿ ಬಿದ್ದು ಹರಿದು ಹೋಗುತ್ತಿರಲಿಕ್ಕೆ, ಅದೇ ನದಿಯ ತಟದಲ್ಲಿ ಒಂದು ಸಣ್ಣ ಗಿಡವು ಇತ್ತು. ಅದರ ಮೇಲೆಯೂ ಘಾಳಿ ಹಾದು ಹೋಯಿತು. ಪರಂತು ಆ ಸಣ್ಣ ಗಿಡಕ್ಕೆ ದುಃಖಾಪತ್ತು ಆಗಲಿಲ್ಲ. ಅದನ್ನ ಈ ದೊಡ್ಡ ಗಿಡವು ಕಂಡು ಆಶ್ಚರ್ಯವಾಗಿ ಆ ಸಣ್ಣ ಗಿಡಕ್ಕೆ ಕೇಳುತ್ತದೆ: ಎಲೋ ನೀನು ಈ ಪ್ರಚಂಡ ಘಾಳೀ ರೌದ್ರದೊಳಗೆ ಹ್ಯಾಗೆ ಬದುಕಿ ಕೊಂಡಿ, ನನ್ನಂಥಾ ದೊಡ್ಡವನ್ನ ಸಹಾ ಆ ಘಾಳಿಯು ಬೇರು ಕಿತ್ತು ಹಾಕಿತು ಎಂಬೋಣ, ಸಣ್ಣ ಗಿಡವು ಉತ್ತರ ಕೊಡುತ್ತದೆ: ಅಪ್ಪ ನಮ್ಮ ನಿಮ್ಮ ಉಭಯ ರೀತಿಗಳು ಬೇರೆ ಬೇರೆ ಅಷ್ಟೆ! ನಾನು ಆ ಘಾಳಿ ಬರುತ್ತಿರಲಾಗಿ ಅದಕ್ಕೆ ನಡುಗಿ ಕೊಂಡು ಬಾಗಿ ಇರುತ್ತೇನೆ, ಯಾಕಂದರೆ ಬಲವಂತನ ಮುಂದೆ ನನ್ನ ಸಾಮರ್ಥ್ಯ ನಡಿಯಲಿಕ್ಕಿಲ್ಲವೆಂದು ವಂದನೆಯನ್ನು ಮಾಡುತ್ತೇನೆ, ನೀನು ನಿನ್ನ ಪರಾಕ್ರಮಬರವಸದ ಮೇಲೆ ಗರ್ವಿತನಾಗಿ ನೆಟ್ಟಗೆ ಶಟದು ನಿಂದಿರುತ್ತಿದ್ದಿ.

ತಾತ್ಪರ್ಯ.

ಯಾವ ಬಲವಂತಪುರುಷನ ಮುಂದೆ ತನ್ನದು ನಡಿಯೋ ಹಾಗೆ ಇಲ್ಲವೋ ಆ ಪುರುಷಗೆ ವಂದನೆ ಮಾಡಿ ಕೊಂಡು ಇರ ಬೇಕು. ವೃಥಾ ಗರ್ವ ಮಾಡುವದು ಹುಚ್ಚುತನವು.

---

೧೨. ನೀತಿಕಥೆ.

ಸಿಂಹವೂ ನಾಲ್ಕು ಎತ್ತೂ.

ನಾಲ್ಕು ಎತ್ತುಗಳು ಬಹಳ ಗೆಳೆತನವಾಗಿ ಒಂದಕ್ಕೊಂದು ಅಗಲ

ದಂತೆ ಒಂದಾನೊಂದು ತಾವಿನಲ್ಲಿ ಮೇಯುತ್ತಿರಲಾಗಿ, ಒಂದು ಸಿಂಹವು ಆ ಎತ್ತುಗಳನ್ನು ಕಂಡು ತನ್ನ ಮನಸ್ಸಿನಲ್ಲಿ ಯೋಚನೆ ಮಾಡುತ್ತದೆ: ಒಂದು ಎತ್ತನ್ನು ಬಡಿಯೋ ಸಾಮರ್ಥ್ಯ ನನಗೆ ಉಂಟು, ನಾಲ್ಕು ಒಂದೇ ತಾವಿನಲ್ಲಿ ಜತೆಯಾಗಿರುತ್ತವೆ, ಅವುಗಳ ಮೇಲೆ ಹಾರೋದಕ್ಕೆ ಧೈರ್ಯವಾಗೋದಿಲ್ಲವೆಂದು ಕೆಲವು ದಿವಸ ದೂರದಿಂದ, ಜತೆಯಾಗಿ ಇರುವವುಗಳ ಮೇಲೆ ಹಾರೋದಕ್ಕೆ ವೈನವಾಗದೆ ಈ ಸಿಂಹದ ಕಾರ್ಯ ಸಾಧಿಸಲೊಲ್ಲದು. ಕಡಿಗೆ ಆ ಸಿಂಹವು ತನ್ನ ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಂಡದ್ದು ಏನಂದರೆ: ಈ ನಾಲ್ಕು ಎತ್ತುಗಳೂ ಏಕ ಚಿತ್ತದಿಂದ ಇರೋಪರಿಯಂತರ ನನ್ನ ಕಾರ್ಯ ಸಾಧ್ಯವಾಗೋದಿಲ್ಲ, ಇನ್ನು ಮೇಲೆ ಒಂದರದೊಂದಕ್ಕೆ ಚಾಡಿ ಹೇಳಿ ಅವುಗಳೊಳಗೆ ಭೇದ ಮಾಡ ಬೇಕು ಎಂದು ಪ್ರಯತ್ನ ಮಾಡುತ್ತಿರಲಾಗಿ, ಆ ಎತ್ತುಗಳು ತಮ್ಮೊಳಗೆ ದ್ವೇಷ ಮಾಡಲಿಕ್ಕೆ ಆರಂಭ ಮಾಡಿದವು. ಒಂದಕ್ಕೊಂದು ವೈರವು ಅತಿ ಆಗೋಣ ಆ ಸಿಂಹವು ಅವುಗಳನ್ನು ಒಂದೊಂದಾಗಿ ಬಡಿದು ತಿಂಬುವದಕ್ಕೆ ಎಷ್ಟು ಮಾತ್ರ ಶ್ರಮ ಬೀಳಲಿಲ್ಲ.

ತಾತ್ಪರ್ಯ.

ಏಕ ಚಿತ್ತದಿಂದ ಇರುವ ಪರ್ಯಂತರ ಶತ್ರುಗಳ ಕಾರ್ಯ ಸಾಧನೆಯಾಗುವದಿಲ್ಲ. ಐಕ್ಯದ ಮಾತು ಹೀಗೆ ಇದ್ದೀತು ಎಂದು ತಿಳಿದು ಯಾರಾದರೂ ಚಾಡಿ ಹೇಳಿದರೆ ಅಥವಾ ಶತ್ರುವಿನ ಮಾತಿಗೆ ಮನಸ್ಸು ಕೊಟ್ಟು ತಾವು ಮಾಡಿದಂಥ ಸ್ನೇಹ ಕಡಿಯ ಬೇಕಾದರೆ ಬಹಳ ದೂರ ಅಲ್ಲೇ ವಿಚಾರ ಮಾಡ ಬೇಕು.

---

೧೨. ನೀತಿಕಥೆ.

ಮನುಷ್ಯನೂ ಸಿಂಹವೂ.

ಒಬ್ಬಾನೊಬ್ಬ ಅಡವಿಮನುಷ್ಯಗೆ ಸಿಂಹವು ಭೇಟಿಯಾಯಿತು. ಅವರಿಬ್ಬರೂ ಬಹಳ ಹೊತ್ತು ಮಾತನಾಡುತ್ತಿರಲಾಗಿ ಉಭಯತರಿಗೂ

ಬಹಳ ಸಂತೋಷವೇ ತೋರಿತು; ಕಡಿಗೆ ಅವರವರ ಮಾತಿನಲ್ಲಿ ಮನುಷ್ಯ ಹೆಚ್ಚಿನವನೋ ಸಿಂಹ ಹೆಚ್ಚಿನವನೋ ಎಂದು ಇಬ್ಬರಿಗೂ ಜಗಳಾಯಿತು. ಅದೇ ಠಿಕಾಣಿಯಲ್ಲಿ ಒಂದು ಬಿಳೇ ಚೌಕಕಲ್ಲಿನ ಮೇಲೆ ಎರಡು ಗೊಂಬೆಗಳು ಇದ್ದವು. ಹ್ಯಾಗಂದರೆ ಸಿಂಹದ್ದು ಒಂದು, ಆ ಸಿಂಹದ ಮೇಲೆ ಕೂತು ಅದರ ಕೂದಲ ಹಿಡುಕೊಂಡ ಮನುಷ್ಯನದು ಒಂದು. ಮನುಷ್ಯನು ತನ್ನ ಮಾತು ಪ್ರತಿ ಸಾಧಿಸಲಿಕ್ಕೆ ಯುಕ್ತಿ ಮಾಡಿ ಅವನ್ನ ತೋರಿಸುವಂಥವನಾದನು. ಆ ಗೊಂಬೆಗಳನ್ನು ಸಿಂಹವು ನೋಡಿ ಮಾತಾಡಿತು; ನಿನ್ನ ಸಾಧನೆ ಇಲ್ಲಿಗೆ ಶೀರಿತೇ, ಇದಕ್ಕೆ ನನ್ನ ಮಾತನ್ನು ಕೇಳು — ಈ ಗೊಂಬೆಗಳನ್ನು ಕಟ್ಟಿದ ಕಲ್ಲುಕುಟಕನು ಮನುಷ್ಯನೇ ಸರಿ. ಇವು ಅವನಿಂದ ಆಗದೆ ಒಂದು ವೇಳೆ ಸಿಂಹನಿಂದ ಆಗಿದ್ದರೆ ಇವೇ ಗೊಂಬೆಗಳು ನಿನಗೆ ವಿಪರೀತವಾಗಿ ತೋರುತ್ತಿದ್ದವು. ಹ್ಯಾಗಂದರೆ ಮನುಷ್ಯನ ಮೇಲೆ ಸಿಂಹವು ಕೂತು ಅವನನ್ನು ಹಿಡುಕೊಂಡ ಹಾಗೆ ಇರುತಿತ್ತು.

ತಾತ್ಪರ್ಯ.

ಪಕ್ಷಪಾತದ ಜನರು ತಮ್ಮ ಕಡೆ ಮಂದಿಯು ವಚನವೇ ಪ್ರಮಾಣವೆಂದು ತಮ್ಮದೇ ಖರೆ ಎಂತ ತೋರಿಸುತ್ತಾರೆ ಎಂಬದು ತಿಳಿದು ಪಕ್ಷ ಪ್ರತಿಪಕ್ಷ ಎರಡು ಕಡೆಯವರ ಮಾತನ್ನೂ ಕೇಳದೆ ದಾವದಾದರೂ ಮಾತಿನ ಸಿದ್ಧಾಂತ ಮಾಡ ಬೇಕು.

---

೧೫. ನೀತಿಕಥೆ.

ದೇವರೂ ಬಂಡಿಕಾರನೂ.

ಒಬ್ಬಾನೊಬ್ಬ ಅಡಾಣಿ ಬಂಡಿಕಾರನು ಬಂಡಿ ಹೊಡಕೊಂಡು ಹೋಗುತ್ತಿರಲಾಗಿ ಒಂದು ಸ್ಥಳದಲ್ಲಿ ಗಾಲಿಗಳು ಕೆಸರಲ್ಲಿ ಶಿಕ್ಕಿ ಅಡ್ಡಿಯಾಗಿ ನಿಂತು ಮುಂದೆ ನಡಿಯದ್ಹಾಯಿತು; ಎತ್ತುಗಳ ಉಪಾಯವು ನಿಂತಿತು. ಅದನ್ನು ಕಂಡು ಬಂಡಿಕಾರನು ಏ ದೇವರೇ, ನಾನು ಬಡವನು, ನನ್ನ ಸಂ

ಕಟಕ್ಕೆ ನೀನು ಸಹಾಯವಾಗ ಬೇಕು ಎಂದು ದೇವರಿಗೆ ಪ್ರಾರ್ಥನೆ ಮಾಡಿದನು. ಈ ಬಿನ್ನಹವನ್ನು ದೇವರು ಕೇಳಿ ಅಂತರಿಕ್ಷದಲ್ಲಿ ನಿಂತು ನೋಡಿ ಆ ಬಂಡಿಕಾರಗೆ—ಎಲೋ ಮೂರ್ಖನೇ, ನೀನು ಆಲಸ್ಯಗಾರನ ಹಾಗೆ ಕುಳ್ಳಿರ ಬೇಡ, ಎತ್ತುಗಳನ್ನು ಬಾರ ಕೋಲಿನಿಂದ ಹೊಡದು ಆ ಗಾಲಿಗೆ ನಿನ್ನ ಹೆಗಲು ನೀಟಾಗಿ ಕೊಟ್ಟರೆ ನಾನು ನಿನಗೆ ಸಹಾಯವಾದೇನು. ನನ್ನ ಸಹಾಯ ಬೇಕಾದರೆ ಹೀಗೆ ಉದ್ಯೋಗ ಮಾಡ ಬೇಕು ಅಂದನು. ಆ ಬಂಡಿಕಾರನು ಅದರಂತೆ ಮಾಡಲಾಗಿ ಆ ಬಂಡಿಯು ಕಿತ್ತು ಬರುವಂಥಾದ್ದಾಯಿತು.

ತಾತ್ಪರ್ಯ.

ಉದ್ಯೋಗ ಮಾಡಿ ದೇವರಿಗೆ ಪ್ರಾರ್ಥನೆ ಮಾಡಿದರೆ ಅದರಂತೆ ಪ್ರಾಪ್ತಿಯಾಗುತ್ತದೆ. ನಿರುದ್ಯೋಗದವನಿಗೆ ಕಾರ್ಯವು ಆಗೋದಿಲ್ಲ.

---

೧೫. ನೀತಿಕಥೆ.

ಮನುಷ್ಯನೂ ಹಂಸಪಕ್ಷಿಯೂ.

ಒಬ್ಬಾನೊಬ್ಬ ಮನುಷ್ಯನ ಹತ್ತರ ಒಂದು ಹಂಸಪಕ್ಷಿಯು ಇತ್ತು. ಅದು ನಿತ್ಯದಲ್ಲಿ ಒಂದೊಂದು ಬಂಗಾರದ ತತ್ತಿ ಹಾಕುತ್ತಿರಲಾಗಿ ಅದನ್ನ ತೆಗೆದು ಕೊಂಡು ಆ ಮನುಷ್ಯನು ತನಗೆ ಸಾಕಾಗದೆ ಅತಿ ಆಶೆಯಿಂದ ಈ ಬಂಗಾರದ ತತ್ತಿಗಳು ಎಲ್ಲಿಂದ ಬರುತ್ತವೋ ಆ ಠಿಕಾಣಿ ನನಗೆ ಪ್ರಾಪ್ತಿಯಾದರೆ ಅಸಂಖ್ಯೆ ಧನವು ಒಮ್ಮೆಯೇ ಶಿಕ್ಕೀತು ಎಂದು ಯೋಚಿಸಿ ಆ ಹಂಸಪಕ್ಷಿಯ ಹೊಟ್ಟೆ ಶೀಳಿ ನೋಡುತ್ತಾ ಇರಲಾಗಿ ಏನೇನೂ ಶಿಕ್ಕಲಿಲ್ಲವು, ಬಹಳ ಪಶ್ಚಾತ್ತಾಪ ಮಾತ್ರ ಪ್ರಾಪ್ತಿಯಾಯಿತು.

ತಾತ್ಪರ್ಯ.

ದೇವರು ಯಾವ ಪುರುಷಗೆ ಸಂಪತ್ತು ಕೊಟ್ಟಿರುತ್ತಾನೋ ಅವನು ಧನಸಂ

ಗ್ರಹ ಮಾಡ ಬೇಕಾದರೆ ಇದ್ದದರೊಳಗೆ ಕೈ ಕಾದು ಮಾಡುತ್ತಾ ಹೋಗ ಬೇಕು. ಹೀಗೆ ಮಾಡದೆ ಯಾವನು ಅತಿ ಲೋಭಿಯಾಗಿ ಒಮ್ಮೆಯೇ ಶ್ರೀಮಂತನಾಗ ಬೇಕು ಎಂದು ಏನಾದರೂ ಒಂದು ದೊಡ್ಡ ಕಾರ್ಯಕ್ಕೆ ಕೈ ಹಾಕುವನೋ ಅವನ ಉದ್ಯೋಗ ನಿಷ್ಫಲವಾಗಿ ಅವನಲ್ಲಿ ಇದ್ದ ಸಂಚಿತವೂ ಹೋಗುತ್ತದೆ.

---

೧೬. ನೀತಿಕಥೆ.

ಪಾರಿವಾಳವೂ ಕೋಳಿಯೂ.

ಒಬ್ಬಾನೊಬ್ಬ ಪುರುಷನು ಒಂದು ಪಾರಿವಾಳ ಹಿಡಿದು ಅದರ ಪಕ್ಕದ ಒಳಗಣ ಗರಿಗಳ ಕೆಲವು ಕಿತ್ತು ಕೊಂಡು ಆ ಪಾರಿವಾಳವನ್ನು ಕೋಳೀ ಗೂಡಿನೊಳಗೆ ಹಾಕಿ ಬಿಟ್ಟನು. ಅಲ್ಲಿ ಕೋಳಿಗಳು ಕ್ಷಣಕ್ಷಣಕ್ಕೆ ತಂಮ ತಂಮ ಚಿಂಚುಗಳಿಂದ ಚುಚ್ಚುತ್ತಿದ್ದವು; ಮತ್ತು ತಿನ್ನ ಕೊಡಲೊಲ್ಲವು. ಹೀಗೆ ಕೆಲವು ದಿವಸ ಆ ಪಾರಿವಾಳವು ಕ್ಲೇಶದಿಂದ ಇರುತ್ತಾ ಮನಸ್ಸಿನಲ್ಲಿ ನಿಶ್ಚಯ ಮಾಡಿ ಕೊಂಡದ್ದೇನಂದರೆ: ಈ ಕೋಳಿಗಳು ತಂಮ ಮನೆಯಲ್ಲಿ ಬಂದಂಥವರ ಸಮಾಚಾರ ತಕ್ಕೊಳ್ಳದೆ ವಿಪರೀತ ಉಪದ್ರ ಕೊಡುತ್ತಾರೆ, ಇವರು ಒಳ್ಳೆ ಗೃಹಸ್ಥರಲ್ಲ, ಬಹಳ ನಿರ್ದಯರು, ಶಠರಾಗಿದ್ದಾರೆ. ಹೀಗೆಂದು ಆಲೋಚಿಸುತ್ತಿರಲಿಕ್ಕೆ ಮುಂದೆ ಆ ಕೋಳಿಗಳು ಹತ್ತೆಂಟು ಸಾರಿ ತಂಮ ತಂಮ್ಮೊಳಗೆ ಕಡದಾಡಿ ಒಂದಕ್ಕೊಂದು ಬಡದಾಡಿದವು. ಆಗೈ ಆ ಪಾರಿವಾಳವು ಮನಸ್ಸಿನಲ್ಲಿ ವಿಚಾರ ಮಾಡಿ ಸಮಾಧಾನ ಮಾಡಿ ಕೊಂಡದ್ದು ಹ್ಯಾಗಂದರೆ ಇವು ಎಂಥಾ ಕೋಳಿಗಳು, ತಂಮ ಜಾತಿಯವರಿಗೆ ಉಪದ್ರ ಮಾಡುವದಕ್ಕೆ ತಪ್ಪುವದಿಲ್ಲವು; ಹೀಗಿರುವಲ್ಲಿ ಪರಜಾತಿಯವನಾದ ನನಗೆ ಉಪದ್ರ ಮಾಡೋದು ಆಶ್ಚರ್ಯವಲ್ಲ.

ತಾತ್ಪರ್ಯ.

ತಂಮ ಜಾತಿಯೊಳಗೆ ಕಲಹಾ ಮಾಡಿ ಒಬ್ಬರಿಗೊಬ್ಬರು ಉಪದ್ರವ ಮಾಡುವಂಥವರು ಪರಜಾತಿಯವರಿಗೆ ದ್ವೇಶ ಮಾಡಿದರೆ ಅವರು ಖಿನ್ನರಾಗ ಬಾರದು.

---

೧೭. ನೀತಿಕಥೆ.

ಕಸ್ತೂರಿಮೃಗವು.

ಒಂದಾನೊಂದು ಜಾತೀ ಮೃಗದಲ್ಲಿ ನಾಭಿ ಇರುತ್ತದೆಂದು ಆ ಮೃಗವು ದಿಟ್ಟಿಗೆ ಬೀಳೋಣ ಜನರು ಅದರ ಬೆನ್ನು ಹತ್ತಿ ಅದರ ಪ್ರಾಣವನ್ನು ತೆಗದು ಕೊಳ್ಳುವರು. ಒಂದಾನೊಂದು ಸಮಯದಲ್ಲಿ ಇಂಥಾದೊಂದು ಓಡುತ್ತಿರಲಾಗಿ ಒಬ್ಬ ಬೇಟೆಗಾರನು ತನ್ನ ನಾಯಿ ಸಹಿತವಾಗಿ ಅದರ ಬೆನ್ನು ಹತ್ತಿದನು. ಆ ಸಮಯದಲ್ಲಿ ಆ ಮೃಗಕ್ಕೆ ಪ್ರಾಣಸಂಕಟವಾಗಿ ಪಾರಗಾಂಬೋ ಲಕ್ಷಣ ತೋರದೆ ಹೋಯಿತು. ಈ ಘಾತಕಿಗಳು ಕಸ್ತೂರಿಯ ನಿಮಿತ್ತವಾಗಿ ನನ್ನನ್ನು ಕೊಲ್ಲಲಿಕ್ಕೆ ಇಚ್ಛೈಸುತ್ತಾರೇ ಹೊರ್ತು ಬೇರೆ ಕಾರಣವಿಲ್ಲ. ಈ ಘಾತಕಿಗಳಿಗೆ ಕಸ್ತೂರಿ ಬಿಟ್ಟು ಕೊಟ್ಟರೆ ನಾನು ಸುಖಿಯಾದೇನು ಎಂದು ಆ ಮೃಗವು ಆಲೋಚಿಸಿ ಧೈರ್ಯ ಹಿಡಿದು ಹಾಗೆ ಮಾಡುತ್ತಿರಲಾಗಿ ಸಂಕಟದೊಳಗಿಂದ ಪಾರು ಆಯಿತು.

ತಾತ್ಪರ್ಯ.

ಮನುಷ್ಯರು ಬಹಳವಾಗಿ ಲೋಭದ ನಿಮಿತ್ತವಲ್ಲದೆ ಒಬ್ಬರ ಬೆನ್ನು ಒಬ್ಬರು ಹತ್ತುವದಿಲ್ಲ. ಇದನ್ನು ತಿಳಿದು ಇಂಥಾ ಪ್ರಸಂಗವಾದ ಕಾಲಕ್ಕೆ ಲೋಭದ ಹೊರ್ತು ಎರಡನೇ ಕಾರಣ ತೋರದ ಪಕ್ಷದಲ್ಲಿ ಹೀಗೆ ಮಾಡ ಬೇಕು: ದುಷ್ಟ ಪುರುಷನು ತನಗೆ ಆಗಲೆಂದು ಜಲನೆ ಮಾಡುವ ವಸ್ತುವನ್ನು ಅವನಿಗೆ ಬಿಟ್ಟು ಕೊಟ್ಟು ತನ್ನ ಶೋಭೆ ಉಳಿಸಿ ಕೊಂಡು ತನ್ನ ಪರಿಣಾಮ ನೋಡಿ ಕೊಳ್ಳ ಬೇಕು; ತನ್ನ ಶರೀರ ಜೋಪಾನವಾಗಿ ಉಳಿದ ತನ್ನ ಸರ್ವಸ್ವವೂ ಹಾನಿಯಾದರೂ ಅದು ಹಾನಿ ಎಂದು ತಿಳಿಯಲಾಗದು.

---

೧೮. ನೀತಿಕಥೆ.

ಮೀನ ಹಿಡಿಯುವವನೂ ಮೀನೂ.

ಒಬ್ಬ ಮೀನ ಹಿಡಿಯುವವನು ಒಂದು ನದಿಯಲ್ಲಿ ಗಾಣವನ್ನು ಹಾ

ಕಿದನು. ಅದಕ್ಕೆ ಒಂದು ಮೀನು ಹತ್ತಿ ಬಂತು. ಆ ಮೀನನ್ನು ತನ್ನ ಪುಟ್ಟಿಯೊಳಗೆ ಹಾಕೋಣ್ಸಾ, ಆ ಮೀನು — ಎ ಪುಣ್ಯವಂತ ಮಹಾರಾಯನೇ, ನನ್ನನ್ನು ಪುನಹಾ ನದಿಯೊಳಗೆ ಹಾಕು ಎಂದು ಪ್ರಾರ್ಥನೆ ಮಾಡಿ ಹೇಳಲು, ಆ ಮೀನುಗಾರನು — ಎಲೇ ಮೀನೇ, ಇಂಥಾ ಘನೋಪಕಾರವನ್ನು ನಿನ್ನ ಮೇಲೆ ಯಾಕೆ ಮಾಡ ಬೇಕು ಎನ್ನಲು, ಆ ಮೀನು — ನಾನು ಕೇವಲ ಶಿಶು, ನನ್ನಿಂದ ನಿನಗೆ ಉಪಯೋಗ ಬೀಳಲಿಕ್ಕಿಲ್ಲ, ನಾನು ದೊಡ್ಡದಾದ ಮೇಲೆ ನಿನಗೆ ಉಪಯೋಗ ಬಿದ್ದೇನು ಎನ್ನಲಾಗಿ, ಆ ಮೀನುಗಾರ ಅಂದದ್ದು — ಎ ಮರಿಮೀನೇ, ನೀನು ಅಂದ ಮಾತು ನಿಶ್ಚಯ, ಪರಂತು ದೊರೆದ ಪದಾರ್ಥವನ್ನು ಬಿಟ್ಟು ದೊರೆಯದಕ್ಕೆ ಆಶೆ ಮಾಡಲಿಕ್ಕೆ ನಾನು ಮೂರ್ಖನಲ್ಲವು.

ತಾತ್ಪರ್ಯ.

ಮುಂದಿನ ಭರವಸದ ಮೇಲೆ ಕೈಯೊಳಗೆ ಶಿಕ್ಕಿದಂಥಾ ವಸ್ತುವನ್ನು ಬಿಡುವಂಥಾ ಪುರುಷಗೆ ಎರಡೂ ಇಲ್ಲದೆ ಹೋಗುತ್ತದೆ. ಅಸಾಧ್ಯ ವಸ್ತುವಿಗೆ ಇಚ್ಛೆ ಮಾಡಿದರೆ ಅದರೊಳಗೆ ಕೆಡಕು ಏನೂ ಇಲ್ಲವು. ಪರಂತು ಆ ಇಚ್ಛೆಯು ಭರವಸದ ಮೇಲೆ ಕೈಯೊಳಗಿದ್ದದ್ದು ಬಿಡೋಣದರಿಂದ ಬಹಳವಾಗಿ ಮುಂದಕ್ಕೆ ಖೇದಕ್ಕೆ ಕಾರಣವಾದೀತು.

---

೧೯. ನೀತಿಕಥೆ.

ಎರಡು ಕಪ್ಪೆಗಳು.

ಒಂದಾನೊಂದು ಕಾಲದಲ್ಲಿ ಬೇಸಿಗೇ ಬಿಸಲು ಹೆಚ್ಚಾಗಿ ಬಾವಿಯ ಜಲಗಳು ಬತ್ತಿ ಹೋದವು. ಆ ವೇಳ್ಯದಲ್ಲಿ ಎರಡು ಕಪ್ಪೆಗಳು ಜಲ ಶೋಧನೆ ಮಾಡುತ್ತಾ ಬಂದು ಒಂದು ಬಾವಿಯೊಳಗೆ ನೋಡಿ, ಆ ಬಾವಿಯು ಕೆಳಿಯಕ್ಕೆ ಬಹಳ ಉದ್ದವಿರಲಾಗಿ ಅದರ ದಂಡೇ ಮೇಲೆ ಎರಡೂ ಕುಳಿತು, ಮಾತಾಡುತ್ತವೆ: ಒಂದು ಕಪ್ಪೆ ಅಂದದ್ದು — ಈ ಬಾವಿಯೊಳಗೆ

ಹಾರ ಬೇಕೋ ಬೇಡವೋ ಏನೇ; ಎರಡನೇದು ಅಂದದ್ದು — ಹಾರ ಬೇಕು, ಯಾಕಂದರೆ ಉದ್ದವಾದ ಚಾವಿಯಲ್ಲಿ ನೀರಶಲೆ ಪುಷ್ಕಳವಿದ್ದೀತು, ದಾವ ಮಾತಿಗೂ ಅಡಚಣಿ ಬೀಳಲಿಕ್ಕಿಲ್ಲವೆಂದು ತೋರುತ್ತದೆ. ಅದಕ್ಕೆ ಪ್ರತಿ ಕಪ್ಪೆಯ ಉತ್ತರ: ಎಲೋ ನೀನು ಹೇಳಿದ್ದೆಲ್ಲಾ ಖರೆ, ಆದರೆ ಈ ಆಲೋಚನೆ ಜೀವದ ಮೇಲಿನ ಮಾತು. ಇದು ನನಗೆ ಸನ್ಮತ ತೋರುವದಿಲ್ಲ; ಒಂದು ವೇಳೈ ಚಾವಿಯಲ್ಲಿ ನೀರು ಅರತು ಹೋಗಿದ್ದರೆ ತಿರಿಗಿ ಹೊರಗೆ ಬರುವದು ಅತಿ ಪ್ರಯಾಸವಾದೀತು.

ತಾತ್ಪರ್ಯ.

ಯಾವದಾದರೂ ಅವಘಡವಾದ ಕೆಲಸನ ಆರಂಭ ಮಾಡುವದಕ್ಕಿಂತ ಮುಂಚಿತಾಗಿ ಅದರ ಯೋಚನೆ ಮಾಡಿ ಇಡ ಬೇಕು. ಕದಾಚಿತು ಆ ಕೆಲಸ ಅಸಾಧ್ಯವಾದರೆ ಇಂಥಾ ಮಾರ್ಗದಿಂದ ನನ್ನ ನಿಭಾವಣೇ ಬಿದ್ದೀತು ಎಂದು ಯೋಚಿಸಿ ಇಟ್ಟು ಕಾರ್ಯಕ್ಕೆ ಕೈ ಹಚ್ಚ ಬೇಕು.

---

೨೦. ನೀತಿಕಥೆ.

ಎತ್ತೂ ಟಗರೂ.

ಒಂದಾನೊಂದು ಎತ್ತು, ಹುಲಿಯು ಬೆನ್ನು ಹತ್ತಿ ಇಥೆ ಎಂದು ಓಡುತ್ತಾ ಒಂದು ಗವಿಯೊಳಗೆ ಹೊಗ ಬರಲಾಗಿ ಅಲ್ಲಿ ಒಂದು ಟಗರು ಇತ್ತು. ಆ ಟಗರು ಈ ಎತ್ತನ್ನು ಗವಿಯ ಒಳಗೆ ಹೊಗಗೊಡದೆ ಒಳಗೆ ಬಂದರೆ ಹೊಡದೇನು ಎಂಬೋಣಾ, ಆ ಎತ್ತು ಎಲೋ ಗೃಹಸ್ಥನೇ, ಹುಲಿಯು ನನ್ನ ಬೆನ್ನು ಹತ್ತಿ ಇಥೆ, ಈ ಸಮಯದಲ್ಲಿ ನಿನ್ನ ಸಂಚಾವಿತನಕ್ಕೆ ಯೋಗ್ಯವಾಗುವಂತೆ ನನಗೆ ಆಶ್ರಯ ಕೊಡ ಬೇಕು ಎಂದು ಬಹಳ ದೀನತ್ವದಿಂದ ಬೇಡಿ ಕೊಂಡಾಗ್ಯೂ ಆ ಟಗರು ಕೇಳಲೊಲ್ಲದೆ ತನ್ನ ಕೋಡು ಮೇಲೆ ಮಾಡಿ ಕೊಂಡು ಮೈ ಮೇಲೆ ಬರಲಿಕ್ಕೆ

ಹತ್ತಿತು. ಆಗ್ಗೆ ಆ ಎತ್ತು ಅಂದದ್ದು — ಎಲೇ ಟಗರೇ, ನಿನ್ನ ಕೋಡಿಗೆ ನಾನೇನೂ ಅಂಜಿದವನಲ್ಲ, ಏನು ಮಾಡಲಿ, ಈ ವೇಳ್ಯದಲ್ಲಿ ಹುಲಿಯು ನನ್ನ ಬೆನ್ನು ಹತ್ತಿ ಇಥೆ, ಇಲ್ಲದಿದ್ದರೆ ನನ್ನ ನಿನ್ನ ಯೋಗ್ಯತೆ ಎಷ್ಟು ಎಂಬ ಚಮತ್ಕಾರವನ್ನು ಈ ಕ್ಷಣವೇ ತೋರಿಸುತ್ತಿದ್ದೆ.

ತಾತ್ಪರ್ಯ.

ಸಂಕಟದಲ್ಲಿದ್ದ ದಾವ ಮನುಷ್ಯನಿಗಾದರೂ ಸಹಾಯ ಮಾಡದೆ ಹೋಗುವ ಪುರುಷನು ಮತ್ತು ಸಂಕಟದ ಗೃಹಸ್ಥಗೆ ಸಹಾಯ ಮಾಡದೆ ಇರೋಣ, ಅವನಿಗೆ ಧಿಃಕಾರದ ಮಾತುಗಳನ್ನು ಆಡೋಣ, ಅಥವಾ ಇನ್ನು ಅವಗೆ ಉಪದ್ರ ಮಾಡೋಣ, ಹೀಗೆ ಘಾಯದ ಮೇಲೆ ಬರೆ ಕೊಟ್ಟಂತೆ ಮಾಡುವವರು ಅತಿ ನೀಚರು ಎಂದು ತಿಳಿಯ ಬೇಕು.

---

೧೧. ನೀತಿಕಥೆ.

ಇಲಿಗಳೂ ಬೆಕ್ಕೂ.

ಒಂದಾನೊಂದು ಮನೆಯಲ್ಲಿ ಇಲಿಗಳು ಬಹಳವಾಗಿದ್ದವು. ಅಲ್ಲಿ ಒಂದು ಬೆಕ್ಕು ಬಂದು ಕೆಲವು ಇಲಿಗಳನ್ನು ತಿಂದು ಕಡಿಮೆ ಮಾಡಿತೆಂದು ಉಳಿದ ಇಲಿಗಳು ಯಾವತ್ತು ಏಕಸ್ಥರಾಗಿ ಇನ್ನು ಮೇಲಿಂದ ಕೆಳಗೆ ಒಂದಾದರೂ ಇಳಿಯ ಬಾರದೆಂದು ನಿಶ್ಚಯ ಮಾಡಿ ಕೊಂಡವು. ಆ ಬೆಕ್ಕಿಗೆ ಆಹಾರ ಶಿಕ್ಕದೇ ಹೋಗಿ ಕೆಲವು ಉಪವಾಸಗಳು ಆದವು. ಒಂದು ದಿವಸ ಆ ಬೆಕ್ಕು ತನ್ನ ಕಾಲಿನಿಂದ ಛಡ ಛಡ ಬಡಕೊಂಡು ಚಟಪರಿಸಿ ಸತ್ತವರಂತೆ ಸೋಗು ಮಾಡಿ ಜೋತಾಡಲಿಕ್ಕೆ ಹತ್ತಿತು. ಆಗ ಇಲಿಗಳೊಳಗೆ ಒಂದು ಮುದಿ ಇಲಿಯು ಈ ಬೆಕ್ಕನ್ನು ಕಂಡು — ಏ ಬೆಕ್ಕೇ, ನೀನು ಮತ್ತಿಷ್ಟು ಖುಶಾಲು ಮಾಡಿ ಜೋತಾಡು, ನಿನ್ನ ಹೊಟ್ಟೆ ಕೊರದು ಪ್ರಾಣ ಹೋದರೂ ನಿನ್ನನ್ನು ನಂಬಲಿಕ್ಕಿಲ್ಲವೆಂದು ಹೇಳಿತು.

ತಾತ್ಪರ್ಯ.

ಘಾತಕಿಗಳೂ ಠಕ್ಕರೂ ವಂಚಕರೂ ವಿಶ್ವಾಸಘಾತಕಿಗಳೂ ಇಂಥಾ ಜನರು ಸವಿ ಮಾತುಗಳಾಡುತ್ತಾರಲ್ಲ, ಅದು ನಿಶ್ಚಯವೆಂದು ನಂಬಿ ಜನರು ಮೋಸ ಹೋಗುತ್ತಾರೆ. ಆದರೆ ಒಂದು ವೇಳ್ಯೆ ಅವರ ಸ್ವಭಾವ ತಿಳಿದು ಇವರು ನೀಚರು ಎಂದು ಮನಸ್ಸಿನಲ್ಲಿ ನಿಶ್ಚಯ ಮಾಡಿ ಉದಾಸೀನ ಮಾಡುವಂಥವರನ್ನು ವಂಚಿಸಲಿಕ್ಕೆ ಹ್ಯಾಗಾದೀತು?

---

೧೧. ನೀತಿಕಥೆ.

ನರಿಯೂ ಮುಳ್ಳುಗಿಡವೂ.

ಒಂದಾನೊಂದು ನರಿಯು, ನಾಯಿ ಬೆನ್ನು ಹತ್ತಿತೆಂದು ಓಡೋಡಿ ಹೋಗುತ್ತಾ ಒಂದು ಕೊರಕಲನ್ನು ಹಾರಿತು. ಆ ಕೊರಕಲೊಳಗಿನ ಮುಳ್ಳುಗಿಡವು ತಾಗಿ ಕೈ ಕಾಲೊಳಗೆ ಮುಳ್ಳು ಮುರಿದು ನರಿ ಆ ಗಿಡಕ್ಕೆ ಶಿಕ್ಕೊಂಡಿತು. ಆ ಕಾಲದಲ್ಲಿ ನರಿಯು ಮುಳ್ಳು ಗಿಡದ ಕೂಡಾ ಎಲೋ ಗೃಹಸ್ಥನೇ, ನಿನ್ನ ಆಶ್ರಯಕ್ಕೆ ನಾನು ಬರುತ್ತಿರಲಿಕ್ಕೆ ನೀನು ಹೀಗೆ ನಿರ್ದಯ ಮಾಡುತ್ತಿದ್ದಿ, ಇದು ನಿನಗೆ ಯೋಗ್ಯವಲ್ಲ ಅಂಬೋಣಾ, ಆ ಮುಳ್ಳಿನ ಗಿಡವು — ನನ್ನಲ್ಲಿ ಹಿಡುಕೊಂಡು ಬಿಡದಂಥ ಸ್ವಭಾವ ಇದ್ದ ಮೇಲೆ ನೀನು ಬೇಕೆಂದು ಬಂದು ನನ್ನನ್ನು ಹಿಡುಕೊಂಡು ನನ್ನ ಸಂಗಡ ಜಿಗ್ದಾಡಿದಲ್ಲಿ ನನಗೆ ಮೋಸವಾಯಿತು ಅನ್ನುತ್ತಲೆ, ನರಿಯು ಮುಳ್ಳುಗಿಡದ ಸಂಗತಿ ಎಂದೆಂದೂ ಮಾಡ ಬಾರದು ಎಂದು ಹೇಳಿತು.

ತಾತ್ಪರ್ಯ.

ದುರ್ಜನ ಪುರುಷನು ಎರಡನೆಯವಗೆ ಉಪದ್ರ ಮಾಡಲಿಕ್ಕೆ ಹೋಗುತ್ತಾನೆ. ಆ ಎರಡನೆಯವನು ಇವನಿಗಿಂತ ಇಮ್ಮಡಿಯಾಗಿ ದುರ್ಜನನಾಗಿದ್ದನಂದರೆ ಇವನನ್ನು ತಿರಿಗಿ ಪೇಚಿನೊಳಗೆ ತರುತ್ತಾನೆ. ಈ ಗೃಹಸ್ಥರ ಮಗನು ಹೀಗೆ ಮಾಡ

ಬೇಕೇ ಎಂದು ಅವಾಗ್ಯೆ ನಿಂದೆ ಮಾಡಲಿಕ್ಕೆ ಹತ್ತುತ್ತಾರೆ. ನನ್ನನ್ನು ಪೇಚಿನೊಳಗೆ ತಂದದ್ದು ಅವನಿಗೆ ಉಚಿತವೇ ಸರಿ, ಸುಂಮನೆ ಇದ್ದವನನ್ನು ನಾನು ಹೋಗಿ ತಡವಿದ್ದಲ್ಲವೆಂದು ತಮ್ಮ ಮನಸ್ಸಿನಲ್ಲಿ ತಿಳಿಯುವದಿಲ್ಲ.

---

೨೩. ನೀತಿಕಥೆ.

ಬೇಟೆಗಾರನೂ ಪಕ್ಷಿಯೂ.

ಒಬ್ಬಾನೊಬ್ಬ ಬೇಟೆಗಾರನು ಪಕ್ಷಿಗಳ ಹಿಡಿಯಲಿಕ್ಕೆ ಬಲೆಯನ್ನು ಹಾಕಿರಲಾಗಿ ಅದರ ಸಮೀಪದಲ್ಲಿ ಒಂದು ಗಿಡದ ಮೇಲೆ ಒಂದು ಪಕ್ಷಿಯು ಕೂತಿತ್ತು. ಅದು ಈ ಬೇಟೆಗಾರನ ಸಂಗಡ ಎಲೇ ತಂದೆಯೇ, ಇದು ಏನು ಮಾಡುತ್ತಿ ಎಂದು ಮಾತಾಡಲು, ಆ ಬೇಟೆಗಾರನು ಉತ್ತರ ಹೇಳಿದ್ದು: ಇದು ನಿಮ್ಮಂಥಾ ಪಕ್ಷಿಜಾತಿಗಳು ಕೂಡಿರಲಿಕ್ಕೆ ಒಂದು ಪಟ್ಣವನ್ನು ತಯಾರು ಮಾಡುತ್ತೇನೆ, ಇದರಲ್ಲಿ ಕೂತು ಕೊಳ್ಳುವ ಪಕ್ಷಿಗಳಿಗೆ ದಾವ ಮಾತಿನ ವಿಪತ್ತೂ ಬರಲಿಕ್ಕಿಲ್ಲವು; ಮತ್ತು ಇದರೊಳಗೆ ತಿಂಬೋದಕ್ಕೆ ಆಹಾರ ಉಂಟು, ಇರಲಿಕ್ಕೆ ನಾನಾ ಪ್ರಕಾರವಾದ ಸೌಖ್ಯಸ್ಥಳ ಉಂಟು, ಮಲಗಲಿಕ್ಕೆ ಮೃದು ತರವಾದ ಹಾಸಿಗೆ ಉಂಟು, ಥಂಡಿ ಹತ್ತಲಿಕ್ಕಿಲ್ಲವು; ಇಂಥಾ ಸೌಖ್ಯಗಳು ಉಂಟು. ಆ ಪಕ್ಷಿಯು ಈ ಮಾತು ನಿಜವೆಂದು ನಿಶ್ಚೈಸಿ ಕೊಂಡಿತು. ತರುವಾಯ ಆ ಬೇಟೆಗಾರನು ಬಲೆಯನ್ನು ಒಡ್ಡಿ ಬಿಟ್ಟು ಮನೆಗೆ ಹೋದನು. ಆ ಮೇಲೆ ಪಕ್ಷಿಯು ಬಂದು ಬಲೆಯಲ್ಲಿ ಹೋಗೋಣ ದುಖ್ಖಕ್ಕೆ ಒಳಗಾಯಿತು. ಅದರ ಪ್ರಳಾಪಕ್ಕೆ ಪಕ್ಷಿಗಳು ಸಮೀಪಕ್ಕೆ ಬಂದವು. ಆಗಲು ಆ ಬಲೆಯೊಳಗಿದ್ದ ಪಕ್ಷಿಯು ಆ ಪಕ್ಷಿಗಳಿಗೆ ಹೇಳಿದ್ದು: ಎಲೇ ಪಕ್ಷಿಗಳಿರಾ, ಇಲ್ಲೇ ಬಲೆ ಹಾಕಿ ಅದೆ, ಇದರಲ್ಲಿ ನಾನು ಬಿದ್ದು ಬಹಳ ಮೋಸ ಹೋದೆನು, ಆ ಬೇಟೆಗಾರನು ಬಂದು ನಿಮಗೂ ಬಹಳ ಮೋಹಕ್ಕೆ ಹಾಕ್ಯಾನು, ಪರಂತು ಅ

ವನ ಮಾತು ಖರೇ ಎಂದು ನಂಬಲಿಕ್ಕೆ ಬಾರದು; ಮತ್ತು ಈ ವೃತ್ತಾಂತ ಸಮಸ್ತ ಪಕ್ಷಿಜಾತಿಗೂ ತಿಳಿಸುವಂಥವರಾಗಿರಿ. ಅಷ್ಟರೊಳಗೆ ಎರಡು ಘಳಿಗೆ ಅವಕಾಶವಾದ ಮೇಲೆ ಬೇಟೆಗಾರನು ಬಲೆಯ ಸಮೀಪಕ್ಕೆ ಬಂದು ನೋಡಲಾಗಿ, ಒಳಗೆ ಶಿಕ್ಕಿರುವ ಪಕ್ಷಿಯು ಮಾತನಾಡಿದ್ದು: ಎಲೇ ಐಯ್ಯನೇ, ನೀನಂತು ನನಗೆ ವಂಚಿಸಿದಿ, ಪರಂತು ಇನ್ನು ಮೇಲೆ ನೀ ಮಾಡಿದಂಥಾ ರಮ್ಯವಾದ ಈ ಸ್ಥಳದೊಳಗೆ ಪಕ್ಷಿಜಾತಿಗಳು ಯಾವದಾದರೂ ಬರಲಿಕ್ಕಿಲ್ಲವೆಂದು ನಿನ್ನ ಮನಸ್ಸಿನಲ್ಲಿ ನಿಶ್ಚಯ ತಿಳುಕೋ.

ತಾತ್ಪರ್ಯ.

ಕಳ್ಳನಾಗಿರುವ ಮನುಷ್ಯನ ಗುರುತು ಜನಕ್ಕೆ ತಿಳಿಯುವ ಪರ್ಯಂತರ ಅವರನ್ನು ತಕ್ಕಿಸಲಿಕ್ಕೆ ಶಕ್ತನಾಗುತ್ತಾನೆ. ಒಂದು ಬಾರಿ ಸ್ವರೂಪ ತಿಳಿದ ಬಳಿಕ ಜನರು ಅವನ ನೆರಳಿಗೆ ಅವನ ಘಾಳಿಗೆ ಸಹ ನಿಂತಿರುವದಿಲ್ಲ.

---

೨೪. ನೀತಿಕಥೆ.

ಸಿಂಹವೂ ಕಪ್ಪೆಯೂ.

ಒಂದಾನೊಂದು ಸಿಂಹವು ಒಂದು ಸರೋವರಕ್ಕೆ ನೀರು ಕುಡಿಯಲಿಕ್ಕೆ ಹೋಗಿರಲಾಗಿ ಅಲ್ಲಿ ಒಂದು ಕಪ್ಪೆಯು ಒದರುವ ಧ್ವನಿಯನ್ನು ಕೇಳಿ ಸಿಂಹವು ತನ್ನ ಮನಸ್ಸಿನಲ್ಲಿ ಭಯವನ್ನು ತಾಳಿ ಈ ಸ್ಥಳದ ನಾಲ್ಕು ಕಡೆಗೆ ನೋಡಿದರೂ ಯಾರ್ಯಾರೂ ಇಲ್ಲ, ಈ ಶಬ್ದ ಮಾತ್ರ ಕ್ಷಣಕ್ಷಣಕ್ಕೂ ಆಗುತ್ತದೆ, ಇದು ಏನು ಇದ್ದೀತು ಎಂದು ಅಂಜಿ ನಡುಗುವಂಥಾದ್ದಾಯಿತು. ಆದರೂ ಓಡಿ ಹೋಗದೆ ಧೈರ್ಯ ಹಿಡಿದು ನಿಂತು ತನ್ನ ಮನದಲ್ಲಿ ವಿಚಾರ ಮಾಡುತ್ತಿರುವ ಸಮಯದಲ್ಲಿ ಆ ಕಪ್ಪೆಯು ಒದರಿ ಕೊಳ್ಳುತ್ತಾ ನೀರ ಹೊರಗೆ ಬರೋದನ್ನು ಸಿಂಹವು ಕಂಡು ಕೋಪವ ತಾಳಿ ಇದು ಬಹಳ ಸಣ್ಣ ಜೀವನ, ಇದು ನನ್ನಂಥವಗೆ ಇಷ್ಟು ವ್ಯಾಕುಲತ್ವ ಮಾಡಿತಲ್ಲ ಎಂದು ಆ ಕಪ್ಪೆಯ ಸಮೀಪಕ್ಕೆ ಹೋಗಿ ತನ್ನ ಕಾಲಿನಿಂದ ಅದನ್ನ ಶೀಳಿ ಹಾಕಿತು.

ತಾತ್ಪರ್ಯ.

ಭಯ ತೋರುವಂಥಾದ್ದು ಬಹಳವಾಗಿ ಸುಳ್ಳೇ. ಅದು ಅವಿವೇಕರನ್ನೂ ಮೂರ್ಖರನ್ನೂ ಪೀಡಿಸುತ್ತದೆ. ವಿವೇಕ ಧೈರ್ಯ ಉಳ್ಳವರು ಅದರ ಮೂಲ ಶೋಧಿಸುತ್ತಿರಲಾಗಿ ಆ ಭಯಕ್ಕೆ ತಮ್ಮ ಮನಸೇ ಹೊರ್ತು ಎರಡನೇ ಮೂಲ ಇಲ್ಲವೆಂದು ಅವರ ಲಕ್ಷ್ಯದೊಳಗೆ ನಿಶ್ಚಯ ತೋರುತ್ತದೆ.

---

೨೫. ನೀತಿಕಥೆ.

ಸಿಂಹವೂ ಟಗರೂ.

ಒಂದು ಟಗರು ಗುಡ್ಡದ ತುದೀ ಮೊಕಿನಲ್ಲಿ ಮೇಯುತ್ತಾ ಇರಲಾಗಿ ಅದನ್ನ ಒಂದು ಸಿಂಹವು ಕಂಡು ಅಲ್ಲಿಗೆ ಹೋಗುವದಕ್ಕೆ ತನಗೆ ಸಾಮರ್ಥ್ಯವಿಲ್ಲದ ಕಾರಣ ಆ ಟಗರನ್ನು ಕರೆದು ಹೇಳಿದ್ದು: ಎಲೇ ಟಗರೇ, ನೀನು ಇಂಥಾ ಅವಘಡವಾದ ಸ್ಥಳದಲ್ಲಿ ಸರ್ವಕಾಲ ಮೇಯುತ್ತಾ ಇರುತ್ತೀ. ಇದರಲ್ಲಿ ನಿನಗೆ ಏನು ಸುಖವಿದ್ದೀತು; ಹಾರುವ ವೇಳ್ಯದಲ್ಲಿ ಎಲ್ಲಾದರೂ ಕಾಲು ತಪ್ಪಿ ಕೆಳಿಯಕ್ಕೆ ಬಿದ್ದರಾಯಿತೆ ನಿನ್ನ ಜೀವ ಉಳಿಯಲಿಕ್ಕಿಲ್ಲ, ಅದನ್ನ ಕಳಕೊಂಡಿಯೇ. ಆದ್ದರಿಂದ ಅದು ನನ್ನ ಬುದ್ಧಿಗೆ ಚೆಲೋದು ಕಾಣುವದಿಲ್ಲ. ಇನ್ನು ಒಂದು: ನೀನು ಕೆಳಿಯಕ್ಕೆ ಇಳಿದು ಬಂದಿಯಂದರೆ ಈ ಮೈದಾನದಲ್ಲಿ ಉತ್ತಮವಾದ ಎಳೇ ಹುಲ್ಲನ್ನೂ ಮಧುರ ತರವಾದ ಗಿಡಗಂಟೆಗಳನ್ನೂ ತಿಂದು ಸುಖಿಯಾದೀಯಲ್ಲಾ ಎಂಬೋಣ, ಆ ಟಗರು — ತಂದೆಯೇ, ನೀನು ಹೇಳುವ ಮಾತುಗಳೆಲ್ಲಾ ಸಹಜ, ಪರಂತು ನೀನು ಬಹಳ ಹಶಿವಿಯಿಂದ ಬಳಲುತ್ತಿದ್ದೀ ಎಂಬೋ ಹಾಗೆ ಕಾಣಿಸುತ್ತದೆ, ಹೀಗಿರುವಲ್ಲಿ ನೀನು ಪ್ರತ್ಯಕ್ಷವಾಗಿ ಇದ್ದ ಸ್ಥಳಕ್ಕೆ ನಾನು ಬಂದು ನನ್ನ ಜೀವವನ್ನು ಬೇಕೆಂತಾ ಕಳಕೊಂಬುವವನಲ್ಲಾ ಅಂದಿತು.

ತಾತ್ಪರ್ಯ.

ಬಹಳ ಬಯಸುವಂಥಾ ಜನರಿಗೆ ಪ್ರಮಾಣಿಕನಂತೆ ತೋರದಂಥಾ ಮನುಷ್ಯನು

ಏನಾದರೂ ಹಿತ ಕಾರಣವಾದದ್ದು ಹೇಳಿದರೂ ಆ ಮಾತು ಖರೇ ಎಂದು ತೋರಿದ ಕಾಲಕ್ಕೂ ಅವನ ಮಾತಿನಲ್ಲೇ ವಿಶ್ವಾಸ ಹಿಡಿಯ ಕೂಡದು, ಅದರಲ್ಲಿ ಏನಾದರೂ ಕಪಟ ಇದ್ಧೀತೆಂದು ತಿಳಿಯ ಬೇಕು.

---

೨೬. ನೀತಿಕಥೆ.

ನರಿಯೂ ಅಡವಿಯ ಹಂದಿಯೂ.

ಒಂದಾನೊಂದು ಕಾಡುಹಂದಿಯು ಒಂದು ಗಿಡದ ಬುಡಕ್ಕೆ ತನ್ನ ಕೋರೆಯನ್ನು ಮಸಿಯುತ್ತಿರಲಾಗಿ, ಅಲ್ಲಿಗೆ ಒಂದು ನರಿಯು ಬಂದು ಎಲೋ, ಸುತ್ತಲೂ ನೋಡಿದರೂ ನಿನ್ನ ಮೇಲೆ ಯಾರಾದರೂ ಶತ್ರುಗಳು ಏರಿ ಬಂದ ಹಾಗೆ ಏನೂ ಕಾಣುವದಿಲ್ಲ, ಸುಮ್ಮಗೆ ನೀನು ಕೋರೆಯನ್ನು ಮಸಿಯೋದು ಕಾರಣವೇನು ಎಂದು ಹಂದಿಯನ್ನು ಕೇಳಲಿಕ್ಕೆ ಹಂದಿಯು ಹೀಗೆ ಮಾತನಾಡಿತು: ಎಲೋ ನರಿರಾಜಮಿತ್ರನೇ, ನೀನು ಹೇಳುವ ಮಾತು ಖರೆ, ಪರಂತು ನಿನಗೆ ತಿಳಿದಿರಲಿ, ತನಗೆ ಕೂಡಿದ ಕಾಲಕ್ಕೆ ಆಯುಧಗಳ ಮಸದು ಶೀಘ್ರ ಮಾಡಿ ತಯಾರಾಗಿ ಇಡ ಬೇಕು, ಯಾಕಂದರೆ ಸಂಕಟದ ಸಮಯಕ್ಕೆ ಮಸಕೊಂಡೇನಂದರೆ ಆಗ್ಯೆ ಅವಕಾಶ ಬೀಳುವದಿಲ್ಲವು, ವೇಳ್ಯದ ಖರವಸ ಹಿಡಿಯಲಿಕ್ಕೆ ಕೂಡದು.

ತಾತ್ಪರ್ಯ.

ಮನೆಗೆ ಬೆಂಕಿ ಹತ್ತಿದಾಗ ಭಾವಿ ತೆಗಿಸುವದು ಮೂರ್ಖತನವು. ಬಾಲತ್ವ ಇರುವಂಥಾ, ಹಿರಿಯರು ಇರುವಂಥಾ, ಸಂಸಾರ ತನ್ನ ಮೈ ಮೇಲೆ ಬೀಳದಿರುವಂಥಾ ಕಾಲದಲ್ಲಿ ವಿದ್ಯಾಭ್ಯಾಸ ಮಾಡ ಬೇಕು. ಅದು ತಾರುಣ್ಯ ವೇಳ್ಯಕ್ಕೆ ಸುಖ ಕೊಟ್ಟೀತು. ಯೌವನ ಕಾಲಕ್ಕೆ ವಿದ್ಯಾನುಭವದ ಸುಖ ತೆಗದು ಕೊಳ್ಳ ಬೇಕು, ತನ್ನ ಇಂದ್ರಿಯಗಳು ಸ್ವಾಧೀನದಲ್ಲಿ ಇಟ್ಟಿರ ಬೇಕು, ವ್ಯಸನಗಳಿಗೆ ಆಸ್ಪದ ಕೊಡ ಬಾರದು, ದ್ರವ್ಯದ ಸಂಗ್ರಹ ಮಾಡ ಬೇಕು; ಇದರಿಂದ ವೃದ್ಧಾಪ್ಯಕಾಲಕ್ಕೆ ಸುಖವಾದೀತು. ಇದನ್ನು ಯೋಚಿಸಿ ಕೊಂಡು ಮಾಡುವವನು ಅವನೇ ಸಾವಧಾನಿ, ಅವನೇ ಜಾಣ, ಅವನೇ ಬುದ್ಧಿವಂತನು.

---

೨೭. ನೀತಿಕಥೆ.

ಎರಡು ಏಡಿಗಳು.

ಏಡಿಗಳ ಸ್ವಭಾವ ಅಡ್ಡ ನಡಿಯುತ್ತಿರುವಂಥಾದ್ದೇ. ಒಂದಾನೊಂದು ದಿವಸದಲ್ಲಿ ಒಂದು ಏಡಿಯು ತನ್ನ ಮಗಳಿಗೆ ಶಿಟ್ಟು ಮಾಡಿ ನೀನು ಲೋಕದ ನಡವಳೀ ಹೊರ್ತು ನಡೆಯುತ್ತೀ. ಹಾಗೆ ನಡಿಯ ಬೇಡ ಎಂದು ಮಗಳಿಗೆ ಹೇಳಲಾಗಿ, ಮಗಳು ತಾಯಿಗೆ ಅಂದದ್ದು: ಏ ಅವ್ವ ನನ್ನ ಬುದ್ಧಿ ನನಗೆ ಚೆಲೋದು ಕಾಣಿಸುತ್ತದೆ. ಆದ್ದರಿಂದ ಹಾಗೆ ನಡಿಯುತ್ತೇನೆ, ಇದು ನಿನ್ನ ಮರ್ಜಿಗೆ ಬಾರದ ಪಕ್ಷಕ್ಕೆ ನಾನು ಹ್ಯಾಗೆ ಮಾಡಬೇಕು, ನೀನು ನಡೆದು ತೋರಿಸಿದರೆ ನಾನು ಅದರಂತೆ ನೋಡಿ ನಡಿದೇನು.

ತಾತ್ಪರ್ಯ.

ದಾವ ಮಾತಿನ ದುಸಕ ಎರಡನೆಯವರಿಗೆ ಕುಂದು ಇಡುತ್ತಾನೋ ಅದರಂತೆ ತಾನು ಆಚರಿಸುತ್ತಾನೆ. ಇದಕ್ಕಿಂತಲೂ ಆಶ್ಚರ್ಯ ಮತ್ತೊಂದಿಲ್ಲ. ಎರಡನೆಯವರಿಗೆ ಉಪದೇಶ ಮಾಡುವದು ಸರ್ವರಿಗೂ ಬರುತ್ತದೆ. ಪರಂತು ತಾನು ಹೇಳಿದ ಉಪದೇಶದಂತೆ ಸ್ವಥಾ ಆಚರಿಸುವವನು ಜಾಣನು ಖರೆ. ಶುದ್ಧವಾದ ನಡವಳಿಗಿ ತನ್ನಲ್ಲಿ ಇಲ್ಲದತಿ ಚೆಲೋ ಚೆಲೋ ಮಾತುಗಳ ಮಾತ್ರ ಹೇಳುವವನು ಜಾಣನಲ್ಲಾ ಎನ್ನ ಬೇಕು.

---

೨೮. ನೀತಿಕಥೆ.

ಕಳ್ಳನೂ ಹುಡುಗನೂ.

ಒಬ್ಬ ಹುಡುಗ ಒಬ್ಬ ಕಳ್ಳನ್ನ ಕಂಡು ಒಂದು ಬಾವೀ ಕಟ್ಟೇ ಮೇಲೆ ಕುಳಿತು ಶೋಕ ಮಾಡುತ್ತಿರಲಾಗಿ, ಆ ಕಳ್ಳನು ಹುಡುಗನನ್ನು — ಯಾಕೆ ಅಳುತ್ತಿ ಎಂದು ಕೇಳುವಾಗ, ಆ ಪೋರನು ದುಬ್ಬ ದುಬ್ಬಿಸಿ ಕೊಳ್ಳುತ್ತ ನನ್ನ ಬೆಳ್ಳೀ ಚರಿವಿಗೆ ಹಗ್ಗ ಹರಿದು ಬಾವಿಯೊಳಗೆ ಬಿತ್ತು. ನಾನು ಹ್ಯಾ

ಗೆ ಮಾಡಲಿ, ಮನೆಗೆ ಹೋದರೆ ತಾಯಿ ತಂದೆಗಳು ಬಡದಾರು ಎಂಬೋಣ, ತಕ್ಷಣದಲ್ಲೇ ಆ ಕಳ್ಳನು ತನ್ನ ಗಂಟು ಮೈ ಮೇಲಿನ ಅರವಿ ಸುಧಾ ತೆಗದು ಆ ಬಾವಿಯ ಮೇಲಿಟ್ಟು ತಾನು ಬಾವಿಯೊಳಗೆ ಇಳಿದು ನೀರೊಳಗೆ ಮುಳುಗಿ ಹುಡುಕಿ ಬೇಸತ್ತನು; ಆದರೆ ತಂಬಿಗೆ ಶಿಕ್ಕಲಿಲ್ಲ. ಅವನು ಮೇಲಕ್ಕೆ ಬರೋದರೊಳಗೆ ಆ ಹುಡುಗನು ಕಳ್ಳನ ಅರವಿಗಂಟು ಸಹಾ ತೆಗದು ಕೊಂಡು ಓಡಿ ಹೋದನು.

ತಾತ್ಪರ್ಯ.

ಕಳ್ಳನು ತಾನು ಒಬ್ಬರಿಗೆ ಠಕ್ಕಿಸುತ್ತೇನೆ, ಒಬ್ಬರನ್ನು ಸುಲು ಕೊಳ್ಳುತ್ತೇನೆ, ನನ್ನ ಯಾರೂ ಸುಲು ಕೊಳ್ಳಲಿಕ್ಕೆ ಇಲ್ಲವೆಂದು ತಿಳಿಯಲಾಗದು.

---

೨೯. ನೀತಿಕಥೆ.

ಕಳ್ಳನೂ ನಾಯಿಯೂ.

ಒಬ್ಬ ಹರದನ ಮನೆಗೆ ಕಳ್ಳನು ಕನ್ನ ಹಾಕ ಬೇಕೆಂದು ರಾತ್ರಿಯಲ್ಲಿ ಬಂದನು. ಆ ಹರದನ ಮನೆಯ ಮುಂದೆ ಸಾಕಿದ ನಾಯಿ ಇತ್ತು. ಆ ಸುಳವು ಕಂಡು ಬೊಗಳಲಿಕ್ಕೆ ಹತ್ತ್ಯೋಣ, ಕಳ್ಳನು ಆ ನಾಯಿಯ ಮುಂದೆ ಚಕ್ಕರೀ ಚೂರು ಒಗದನು. ಆ ನಾಯಿ ಅದನ್ನು ಮುಟ್ಟದಲೇ ಕಳ್ಳನ ಸಂಗಡ ಮಾತಾಡಿತು: ಎಲೋ ಮುಂಚಿಗೆ ನನಗೆ ಇಷ್ಟು ರಾತ್ರಿಯೊಳಗೆ ದಾವನೋ ದುಷ್ಟ ಮನುಷ್ಯನು ಬಂದಾನೆ ಎಂದು ಇಷ್ಟು ಮಾತ್ರ ಸಂಶಯವಿತ್ತು; ಆದರೆ ನನಗೆ ಲಂಚ ಕೊಡೋಣದರಿಂದ ನೀನು ಖಚಿತವಾಗಿ ನಮ್ಮ ಧಣೀ ಮನೆಗೆ ಕನ್ನ ಹೊಡಿಯ ಬೇಕೆಂದು ಬಂದಿದ್ದೀ ಎಂದು ತಿಳೀತು. ನೀನು ನಮ್ಮ ಧಣೀ ಮನೆಯ ಸುತ್ತಲೂ ಇರುವ ಪರಿಯಂತರ ನಾನು ಒದರುವದು ಬಿಡುವದಿಲ್ಲ, ನೀನು ಸಂಶಯ ಬಿಟ್ಟು ಬಂದ ಹಾದೀಲೇ ಹೋಗು.

ತಾತ್ಪರ್ಯ.

ಕಾರ್ಯಸಾಧಕನು ಮೂರ್ಖರಿಗೆ ಅಥವಾ ಸ್ವಾರ್ಥರಿಗೆ ಲಂಚ ಕೊಟ್ಟು ವಶ ಮಾಡಿ ಕೊಳ್ಳುತ್ತಾನೆ. ಆದರೆ ದೊಡ್ಡ ಯೋಗ್ಯತೆಯುಳ್ಳವನು ಸ್ವಾಮಿಕಾರ್ಯದಲ್ಲಿ ನಿರುತನಾಗಿದ್ಧಾನೆ. ಅವನು ಲಂಚವನ್ನು ಅಂಗೀಕರಿಸಿ ಪರವಶನಾಗುವದಿಲ್ಲ.

---

೩೦. ನೀತಿಕಥೆ.

ಹಂದಿಯೂ ನಾಯಿಯೂ.

ಒಂದು ಸಮಯದಲ್ಲಿ ಒಂದು ಹೆಂಣುಹಂದಿಗೂ ಒಂದು ಹೆಂಣು ನಾಯಿಗೂ ಗಂಟು ಬಿದ್ದು ಲಗುಬಿಗೀಲೆ ಯಾರು ಈಯುತ್ತಾರೆ ಎಂದು ಉಭಯತರೊಳಗೆ ಮಾತಿನ ಪ್ರಸಂಗ ಬಿದ್ದು ನಾಯಿ ಹೇಳುತ್ತದೆ: ನಾನು ಒಂದೇ ಸಾರಿ ಬಹಳ ಕುನ್ನಿಗಳ ಈಯುತ್ತೇನೆ, ದಿವಸಗಳು ಬಹಳ ಹತ್ತೋದಿಲ್ಲ ಅಂಬೋಣ, ಹಂದಿಯು — ನೀ ಹೇಳಿದ ಮಾತು ಖರೆ, ಆದರೆ ನೀನು ಈಯುವದರ ದೆಶೆಯಿಂದ ಸರ್ತಿಗೊಮ್ಮೆ ನಿನಗೆ ಬಹಳ ಉತಾವಳಿ ಆಗುತ್ತದೆ. ಅದರಿಂದ ನಿನ್ನ ಮರಿಗಳು ಕುರುಡಾಗುತ್ತವೆ, ನನ್ನ ಹಾಗೆ ಆಗುವದಿಲ್ಲ ಎಂದು ಹೇಳಿತು.

ತಾತ್ಪರ್ಯ.

ಉತಾವಳಿಯಿಂದ ಮಾಡುವ ಕಾರ್ಯದ ಫಲಗಳು ನೆಟ್ಟಗೆ ಆಗುವದಿಲ್ಲ.

---

೩೧. ನೀತಿಕಥೆ.

ನರಿಯೂ ದಿಂಡೆಯನೂ.

ಒಂದಾನೊಂದು ನರಿಯ ಬೆನ್ನು ಹತ್ತಿ ಒಬ್ಬ ಬೇಟೆಗಾರನು ಬಹಳ ಶೀಘ್ರವಾಗಿ ಬರೋಣ ಆ ನರಿಯು ಓಡಿ ಓಡಿ ದಣಿ ಕೊಂಡು ಮಾರ್ಗದಲ್ಲಿ ಒಬ್ಬ ದಿಂಡೆಮನುಷ್ಯ ನಿಂತಿದ್ದನ್ನು ನೋಡಿ ಅವಗೆ ನರಿಯು ಪ್ರಾ

ರ್ಥನೆ ಮಾಡುತ್ತದೆ: ಎಲೋ ಪ್ರಾಣಿಯೇ, ನನಗೆ ಪ್ರಾಣ ತಕ್ಕೊಳ್ಳಲಿಕ್ಕೆ ಬೆನ್ನು ಹತ್ತಿ ಒಬ್ಬ ಬರುತ್ತಾನೆ, ಈ ಸಮಯದಲ್ಲಿ ನಿನ್ನ ಗುಡಸಲ ಒಳಗೆ ಜಾಗ ಕೊಟ್ಟರೆ ಅಡಗೇನು ಎಂಬೋಣ, ಆ ಮನುಷ್ಯನು ಯಾಕಾಗವಲ್ಲದು ಎಂಬೋಣ, ನರಿಯು ಆ ಗುಡಸಿಲ ಒಳಗೆ ಅಡಗಿ ಕೊಂಡಿತು. ಬೇಟೆಗಾರನು ಬೆನ್ನು ಹತ್ತಿ ಕೊಂಡು ಬರಲಾಗಿ ದಾರಿಯಲ್ಲಿ ಆ ದಿಂಡೆಯನನ್ನು ಕಂಡು ಏ ಅಣ್ಣಾ ಒಂದು ನರಿಯು ಹೋದದ್ದು ಕಂಡೆಯಾ ಎನ್ನಲಾಗಿ ನಾನು ನೋಡಲಿಲ್ಲ ಎಂದು ಬಾಯ್ಬಿಂದ ಹೇಳಿ ಚಿಟ್ಟಿನ ಸನ್ನೆಯಿಂದ ಮೇಲಿಂದ ಮೇಲೆ ತೋರಿಸಿದನು. ಅವಗೆ ಆ ಸನ್ನೆ ತಿಳಿಯದೆ ಮುಂದಕ್ಕೆ ಹೋಗುವವನಾದನು. ತರುವಾಯ ನರಿಯು ಅಪ್ಪಣೆ ತಕ್ಕೊಳ್ಳದಲೆ ಮೆಲ್ಲಗೆ ಅಲ್ಲಿಂದ ಹೊರಟು ಹೋಗುವಾಗ ಈ ಮನುಷ್ಯನು ನರಿಗೆ—ಎಲೇ ನರಿಯೇ ನಿನಗೆ ಉಪಕಾರ ಮಾಡಿ ಪ್ರಾಣ ಉಳಿಸಿದಂಥವಗೆ ಹೋಗಿ ಬರುತ್ತೇನೆಂದು ಹೇಳದೆ ಹೋಗುತ್ತೀ? ಇದೇ ಸರಿಯೇ ನಿನ್ನ ಕ್ರಿಯಾ ಅನ್ನಲಾಗಿ, ನರಿಗೆ ಅವನು ಮಾಡಿದ ಸನ್ನೆಯ ತಿಳಿದಿತ್ತು. ಅದರಿಂದ ಆಗ ಇದಕ್ಕೆ ಏ ಗೆಳೆಯಾ, ನಿನ್ನ ಮಾತಿನಂತೆ ನಿನ್ನ ಪ್ರಕೃತಿ ಇದ್ದರೆ ನಿನ್ನ ಉಪಕಾರ ತೀರಿಸದೇ ಇರುತ್ತಿದ್ದಿಲ್ಲ ಎಂದು ಉತ್ತರ ಕೊಟ್ಟಿತು.

ತಾತ್ಪರ್ಯ.

ಕೆಲವು ಅಧಮಜನರು ಮುಖದಲ್ಲೇ ಇಷ್ಟವಾದ ಮಾತು ನುಡಿದು, ಮನಸ್ಸಿನಲ್ಲಿ ಅವನು ನಾಶವಾಗ ಬೇಕೆಂದು ಯೋಚನೆ ಮಾಡುತ್ತಾರೆ. ಇವರು ಮಿತ್ರಘಾತಕರೂ ವಿಶ್ವಾಸಹೀನರೂ ನೀಚರೂ. ಇಂಥವರ ಮುಖಾವಲೋಕನ ಮಾಡ ಬಾರದು.

---

೩೦. ನೀತಿಕಥೆ.

ಮನುಷ್ಯಗೆ ನಾಯಿ ಕಚ್ಚಿದ್ದು.

ಒಬ್ಬ ಮನುಷ್ಯಗೆ ಒಂದು ನಾಯಿ ಕಚ್ಚಿತು. ಅದಕ್ಕೆ ಒಬ್ಬ ಮುದುಕಿ

ಔಷಧೋಪಾಯ ಹೇಳಿದಳು, ಏನಂದರೆ: ಒಂದು ಚಕ್ಕರಿತುಕ್ಕಡಿ ಆ ಘಾಯದ ಮೋರೆಗೆ ಹಚ್ಚಿ ಆ ತುಕ್ಕಡಿಯನ್ನು ಆ ಕಡದ ನಾಯಿಗೆ ತಿನ್ನಿಸಿದರೆ ವಿಷವಿಳಿದೀತು ಎನ್ನಲು, ಅವನು ಅದರಂತೆ ಮಾಡೋಣಾ, ಮಾರ್ಗದಲ್ಲಿ ಒಬ್ಬ ಜಾಣನಾದ ಮನುಷ್ಯನು, ಇವನ ಘಾಯವನ್ನು ಕಂಡು, ಇದು ಏನು ಮಾಡುತ್ತೀ ಎಂದು ಕೇಳಿದನು. ಆಗ ನಾಯಿ ಕಡದದಕ್ಕೆ ಉಪಾಯ ಮಾಡುವ ವರ್ತಮಾನ ಹೇಳಿದನು. ಆ ಜಾಣನು ಕೇಳಿ ಮಾತನಾಡುತ್ತಾನೆ— ಹೀಗಿದ್ದರೆ ನಿನ್ನನ್ನು ನಾನು ಬೇಡಿ ಕೊಳ್ಳುತ್ತೇನೆ: ಈ ಕೃತ್ಯವನ್ನು ಬಹಳ ಗುಪ್ತದಿಂದ ಮಾಡ ಬೇಕು, ಯಾಕಂದರೆ ಈ ಪಟ್ಟಣದಲ್ಲಿ ಸಹಸ್ರಾವಧಿ ನಾಯಿಗಳು ಇದ್ದಾವೆ. ಈ ವರ್ತಮಾನ ಕೇಳಿದಾಕ್ಷಣಕ್ಕೆ ಊರೊಳಗೆ ಒಬ್ಬ ಮನುಷ್ಯನು ಘಾಯವಾಗದೇ ಉಳಿಯಲಿಕ್ಕಿಲ್ಲ ಅಂದನು.

ತಾತ್ಪರ್ಯ.

ಕಳ್ಳರಿಗೆ ಶಿಕ್ಷೆ ಮಾಡೋದೇ ಯೋಗ್ಯ. ಆದರೆ ಹಾಗೆ ಮಾಡದೆ ಅವರಿಗೆ ಅಂಜಿ ಕೊಂಡು ವಿಪರೀತವಾಗಿ ಅವರಿಗೆ ಹಿತಕಾರಿಯಾಗ ಬಾರದು. ಅಥವಾ ಆಗುವದಾದರೆ ಗುಪ್ತದಿಂದಲೇ ಆಗ ಬೇಕು. ಯಾಕಂದರೆ ಸಹಜತ್ವದ ಗುರುತ್ವ ಉಳಿಯಲಿಕ್ಕಿಲ್ಲ. ಆ ಕಳ್ಳನ ಮಹತ್ವವೇ ಪ್ರವೃದ್ಧಿಯಾದೀತು.

---

೩೩. ನೀತಿಕಥೆ.

ದೇವರೂ ಹುಡುಗನೂ.

ಒಂದು ಬಾವಿಯ ದಂಡೇ ಮೇಲೆ ಒಬ್ಬ ಹುಡುಗನು ಮಲಗಿರಲಾಗಿ ದೇವರು ಅವನನ್ನು ಎಬ್ಬಿಸಿ ಜಾಗ್ರತೆ ಮಾಡಿ ಎಲೋ ಪೋರಾ, ಒಂದು ವೇಳೆ ನೀನು ನಿದ್ದೆಗಣ್ಣೀಲಿ ಈ ಬಾವಿಯೊಳಗೆ ಬಿದ್ದರೆ ಜನರು ನನಗೆ ದೇವರು ಬಹಳ ಅನ್ಯಾಯ ಮಾಡಿದನು ಅಂದಾರು ಎಂದು ಹೇಳಿದನು.

ತಾತ್ಪರ್ಯ.

ಜನರ ನಡತೆ ಹೀಗದೆಯಷ್ಟೆ—ಏನಾದರೂ ಚೆಲೋದಾದರೆ ನಾವು ಮಾಡಿದೆವು ಎನ್ನುತ್ತಾರೆ; ಕೆಟ್ಟದಾದರೆ ದೇವರ ಮೇಲೆ ದೋಷ ಇಡುತ್ತಾರೆ. ಆದರೆ ತಾವು ಮಾಡಿದಂಥಾದಕ್ಕೆ ಶಬ್ದ ಇಡೋದಿಲ್ಲ.

---

೨೪. ನೀತಿಕಥೆ.

ಲೋಭಿಮನುಷ್ಯನು.

ಒಬ್ಬ ಕೃಪಣಮನುಷ್ಯನಾದವನು ದ್ರವ್ಯವನ್ನು ಕೂಡಿಸಿ ಜಮೆ ಮಾಡಿ ತನ್ನ ಹೊಲದಲ್ಲಿ ಹುಗದು ದಿನ ಒಂದಕ್ಕೂ ಎರಡು ಸಾರಿ ಹೋಗಿ ಹುಗದಿರುವ ಸ್ಥಳ ನೋಡಿ ನೋಡಿ ಬಹು ಸಂತೋಷವಾಗುತ್ತಾ ಇರಲಾಗಿ, ಅವನ ಚಾಕರಿಮನುಷ್ಯಗೆ ಇವನು ಮಾಡಿದಂಥಾದ್ದು ಗೊತ್ತು ಇತ್ತು. ಅವನು ಅದನ್ನು ಲಕ್ಷ್ಯದೊಳಗೆ ಇಟ್ಟು, ನಮ್ಮ ಧಣಿ ದಿನಂಪ್ರತಿ ನೋಡುತ್ತಾನೆ, ಅವನು ಬಹಳ ಲೋಭಿಪುರುಷನು ಎಂದು ಆ ಜಾಗದೊಳಗಿದ್ದ ದ್ರವ್ಯವನ್ನು ಕದ್ದುಕೊಂಡು ಓಡಿ ಹೋದನು. ಬೆಳಗಾದ ಮೇಲೆ ಈ ಲೋಭಿಯು ಬಂದು ನೋಡಲಾಗಿ ದ್ರವ್ಯ ಇದ್ದಿಲ್ಲ. ಹೋದದ್ದು ಕಂಡು ತಲೆಯ ಮೇಲೆ ಬೂದಿ ಹಾಕಿ ಕೊಂಡು ಎದೆ ಎದೆ ಬಡ ಕೊಂಡು ದುಃಖದಿಂದ ಅದೇ ಸ್ಥಳದಲ್ಲಿ ರೋದನ ಮಾಡಿ ಕೊಳ್ಳುತ್ತಾ ಕೂತು ಕೊಳ್ಳುತ್ತಿರಲಾಗಿ, ಅವನ ನೆರೆಮನೆಯ ಗೃಹಸ್ಥನು, ಈ ವೃತ್ತಾಂತವ ಕೇಳಿ, ಅಲ್ಲಿಗೆ ಬಂದು ಕೇಳಲಾಗಿ ಲೋಭಿಯು ವಿಸ್ತರಿಸಿ ಹೇಳಿದನು. ಅದಕ್ಕೆ ಆ ಗೃಹಸ್ಥನು ಅಂದದ್ದು — ನನಗೆ ಒಂದು ಹಂಚಿಗೆ ತೋರುತ್ತದೆ — ಏನಂದರೆ, ನೀನು ಸುಮ್ಮನೆ ಶೋಕಾ ಮಾಡದೆ ಪದಾರ್ಥ ಹೋಯಿತು ಎಂಬದು ಮನಸ್ಸಿಗೆ ತಾರದೆ ಈ ಜಾಗಕ್ಕೆ ನಿತ್ಯ ಒಂದಕ್ಕೂ ಬಂದು ಬಂದು ಹ್ಯಾಗೆ ನೋಡುತ್ತಿದ್ದಿಯೋ ಅದರಂತೆ ದಿನಂಪ್ರತಿಯಲ್ಲೂ ನೋಡುತ್ತಾ ಹೋಗು ಅಂದರೆ ನಿನ್ನ ಕೆಲಸವಾಯಿತೆಂದು ತಿಳಿ.

ತಾತ್ಪರ್ಯ.

ಲೋಭಿಯು ದ್ರವ್ಯ ಇದ್ದರೂ ದರಿದ್ರನೇ. ಆ ದ್ರವ್ಯ ಉಪಯೋಗ ಮಾಡದೆ ಇರುತ್ತಾನೆ. ಮತ್ತು ಸಂಪಾದಿಸೋ ಅಭಿಲಾಷೆಯಲ್ಲಿಂದ ಮರಣ ಪರಿಯಂತರವೂ ಅನೇಕ ಪ್ರಕಾರವಾಗಿ ಪಾಪಗಳ ಮಾಡುತ್ತಾ ಇರಲಾಗಿ ಕಟ್ಟ ಕಡೆಗೆ ಅವನು ಘುಳಿಸಿದ ದ್ರವ್ಯ ಕಳ್ಳರೂ ಸುಳ್ಳರೂ ತಿಂದು ಹೋಗುತ್ತಾರೆ. ಅವನ ಪಾಲಿಗೆ ದುಃಖ ಶೋಕ ಮಾತ್ರ ಪ್ರಾಪ್ತಿಯಾಗುತ್ತದೆ. ಸತ್ತ ಮೇಲೆ ನರಕ ಸಾಧನ. ಇದೇ ಲೋಭಿಯ ಕೃತ್ಯವು.

---

೩೫. ನೀತಿಕಥೆ.

ಗಾಡಿಯವನೂ ರಥದ ಗಾಲಿಯೂ.

ಒಬ್ಬಾನೊಬ್ಬ ಗಾಡಿಯವನು ರಥವನ್ನು ಹತ್ತಿ ಕೊಂಡು ಹೋಗುತ್ತಿರಲಾಗಿ ರಥದ ಒಂದು ಕಡೆಯ ಗಾಲಿಯು ಕಿರುಕಿರು ಎಂಬುವ ಶಬ್ದ ಮಾಡಿತು. ಆ ಕಿರಿಕಿರಿಯನ್ನು ಸಾರಥಿಯು ಕೇಳಿ ಆಶ್ಚರ್ಯ ಪಟ್ಟು ಎಲೇ ಗಾಲಿಯೇ, ನಿನ್ನ ಸರೀಕದ ಗಾಲಿ ಸುಮ್ಮಗೆ ಗಾಂಭೀರ್ಯ ಗುಣದಿಂದ ನಡೆಯಲಾಗಿ ನೀನು ಮಾತ್ರ ಎಲ್ಲರೂ ಕೇಳೋ ಹಾಗೆ ಶಬ್ದವ ಮಾಡುತ್ತಿಯಲ್ಲ, ಅದು ಏನು ಕಾರಣವೆಂದು ಕೇಳಲಾಗಿ, ಆ ಗಾಲಿಯು — ನನಗೆ ಬಹಳ ದುಃಖವಾಗಿ ಸಂತಾಪಗೊಳ್ಳುತ್ತಾ ಇದ್ದೇನೆ ಎಂದು ಹೇಳಿತು.

ತಾತ್ಪರ್ಯ.

ತನಗೆ ಬಂದ ವಿಪತ್ತು ಎಷ್ಟಾದರೂ ಅನುಭವಿಸುತ್ತಿದ್ದ ಕಾಲಕ್ಕೂ ಒಬ್ಬರ ಮುಂದೆ ತೋರಿಸದೆ ತನ್ನೊಳಗೆ ತಾನೆ ಗರ್ಭೀಕರಿಸಿ ಕೊಂಡವನು ಗೌರತ್ವದವನೆಂದು ಸರ್ವರು ಬಹಳವಾಗಿ ಅವನ ಮೇಲೆ ಪ್ರೀತಿ ಮಾಡುತ್ತಾರೆ. ಇದು ಬಿಟ್ಟು ತನ್ನೊಳಗೆ ಇದ್ದ ಸಂತಾಪವನ್ನು ಕಂಡ ಕಂಡವರ ಮುಂದೆ ಆಡಿ ತೋರಿಸುವವನಿಗೆ ಅಲ್ಪ ಸ್ವಭಾವಿ ಎಂದು ಜನರು ಸ್ಥಾಪಿಸುತ್ತಾರೆ. ಆ ಲಾಘುವದಿಂದ ಸುಖಕಾರ್ಯ ಪ್ರಾಪ್ತಿಯಾಗೋದಿಲ್ಲ. ತನ್ನವಗುಣಗಳ ತಾನೇ ಜನಕ್ಕೆ ತೋರಿಸಿ ಕೊಟ್ಟ ಹಾಗೆ ಆಗುತ್ತದೆ.

---

೩೬. ನೀತಿಕಥೆ.

ಬುದ್ಧಿವಂತನೂ ಸಿಂಹವೂ.

ಒಂದಾನೊಂದು ಸಿಂಹವು ಅರಣ್ಯದಲ್ಲಿ ಒಂದು ಸಾರಂಗಮೃಗವನ್ನು ಕೊಂದು ತಿನ್ನ ಬೇಕೆಂದು ಇದುರಿಗೆ ಇಟ್ಟು ಕೊಂಡು ಇರಲಾಗಿ, ಆ ಸಮಯದಲ್ಲಿ ಒಬ್ಬ ಕಳ್ಳನು ಮಾರ್ಗ ಹಿಡಿದು ಹೋಗುತ್ತಾ ಈ ಸಿಂಹವು ಮೃಗವನ್ನು ಕೆಡವಿ ಮುಂದಿಟ್ಟು ಕೊಂಡು ಇರುವದನ್ನು ಕಂಡು, ಅದನ್ನು ತಾನು ಭಕ್ಷಿಸುವ ಕಾಂಕ್ಷೆಯಿಂದ ಎಲೇ ಸಿಂಹರಾಜನೇ, ನನಗೆ ಅರ್ಧ ಸರಿಯಾಗಿ ಈ ಮೃತ ಮೃಗವನ್ನು ಕೊಡ ಬಾರದೇ ಎಂದು ಕೇಳಲು, ಆ ಸಿಂಹವು — ಎಲೋ ಕಳ್ಳನೇ, ನೀನು ಧೈರ್ಯದಿಂದ ನಿಷ್ಕಾರಣವಾಗಿ ನಾಚಿಕೆ ಇಲ್ಲದೇ ಪಾಲು ಬೇಡುತ್ತೀಯಲ್ಲಾ, ಸುಮ್ಮಗೆ ನಿನ್ನ ಮಾರ್ಗ ಹಿಡಿದು ಹೋಗುವ ಹಾಗೆ ಹೋದರೆ ಒಳ್ಳೇದು, ಇಲ್ಲವಾಯಿತೇ ಬಡಿಸಿ ಕೊಂಡು ಹೋದೀ ಎಂದು ಆಡಲಾಗಿ, ಕಳ್ಳನು ಧಿಃಕಾರಚಿತ್ತನಾಗಿ ನಡಿಯುವಂಥವನಾದನು. ಅದೇ ವೇಳ್ಯದಲ್ಲಿ ಒಬ್ಬ ಸುಗುಣಿಯಾದ ಸಾಧು ಗೃಹಸ್ಥನು ಅಡ್ಡದಾರಿಯಿಂದ ಬರುತ್ತಾ ಈ ಸಿಂಹವನ್ನು ಕಂಡು ಆ ಮಾರ್ಗವನ್ನು ಬಿಟ್ಟು ಬೇರೆ ದಾರಿ ಹಿಡಿದು ಹೋಗಲಾಗಿ, ಈ ಸಿಂಹವು ಅವನ್ನ ನೋಡಿ ಬಹಳ ಆದರಪೂರ್ವಕವಾಗಿ ದಯಾಸ್ವರದಿಂದ ಕೂಗಿ, ಎಲೋ ಸಾಧು ಗೃಹಸ್ಥನೇ, ಅಂಜದಿರು, ಅಂಜದಿರು, ನೀನು ಉತ್ತಮ ಪುರುಷನು, ಆದ ಕಾರಣ ಈ ಸತ್ತ ಸಾರಂಗದ ಅರ್ಧ ಪಾಲಿನ್ನು ಹೊಂದಲಿಕ್ಕೆ ನೀನು ಯೋಗ್ಯನಿದ್ದೀ ಎಂದು ಕರದು, ಅರ್ಧ ಮೃಗವನ್ನು ಅವನಿಗೆ ಕೊಟ್ಟು ಅರ್ಧ ತಾನು ಭಕ್ಷಿಸಿ ಅರಣ್ಯಪ್ರವೇಶವನ್ನು ಮಾಡಿತು.

ತಾತ್ಪರ್ಯ.

ಉತ್ತಮರು ಭಿಡಿಯಸ್ಥರೆ, ಸುಗುಣವಂತರೆ, ಇಂಥವರನ್ನು ತನ್ನ ಸಮೀಪದ

ಲ್ಲಿ ಇಟ್ಟು ಕೊಳ್ಳ ಬೇಕು. ಕೊರಳು ಬಿದ್ದು ಬೇಡುವವನ ಸವಿ ಮಾತು ಪಿಶುನತ್ವವೇ, ಅತಿ ಭಾಷೆಯೇ, ಡೊಂಗತನವೇ. ಈ ಗುಣದ ಮನುಷ್ಯರನ್ನು ದೂರ ಮಾಡ ಬೇಕು; ಆಶ್ರಯ ಕೊಡ ಬಾರದು.

---

೨೨. ನೀತಿಕಥೆ.

ತೋಳವೂ ಬೇನೆಯ ಹೆಣ್ಣುಕತ್ತೆಯೂ.

ಒಂದಾನೊಂದು ಬೇನೆಯ ಹೆಣ್ಣುಕತ್ತೆಯು ಬಿದ್ದಿರಲಾಗಿ, ಅದಕ್ಕೆ ಬೇನೆ ಬಹಳ ಜೋರು ಎಂಬುವ ವಾರ್ತೆಯನ್ನು ಕೇಳಿ ನಾಲ್ಕು ತೋಳಗಳು ಆ ಕತ್ತೆಯ ಸಮಾಚಾರ ಕೇಳಲಿಕ್ಕೆ ಬರುತ್ತಿರಲಾಗಿ, ಆ ಕತ್ತೆಯು ತನ್ನನ್ನು ಕಟ್ಟಿರ್ದ ಬಾಗಲಿಗೆ ತಲೆಗೊಟ್ಟು ಬಿದ್ದಿರಲು, ಆ ತೋಳಗಳು ಮೆಲ್ಲಗೆ ಮಾತನಾಡಿಸಿ, ಏ ಅಪ್ಪನವರೇ, ನಿಮ್ಮ ಪ್ರಕೃತಿ ಹ್ಯಾಗೆ ಇರುತ್ತದೆ ಎಂದು ಕೇಳಿದವು. ಆಗ ಆ ಕತ್ತೇ ಮರಿಗಳು ಒಳಗಿಂದ ಬಂದು ಎಲೇ ತೋಳಗಳಿರಾ, ಅಪ್ಪನವರ ಪ್ರಕೃತಿ ನೀವು ಇಚ್ಛಿಸುವ ಮರಿಯಾದಿಗೆ ಇನ್ನು ಬಂದ ಹಾಗೆ ಕಾಣೋದಿಲ್ಲಾ ಅಂದವು.

ತಾತ್ಪರ್ಯ.

ವ್ಯಥಿಕರ ಸಮಾಚಾರ ತಕ್ಕೊಂಬುವದಕ್ಕೆ ಜನರು ಬರುತ್ತಾರಲ್ಲ. ಅದರೊಳಗೆ ಅಂತಃಕರಣದಿಂದ ಬರುವ ಜನರು ಸ್ವಲ್ಪ; ತಮ್ಮ ತಮ್ಮ ಸ್ವಾರ್ಥದಿಂದ ಬರುವ ಜನರುಗಳೇ ಬಹಳವು.

---

೨೩. ನೀತಿಕಥೆ.

ತೋಳವೂ ಕುರಿಮರಿಯೂ.

ಒಂದಾನೊಂದು ಕುರಿಯು ಅಡವಿಗೆ ಮೇಯಲಿಕ್ಕೆ ಹೋಗುವಾಗ ತನ್ನ ಮರಿಗಳನ್ನು ಒಳಗೆ ಇಟ್ಟು ಬಾಗಲಿಗೆ ಅಗುಳಿ ಹಾಕಿ ತನ್ನ ಮರಿಗ

ಳಿಗೆ ಸಾಯಂಕಾಲಕ್ಕೆ ನಾನು ತಿರಿಗಿ ಬರುವ ತನಕ ಎರಡನೆಯವರಿಗೆ ಬಾಗಲು ತೆಗೆಯ ಬೇಡಿ ಎಂದು ಬುದ್ಧಿ ಹೇಳುವ ಕಾಲಕ್ಕೆ ಒಂದು ತೋಳ ಸಮೀಪದಲ್ಲಿತ್ತು. ಆ ಮಾತು ಕೇಳಿ ಕೊಂಡು ಕುರಿಯು ಹೊರಟು ಹೋದ ಮೇಲೆ ಸ್ವಲ್ಪ ಅವಕಾಶ ಮಾಡಿ ತೋಳವು ಬಾಗಲಿಗೆ ಬಂದು ಅಗುಳಿಶ್ಯಾಡಿ, ಎಲೋ ಮಗುವೆ, ಬಾಗಿಲ ಅಗುಳಿ ತೆಗೀ ಎಂದು ಆ ಕುರಿಯ ಸ್ವರದಂತೆ ಮಾತನಾಡೋಣ, ಒಳಗಿದ್ದ ಮರಿಗಳಲ್ಲಿ ಒಂದು ತನ್ನ ತಾಯಿಯ ನಿರೂಪವನ್ನು ಲಕ್ಷ್ಯಕ್ಕೆ ತಂದು ಕಿಟಿಕಿಯೊಳಗಿಂದ ನೋಡಲಾಗಿ, ಕಪಟರೂಪವು ದೃಷ್ಟಿಗೆ ಬಿದ್ದು, ಆ ತೋಳಕ್ಕೆ ಹೀಗೆ ಉತ್ತರ ಹೇಳುತ್ತದೆ: ಯಾರಪ್ಪಾ, ನೀನು ಬಂದ ಮಾರ್ಗದಿಂದ ಹೋಗುವವನಾಗು; ಕುರಿಯಂತೆ ಶಬ್ದ ಮಾಡುತ್ತಿದ್ದೀ, ಖರೆ; ಪರಂತು ನಿನ್ನ ರೂಪವು ತೋಳದಂತೆ ಕಾಣಿಸುತ್ತದೆ; ನಾನು ನಿನಗೆ ಬಾಗಲು ತೆಗಿಯುವದಿಲ್ಲ.

ತಾತ್ಪರ್ಯ.

ತಾಯಿ ತಂದೆಗಳ ಆಜ್ಞೆಯನ್ನು ಲಕ್ಷ್ಯದೊಳಗೆ ಇಟ್ಟು ಅವರು ಹೇಳಿದಂತೆ ನಡೆಯುವ ಹುಡುಗರು ಸಂಕಟದಲ್ಲಿ ಸರ್ವಥಾ ಬೀಳೋದಿಲ್ಲ. ಹಿರಿಯರ ಮಾತು ವಿಶ್ವಾಸಿಸುವದಕ್ಕೆ ಕಾರಣವೇನು ಎಂದರೆ: ಮಕ್ಕಳಿಗೆ ಕೆಡಕಾದರೆ ತಮಗೆ ಕೇಡು ಎಂಬ ಭಾವದಿಂದ ತಮ್ಮ ಮಕ್ಕಳಿಗೆ ಅಮಂಗಲವಾಗೋ ಬುದ್ಧಿಯನ್ನು ಸರ್ವಥಾ ಹೇಳೋದಿಲ್ಲ. ಮಕ್ಕಳು ಪ್ರೌಢತ್ವಕ್ಕೆ ಬರುವ ಪರಿಯಂತರವಾಗಿ ತಾಯಿ ತಂದೆಗಳಿಗೆ ಅಲಕ್ಷ್ಯ ಮಾಡಿ ತಾವೇ ವಿಶೇಷ ಜ್ಞಾನಿಗಳೆಂದು ತಿಳಿದು ನಡೆಯುದಂಥ ಮಕ್ಕಳಿಗೆ ಅವರ ಮಾತಿನಂತೆ ಎಂದೆಂದೂ ಕಲ್ಯಾಣ ಆಗುವದಿಲ್ಲವು.

---

೨೯. ನೀತಿಕಥೆ.

ಇರುವೆಯೂ ಜಿಟ್ಟಿಯೂ.

ಒಂದಾನೊಂದು ಇರುವೆಯು ತನ್ನ ಹುತ್ತದ ಸಮೀಪದಲ್ಲಿ ಸಂಗ್ರಹಿಸಿದ ಧಾನ್ಯವನ್ನು ಬಿಸಲಿಗೆ ಹರವಿ ಒಣಗಿಸಿ ವೈಯ ಬೇಕೆಂಬ ಸಮಯ

ದಲ್ಲಿ ಒಂದು ಜಿಟ್ಟಿಯು ಬಂದು, ಎ ಇರುವೇ ಮಹಾರಾಜನೇ, ನಾನು ಕ್ಷುಧೆಯಿಂದ ಬಹಳ ಬಳಲುತ್ತೇನೆ; ನನ್ನ ಬಿನ್ನಹ ಚಿತ್ತಕ್ಕೆ ತಂದು ಈ ಸಮಯದಲ್ಲಿ ನನಗೆ ಒಂದು ಕಾಳು ಚಕ್ಷಣೆಗೆ ಕೊಡ ಬಾರದೇ ಎಂದು ಬಹಳವಾಗಿ ಬೇಡಿಕೊಳ್ಳಲು, ಮತ್ತೊಂದು ಇರುವೆಯು ಮಾತಾಡುತ್ತದೆ: ಎಲೋ ಮೂರ್ಖ ಶಿರೋಮಣಿಯಾದ ಜಿಟ್ಟಿಯೇ ನಿನ್ನಂಥಾ ಅವಿವೇಕಿಗಳು ಎಲ್ಲಿಯೂ ಇಲ್ಲಾ, ಕೇಳು ಎಲ್ಲಾ ಜಾತಿಗಳು ಸುಗ್ಗಿಯಲ್ಲಿ ತಮ್ಮ ಯಥಾನುಶಕ್ತಿ ಧಾನ್ಯಸಂಗ್ರಹ ಮಾಡಿ ಕೊಳ್ಳುತ್ತವೆ, ನೀನು ನಮ್ಮಕ್ಕಿಂತಲೂ ಪರಾಕ್ರಮಿಯಾದಂಥ, ಹಾರ ಬಲ್ಲಂಥ ಪುರುಷನಾಗಿ ನಮ್ಮಂಥವರನ್ನ ಕೇಳಿದರೆ ಹ್ಯಾಗೆ ಕೊಟ್ಟೇವು ಎನ್ನಲಾಗಿ, ಆ ಜಿಟ್ಟಿಯು ಎಲೋ ಇರುವೇ ಸ್ವಾಮಿ, ನಾನು ಆ ಕಾಲದಲ್ಲಿ ಬಹಳವಾಗಿ ಉಂಡು ತಿಂದು ಉನ್ಮತ್ತನಾಗಿ ಬುದ್ಧಿ ತಿಳಿಯಲಿಲ್ಲವೆಂದು ಹೇಳಿ ಕೊಂಡದ್ದು ಇರುವೆಯು ಕೇಳಿ ಪಕಪಕನೆ ನಕ್ಕಿತು.

ತಾತ್ಪರ್ಯ.

ಯಾವ ಪುರುಷನಾದರೂ ತನಗೆ ದಶೆ ನಡಸೋ ಪರಿಯಂತರಕ್ಕೊ ಧನಸಂಗ್ರಹಾ ಮಾಡಿದರೆ ತನ್ನ ಆಪತ್ತುಕಾಲಕ್ಕೆ ಉಪಯೋಗ ಬಿದ್ದು ಸಂರಕ್ಷಣೆ ಮಾಡುತ್ತದೆ. ಇವನು ತನಗೆ ಮಕ್ಕಳೂ ಬಂಧುಗಳೂ ಹೆಂಡರೂ ಇದ್ದಾರೆ ಎಂದು ಧನವ ತಾತ್ಸಾರ ಮಾಡಿದರೆ ಅವರು ದ್ರವ್ಯಕ್ಕಿಂತಲೂ ಹೆಚ್ಚಲ್ಲ, ಅವರಾದರೂ ಧನವಿದ್ದವರನ್ನೇ ಭಕ್ತಿಯಿಂದ ಪೋಷಣೆ ಮಾಡುತ್ತಾ ಇದ್ದಾರೆ, ಆದ್ದರಿಂದ ಧನವೇ ಮುಖ್ಯವು, ತನ್ನ ವೃದ್ಧಾಪ್ಯ ಕಾಲಕ್ಕೆ ಜೋಕೆ ಮಾಡುತ್ತದೆ.

---

೪೦. ನೀತಿಕಥೆ.

ಮಗನೂ ತಾಯಿಯೂ.

ಒಬ್ಬಾನೊಬ್ಬ ಹುಡುಗನು ಸಾಲೆಗೆ ಹೋಗಿ ವಿದ್ಯಾಭ್ಯಾಸವನ್ನು ಮಾಡುತ್ತಿರಲಾಗಿ ಸಮಾಪದಲ್ಲಿ ಬರಿಯೋ ಹುಡುಗನ ಬೆಳ್ಳಿ ಸರಪಣಿ

ಸಿಕ್ಕಿತು. ಆ ವಸ್ತುವನ್ನು ಕಳವು ಮಾಡಿ ತನ್ನ ತಾಯಿಯ ಕೈಯಲ್ಲಿ ತಂದು ಕೊಟ್ಟನು. ಆ ತಾಯಿ ಈ ಪದಾರ್ಥವನ್ನು ನೋಡಿ ಬಹಳ ಸಂತೋಷಭರಿತಳಾಗಿ ಮಗನ ಮೇಲೆ ಮಮತೆಯಿಂದ ಒಂದು ಕಬ್ಬಿನ ಗಣಿಕೆಯನ್ನು ತಿನ್ನ ಕೊಟ್ಟಳು. ಈ ಹುಡುಗನು ಅತಿ ಸಂತೋಷವಾಗಿ ತಾನು ಮಾಡಿದ ಕೆಲಸ ತಾಯಿಯ ಚಿತ್ತಕ್ಕೆ ಬಹಳವಾಗಿ ಬಂತು ಎಂದು ತಿಳಿದು, ದಿನಂಪ್ರತಿಯಲ್ಲೂ ಇದಕ್ಕಿಂತಲೂ ದೊಡ್ಡ ದೊಡ್ಡ ಪದಾರ್ಥಗಳನ್ನು ಒಳ್ಳೇ ಒಳ್ಳೇ ಸಾವಕಾರರ ಮನೆಗಳಿಗೆ ಹೋಗಿ ಕಳವು ಮಾಡುತ್ತಾ ಇರಲಾಗಿ, ಒಂದು ದಿನ ಕಳವಿನ ಪದಾರ್ಥಸಹಿತವಾಗಿ ಸಿಕ್ಕಿದನು. ಆ ಮೇಲೆ ಅರಮನೆಯವರು ಈ ಹುಡುಗನ್ನ ಶೂಲಕ್ಕೆ ಹಾಕ ಬೇಕೆಂದು ಅಪ್ಪಣೆ ಕೊಡಲಾಗಿ, ಶೂಲಕ್ಕೆ ವೈದು ನಿಂದಿರಿಸಿದರು. ಈ ತಾಯಿಯು ಮಗನ ಮರಣದ ಚವಣಿಯನ್ನು ಕಂಡು ಬಹಳ ದುಃಖದಿಂದ ಬಿಕ್ಕಿ ಬಿಕ್ಕಿ ಅಳುವದನ್ನು ಈ ಹುಡುಗನು ಕಂಡು, ನೆರದಿರುವ ಜನರಿಗೆ, ಅಪ್ಪಗಳಿರಾ ನನ್ನ ತಾಯಿ ದುಃಖ ಮಾಡುತ್ತಾಳೆ, ಭೇಟಿ ಮಾಡಿಸ ಬಾರದೇ ಎನ್ನಲು, ಆ ತಾಯಿಯನ್ನು ಕರೆದು ಮಗನ ಸಮೀಪಕ್ಕೆ ಕಳುಹಿಸಲಾಗಿ, ಮಗನು ಏಕಾಂತ ಮಾತಾಡುವವನ ಹಾಗೆ ತಾಯಿಯನ್ನು ಸಮೀಪ ಕರದು ತನ್ನ ಬಾಯ್ಯಲ್ಲಿ ಅವಳ ಕಿವಿಯನ್ನು ಕಚ್ಚಿದನು. ನೆರದಿರುವ ಸಭೆ ಈ ಕಾಠಿಣ್ಯ ಹೃದಯನನ್ನು ಕಂಡು, ಎಲೇ ಹುಡುಗನೇ, ನೀನು ಶೂಲಕ್ಕೆ ಬಿದ್ದು ತಾಯ್ಯ ಮೇಲೆ ಮತ್ಸರಿಸಿ ಅವಳ ಕಿವಿಯನ್ನು ಕಚ್ಚಿದೆಯಲ್ಲಾ, ನೀನು ಯಾವ ಕೆಲಸಕ್ಕೂ ಹೇಸೆ ಎನ್ನಲಾಗಿ, ಆ ಹುಡುಗನು ಆ ಸಭೆಗೆ, ಅಪ್ಪಗಳಿರಾ, ನಾನು ಮೊದಲಿಗೆ ಸಾಲೆಯಲ್ಲಿ ಓದುವಾಗ ನೂತನ ಕಳವಿನಲ್ಲಿ ಹುಡುಗನ ಪದಾರ್ಥವನ್ನು ಕದ್ದು ತಾಯಿಯ ಕೈಯಲ್ಲಿ ತಂದು ಕೊಡಲಾಗಿ, ಇವಳು ಬಹಳ ಸಂತೋಷ ಪಟ್ಟು ನನಗೆ ಒಂದು ಕಬ್ಬಿನ ಗಣಿಕೆಯನ್ನು ತಿನ್ನ ಕೊಟ್ಟಳು. ಆ ರುಚಿಯಿಂದ ಇಂದಿನ ಪರಿಯಂತರವು ಇದೇ ಕೆಲಸವು ಮಾಡಿ ಬಹಳ ಮೆಚ್ಚು ಬಿದ್ದು ಈ ಗತಿಗೆ ಬಂದೆನು. ಮೊದಲಿಗೆ ನನ್ನ

ನ್ನು ಧಿಃಕರಿಸಿ ಶಾಸನ ಮಾಡಿದ್ದರೆ ಈ ದೆಶೆ ನನಗೆ ಯಾಕೆ ಬರುತ್ತಿತ್ತು. ಆದ ಕಾರಣ ಈ ತಾಯಿಯ ಪ್ರಾಣವನ್ನು ತಕ್ಕೊಂಡರೂ ದೋಷವಿಲ್ಲವು.

ತಾತ್ಪರ್ಯ.

ತಾಯಿ ತಂದೆಗಳು ತಮ್ಮ ಬಾಲಕರ ಅವಗುಣ ಕಾಣದೇ ಆಗಲಿ, ಅಥವಾ ತಿಳಿಯದೇ ಆಗಲಿ ಶಿಕ್ಷೆ ಮಾಡುವದಿಲ್ಲಲ್ಲ. ಹೀಗೆ ಮಾಡ ಬಾರದು. ಅವರ ದುರ್ಗುಣ ನೋಡಿ ಹಿಗ್ಗದ್ದೇ ಸುಮಾರ್ಗದ ಬುದ್ಧಿಯನ್ನು ಕಲಿಸುವಲ್ಲಿ ಲಕ್ಷ್ಯ ಇಟ್ಟು ಮಕ್ಕಳನ್ನ ಪಾಲನೇ ಮಾಡಿದ್ದಲ್ಲಿ ಮುಂದೆ ದೊಡ್ಡವರಾದ ಮೇಲೆ ವಿವೇಕಿಗಳಾಗಿ ಜನರಂಜನಕ್ಕೆ ಪಾತ್ರರಾಗಿ ಇರುತ್ತಾ ಇದ್ದಾರೆ; ಎಳೇ ದಿನದಲ್ಲೇ ತಿದ್ದಿದರೆ ಮಣಿದೀತು, ಹಸೀ ಗಡಿಗೆಯನ್ನು ಹ್ಯಾಗ್ಹ್ಯಾಗೆ ಮಣಿಸೀಯೇ ಅದರಂತೆ ಹುಡುಗರನ್ನ ವಿವೇಕದ ಹಾದಿ ಹಿಡಿಸ ಬೇಕು. ವ್ಯಾಮೋಹ ಹೆಚ್ಚಾಗಿ ಬಾಲಕರ ಸ್ವತಂತ್ರ ಮತಿಗಳ ನೋಡಿ ಹಿಗ್ಗಿದರೆ ಅಂತ್ಯಕಾಲಕ್ಕೆ ದೇವರಿಗೆ ಉತ್ತರ ಕೊಡುವವರು ಆಗಲಿಕ್ಕಿಲ್ಲಾ; ಪಾತಕಿಗಳು ಎನ್ನಿಸಿ ಕೊಂಡಾರು. ಆದ ಕಾರಣ ಬಾಲಶಿಕ್ಷೆಯೇ ಉತ್ತಮ; ಹುಡುಗರ ಬುದ್ಧಿಕೇಡಿಗೆ ತಾಯಿ ತಂದೆಗಳೇ ಮೂಲವು. ಮೋಹದಿಂದ ಹುಡುಗರನ್ನ ಲಾಲನೆ ಮಾಡಿದರಾಯಿತೇ? ಇಹದಲ್ಲಿ ಕೆಡಕರೆನ್ನಿಸಿ ಪರದಲ್ಲಿ ಬಾಹಿರರಾಗುತ್ತಾರೆ.

---

೪೧. ನೀತಿಕಥೆ.

ಕರಡಿಯೂ ಜೇನ ಹುಳವೂ.

ಒಂದಾನೊಂದು ತೋಟದೊಳಗೆ ಜೇನು ಇಟ್ಟಿರಲಾಗಿ ಒಂದು ಕರಡಿಯು ತೋಟದ ಬೇಲಿಯ ದಾಟಿ ಆ ಜೇನಿನ ಹುಟ್ಟು ಕೆಡವಿ ಮಧು ಸೇವಿಸ ಬೇಕೆಂಬೋದರೊಳಗೆ ಆ ಹುಳಗಳು ಯಾಪತ್ತು ಕರಡಿಗೆ ಮುತ್ತಿಕೊಂಡು ಮೈಗೆ ಚುಚ್ಚಿ ವೇಧಿಸ ಬೇಕೆಂದರೆ ಕರಡಿಗೆ ಬಹಳ ಕೂದಲೂ ದಳವಾದ ಚರ್ಮವೂ ಇರುವ ಕಾರಣ ಕರಡಿಗೆ ಏನೂ ನೋವು ಕಾಣಲಿಲ್ಲ. ಕಡಿಗೆ ಕರಡಿಗೆ ಮೂಗು ಮಾತ್ರ ಬಯಲಾದದ್ದು ಕಂಡು ಯಾವ

ತ್ತು ಹುಳಗಳು ಮೂಗಿಗೆ ಮುತ್ತಿ ಕೊಂಡಿಯಿಂದ ಚುಚ್ಚಲು ಕರಡಿಗೆ ಬಹಳ ವೇದನೆಯಾಗಿ ಸಂಕಟ ತಾಳಲಾರದೆ ತನ್ನ ಕಾಲಿನ ಉಗುರುಗಳಿಂದ ಬಡ ಕೊಳ್ಳಲಾಗಿ ಉಗುರು ತಗಲಿ ಮೂಗು ಯಾವತ್ತು ಛಿನ್ನಭಿದ್ರವಾಯಿತು. ತನ್ನಿಂದ ತಾನೇ ದುಃಖವೆಗ್ಗಳಿಸಿತು.

ತಾತ್ಪರ್ಯ.

ಪರಪೀಡೆ ಮಾಡುವ ಪುರುಷಗೆ ಯಾವ ರೂಪದಿಂದಾದರೂ ಶಿಕ್ಷೆಯಾಗುತ್ತದೆ.

---

೪೦. ನೀತಿಕಥೆ.

ಬಾವಗನೂ ಕೋಳಿಹುಂಜವೂ.

ಒಂದು ಬಾವಗನು ಒಂದು ಕೋಳಿಹುಂಜವನ್ನು ಕಂಡು, ಇದನ್ನು ಭಕ್ಷಿಸ ಬೇಕೆಂದು ಹೊಂಚು ಹಾಕಿ ಕೊಂಡು ಇರಲಾಗಿ, ಆ ಕೋಳಿಯು ಬಾವಗನಿಗೆ ಹೇಳಿ ಕೊಂಡಿತು, ಏನಂದರೆ: ಎ ಪರಾಕ್ರಮಿಯಾದ ಬಾವಗನೇ, ನಾನು ನಿರಪರಾಧಿಯು, ಇದಲ್ಲದೆ ಸೂರ್ಯ ಉದಯವಾಗುವ ವೇಳ್ಯೆ ತಿಳಿದು ನಾನು ಕೂಗುತ್ತಾ ಇರಲಾಗಿ, ನಿದ್ರಾಗ್ರಸ್ಥರಾದ ಜನರು ಎಚ್ಚರಾಗಿ ಎದ್ದು ತಮ್ಮ ತಮ್ಮ ಪ್ರಪಂಚಗಳ ನಡಿಸುತ್ತಾರೆ. ಇದಕ್ಕೆ ಬಾವಗನು ಅಂದದ್ದು: ಆದ ಕಾರಣವೇ ನಿನ್ನ ಭಕ್ಷಿಸ ಬೇಕು, ಜನರಿಗೆ ನಿದ್ರಾಭಂಗಕವ ಮಾಡುತ್ತಿ; ಇದಲ್ಲದೆ ನೀನು ತಾಯಿ ತಂಗಿಗಳ ವಾವಿಯ ಬಿಟ್ಟು ಭೋಗಿಸುತ್ತಿದ್ದಿ, ಆದ ನಿಮಿತ್ತಲೂ ನಿನ್ನನ್ನು ತಿಂಬೋದೇ ಸಿದ್ಧಾಂತ ಎನ್ನಲಾಗಿ, ಆ ಕೋಳಿಯು ಹಾಗಲ್ಲ, ನನ್ನನ್ನು ಸಂರಕ್ಷಿಸುವ ಧಣಿಗೆ ಹೇಟೆ ಇಡುವ ತತ್ತಿ ಕೋಳಿ ಊಟಕ್ಕೆ ಬೇಕಾಗುತ್ತದೆ ಎಂದು ಇಂಥಾ ವ್ಯವಹಾರ ಮಾಡುತ್ತೇನೆ. ಇದಲ್ಲದೆ ನಮ್ಮ ಜಾತಿಸ್ವಭಾವವು ಇದೇ ಸರಿ ಎಂದು ಹೇಳಿ ಕೊಂಡಿತು. ಈ ಮಾತು ಬಾವಗನು ಕೇಳಿ ಅತಿ ಕೋಪಿಯಾಗಿ ತನ್ನ ಸ್ವಭಾವ ಬಿಡ ಬಲ್ಲದೇ ಎಂಬ ನೀತಿಯಂತೆ ಎಲೇ ಕೋಳಿ

ಯೇ, ನಿನ್ನ ನಾಲಿಗೆ ಬಿಗಿ ಹಿಡಿ, ಬಹಳ ಮಾತಾಡ ಬೇಡ, ನಿನ್ನಂಥಾ ದುಷ್ಕರ್ಮಿಯನ್ನು ಉಳಿಸಲಿಕ್ಕೆ ಬಾರದು ಅಂದಿತು.

ತಾತ್ಪರ್ಯ.

ಸಜ್ಜನ ಪುರುಷನಾದವನು ಸಜ್ಜನ ಸ್ವಭಾವದಿಂದ ಇದ್ದು ಅನ್ಯ ಜನರಿಗೆ ಅನುಪಕಾರಿಯಾಗದೆ ನಿರಂತರವೂ ತನ್ನ ಧರ್ಮದಂತೆ ಆಚರಿಸುತ್ತಾ ಇದ್ದಾಗ್ಯೂ ಇಂಥಾ ಸಜ್ಜನ ಪುರುಷನ ಸ್ವಭಾವವು ದುರ್ಜನ ಪುರುಷಗೆ ಹಿತವಾಗಿ ತೋರದೇ ಸರ್ವಕಾಲದಲ್ಲಿಯೂ ಅವನಿಗೆ ಕೇಡು ಚಿಂತಿಸಿ ತನ್ನ ಉದರ ಭರಣವಾಗುವದು ಹ್ಯಾಗೋ ಹಾಗೆ ನಡಿಯುತ್ತಾನೆ.

---

೪೩. ನೀತಿಕಥೆ.

ಹುಲ್ಲುಬಣವೇ ಮೇಲಿರುವನಾಯಿ.

ಒಂದಾನೊಂದು ನಾಯಿಯು ಒಟ್ಟಿದ ಹುಲ್ಲುಬಣವೇ ಮೇಲೆ ಕೂತಿರುವ ಕಾಲದಲ್ಲಿ ಒಂದು ಬಡ ಎತ್ತು ಅತಿ ಕ್ಷುಧಾತುರವಾಗಿ ಆ ಹುಲ್ಲು ಮೇಯುವ ನಿಮಿತ್ತ ಹೋಗಲಾಗಿ, ಆ ನಾಯಿ ಇದನ್ನು ಸಹಿಸದೆ ಹೂಕರಿಸಿ ಗುರ್ರು ಎಂದು ಬೊಗಳಿ ಮಾತನಾಡಲಿಕ್ಕೆ ಹತ್ತಿತು. ಆಗ ಆ ಎತ್ತು ನಾಯಿಗೆ ಧಿಕ್ಕರಿಸಿ ಎಲೋ ಕೊಳಕ ಪ್ರಾಣಿಯೇ, ಈ ಹುಲ್ಲು ನೀನು ತಿನ್ನುವಂಥಾದ್ದಲ್ಲ, ಎರಡನೆಯವರಿಗೆ ತಿನ್ನ ಗೊಡೋದಿಲ್ಲ, ಇಂಥಾ ದುಷ್ಟ ಗುಣವುಳ್ಳವನಿಗೆ ವಿಪತ್ತು ಸರ್ವಕಾಲವು ಇರಲಿ ಎಂದು ಶಪಿಸಿತು.

ತಾತ್ಪರ್ಯ.

ಮತ್ಸರವೆಂಬ ಗುಣಕ್ಕೆ ಸಮನಾದ ಎರಡನೇ ದುಷ್ಟವಿಕಾರಗುಣಗಳನ್ನು ಸಾಕ್ಷಿಗೆ ತಂದೇನಂದರೆ ಏನೂ ತೋರುವದಿಲ್ಲ. ಕಾಮ ಕ್ರೋಧಾದಿ ಮನಸ್ಸಿನ ವಿಕಾರ ಗುಣಗಳು ಇದ್ದಾವೆ. ಆ ಗುಣಗಳು ವಿಕಾರಚೇಷ್ಟೆಯಲ್ಲಿ ಕೆಲವು ಹೊತ್ತು ಇದ್ದು ಪುನಹಾ ಶಾಂತವಾಗುತ್ತ ಇದ್ದಾವೆ. ಈ ಮತ್ಸರಗುಣಗಳು ಮಾತ್ರ ಎಂದೆಂದಿಗೂ ಶಾಂತವಾಗುವದಿಲ್ಲ. ಇದಲ್ಲದೆ ಮತ್ಸರಕ್ಕೆ ವಿಕಾರ ಕ್ಷಣಕ್ಷಣಕ್ಕೆ ವೃದ್ಧಿಯಾಗುತ್ತ

ದೆ. ಅದು ಹ್ಯಾಗೆ ಹ್ಯಾಗೆ ವೃದ್ಧಿಯಾಗುತ್ತ ಹೋಗುತ್ತದೋ ಹಾಗೆ ಹಾಗೆ ಸಂತಾಪವೇ ಹೆಚ್ಚುಗೊಳ್ಳುತ್ತದೆ. ಕಾರಣವೇನಂದರೆ ಮತ್ಸರದ ವಾಸನೆ ಹ್ಯಾಗಂದರೆ: ವಿದ್ಯೆ, ಧನ, ಪ್ರತಿಷ್ಟೆ ಈ ಮೂರು ವಿಷಯವು ತನಗೆ ಇರಬೇಕು. ಇದಲ್ಲದೆ ಇತರರಿಗೆ ಪ್ರಾಪ್ತಿಯಾಗ ಬಾರದು ಎಂಬುವದು. ಆದ ಕಾರಣ ಮತ್ಸರನಿಗೆ ಸುಖ ಎಂದೆಂದಿಗೂ ಪ್ರಾಪ್ತಿಯಾಗುವದಿಲ್ಲ.

---

೪೪. ನೀತಿಕಥೆ.

ನಾಯಿಯೂ ಟಗರೂ.

ಒಂದಾನೊಂದು ನಾಯಿಯು ಒಂದು ಟಗರಿನ ಕಡೆಯಿಂದ ಸಾಲ ಬರ ಬೇಕೆಂದು ಒಂದು ತೋಳವೂ ಒಂದು ಹಾಳೇ ಹದ್ದೂ ಇಬ್ಬರನ್ನು ಪಂಚರನ್ನು ಮಾಡಿ ಕೊಂಡು ಅವರ ಮುಂದೆ ವ್ಯಾಜ್ಯದ ಮಾತು ಹೇಳಲಾಗಿ, ಅವರಿಬ್ಬರು ಪಂಚಾಯಿತರ ಠರಾಯಿಸಿ ಏಕ ಪಕ್ಷದ ಮಾತಿನಿಂದ ಟಗರು ನಾಯಿಗೆ ಸಾಲ ಕೊಡೋದು ಖರೇ ಎಂದು ನಿವಡಿಸಿ ಹೇಳಿದರು. ಆ ಮಾತಿನ ಮೇಲೆ ನಾಯಿಯು ಟಗರನ್ನ ಮುರಿದು ಹಾಕಿತು. ಈ ಪಂಚಾಯ್ತರೂ ಆ ನಾಯಿಯೂ ಕೂಡಿ ಆ ಮಾಂಸವನ್ನು ಹಂಚಿ ಕೊಂಡು ತಿಂದರು.

ತಾತ್ಪರ್ಯ.

ಕಳ್ಳನೂ ಸುಳ್ಳನೂ ಚಾಡಿಗಾರನೂ ಕೃತ್ರಿಮಿಯೂ ಘಾತಕಿಯೂ ನೀಚನೂ ಇಂಥಾ ದುಶ್ಚಿತ್ತ ಜನರು ಮೂಢ ಜನರಿಗೆ ಕಂಟಕರಾಗಿ ವ್ಯಥಿಸಿದ ಮೂಲಕದಿಂದ ಆ ಜನರು ಇವರ ವೇದನೆ ಅನುಭವಿಸಿ ತಾಳಲಾರದೆ ವ್ಯಾಜ್ಯ ಉತ್ಪನ್ನವಾಗಿ ಪಂಚರ ಕಡೆಗೆ ಬರುತ್ತಾ ಇದ್ಧಾರೆ. ಪಂಚರು ಲಂಚ ತಿಂಬೋ ಆಶೆಯಿಂದಾಗಲಿ, ಅಥವಾ ವಾದಿ ಪ್ರತಿವಾದಿಗಳ ಭಿಡೆಯದಿಂದ ಆಗಲಿ ಅವರನ್ನ ಘಾತ ಮಾಡೋದು ಮಹಾ ಪಾತಕ ಸತ್ಯವೇ. ಇಂಥಾ ಪಂಚರು ಪೀಡಿತರಾದವರ ಉಸುರು ತಕ್ಕೊಳ್ಳುತ್ತಾರೆ. ಅವರಿಗೆ ಎಂದೆಂದಿಗೂ ಒಳಿತು ಆಗುವದಿಲ್ಲ. ಲಂಚ ತಕ್ಕೊಂ

ಡು ಎರಡನೆಯವರಿಗೆ ಘಾತ ಮಾಡುವ ಆ ಪ್ರಾಣಿಗೆ ಅದು ಲಂಚವಲ್ಲ, ವಿಷವೆಂದು ತಿಳಿಯು ಬೇಕು. ಆ ಲಂಚವೆಂಬ ವಿಷವು ಆ ಪಾಪಿಗೆ ನಿಸ್ಸಂತಾನ ಮಾಡೀತು. ಇಷ್ಟು ಅಲ್ಲದೆ ಯಾವ ರಾಜ್ಯದಲ್ಲಿ ಇಂಥಾ ಪಾಪಿಗಳಿಗೆ ಶಿಕ್ಷೆ ಮಾಡುವದಿಲ್ಲವೋ ಆ ರಾಜ್ಯ ನಿಷ್ಕಂಟಕದಿಂದಿದ್ದರೂ ಶೀಘ್ರದಿಂದ ಲಯ ಹೋದೀತು, ಖರೆಯಾದ ನ್ಯಾಯನಿರ್ಣಯದಿಂದಲೇ ಈ ಸೃಷ್ಟಿ ನಡಿಯುತ್ತದೆ. ಸತ್ಯನ್ಯಾಯಕ್ಕೆ ಮಿಥ್ಯಕಲ್ಪನೆ ಮಾಡುವವನೇ ಮೂರ್ಖನು; ಆ ಮಿಥ್ಯಕಲ್ಪನೆಯು ಅವನನ್ನೇ ಮುರಕೊಂಡು ತಿನ್ನುತ್ತದೆ ಎಂದು ಜಾಣರಾದವರು ತಿಳೀ ಬೇಕು.

---

೪೫. ನೀತಿಕಥೆ.

ಎಳೇ ಕುರಿಮರಿಯೂ ತೋಳವೂ.

ಒಂದು ಎಳೇ ಕುರಿಮರಿಯು ಒಂದು ಗುಡಸಿಲ ತುದೀ ಮೇಲೆ ನಿಂತಿರಲಾಗಿ ಕೆಳಗೆ ಒಂದು ತೋಳವು ನಿಂತಿದ್ದು ನೋಡಿ ಆ ಮರಿಯು ಉನ್ನತದಿಂದ ತೋಳಗೆ ಬೈಯುತ್ತಾ ಇರಲಾಗಿ ಆ ತೋಳ ಮಾತನಾಡಿತು: ಎಲೋ ನೀಚನೇ, ನಿನ್ನ ಮಾತುಗಳು ನನ್ನನ್ನ ಅಳಿಕಿಸ್ಯಾವು ಎಂದು ತಿಳಕೋಬೇಡ, ಯಾಕಂದರೆ ಈ ದುರ್ಭಾಷಣೆಯ ನೀನು ಮಾಡಲಿಕ್ಕೆ ತಕ್ಕವನಲ್ಲ, ನಿನಗೆ ಆಶ್ರಯ ಕೊಟ್ಟ ಗುಡಸಲೇ ಮಾಡುತ್ತದೆ ಎಂದು ನಾನು ತಿಳಿದು ಕೊಳ್ಳುತ್ತೇನೆ.

ತಾತ್ಪರ್ಯ.

ಉರಟೀ ಮಾತುಗಳನ್ನು ಆಡುವಂಥಾ ಅಥವಾ ನಿಂದೆ ಮಾಡುವಂಥಾ ಮನುಷ್ಯನು ತನ್ನ ನೀಚತ್ವ ಮಾತ್ರ ಪ್ರಕಟ ಮಾಡುತ್ತಾನೆ. ಆಶ್ರಯಬಲದಿಂದ ಒಂದೊಂದು ವೇಳ್ಯ ದುರ್ಭಾಷಣೆ ಮಾಡೋ ಮಾನುಷ್ಯನಿಗೆ ಪ್ರತ್ಯಕ್ಷ ದಂಡನೆ ಆಗದಿದ್ದರೆ ತಾನು ಶ್ರೇಷ್ಠನು ಎಂದು ತಿಳದು ಕೊಳ್ಳ ಕೂಡದು, ಅವನ ಶರೀರಕ್ಕೆ ಪ್ರತ್ಯಕ್ಷ ದಂಡನೆ ಆಗಲಿಲ್ಲವೆಂಬದು ಖರೆ. ಆದರೆ ಘನದಲ್ಲಿ ಕಡಿಮೆ ಬಿದ್ದದ್ದು ಅದು ಒಂದು ದಂಡನೆಯ ಸಮಾನ. ಇಲ್ಲವೇ ಇಂಥಾ ಚಿಕ್ಕ ಮನುಷ್ಯನಿಂದ ಅ

ಪಮಾನ ಪಟ್ಟ ಮನುಷ್ಯನು ತನ್ನ ಜೀವಕ್ಕೆ ಸಂತಾಪ ಮಾಡಿ ಕೊಳ್ಳಲಾಗದು. ವಿಚಾರ ಮಾಡ ಬೇಕು. ಇದು ಆಶ್ರಯ ಕೊಟ್ಟವನ ಸಾಮರ್ಥ್ಯವಲ್ಲದೆ ಅಪಮಾನ ಮಾಡಿದವನ ಸಾಮರ್ಥ್ಯವಲ್ಲ ಎಂದು ತಿಳಿಯ ಬೇಕು. ಹಾಗೇವೆ ಯಾವನೊಬ್ಬನು ತನ್ನ ಬೆನ್ನಿನ ಹಿಂದೆ ತನಗೆ ನಿಂದೆ ಮಾಡುತ್ತಾನೆಂದು ಕೇಳಿದರೂ ಸಂತಪ್ತನಾಗ ಬಾರದು. ಅದಕ್ಕೆ ಆ ಪಾಜಿ ಮನುಷ್ಯನು ಮೋರೆಯ ಮುಂದೆ ಮಾತನಾಡುವದಕ್ಕೆ ಅಂಜಿ ಕೊಂಡು ಬೆನ್ನಿನ ಹಿಂದೆ ಮಾತಾಡುತ್ತಾನೆಂದು ಸಮಾಧಾನ ತಾಳಿ ಕೊಳ್ಳ ಬೇಕು.

---

೪೬. ನೀತಿಕಥೆ.

ನರಿಯೂ ಸಿಂಹವೂ.

ಒಂದು ನರಿಯು ಏಕಾಏಕಿ ಸಿಂಹರಾಜನನ್ನು ಕಂಡು ಬಹಳ ಭಯಗ್ರಸ್ತನಾಗಿ ಕೇವಲ ವಿನಯದಿಂದ ತಲೆಯನ್ನು ತಗ್ಗಿಸಿ ಹೋಗಿ ಪಾದಕ್ಕೆ ಬಿದ್ದು ದೈನ್ಯಸ್ವರದಿಂದ ಮಾತನಾಡಿ ಹೋಯಿತು. ಎರಡನೇ ಆವರ್ತಿ ಭೇಟಿ ಆದಾಗ್ಯೆ ಸನ್ಮುಖವಾಗಿ ನಡದು ಬಂದು ಮಾತನಾಡಿತು; ಮೂರನೇ ಸಾರಿ ಕೇವಲ ಸಲಿಗೆ ಮಾಡಲಿಕ್ಕೆ ಹತ್ತಿತು.

ತಾತ್ಪರ್ಯ.

ತನ್ನಕ್ಕಿಂತಲೂ ದೊಡ್ಡವರಲ್ಲಿ ಪ್ರವರ್ತಕ ಮಾಡ ಬೇಕಾದರೆ ನರಿಯ ಆಚರಣೆಯಂತೆ ಭಿನ್ನರೀತಿ ಮಾಡ ಬಾರದು. ಭಯಪ್ರಾಪ್ತಿಯಿಂದ ಕೇವಲ ದೈನ್ಯತ್ವ ತೋರಿಸೋಣ, ಮರಿಯಾದೆ ಬಿಟ್ಟು ಸಮಾನತ್ವದಿಂದ ನಡಿಯೋಣ, ಇವು ಮಾಡ ಬೇಕಾದರೆ ಭಯದಿಂದ ಮಾತಾಡ ಬೇಕು; ಪರಂತು ಘಾಬರಿತನ ಇರ ಬಾರದು, ದಿಟ್ಟತನದಿಂದ ಮಾತಾಡ ಬೇಕು. ಆದರೆ ಸಮಾನತ್ವದಿಂದ ಮಾತನಾಡ ಬಾರದು. ಇದರ ಸಾರವೇನಂದರೆ: ತನ್ನ ಗೌರವ ಉಳಿಸಿ ಕೊಂಡು ಮರಿಯಾದೆಯಿಂದ ದೊಡ್ಡವರ ಸಂಗತಿಯಲ್ಲಿ ನಡಕೊಂಡು ಇರ ಬೇಕು.

---

೪೭. ನೀತಿಕಥೆ.

ಹಂಸವೂ ಕಬ್ಬಕ್ಕಿಯೂ.

ಒಂದಾನೊಂದು ಬೆಳದ ಹೊಲದಲ್ಲಿ ಹಂಸಗಳೂ ಕಬ್ಬಕ್ಕಿಗಳೂ ನಿತ್ಯ ಒಂದಕ್ಕೂ ಬಹಳ ಉಪದ್ರವ ಮಾಡುತ್ತಿರಲಾಗಿ, ಆ ಹೊಲದ ಧಣಿಯು ಒಂದಾನೊಂದು ದಿವಸ ಪಾಳಶೀ ಮೇಲೆ ತನ್ನ ಸೇವಕನು ಸಹಿತವಾಗಿ ಇರುತ್ತಾ, ಅಕಸ್ಮಾತ್ ಆ ಹಕ್ಕಿಗಳ ಮೇಲೆ ಹೋಗಿ ಬೀಳುತ್ತಿರಲಿಕ್ಕೆ, ಹಂಸಪಕ್ಷಿಗಳು ದೊಡ್ಡ ಶರೀರವೂ ಜಡತ್ವವೂ ಬಹು ತುಪ್ಪಳವಿದ್ದ ಕಾರಣ ಬಹಳವಾಗಿ ಸತ್ತು ಹೋದವು. ಆ ಕಬ್ಬಕ್ಕಿಗಳ ಶರೀರವು ಬಹು ಹೌರವಾಗಿ ಇದ್ದ ಕಾರಣದಿಂದ ಶೀಘ್ರದಿಂದ ಹಾರಿ ಹೋಗುವಂಥವಾದವು.

ತಾತ್ಪರ್ಯ.

ಶತ್ರುಗಳು ಬೆನ್ನು ಹತ್ತಿದ ಸಮಯದಲ್ಲಿ ನಿರ್ಧನಪುರುಷನಿಗಿಂತಲೂ ಧನ ಉಳ್ಳವನು ಬಹಳ ದುಃಖ ಪಡುತ್ತಾನೆ. ಹ್ಯಾಗಂದರೆ ದಂಡು ಇಳದ ಸ್ಥಳದಲ್ಲಿ ಇರುವ ತನಕ ಬಹಳ ಸುಖವು; ಎದ್ದು ಹೋಗುವ ವೇಳೆ ಸಾಮಾನು ಹೊತ್ತು ಕೊಂಡು ಹೋಗ ಬೇಕಾದರೆ ಭಾರದಿಂದ ಹ್ಯಾಗೆ ದುಃಖ ತೋರುತ್ತದೋ ಹಾಗೆ ಸಂಕಟದ ಸಮಯದಲ್ಲಿ ಧನವಿದ್ದರೂ ಸಂಬಾಳಿಸಿ ಸಾಗಿಸಿ ಕೊಂಡು ಹೋಗ ಬೇಕಾದರೆ ಬಹಳ ಶ್ರಮವದೆ.

---

೪೮. ನೀತಿಕಥೆ.

ಪಾರಿವಾಳವೂ ಇರುವೆಯೂ.

ಒಂದಾನೊಂದು ಇರುವೆಯು ನೀರಡಿಸಿ ಹಳ್ಳಕ್ಕೆ ಹೋಗಿ ನೀರು ಕುಡಿಯೋದರೊಳಗೆ ಘಾಳಿಯಿಂದ ತೆರೆ ಬಂದು ನೀರು ಬಡಿದು ಆ ಇರುವೆಯು ಶಳವಿಗೆ ಬಿದ್ದು ಹರದು ಹೋಗುತ್ತಾ ಇರಲಾಗಿ, ಅದೇ ಸಮಯದಲ್ಲಿ ಒಂದು ಪಾರಿವಾಳವು ಅಂತರಿಕ್ಷದಲ್ಲಿ ಹಾರಿ ಹೋಗುತಿತ್ತು. ಇರು

ವೆ ನೀರಿನ ಶಳವಿಗೆ ಬಿದ್ದು ಬಹಳ ಶ್ರಮ ಪಡುವಂಥಾದ್ದು ಪಾರಿವಾಳವು ಕಂಡು ಒಂದು ಗಿಡದ ಎಲೆಯನ್ನು ಹರತಂದು ತನ್ನ ಮೋಶಿಯಿಂದ ನೀರಿನ ಮೇಲೆ ಬಿಸಾಡೋಣ ಆ ಇರುವೆ ಎಲೆಯ ಮೇಲೆ ಆಶ್ರಯಗೊಂಡು ಥಡಕ್ಕೆ ಬಂದು ಹತ್ತಿ ತನ್ನ ಕುಲಕೋಟಿಯನ್ನು ಕೂಡಿ ಕೊಂಡಿತು.

ತಾತ್ಪರ್ಯ.

ಉಪಕಾರಿಯಾದ ಪುರುಷಗೆ ಉಪಕಾರವ ಮಾಡುವದು ಮನುಷ್ಯರಿಗೆ ಸಹಜ ಧರ್ಮವೇ ಸರಿ. ನಾನು ಪ್ರತ್ಯುಪಕಾರ ಮಾಡಿದೇ ಎಂಬೋದರಿಂದ ಪ್ರಶಂಸೆ ಇಚ್ಛೈಸ ಬೇಕಾದರೆ ನಮ್ಮಪ್ಪನ ಪ್ರಾಣ ನಾನು ಕೊಂದಿಲ್ಲ, ನಮ್ಮ ನೆರೆಯುವರ ಮನೆಗೆ ಬೆಂಕಿ ಹಚ್ಚಲಿಲ್ಲ ಎಂದು ಈ ಪ್ರಶಂಸೆ ಯಾಕೆ ಇಚ್ಛೈಸ ಬಾರದು. ತಸ್ಮಾತ್ ಇಂಥಾ ಇಚ್ಛೆ ನಿಷೇಧ, ಅನುಪಯೋಗ. ಯಾಕಂದರೆ ಉಪಕಾರಕ್ಕೆ ಪ್ರತ್ಯುಪಕಾರ ಮಾಡಿದರಾಯಿತೇ? ಅದರಿಂದ ವಿಶೇಷವೇನೂ ತೋರುವದಿಲ್ಲ. ಈ ಮಾತಂತಿರಲಿ, ಕೆಲವರಿಗೆ ತಂಮಿಂದ ಪರರಿಗೆ ಉಪಕಾರವಾಗ ಬೇಕೆಂಬೋದು ಇಲ್ಲವೇ ಇಲ್ಲ. ಇದಲ್ಲದೆ ಕೆಲವು ಮನುಷ್ಯರಿಗೆ ತಮ್ಮ ಮೇಲೆ ಉಪಕಾರ ಮಾಡಿದವರಿಗೆ ಪ್ರತ್ಯುಪಕಾರ ಮಾಡ ಬೇಕೆಂಬುವ ಬುದ್ಧಿ ಇಲ್ಲ; ತಮಗೆ ಪರರು ಉಪಕಾರ ಮಾಡಿದಂಥಾ ಎಚ್ಚರವಿಲ್ಲ. ಕೆಲವರು ತಮಗೆ ಉಪಕಾರ ಮಾಡಿದವರಿಗೆ ಅಪಕಾರ ಇಚ್ಛೈಸುವರು, ಇಂಥಾ ಮನುಷ್ಯರ ನೀಚ ಗುಣಕ್ಕೆ ಸಮ ಸಾಕ್ಷಿ ತೋರುವದಿಲ್ಲ. ಪಾರಿವಾಳದಂತೆ ತನಗೆ ಪ್ರತ್ಯುಪಕಾರ ಮಾಡ್ಯಾನು ಎಂಬ ಇಚ್ಛೆ ಹಿಡಿಯುದಲೇ ಜನರಿಗೆ ಉಪಕಾರ ಮಾಡುವವನೇ ಐಶ್ವರ್ಯ ಮನುಷ್ಯನು ಎನ್ನ ಬೇಕು; ಇದು ಶಾಸ್ತ್ರಸಿದ್ಧಾಂತ, ಹ್ಯಾಗಂದರೆ: ಅನ್ಯರ ಕಡೆಯಿಂದ ತನಗೆ ಪ್ರಾಪ್ತಿಯಾಗ ಬೇಕೆಂಬೋ ಬುದ್ಧಿ ಅದೆ ಅಲ್ಲ; ಅದು ಮಾನುಷಪ್ರಕೃತಿ. ತನಗೆ ಏನೂ ಅಪೇಕ್ಷೆ ಇಲ್ಲದೆ ಕೊಡ ಬೇಕೆಂಬುವದೇ ದೈವಪ್ರಕೃತಿಯನ್ನ ಬೇಕು.

---

೪೯. ನೀತಿಕಥೆ.

ಬೇಟೆಗಾರನೂ ಪಕ್ಷಿಯೂ.

ಒಬ್ಬ ಬೇಟೆಗಾರನು ಬಲೆಯ ಒಡ್ಡಿ ಒಂದು ಪಕ್ಷಿಯನ್ನು ಹಿಡಿಯ

ಲಾಗಿ, ಅದು: ಬೇಟೆಗಾರನೇ, ಈ ಸಮಯದಲ್ಲಿ ನೀನು ನನಗೆ ಪ್ರಾಣದಾನ ಕೊಟ್ಟು ನನ್ನನ್ನು ಬಿಟ್ಟರೆ ಅನ್ಯ ಪಕ್ಷಿಗಳನ್ನು ವೆಗ್ಗಳವಾಗಿ ಮೋಹಿಸಿ ಅವುಗಳನ್ನು ನಿನ್ನ ಬಲೆಗೆ ತಂದು ಕೆಡವೇನು ಎನ್ನಲಾಗಿ, ಆ ಬೇಟೆಗಾರನು ಅಂದದ್ದು: ಎಲೇ ದುಷ್ಟ ಪಕ್ಷಿಯೇ, ನಿನ್ನನ್ನು ಬಿಡ ಬಾರದು ಎಂಬದು ಮೊದಲೇ ಮನಸ್ಸಿನಲ್ಲಿತ್ತು, ಈ ನಿನ್ನ ಮಾತು ಕೇಳುತ್ತಿರಲಾಗಿ ಈಗಲೇ ನಿನ್ನ ಪ್ರಾಣ ಕೊಲ್ಲ ಬೇಕು ಎಂದು ನನ್ನ ಮನಸ್ಸಿನಲ್ಲಿ ನಿಶ್ಚಯವಾಯಿತು. ಯಾಕಂದರೆ ನಿನ್ನ ಒಂದು ಜೀವ ಉಳಿಸಿ ಕೊಂಬೋ ನಿಮಿತ್ತ ಆಪ್ತರು ಗೆಳೆಯರು ಬಂಧುಗಳು ಜ್ಞಾತಿಗಳು, ಇವರಿಗೆಲ್ಲಾ ನೀನು ಬಾಧಕನು ಎಂಬವರಿಂದ ಈಗಲೇ ನಿನಗೆ ವಧೆ ಮಾಡುವದು ಯೋಗ್ಯವು.

ತಾತ್ಪರ್ಯ.

ರಾಜದ್ರೋಹಿಯಾದ ಪಾತಕಿ ತನ್ನ ಆಪ್ತರು ಬಂಧು ಜ್ಞಾತಿ ಗೆಳೆಯರುಗಳ ಘಾತ ಮಾಡೋ ನಿಮಿತ್ತ ಶತ್ರುವಿನ ಚಿತ್ತವೃತ್ತಿಯನ್ನು ಹಿಡಿದು ತಾನು ಸುಖಿಯಾದೇನು ಎಂದು ಕಲ್ಪಿಸುತ್ತಾ ಇದ್ದಾನೆ. ಆದರೆ ಆ ವೈರಿಯು ತನ್ನ ಕಾರ್ಯ ಸಾಧಿಸಿ ಕೊಂಡ ಮೇಲೆ ಅವನ್ನ ಪ್ರಾಣದಿಂದ ಉಳಿಸುವದಿಲ್ಲ. ಎತ್ತಲಾನು ಪಕ್ಷದಲ್ಲಿ ಜೀವ ಉಳಿಸಿದಾಗ್ಯೂ ತನ್ನ ಮನಸ್ಸಿನಲ್ಲಿ ಅವನ ತಿರಸ್ಕಾರ ಹೋಗೋದಿಲ್ಲ.

---

೫೦. ನೀತಿಕಥೆ.

ಮಲಪಾತರಪಕ್ಷಿಯೂ ಕಾಗೆಯೂ.

ಒಂದು ಪರ್ವತದ ಕೆಳಗೆ ಕುರಿಗಳ ಹಿಂಡು ಮೇಯುತ್ತಿರಲಾಗಿ, ಆ ಪರ್ವತದ ತುದೀ ಕೋಡುಗಲ್ಲಿನ ಮೇಲೆ ಒಂದು ಮಲಪಾತರಪಕ್ಷಿ ಕುಳಿತಿತ್ತು. ಆ ಪಕ್ಷಿಯು ಈ ಕುರಿಹಿಂಡನ್ನು ಕಂಡು ಅದರ ಮೇಲೆ ಎರಗಿ ಆ ಹಿಂಡಿನೊಳಗೆ ಒಂದು ಕುರಿಯನ್ನು ತನ್ನ ಕಾಲಿನ ಉಗುರುಗಳಿಂದ ಹಿ

ಡಿದು ಕೊಂಡು ಆಕಾಶಮಾರ್ಗವಾಗಿ ಹಾರಿ ಹೋಗಲಾಗಿ, ಅದನ್ನು ಒಂದು ಕಾಗೆಯು ನೋಡಿ ತಾನು ಉನ್ನತವಾದ ಬಗಿಸೀ ಮರದ ಮೇಲೆ ಗೂಡು ಮಾಡಿದ್ದರಿಂದ ತಾನು ಅದರಂತೆ ಹಾರಿ ಒಂದು ಕುರಿಯನ್ನು ತರ ಬೇಕೆಂದು ಆ ಕುರಿಹಿಂಡಿಗೆ ಎರಗಿ ಒಂದು ಕುರಿಯನ್ನು ಕಾಲೀಲಿ ಹಿಡಿಯಲಾಗಿ ಕುರಿಉಣ್ಣೆ ಕಾಗೆ ಉಗುರಿಗೆ ಸುತ್ತಿ ಚಟಪರಿಸಿ ಹಾರಲಾರದೇ ಒದ್ದಾಡೋ ಕಾಗೆಯನ್ನು ಕುರಿ ಕಾಯುವವನು ಕಂಡು, ಅದರ ಶಬ್ದವನ್ನು ಕೇಳಿ ಓಡಿ ಬಂದು ಆ ಕಾಗೆಯನ್ನು ಹಿಡುಕೊಂಡು ಅದರ ಕಾಲಿಗೆ ಕಟ್ಟಿ ತನ್ನ ಮನೆಗೆ ತಂದು ಮಕ್ಕಳಿಗೆ ಆಡಲಿಕ್ಕೆ ಕೊಟ್ಟನು.

ತಾತ್ಪರ್ಯ.

ಯಾವನಾದರೂ ಪರರಂತೆ ತಾನೂ ಮಾಡ ಬೇಕಾದರೆ ತನ್ನ ಶಕ್ತಿ ತನ್ನ ಸ್ಥಿತಿ ತಾನು ವಿಚಾರ ಮಾಡಿ ಕೊಂಡು ತನ್ನಿಂದ ತಾಗೋದು ಕಂಡರೆ ಮಾಡ ಬೇಕು; ಇಲ್ಲವಾಯಿತೆ ತನ್ನ ಆರಂಭವು ತನಗೆ ದುಃಖಕ್ಕೆ ಕಾರಣವಾಗುತ್ತದೆ.

---

೫೧. ನೀತಿಕಥೆ.

ಲೋಭಿಯೂ ಮತ್ಸರಿಯೂ.

ಒಂದಾನೊಂದು ದಿವಸದಲ್ಲಿ ಒಬ್ಬ ಲೋಭಿಯೂ ಒಬ್ಬ ಮತ್ಸರಿಯೂ ಇಬ್ಬರೂ ಕೂಡಿ ಒಂದು ದೇವಾಲಯದಲ್ಲಿ ಹೋಗಿ ಪ್ರಾರ್ಥನೆ ಮಾಡುತ್ತಾ ಇರಲಾಗಿ, ದೇವರು ಪ್ರಸನ್ನನಾಗಿ ಇಬ್ಬರಿಗೂ ವರವ ಕೊಡುತ್ತೇನೆ, ಆದರೆ ಮೊದಲು ಬೇಡಿದವನಿಗೆ ಕೊಟ್ಟದ್ದು ದ್ವಿಗುಣವಾಗಿ ಎರಡನೆಯವನಿಗೆ ಕೊಡುತ್ತೇನೆ ಎಂಬೋಣ, ಆ ಮಾತು ಈ ಲೋಭಿ ಕೇಳಿ ನಾನು ಮುಂದಾಗಿ ಬೇಡ ಬಾರದು, ಯಾಕಂದರೆ ಹ್ಯಾಗೆ ನನ್ನಲ್ಲಿ ಲೋಭವದೋ ಹಾಗೇ ನನ್ನ ಸಹವಾಸದವನಿಗೆ ಮನಸ್ಸಿನಲ್ಲಿ ಅಪೇಕ್ಷೆ ಇದ್ದೀತು.

ತಸ್ಮಾತ್ ಇವನು ಪುಷ್ಕಳವಾಗಿ ಧನವನ್ನು ಬೇಡಿ ಕೊಂಡಾನು, ಆ ಮೇಲೆ ಸಹಜವಾಗಿಯೇ ಅವನ ದ್ವಿಗುಣ ಪ್ರಾಪ್ತಿಯಾದೀತು ಎಂದು ತನ್ನ ಮನದಲ್ಲಿ ತಿಳಿದು ನಿರೀಕ್ಷಣೆ ಮಾಡಿ ಕೊಂಡು ಸುಮ್ಮಗಾದನು. ಆ ಭಾವವನ್ನು ಈ ಮತ್ಸರಿ ತಿಳಿದು ಎಲೇ ದೇವರೇ, ನೀನು ಸುಪ್ರಸನ್ನನು ಆಗಿದ್ದರೆ ನನ್ನ ಒಂದು ಕಣ್ಣೇ ಹೋಗಲಿ ಎಂದು ಬೇಡೋಣ್ಣಾ, ಆ ಕ್ಷಣವೇ ಒಂದು ಕಣ್ಣು ಹೋಯಿತು. ಸಂಗಡಲೇ ಲೋಭಿಯ ಎರಡೂ ಕಣ್ಣು ಕುರುಡ ಆದವು.

ತಾತ್ಪರ್ಯ.

ಲೋಭತ್ವ ಮತ್ಸರತ್ವಗಳ ನೀಚತ್ವವು ಎಷ್ಟೆಷ್ಟು ಎಂಬದು ಈ ಮಾತುಗಳಿಂದ ಸ್ಪಷ್ಟವಾಗುತ್ತದೆ. ಲೋಭಿಯು ಹೆಗ್ಗಳವಾದ ಆಶೆಯಿಂದ ತನ್ನ ಮನೋರಥವನ್ನು ದೇವರಿಗೆ ಬೇಡಿ ಕೊಂಡು ತಾನು ಸುಖಿಯಾಗಲಿಲ್ಲ. ಮತ್ಸರಿಯು ಎರಡನೆಯವರಿಗೆ ಸುಖ ತಟ್ಟ ಬಾರದು ಎಂದು ತನ್ನ ಕಣ್ಣು ಕಳಕೊಂಡು ತನ್ನ ಜೀವಕ್ಕೆ ದುಃಖ ಮಾಡಿ ಕೊಂಡನು.

---

೫೦. ನೀತಿಕಥೆ.
ಕುದುರೆಯೂ ಕತ್ತೆಯೂ.

ಒಬ್ಬ ಸವಾರನು ತನ್ನ ಕುದುರೆಗೆ ಜರತಾರೀ ಜೀನ ಹಾಕಿರಲಾಗಿ, ಕುದುರೆ ತನ್ನ ಲಗಾಮು ಕಡಿದು ಕೊಳ್ಳುತ್ತಾ ಶೀಘ್ರದಿಂದ ತುಡಕಿನ ಮೇಲೆ ಮಾರ್ಗದಲ್ಲಿ ಹೋಗುತ್ತಿರುವ ಸಮಯದಲ್ಲಿ ಅದೇ ಮಾರ್ಗದಿಂದ ಹೊರೆಯನ್ನು ಹೊತ್ತು ಕೊಂಡು ಒಂದು ಕತ್ತೆಯು ಭಾರದಿಂದ ಮೆಲ್ಲ ಮೆಲ್ಲನೆ ನಡೆಯುತ್ತಾ ಬರುತ್ತಿರಲಾಗಿ ಕುದುರೆಯು ಕತ್ತೆಯನ್ನು ಕಂಡು ಅದಕ್ಕೆ ಅಹಂಕಾರದಿಂದ — ಎಲೇ ಬದಿಗಾಗು, ಬದಿಗಾಗು, ದಾರಿಯನ್ನು ಬಿಡು ಬಿಡು, ಇಲ್ಲವಾದರೆ ನಿನ್ನನ್ನು ನನ್ನ ಕಾಲೀಲಿ ತುಳಿದು ಬಿಟ್ಟೇನು ಎನ್ನಲಾಗಿ, ಆ ಕತ್ತೆಯು — ತಾನು ಅಶಕ್ತ ಪ್ರಾಣಿ, ಈ ಕುದುರೇ ಸಂಗಡ ಹುರುಡಿಸಿದರೆ

ಪರಿಣಾಮ ಹತ್ತಲಿಕ್ಕಿಲ್ಲ ಎಂದು ತಿಳಿದು ಘಾಬರಿ ಘಾಬರಿಯಿಂದ ಒತ್ತಟ್ಟಿಗೆ ಸರಿದು ಹೋಯಿತು. ಕೆಲವು ದಿವಸದ ಮೇಲೆ ಕುದುರೆಗೆ ವೈಪರಿತ್ಯ ಕಾಲ ಬಂದದರಿಂದ ಕಾಳಗದೊಳಗೆ ಗುಂಡು ತಗಲಿ ಘಾಯವಾಗಿ ಅನುಪಯೋಗಿಯಾದ ಕಾರಣ ಆ ಸವಾರನು ಕುದುರೆಯನ್ನು ಬಾಡಿಗೆ ವ್ಯವಹಾರಿಕಗೆ ವಿಕ್ರಯಿಸಿ ಕೊಡಲಾಗಿ, ಅವನು ಆ ಕುದುರೇ ಮೇಲೆ ಕಂಟಲೇಚಾರವನ್ನು ಹೇರಿ ಕೊಂಡು ಹಾದಿ ಹಿಡಿದು ಬರುತ್ತಿರಲಾಗಿ, ಅದೇ ಕತ್ತೆಯು ಈ ಕುದುರೆಯನ್ನು ಕಂಡು ಹಂಗಿಸಿತು, ಹ್ಯಾಗಂದರೆ: ರಾಮರಾಮು, ಸ್ವಾಮಿರಾಯರೇ ರಾಮರಾಮು, ಹಿಂದೆ ಒಂದು ದಿವಸದಲ್ಲಿ ನಮ್ಮನ್ನ ಕಾಲೀಲಿ ತುಳಿದೇವು ಎಂದ ಗೃಹಸ್ಥರು ನೀವೆಯೋ? ನಾವು ಆ ಪತ್ತೇ ಚಿತ್ತದಲ್ಲಿ ಭವಿಷ್ಯವನ್ನು ತಂದಿದ್ದೆವು, ಎಂದಿದ್ದರೂ ಇವರ ಅಹಂಕಾರ ಇಳಿದೀತು ಎಂದು ತಿಳಿದಿದ್ದಿವಿ.

ತಾತ್ಪರ್ಯ.

ಅಹಂಕಾರದಿಂದ ತನಗೆ ಪ್ರತಿಷ್ಠೆ ದೊರಕಿಸಿ ಕೊಳ್ಳ ಬೇಕೆಂದು ಅಪೇಕ್ಷಿಸುವ ಗೃಹಸ್ಥನಿಗೆ ಅವನ ಸಾಮರ್ಥ್ಯದಿಂದಾಗಲಿ ಅಥವಾ ದೊಡ್ಡವರ ಆಶ್ರಯದಿಂದಾಗಲಿ ಸಮರ್ಥರ ಆಶ್ರಯ ಇರುವ ಪರಿಯಂತರಕ್ಕೂ ಜನರು ಹೊರೆಗೆ ಮನ್ನಿಸುತ್ತಾ ಇರುತ್ತಾರೆ; ಆದರೆ ಅಂತರಂಗದಲ್ಲಿ ಅಂಥವನ ಮೇಲೆ ದ್ವೇಷ ಮಾಡುತ್ತಾ ಇರುತ್ತಾರೆ. ಅದೇ ಪುರುಷಗೆ ಕಾಲಚಕ್ರ ತಿರಿಗಿದರೆ ಆಯಿತೇ, ಆಶ್ರಯ ಬಲಹೀನನಾದ ಕಾಲಕ್ಕೆ ಜನರು ಅವನ ಮೇಲೆ ದಯ ಹುಟ್ಟದೆ ಹಂಗಿಸಿ ಮಾತನಾಡುತ್ತಾ ಇರುತ್ತಾರೆ. ಅದರ ಸಲವಾಗಿ ಪ್ರತಿಷ್ಠೆಗೆ ಮನಃಪೂರ್ವಕವಾಗಿ ಒಲ್ಲೆನೆಂದು ಆಡುವವಗೆ ಪ್ರತಿಷ್ಠೆ ಬಿಡದೆ ಬೆನ್ನು ಹತ್ತಿ ಇರುತ್ತದೆ. ಪ್ರತಿಷ್ಠೆ ಬೇಕೆಂದು ಅಪೇಕ್ಷಿಸುವ ಪುರುಷಗೆ ಪ್ರತಿಷ್ಠೆಯು ಅವನ್ನ ಬಿಟ್ಟು ದೂರ ಓಡಿ ಹೋಗುತ್ತದೆ. ಮಾನವನ್ನು ಅಪೇಕ್ಷಿಸುವವಗೆ ಅದು ಲಭ್ಯವಾಗುವದಿಲ್ಲ. ತನಗೆ ಸ್ತೋತ್ರ ಇಚ್ಛೈಸುವವನಿಗೆ ನಿಂದೆಯೇ ಪ್ರಾಪ್ತಿಯಾಗುತ್ತದೆ. ಆದ ಕಾರಣ ನಮ್ರಯುಕ್ತವಾದಂಥಾ ನಿಗರ್ವಿತೆಯುಳ್ಳಿದ್ದಂಥಾ ಪುರುಷನಿಗೆ ಪ್ರತಿಷ್ಠೆ ವರ್ಧಮಾನವಾಗುತ್ತಾ ಇದ್ಧೀತು.

೫೩. ನೀತಿಕಥೆ.

ಏದೂ ಸರ್ಪವೂ.

ಒಂದು ಏದು ಸರ್ಪಗೆ ನಿನ್ನ ಹುತ್ತದಲ್ಲಿ ನನಗಿಷ್ಟು ಸ್ಥಳ ಕೊಡ ಬಾರದೇ ಎಂದು ಪ್ರಾರ್ಥನೆ ಮಾಡಿ ಕೊಳ್ಳಲಾಗಿ, ಆ ಸರ್ಪವು ವಿಚಾರ ವರಿಯದೆ ಸ್ಥಳ ಕೊಡಲಾಗಿ ಏದಿನ ಮೈ ಮುಳ್ಳುಗಳಿಂದ ಪ್ರಬಲ, ಸರ್ಪನ ದೇಹ ಮೃದುವು, ಆದದರಿಂದ ಈ ಉಭಯತರು ಹುತ್ತದಲ್ಲಿ ಕೂಡಿ ಇ ರೋಣದರಿಂದ ಸರ್ಪದ ಶರೀರಕ್ಕೆ ಏದಿನ ಮುಳ್ಳುಗಳು ಚುಚ್ಚಿ ವೇದನೆ ಗೊಳ್ಳುತ್ತಿದ್ದವು. ಆಗ ಸರ್ಪನು ಎಲೇ ಏದು ಮಿತ್ರನೇ, ಇನ್ನು ಮೇಲೆ ಈ ಸ್ಥಳದಿಂದ ನೀನು ತೆರಳುವಂಥವನಾಗ ಬೇಕು; ನಿನ್ನ ಉಪದ್ರವನ್ನು ನಾನು ಆನಲಾರೆ ಎಂಬೋಣ, ಏದು ಪ್ರತ್ಯುತ್ತರವಾಗಿ: ಏ ಸರ್ಪಸ ಭಾಗ್ಯವಂತನೇ, ನಾನು ಏನೂ ಹೋಗುವವನಲ್ಲ, ನನಗೆ ಈ ಸ್ಥಳ ಬಹ ಳ ರಮ್ಯವಾಗಿದೆ; ಯಾರಿಗೆ ಅಸಹ್ಯವಾಗೆದೋ ಅವರೇ ಸ್ಥಳ ಬಿಟ್ಟು ತೆರಳ ಬೇಕು ಎಂದು ಹೇಳಿತು.

ತಾತ್ಪರ್ಯ.

ಕೆಲವು ಪುರುಷರುಗಳ ಸ್ವಭಾವವು ದುಷ್ಟವಾಗಿರುತ್ತದೆ, ಅವರ ಸಹವಾಸದಿಂ ದ ಅಸಹ್ಯ ಪ್ರಾಪ್ತಿಯಾಗುತ್ತದೆ. ಯಾರ ಸಂಗತೀಲಾದರೂ ಮೈತ್ರತ್ವ ಅಥವಾ ಉದ್ದಿಮೆ ಅಥವಾ ಶರೀರಸಮ್ಮಂಧ ಮಾಡ ಬೇಕಾದರೆ ಪೂರ್ವದಲ್ಲೆ ಅವರ ಸ್ಥಿತಿ ರೀ ತಿಗಳನ್ನು ಬಹಳವಾಗಿ ವಿಚಾರದಿಂದ ನೋಡ ಬೇಕು. ಯಾಕಂದರೆ ಒಂದು ವೇಳ್ಯ ದಲ್ಲಿ ವಿಚಾರವಿಲ್ಲದಲೆ ಕೂಡಿದ ಮೇಲೆ ಅವರಿಗೂ ತನಗೂ ಗಂಟು ಬೀಳದೆ ಹೋದರೆ ಬಹಳ ಸಂಕಟಕ್ಕೆ ಬೀಳುತ್ತಾ ಇದ್ದಾನೆ.

---

೫೪. ನೀತಿಕಥೆ.

ಬೇಟೆಗಾರನೂ ಪಾರಿವಾಳವೂ.

ಒಬ್ಬ ಬೇಟೆಗಾರನು ಕೋವಿ ತಕ್ಕೊಂಡು ವನಾಂತರಕ್ಕೆ ಮೃಗಾಬಿ

ಲಾಷಿತನಾಗಿ ಹೋಗಿರಲಾಗಿ ಒಂದು ಗಿಡದ ತುದಿಯಲ್ಲಿ ಕೂತಿರುವ ಒಂದು ಪಾರಿವಾಳ ಕಂಡು ಕೋವಿಯ ನೇವರ ಕುಟ್ಟುವ ಸಮಯದೊಳಗೆ ಅವನ ಕಾಲಿಗೆ ಸರ್ಪವು ಕಚ್ಚಿತು. ಅದರ ಭಯದಿಂದ ಕೈಯೊಳಗಿನ ಕೋವಿಯು ಕೆಳಿಯಕ್ಕೆ ಅದರಿ ಬೀಳಲು ಬೇಟೆಗಾರಗೆ ಸರ್ಪದ ನಂಜು ಏರಿ, ಪ್ರಾಣಾಂತ್ಯದ ಸಮಯದಲ್ಲಿ ತಾನೇ ತನ್ನ ಚಿತ್ತದಲ್ಲಿ ವಿಚಾರ ಮಾಡಿಕೊಳ್ಳುತ್ತಾನೆ, ಏನಂದರೆ: ಅಯ್ಯೋ ಕರ್ಮವೇ, ನನಗೆ ಈ ಶಿಕ್ಷೆ ಆದದ್ದು ಯುಕ್ತವು; ಯಾಕಂದರೆ ಪರರ ಪ್ರಾಣವನ್ನು ತಕ್ಕೊಂಬುವದಕ್ಕೆ ಹವಣಿಸಿದ್ದೆನಾದ ಕಾರಣ ನನ್ನ ಪ್ರಾಣಕ್ಕೆ ಬಂತು. ಇದು ಯುಕ್ತವಾದ ಮಾತೇ ಸರಿ.

ತಾತ್ಪರ್ಯ.

ಅನ್ಯರಿಗೆ ಪೀಡಿಸುವ ಪ್ರಾಣಿಗಳು ತಾವೇ ಪೀಡಣಿಗೆ ಒಳಗಾಗುತ್ತಾ ಇದ್ದಾರೆ ನೋಡು, ನೋಡು ಈ ಆಶ್ಚರ್ಯವನ್ನು! ಪರಪೀಡೆ ಮಾಡುವ ಪ್ರಾಣಿಗಳು ತಮ್ಮ ಮನಸ್ಸು ಕಠೋರ ಮಾಡಿ ಮುಂದಿಗೆ ಸಹಸ್ರಾವಧಿ ಉಪದ್ರ ಮಾಡುತ್ತಾರಲ್ಲಾ. ಅದರೊಳಗಿನ ಉಪದ್ರ ತನಗೆ ಒಂದು ಆದರೆ ಆಯಿತೇ, ಆ ವೇಳ್ಯಕ್ಕೆ ಹೀಗೆ ಅನ್ನುತ್ತಾನೆ; ಅಯಯ್ಯೋ ಇನ್ನೇನು ಗತಿ, ಇದಕ್ಕೇನು ಮಾಡಲಿ, ಹ್ಯಾಗೆ ಸೈರಿಸಲಿ, ನಾನು ಸುಕುಮಾರನು, ಈ ಉಪದ್ರವನ್ನು ಹ್ಯಾಗೆ ತಾಳಲಿ ಅನ್ನುತ್ತಾನೆ. ಆದರೆ ತನಗೆ ಯಾವ ಪರಿ ದುಃಖವಾಗುತ್ತದೋ ಪರರಿಗೆ ಇದೇ ಪರಿಯೆಂಬೋ ರೀತಿ ಆ ಮೂರ್ಖನ ಚಿತ್ತದಲ್ಲಿ ಬರೋದಿಲ್ಲ. ಇದರ ಉದ್ದಿಶ್ಯ ಜನರಲ್ಲಿ ತನ್ನ ನಡವಳಿ ನಡೆಯೋ ವೇಳ್ಯಕ್ಕೆ ತನ್ನ ಚಿತ್ತಕ್ಕೆ ತಾನೇ ವಿಚಾರ ಮಾಡ ಬೇಕು ಅಂದರೆ ಆ ಚಿತ್ತವು ಸುನೀತಿ ಇದ್ದದ್ದೆ ಹೇಳೀತು. ಅದು ಹೇಳಿದಂತೆ ನಡಿಯುವವನಾದರೆ ದುಃಖವಿಲ್ಲ. ಹಾಗೆ ಮಾಡದೆ ಸುಮ್ಮಗೆ ಕಣ್ಣು ಮುಚ್ಚಿ ಕೊಂಡು ಕಾಮ ಕ್ರೋಧಾದಿಗಳಿಗೆ ವಶನಾಗಿ ಕುಕರ್ಮ ಮಾಡಲಿಕ್ಕೆ ಪ್ರಾರಂಭಿಸೋಣಾ, ಪಾಪದ ಅಳತಿ ತುಂಬಿ ತಂದರೆ ಒಂದು ದಿವಸದಲ್ಯಾದರೂ ದೇವರ ಕೋಪ ಉಂಟಾಗಿ ಸಣ್ಣ ಮನುಷ್ಯನ ಕೈಯಿಂದ ತನಗೆ ಶಿಕ್ಷೆ ಆದೀತು. ಇದನ್ನು ತಿಳಿದು ತನಗೆ ಒಳಿತಾಗ ಬೇಕೆಂಬುವ ಕಾಂಕ್ಷೆ ಇದ್ದರೆ ತಾನು ಜನಕ್ಕೆ ಒಳ್ಳೇದೇ ಮಾಡುತ್ತಾ ಹೋಗ ಬೇಕು.

---

೫೫. ನೀತಿಕಥೆ.

ಒಕ್ಕಲ ಮಗನು.

ಒಬ್ಬ ಒಕ್ಕಲಿಗನು ಹೊಲವನ್ನು ಬಿತ್ತಿರಲಾಗಿ ಆ ಬೆಳೆಗೆ ಹಂಸಗಳ ಕಬ್ಬಕ್ಕಿಗಳ ಉಪದ್ರ ವೆಗ್ಗಳವಾದ ಕಾರಣ ಅವನು ಹೊಲದೊಳಗೆ ಬಲೆಯನ್ನು ಒಡ್ಡಿ ಹಂಸಗಳನ್ನೂ ಕಬ್ಬಕ್ಕಿಗಳನ್ನೂ ಹಿಡಿದನು. ರಾಜಹಂಸಗಳು ದೇಶಾಂತರಗಳಲ್ಲಿ ಇರುತ್ತವೆ ಎಂದು ಕೆಲವರು ಹೇಳುತ್ತಾರಲ್ಲಾ, ಅಂಥಾದ್ದೇ ಒಂದು ರಾಜಹಂಸನು ತಾನು ಸಹಜವಾಗಿ ಬಂದು ಅವುಗಳ ಸಂಗಡ ಬಲೆಯೊಳಗೆ ಶಿಕ್ಕಿತು. ಆವಾಗ್ಯೆ ಆ ರಾಜಹಂಸನು ಒಕ್ಕಲಿಗನ ಸಂಗಡ ಮಾತನಾಡಿದ್ದು: ಮಹಾರಾಯಾ, ನನ್ನನ್ನು ಕೊಲ್ಲಬೇಡ, ನಾನು ಹಂಸನೂ ಅಲ್ಲ, ಕಬ್ಬಕ್ಕಿಯೂ ಅಲ್ಲ, ನಾನು ಬಹು ಗುಣಿಯಾದ ರಾಜಹಂಸನಾಗಿದ್ಧೇನೆ, ನಾನು ಸ್ವಧರ್ಮವನ್ನು ವರ್ತಿಸುತ್ತೇನೆ, ತಾಯಿ ತಂದೆಗಳಿಗೆ ವಾರ್ಧಿಕ್ಯದಲ್ಲಿ ಬೆನ್ನ ಮೇಲೆ ಹೊತ್ತು ಕೊಂಡು ಪೋಷಣೆ ಮಾಡುತ್ತಾ ಇದ್ಧೇನೆ ಎನ್ನಲಾಗಿ, ಒಕ್ಕಲಿಗನು — ಎಲೋ ಪಕ್ಷಿಯೇ, ನೀನು ಹೇಳಿದ್ದು ಸರ್ವವೂ ನಿಶ್ಚಯವಾಗಿ ಇದ್ದೀತು; ಪರಂತು ದುಷ್ಟ ಸಂಗತಿಯಿಂದ ಈ ವೇಳ್ಯದಲ್ಲಿ ಬಂದು ಶಿಕ್ಕಿದಿ, ನಿನ್ನನ್ನು ಅವರ ಸರಿಯಾಗಿಯೇ ಶಿಕ್ಷೆ ಮಾಡುವದೇ ತಕ್ಕದ್ದು ಎಂದು ಉತ್ತರ ಹೇಳಿದನು.

ತಾತ್ಪರ್ಯ.

ದುರ್ಜನರ ಸಹವಾಸ ಸಜ್ಜನರಿಗೆ ಬಿದ್ದದ್ದಾದರೆ ಅವರು ಅಪ್ರತಿಷ್ಠರಾಗುತ್ತಾ ಇದ್ಧಾರೆ. ದುರ್ಜನರು ಬೀಳುವ ಸಂಕಟದಲ್ಲಿಯೇ ಸಜ್ಜನರೂ ಬೀಳುತ್ತಾರೆ.

---

೫೬. ನೀತಿಕಥೆ.

ಕಾಡುಹಂದಿಯೂ ತೋಳವೂ.

ಒಂದಾನೊಂದು ಹಂದಿಯು ಈದು ಇತ್ತು. ಅದರ ಎಳೇ ಕೋಮು

ಲವಾದ ಮರಿಗಳನ್ನು ಕಂಡು ತೋಳವು ಈ ಮರಿಗಳೊಳಗೆ ಒಂದಾದರೂ ತಿನ್ನಲಿಕ್ಕೆ ದೊರಕಿದರೆ ಚಲೋದಾದೀತು ಎಂದು ಆಶೆ ಹಿಡಿದು ಬಹಳ ದಿವಸ ಹೊಂಚು ಹಾಕಿ ನೋಡುತ್ತಾ ಬಂದಲ್ಲಿ ಎಷ್ಟಾದರೂ ಸಂಧಿ ಸಾಧಿಸಲೊಲ್ಲದು ಎಂದು ಈ ಹಂದಿಗೆ ತನ್ನ ಮೇಲೆ ವಿಶ್ವಾಸ ಚನ್ನಾಗಿ ಉತ್ಪನ್ನವಾಗ ಬೇಕೆಂದು ಹಂದಿಯ ಸಮೀಪಕ್ಕೆ ಹೋಗಿ, ಸವಿ ಸವಿಯಾಗಿ ಮಾತಾಡುತ್ತದೆ, ಏನಂದರೆ: ಅಪ್ಪನವರೇ, ನೀವು ಒಳಿತಾಗಿದ್ಧೀರಲ್ಲ, ಒಂದೇ ಠಾವಿನಲ್ಲಿ ಕುಳಿತು ಕುಳಿತು ನಿಮಗೆ ಬಹಳ ದಣುವಾಗಿದ್ಧೀತು; ನನ್ನ ಯೋಗ್ಯತೆಗೆ ತಕ್ಕಂಥ ನಾನು ಮಾಡುವಂಥಾ ಉದ್ಯೋಗ ಏನಾದರೂ ಇದ್ದರೆ ಹೇಳ ಬೇಕು, ಮನಸ್ಸಿನಲ್ಲಿ ಏನೂ ಸಂಶಯ ಹಿಡಿಯಲಾಗದು; ಹೊರಗೆ ಕಿಂಚಿತ್ತು ತಿರಿಗಾಡಿ ಬರುವಂಥಾ ಅಪೇಕ್ಷೆ ನಿಮ್ಮ ಮನಸ್ಸಿನಲ್ಲಿ ಇದ್ಧೀತು; ಹಾಗೆಯೇ ಸುಖದಿಂದ ಸಂಚಾರ ಮಾಡಿ ಬರ ಬೇಕು; ಈ ಮೋತೀ ಕುನ್ನಿಯಾದ ಕೂಸುಗಳ ಚಿಂತೆ ನೀವೇನೂ ಮಾಡ ಬಾರದು; ನಾನು ಈ ಕೂಸುಗಳನ್ನು ಸಂರಕ್ಷಣೆ ಮಾಡಿ ಕಾದು ಕೊಂಡು ಇದ್ದೇನು ಎನ್ನಲು, ಆ ಹಂದಿಯು ಈ ಮಾತು ಕೇಳಿ ಉತ್ತರ ಕೊಟ್ಟಿತು: ಏ ತೋಳರಾಜನೇ, ನಿನ್ನ ಕೃಪೆ ನನ್ನ ಮೇಲೆ ಬಹಳವಾಗಿದ್ದರೆ ನಿಮಗೆ ನಾನು ಹೇಳುವ ಕೆಲಸ ಇಷ್ಟೇ: ನೀವು ದಯ ಮಾಡಿ ಈಗಲೇ ಈ ಸ್ಥಳವನ್ನು ಬಿಟ್ಟು ಹೊರಟು ಹೋಗ ಬೇಕು, ಇನ್ನು ವಿಶೇಷವಾಗಿ ನಿಮ್ಮ ಮೋಹ ಬರ್ಣನಗಿ ನನ್ನ ಮೇಲೆ ಇದ್ದರೆ ತಾವು ಪುನಹಾ ತಮ್ಮ ಮುಖ ತೋರಿಸ ಬಾರದು.

ತಾತ್ಪರ್ಯ.

ಕೇವಲವಾಗಿ ಪರಹಿತಾರ್ಥ ಮಾಡುವಂಥವರು ವಿರಳವಾಗಿ ಇರುತ್ತಾರೆ ಎಂದು ತಿಳಿದು ಯಾವನಾದರೂ ಪ್ರಾರ್ಥನೆ ವಿನಹಾ ತನ್ನ ಹಿತ ಮಾಡುವಂಥ ಪ್ರೀತಿ ತೋರಿಸುತ್ತಾ ಇದ್ದರೆ ಆ ವಿಷಯವನ್ನು ಮನಸ್ಸಿನೊಳಗೆ ಶಂಕಿಸ ಬೇಕು. ಅದಲ್ಲದೆ ಈ ಸೃಷ್ಟಿಯಲ್ಲಿರುವ ಯಾವನೊಬ್ಬನಾಗಲಿ ಅಥವಾ ತನ್ನ ವೈರಿಯಾಗಲಿ ಬಂ

ದು ಆಪ್ತವ್ಯ ರೀತಿಯಲ್ಲಿ ಹಿತವ ತೋರಿಸುತ್ತಾ ಇರಲಾಗಿ ಬಹಳ ಎಚ್ಚರವ ಇಟ್ಟಿರ ಬೇಕು. ಈ ವಿಷಯ ಏನು ಹೇಳ ಬೇಕಾಗೆದೆ?

---

೫೭. ನೀತಿಕಥೆ.

ಕುರುಬರ ಹುಡುಗನು.

ಒಬ್ಬ ಕುರುಬರ ಹುಡುಗನು ಕುರಿಹಿಂಡು ಕಾಯುತ್ತಾ ಇರಲಾಗಿ ಒಂದಾನೊಂದು ದಿವಸದಲ್ಲಿ ತೋಳ ಬಂತೆಲೇ ತೋಳ ಬಂತು ಎಂದು ವಿನೋದದಿಂದ ಕ್ಷಣಕ್ಷಣಕ್ಕೆ ಕೂಗುತ್ತಾ ಇದ್ದನು. ಆ ಕೂಗು ನೆರೆಹೊಲ ಮಾಡುವ ಒಕ್ಕಲ ಮಗನು ಕೇಳಿ ಓಡಿ ಧಾವಿಸಿ ಬಂದು ನೋಡಲಾಗಿ ತೋಳ ಇದ್ದಿಲ್ಲ; ಇದೇ ಪ್ರಕಾರ ಮೂರು ನಾಲ್ಕು ಸಾರಿ ಹುಡುಗನು ವಂಚಿಸುತ್ತಾ ಹೋದನು. ಆ ಮೇಲೆ ಆ ಒಕ್ಕಲ ಮಗನು ಈ ಹುಡುಗನು ವಂಚಕನಾಗಿದ್ದಾನೆ, ಇವನ ಕೂಗು ಮನಸ್ಸಿಗೆ ತರ ಬಾರದು ಎಂದು ತನ್ನೊಳಗೆ ನಿಶ್ಚಯ ಮಾಡಿ ಕೊಂಡನು. ತರುವಾಯ ಖರೆಯಾಗಿ ತೋಳವು ಬಂತು. ಆ ಸಮಯದಲ್ಲಿ ಹುಡುಗನು ಘಾಬರಿಯಾಗಿ ಕೂಗಲಿಕ್ಕೆ ಆರಂಭ ಮಾಡಿದನು. ಅದು ಕೇಳಿ ಈ ಒಕ್ಕಲ ಮಗನು ಇದೂ ಸುಳ್ಳು ಇದ್ದೀತು ಎಂದು ಧಾವಿಸಿ ಹೋಗಲಿಲ್ಲ. ತೋಳವು ನಿರ್ಭಯದಿಂದ ಸಾವಕಾಶವಾಗಿ ಮನಸೋ ಇಚ್ಛೆಯ ಕುರಿಗಳನ್ನ ಕೊಂದಿತು.

ತಾತ್ಪರ್ಯ.

ಯಾವನೊಬ್ಬ ಮನುಷ್ಯನು ಒಂದಾವರ್ತಿ ಸುಳ್ಳನು ಎಂದು ಪ್ರಸಿದ್ಧಿಗೆ ಬಂದರೆ ಅವನು ಯಾವ ಮಾತು ಹೇಳಿದರೂ ಜನರು ವಿಶ್ವಾಸವನ್ನು ಇಡೋದಿಲ್ಲ. ಅದೇ ಪುರುಷನು ನಿಶ್ಚಯವಾಗಿ ಸಂಕಟದಿಂದ ಹೇಳಿದಾಗ್ಯಾದರೂ ಅವನ ಮಾತು ಸುಳ್ಳು ಎಂದು ತಿಳಿದು ಅವಗೆ ಸಹಾಯ ಮಾಡುವದಿಲ್ಲ.

---

೫೮. ನೀತಿಕಥೆ.

ಸರ್ಪವೂ ಮನುಷ್ಯನೂ.

ಒಬ್ಬ ಹುಡುಗನು ಹುಲ್ಲುಗಟ್ಟಿಯೊಳಗೆ ಆಡುತ್ತಾ ಇರಲಾಗಿ ಒಂದು ಸರ್ಪವು ಆ ಹುಡುಗನ್ನ ಕಚ್ಚಿತು. ಅದರ ನಂಜು ಏರಿ ಆ ಕ್ಷಣಕ್ಕೆ ಆ ಅರ್ಭಕನು ಮರಣವನ್ನೈದಿದನು. ಆ ಶವವನ್ನು ಆ ಹುಡುಗನ ತಂದೆಯು ಕಂಡು ಬಹಳ ಕ್ರೋಧ ಹತ್ತಿ ಕೈಯಲ್ಲಿ ಶಸ್ತ್ರವನ್ನು ತಕ್ಕೊಂಡು ಆ ಸರ್ಪನ ಬೆನ್ನು ಹತ್ತಿ ಹೋಗಲಾಗಿ ಆ ಸರ್ಪವು ಹುತ್ತಕ್ಕೆ ಹೊಗ ಹೋಗುವದರೊಳಗೆ ಅದನ್ನು ಶಸ್ತ್ರದಿಂದ ಕಡಿಯಲಾಗಿ ಅದರ ಬಾಲ ಕತ್ತರಿಸಿ ಹೋಗಿ ಘಾಯವಾಗಿ ಬಿಲದೊಳಗೆ ಹೊಕ್ಕಿತು. ಈ ಗೃಹಸ್ಥನು ಆ ಸರ್ಪವ ಮೋಹಕ್ಕೆ ತಂದು, ಅದನ್ನ ಸಂಹಾರ ಮಾಡಿದರೆ ನನ್ನ ದ್ವೇಷವು ಪೂರಾ ಸಮನಾಗಿ ತೀರುತ್ತದೆ ಎಂದು ಮನಸ್ಸಿನಲ್ಲಿ ಕಲ್ಪಿಸಿ, ಆ ಹುಡುಗನ ತಂದೆಯು ಎರಡನೇ ದಿವಸದಲ್ಲಿ ಹಾಲು ಸಕ್ಕರೆ ಜೇನುತುಪ್ಪವನ್ನು ತಂದು, ಆ ಸರ್ಪದ ಹುತ್ತದ ಸಮೀಪದಲ್ಲಿ ಇಟ್ಟು, ಆ ಸರ್ಪಕ್ಕೆ ಕರೆಯ ಬೇಕೆಂದು ಕೂಗಿ ಮಾತಾಡುತ್ತಾನೆ: ಎಲೇ ಮಿತ್ರನಾದ ಸರ್ಪನೇ, ಹೊರಗೆ ಬಾ, ಏನಾದ್ದು ಆಗಿ ಹೋಯಿತು; ಇನ್ನು ಮೇಲೆ ನೀನು ಯಾವದೂ ಮನಸ್ಸಿನಲ್ಲಿ ತಾರದೆ ನಾವೂ ನೀವೂ ಸಖ್ಯದಿಂದ ಇರ ಬೇಕು ಎಂದು ವಿನಯದಿಂದ ಹೇಳಿ ಕೊಳ್ಳಲಾಗಿ ಹುತ್ತದೊಳಗಿಂದಲೆ ಸರ್ಪವು ಕೇಳಿ ಮಾತಾಡುತ್ತದೆ: ಎಲೋ ಅಣ್ಣನೇ, ನೀನು ಸಖನಾಗ ಬೇಕು ಎಂದು ಸುಳ್ಳು ಸಾಹಸ ಪಟ್ಟು ಯತ್ನ ಮಾಡ ಬೇಡ, ಯಾಕಂದರೆ ನಿನ್ನ ಮಗನು ಸತ್ತ ದುಃಖದ ನೆನಪು ನಿಂತ ದಿವಸದಲ್ಲಿ ನನ್ನ ಬಾಲದ್ದು ನನಗೆ ಮರವೆಯಾದೀತು, ಆ ಪರ್ಯಂತರಕ್ಕೂ ನಮ್ಮ ನಿಮ್ಮ ಉಭಯತರ ಮನಸ್ಸುಗಳು ಕ್ಷೇಮದಿಂದ ನಡಿಯಲಿಕ್ಕೆ ಇಲ್ಲಾ.

ತಾತ್ಪರ್ಯ.

ಎರಡನೆಯವರಿಗೆ ಅಪಕಾರ ಮಾಡುವ ಪುರುಷನು ತನ್ನ ಮನಸ್ಸಿನಲ್ಲಿ ಭಯಸ್ಥನಾಗೇ ಇರುತ್ತಾನೆ. ಯಾಕಂದರೆ ಅಪಕಾರಕ್ಕೆ ಪ್ರತ್ಯಪಕಾರ ತಕ್ಕೊಂಡಾರಲ್ಲಾ ಎಂಬುವಂಥಾದ್ದು ನಡತೆ ಅದೆ. ಅಪಕಾರದ ವಿಷಯು ಎಂದಿಗೂ ಮರಿಯೋದಿಲ್ಲ ಎಂಬುವ ನೀತಿಯುಂಟಾಗಿ ಆ ಇಬ್ಬರೂ ಪುನಹಾ ಮಿತ್ರತ್ವವಾಗೋದು ಕಠಿಣವು. ಆದರೆ ವೈರಿಗಾದರೂ ಕ್ಷಮೆ ಮಾಡುವದು ದೊಡ್ಡವರಿಗೆ ಉಚಿತವೇ ಸರಿ. ಆದಾಗ್ಯೂ ಶತ್ರುಗಳಿಗೆ ಮೈತ್ರ ಭಾವದಿಂದ ಕಾಂಬೋದು ಅವರಿಗಾದರೂ ಯೋಗ್ಯವಲ್ಲ.

---

೫೯. ನೀತಿಕಥೆ.

ರಣಗಾಳೆಯವನು.

ಒಬ್ಬ ರಣಗಾಳೆಯವನನ್ನು ಯುದ್ಧದೊಳಗೆ ಶತ್ರುಗಳು ಹಿಡಿದು ಅವನ ಪ್ರಾಣ ತಕ್ಕೊಳ್ಳಲಿಕ್ಕೆ ಹತ್ತಿದರು. ಆ ಸಮಯದೊಳಗೆ ಆ ಕಾಳೆಯವನು ಬಹಳ ಕಕ್ಕುಲತೆಗೆ ಬಂದು, ನನ್ನನ್ನು ಕಡಿಯ ಬೇಡ, ಯಾಕಂದರೆ ನನ್ನ ಕಡಿಗೆ ಏನೂ ಅಪರಾಧವಿಲ್ಲ, ಇದರ ಹೊರ್ತು ನೋಡು, ನಾನು ಯಾರನ್ನು ಹೊಡೆಯುವದಿಲ್ಲ, ನನ್ನ ಕೈಯಲ್ಲಿ ಆಯುಧವು ಇಲ್ಲ, ಮುಂದಾದರೂ ಹೊಡಿಯೋ ಯೋಗ್ಯತೆಯೂ ಇಲ್ಲ, ಒಂದು ಕಾಳೆಯ ಹೊರ್ತಾಗಿ ಎರಡನೇದು ಯಾವದಕ್ಕೂ ಎಂದಿಗೂ ನಾ ಮುಟ್ಟಲಿಲ್ಲ; ಹೀಗೆ ಇರಲಾಗಿ ಅಪ್ಪಗಳಿರಾ, ಸುಮ್ಮಗೆ ನನ್ನನ್ನು ಯಾಕೆ ಕಡಿಯುತ್ತೀರಿ ಎನ್ನಲಾಗಿ, ಆ ಮಾತು ಕೇಳಿ ಅವನ ವೈರಿಗಳು — ಎಲೋ ನಾವು ಹೀಗೆಂದು ತಿಳಿಯುತ್ತೇವೆ: ನಾವು ಕಡಿಯೋದು ಸಹಜ; ನೀನು ಸ್ವತಂತ್ರದಿಂದ ಕಡಿಯೋದಿಲ್ಲ ಖರೆ, ಪರಂತು ನಿನ್ನ ಕೈಯೊಳಗಿದ್ದಂಥಾ ಜಡವಾದ ತಬ್ಬಲೀ ರಣಗಾಳೆಯದೆಲ್ಲಾ, ಅದರನ್ನ ಊದಿ ಧ್ವನಿ ಮಾಡಿ ಜನರ ಅಂತಃಕರಣದೊಳಗೆ ವೈರವ ಬೆಳಸುತ್ತಿಯಲ್ಲ, ಅದರಿಂದ ಪೂರ್ಣವಾಗಿ ರಕ್ತಕಾಲಿವೆ ಹರಿಯುತ್ತದೆ ಎಂದು ಹೇಳಿದರು.

ತಾತ್ಪರ್ಯ.

ಯಾವನೊಬ್ಬ ಪ್ರಾಣಿಯು ತನ್ನ ಜನ್ಮ ಬಂದ ಬಳಿಕ ಶಸ್ತ್ರವನ್ನು ಹಿಡಿದು ಅರಿಯನು, ತುಬಾಕಿ ಬಾದರಿ ಮಾಟಿ ಅರಿಯನು. ಅನಭ್ಯಾಸಿಯಾದಾಗ್ಯೂ ಒಬ್ಬನ ಜೀವ ತಕ್ಕೊಳ್ಳ ಬೇಕಾದರೆ ಶಸ್ತ್ರವಿಲ್ಲದೆ ಪರರ ಜೀವ ತಕ್ಕೊಳ್ಳುವ ಯುಕ್ತಿ ಮಾಡುತ್ತಾನೆ. ಅದು ಹ್ಯಾಗಂದರೆ ನಾಲಿಗೆ ಅದೆಯಲ್ಲ? ಶಸ್ತ್ರಧಾರೆಗಿಂತಲೂ ಅತಿ ಸೂಕ್ಷ್ಮವಾಗಿರುವಂಥಾ ಹದ ಉಂಟು; ಅದರಿಂದ ಸಹಜವಾಗಿ ಇದ್ದ ಒಂದು ಶಬ್ದವನ್ನು ಆಡಿದರೆ ಒಬ್ಬನು ಸಂಹಾರವಾಗುವದಕ್ಕೆ ತಡವಾಗೋದಿಲ್ಲ. ಇಂಥಾ ನಾಲಿಗೆಯು ಕೃತ್ಯದಿಂದ ಪುರುಷನು ಸಾಮಾನ್ಯ ಪಾತಕಿ ಆಗೋದಿಲ್ಲ. ಅವನ ಶಿಕ್ಷೆ ಅವನ ಯೋಗ್ಯತೆಯಂತೆ ಆಗ ಬೇಕು.

---

೬೦. ನೀತಿಕಥೆ.

ಮೊಲವೂ ಆವೆಯೂ.

ಒಂದು ಮೊಲವು ಅಡವಿಯಲ್ಲಿ ಒಂದು ಕಲ್ಲಾವೆಯು ಮಹಾ ಮಂದ ಗತಿಯಿಂದ ಹೋಗುವದನ್ನು ಕಂಡು ತನ್ನ ಶೀಘ್ರ ವೇಗಗತಿಯಿಂದ ಅಂಗಬಲಯುಕ್ತನಾಗಿ, ಎಲೋ ಆವೆಯೇ, ನಾನೂ ನೀನೂ ಹೋಣಿಕಿ ಕೊಂಡು ಇಲ್ಲಿಂದ ಮುಂದೆ ಕಾಣಿಸುವ ಗುಡ್ಡದ ವಾರಿಗೆ ಓಡಿ ಹೋಗಲಾಗಿ, ಸೋತವರು ಐದು ರೂಪಾಯಿ ಜೂಜುಕಾಣಿಕೆ ಕೊಡ ಬೇಕೆಂದು ಒಂದು ನರಿಯ ಸಾಕ್ಷಿಯಿಂದ ಮಾತು ಮುಗಿಸಿ ಕೊಂಡು, ಉಭಯ ಸನ್ಮತದಿಂದ ಆವೆಯೂ ಮೊಲವೂ ಓಡಲಿಕ್ಕೆ ಆರಂಭ ಮಾಡೋಣ, ಆ ಆವೆಗೆ ಮಹಾ ಸ್ತಬ್ಧ ದೇಹವು, ಮಾಂದ್ಯ ನಡಗೆ; ತನ್ನ ಸಾಮರ್ಥ್ಯಸ್ವಭಾವದಿಂದ ನಡಿಯಲಾಗಿ ಮೊಲವು ಶೀಘ್ರಗಾಮಿ, ಶರೀರವು ಅತಿ ಲಘು; ಸ್ವಸಾಮರ್ಥ್ಯದಿಂದ ಓಡುತ್ತಿರಲಾಗಿ ಆವೆಯು ಹಿಂದಾಯಿತು. ಮೊಲವು ತಿರಿಗಿ ನೋಡಿದಾಗ ತನಗೂ ಅದಕ್ಕೂ ಬಹಳ ಹೆಚ್ಚು ಕಡಿಮೆ ಕಂಡು, ನಾನು ಯಾಕೆ ವೇಗವ ಮಾಡಲಿ, ಅದು ನನ್ನ ಸಮೀಪಕ್ಕೆ ಬರುವಷ್ಟರೊಳಗೆ ನಾನು

ಒಂದು ದಂಮು ಉಬ್ಬಿದರೆ ಹೋದೇನು ಎಂತ ತನ್ನ ಪರಾಕ್ರಮದ ಅಹಂಕಾರದಿಂದ ಕುಳಿತಿರುವ ಸಮಯದಲ್ಲಿ ಸ್ವಲ್ಪ ಮಲಗಿತು. ಸಂಗ ಡಲೇ ನಿದ್ದೆ ಹತ್ತಿ ಎಚ್ಚರ ಇಲ್ಲದೆ ಅಲ್ಲೇ ಮಲಗಿ ಕೊಂಡಿತು. ಆವೆಯು ತನ್ನ ನೇಮದ ಸ್ಥಳಕ್ಕೆ ಮುಟ್ಟಿ ಕೊಂಡಿತು.

ತಾತ್ಪರ್ಯ.

ಯಾವ ಪುರುಷನಾದರೂ ತನ್ನ ಕೆಲಸ ಸಾಧನಕ್ಕೆ ತಂದು ಕೊಳ್ಳ ಬೇಕಾದರೆ ತ ನಗೆ ಸಾಮರ್ಥ್ಯವೂ ಲಘುತ್ವವೂ ಅದೆ, ಆ ಕಾರ್ಯ ಎಷ್ಟು ಮಾತ್ರದ್ದು ಎಂದು ಅ ಹಂಕಾರದಿಂದ ಉದಾಸೀನ ಮಾಡ ಬಾರದು, ಹಾಗೆ ಮಾಡಿದರೆ ಅದರಿಂದ ಕೇಡು ಉಂಟು.

---

೬೧. ನೀತಿಕಥೆ.

ಕುರಿವೇಷದ ತೋಳವು.

ಒಂದು ತೋಳವು ಕುರಿಯ ಚರ್ಮವನ್ನು ತುಂಬ ಹೊದ್ದು ಕೊಂ ಡು ಕುರಿರೂಪವಾಗಿ ಕುರಿಯ ಹಿಂಡಿನೊಳಗೆ ಹೊಕ್ಕಿತು. ಅದರೊಳಗೆ ಶೇರಿ ಬಹಳ ಕುರಿಗಳು ಇಲ್ಲದ ಹಾಗೆ ಮಾಡಿತು. ಒಂದಾನೊಂದು ದಿ ವಸ ಕುರುಬನು ತನ್ನ ಕುರಿಗಳನ್ನು ನೋಡಿ, ಹಿಂಡು ಕ್ಷೀಣಗತಿಯಾದದ್ದು ಕಂಡು, ಆ ಕ್ಷಣವೇ ಯುಕ್ತಿಯಿಂದ ಇದು ಕಪಟಕುರಿ ಎಂದು ಅದರ ಕೊರ ಳಿಗೆ ಹಗ್ಗವನ್ನು ಕಟ್ಟಿ ಒಂದು ಗಿಡದ ಕೊಂಬೆಗೆ ಏರಗಟ್ಟಿದನು. ಅದು ಉರುಳು ಬಿದ್ದು ಜೋತಾಡುತ್ತಾ ಇರಲಾಗಿ, ಅಷ್ಟರೊಳಗೆ ಮಾರ್ಗದ ಲ್ಲಿ ಎರಡನೇ ಕುರಿಕಾಯುವವನು ಅಲ್ಲಿಗೆ ಹೋಗಿ ಇದನ್ನು ಈ ತೂ ಗ ಕಟ್ಟಿರುವ ಗೃಹಸ್ಥನು ನಿಂತಿರುವದನ್ನು ಕಂಡು ಅದನ್ನ ಕೇಳುತ್ತಾನೆ: ಈ ಏರಗಟ್ಟಿದ ಕುರಿಗೆ ಉರುಲು ಹಾಕಿ ಕಟ್ಟಿದಿಯಲ್ಲಾ, ಇದು ಏನು ಮಾ ಡಿದೋ, ನಿನಗೆ ಹುಚ್ಚು ಹಿಡೀತೇ ಏನು? ಎಂದು ಕೇಳೋಣಾ, ಅವನು

ಆ ತೋಳದ ಮೇಲಣ ಕುರಿಚರ್ಮವನ್ನು ತೆಗದು ತೋರಿಸಿ, ಅವನ ಮನದೊಳಗಣ ಸಂಶಯ ಬಿಡಿಸಿದನು. ಆ ಮೇಲೆ ಆ ಬಂದ ಗೃಹಸ್ಥನು ಬಹಳ ಸಂತೋಷ ಪಟ್ಟು, ಈ ಕುರುಬಗೆ ಸೈ ಸೈ ಶಾಬಾಸು ಎಂದು ಕೊಂಡಾಡಿದನು.

ತಾತ್ಪರ್ಯ.

ಬಾಹಿರತ್ವದ ಆಚಾರವ್ಯವಹಾರವ ಕಂಡ ಮಾತ್ರದಿಂದ ಅವರ ನಿಜ ರೂಪ ಸ್ವಭಾವ ತಿಳಿಯೋದಿಲ್ಲ. ಬಹಿರಂಗದಲ್ಲಿ ಉತ್ತಮರಂತೆ ಕಾಣಿಸುತ್ತಾರೆ, ಆದಾಗ್ಯೂ ನಾನು ಮೋಸಕ್ಕೆ ಬಿದ್ದೇನು ಎಂದು ಸುಜ್ಞ ಪುರುಷರಾದವರು ಮೊದಲಿನಲ್ಲೇ ಅಂತರಂಗಶೋಧನೇ ವಿಚಾರ ಮಾಡುತ್ತಾರೆ. ಅಂತರಂಗ ಬಹಿರಂಗದಲ್ಲಿ ಸಹ ಒಂದೇ ರೀತಿ ಇದ್ದದ್ದು ಪರೀಕ್ಷೆಗೆ ಬಾರದೇ ಹೋದರೆ ಅವನೇ ವಿಶ್ವಾಸಘಾತಕಿ, ವೇಷಧಾರಿ ಎಂದು ಅವನ ಮೇಲೆ ದ್ವೇಷವನ್ನು ಬಹಳವಾಗಿ ಹಿಡಿಯುತ್ತಾ ಇರುತ್ತಾರೆ.

---

೬೦. ನೀತಿಕಥೆ.

ತೋಳವೂ ಕುರಿಯೂ.

ಒಂದಾನೊಂದು ತೋಳವು ಕುರಿಗಳ ಕೂಡೆ ಮತ್ಸರ ಬಿದ್ದು ಎಲ್ಲಾ ಕುರಿಗಳನ್ನು ಸಂಹಾರ ಮಾಡೇನು ಅಂದಿತು. ಆದರೆ ಕಾವಲಾಗಿ ನಾಯಿ ಇದ್ದ ಕಾರಣ ತೋಳದ ಸಾಮರ್ಥ್ಯ ಕುರಿಗಳ ಮೇಲೆ ನಡಿಯದೆ ಇರಲಾಗಿ ಒಂದಾನೊಂದು ಕಾಲದಲ್ಲಿ ಕುರಿಗೂ ತೋಳಕ್ಕೂ ಮಾತಿನ ಪ್ರಸಂಗ ನಡದು ತಮ್ಮ ತಮ್ಮೊಳಗೆ ಕರಾರು ಮಾಡಿ ಕೊಂಡವು, ಏನಂದರೆ: ಎಲೇ ಕುರಿಯೇ, ನಮ್ಮ ನಿಮ್ಮ ಕ್ರಿಯೆಯ ಮೇಲೆ ನಡೀ ಬೇಕಾದರೆ ನಮ್ಮ ತೋಳನ ಮರಿ ನಿಮ್ಮ ಕಡಿಗೆ ಓಲು ಇಡುತ್ತೇನೆ, ನಿಮ್ಮ ನಾಯಿ ಅದೆಯಲ್ಲಾ, ಅದನ್ನ ನಮ್ಮ ಕಡೆಗೆ ಇಡ ಬೇಕು ಎಂದು ಒಬ್ಬರಿಗೊಬ್ಬರು ಮಾತಾಡಿ ಉಭಯತರೂ ಒಡಂಬಟ್ಟು, ತೋಳನ ಮರಿ ಕುರಿಗಳ ಕೂಡ, ನಾಯಿ ತೋಳನ ಕೂಡ ಓಲುಗಳನ್ನು ಕೊಟ್ಟು ಇರಲಾಗಿ, ಒಂದು ಕ್ಷಣ

ದೊಳಗೆ ಈ ತೋಳನ ಮರಿಯು ಕ್ರುಂ ಈ ಎಂಬ ಧ್ವನಿಯ ಮಾಡಿತು. ಅದನ್ನು ಕೇಳಿ ತೋಳಗಳು ಕುರಿಗಳ ಕಡೆಗೆ ಬಂದು, ಎಲೇ ಕುರಿಯೇ, ನೀನು ದಗಾಬಾಜಿ ಮಾಡಿ, ನಮ್ಮ ಕೂಸಿನ ಪ್ರಾಣವನ್ನು ತಕ್ಕೊಳ್ಳ ಬೇಕೆಂದು ಮಾಡಿದಿಯಲ್ಲಾ; ನಮ್ಮ ನಿಮ್ಮ ಮಾತಿನ ಕರಾರು ಮುರೀತು ಎಂದು ಯಾವತ್ತು ಕುರಿಗಳನ್ನ ತಿಂದು ಸಂಹಾರ ಮಾಡಿ ಬಿಟ್ಟವು.

ತಾತ್ಪರ್ಯ.

ವೈರಿಗಳ ಕೂಡ ಸಲ್ಲಾ ಮಾಡ ಬೇಕಾದರೆ ಬಹಳ ಸಾವಧಾನತೆಯಿಂದ ಮಾಡ ಬೇಕು. ತಮ್ಮ ಭರವಸದ ವಸ್ತುವನ್ನು, ಹಾಗೂ ಅದರ ಹೊರ್ತು ತಾವು ನಿರ್ಬಲರಾಗೋ ವಸ್ತುವನ್ನು ತನ್ನ ಶತ್ರುಗಳ ಕಡೆಗೆ ಓಲಿಗೆ ಕೊಡ ಬಾರದು; ಕೊಟ್ಟದ್ದು ಖರೆಯಾದರೆ ಶತ್ರುಗಳ ಸಂಗಡ ಒಂದು ವೇಳೆ ಕಲಹ ತೆಗೆಯುವ ನಿಮಿತ್ತ ಅಡಚಣಿ ಬೀಳೋದಿಲ್ಲ.

---

೬೩. ನೀತಿಕಥೆ.

ಇಬ್ಬರು ಹಾದಿಕಾರರು.

ಇಬ್ಬರು ಜತೆಗಾರಮಾರ್ಗಸ್ಥರು ಕೂಡಿ ದಾರಿ ಹಿಡಿದು ಹೋಗುತ್ತಿರಲಾಗಿ ಅವರೊಳಗೊಬ್ಬಗೆ ರೂಪಾಯಿ ತುಂಬಿದ ಒಂದು ಚೀಲ ಶಿಕ್ಕಿತು. ಅವನು ಆ ಚೀಲವನ್ನು ಕೈಯಲ್ಲಿ ತಕ್ಕೊಂಡು ಜತೆಗಾರಗೆ ಹೇಳುತ್ತಾನೆ: ಎಲೋ ಸೋಬತಿಯಣ್ಣನೇ, ನನಗೆ ಈ ರೂಪಾಯಿ ತುಂಬಿದ ಚೀಲ ಶಿಕ್ಕಿತು ಎಂಬೋಣಾ, ಎರಡನೆಯವನು ಉತ್ತರ ಕೊಟ್ಟದ್ದು ಏನಂದರೆ: ಎಲೋ ತಮ್ಮನೇ ನನಗೆ ಶಿಕ್ಕಿತೆಂತ ಅನ್ನ ಬೇಡ, ನಮಗೆ ಶಿಕ್ಕಿತು ಅನ್ನು, ಯಾಕಂದರೆ ನಾವು ಇಬ್ಬರು ಸೋಬತಿಯಾಗಿದ್ದೇವೆ, ಅದಕ್ಕೋಸ್ಕರ ಲಾಭ ನಷ್ಟವಾದದ್ದು ಉಭಯತರಿಗೂ ಸಮವೇ ಸರಿ ಎನ್ನಲಾಗಿ, ಆ ಚೀಲ ದೊರದ ಗೃಹಸ್ಥನು ಮಾತಾಡಿದ್ದು: ಹೌದಪ್ಪಾ, ಈಗ ನನಗೆ ಶಿಕ್ಕಿದರೊಳಗೆ ನಿನಗೆ ಪಾಲು ಯಾಕೆ ಕೊಟ್ಟೇನು ಅಂಬೋಣಾ, ಒಳ್ಳೇದಪ್ಪಾ, ಕೊಡ ಬೇ

ಡ ಎಂದು ಮುಂದಕ್ಕೆ ಮಾರ್ಗ ಹಿಡಿದು ನಡಿಯಲಾಗಿ, ಅಷ್ಟರೊಳಗೆ ಆ ರೂಪಾಯಿ ಕಳಕೊಂಡ ಧಣಿಯು ಗೊತ್ತು ಹಚ್ಚಿ, ಅರಮನೇ ಮನುಷ್ಯರನ್ನು ಕರಕೊಂಡು ಈ ಉಭಯತರ ಬೆನ್ನುಗೊಂಡು ಸನಿಸನಿಯಕ್ಕೆ ಬರುತ್ತಿರಲಾಗಿ, ಅವರನ್ನು ಕಂಡು ಆ ಚೀಲ ದೊರದ ಗೃಹಸ್ಥನು ಮಾತನಾಡುತ್ತಾನೆ, ಏನಂದರೆ: ಎಲೋ ಅಣ್ಣಾ, ನಾವು ಕೆಟ್ಟ ಕೆಲಸ ಮಾಡಿದಿವಿ ಎನ್ನಲಾಗಿ, ಅವನು ಇವನಿಗೆ ಉತ್ತರ ಕೊಟ್ಟದ್ದು: ನಾವು ಕೆಟ್ಟ ಕೆಲಸ ಮಾಡಿದಿವಿ ಎಂದು ಯಾಕೆ ಆಡುತ್ತಿ? ನಾನೇ ಕೆಟ್ಟ ಕೆಲಸ ಮಾಡಿದೆ ಎನ್ನ ಬೇಕು, ನೀನು ನಿನಗೆ ಪ್ರಾಪ್ತಿಯಾದ ಸುಖದಲ್ಲಿ ನನಗೆ ಪಾಲು ಕೊಟ್ಟಿದ್ದರೆ ನಿನ್ನ ದುಃಖಕ್ಕೆ ನಾನು ವಿಭಾಗಿ ಆದೇನು.

ತಾತ್ಪರ್ಯ.

ತನ್ನ ಸಂಕಟಸಮಯಕ್ಕೆ ಉಪಯೋಗವಾಗ ಬೇಕು ಎಂಬ ಇಚ್ಛೆ ಇದ್ದರೆ ತನಗೆ ಮಿತ್ರರನ್ನು ಮಾಡಿ ಕೊಂಡು ಇಡ ಬೇಕು. ಮಿತ್ರರನ್ನು ದೊರಕಿಸುವ ಲಕ್ಷಣ ಹ್ಯಾಗಂದರೆ: ಪ್ರಥಮದಲ್ಲಿ ಆ ಮಿತ್ರರ ಕೆಲಸದ ಉಪಯೋಗಕ್ಕೆ ಬೀಳ ಬೇಕು; ಅವರ ಮನಸ್ಸು ನಿರ್ಮಲ ಮಾಡಿ ನಿಸ್ಸಂಶಯದಿಂದ ಇಡ ಬೇಕು; ಮನಸ್ಸು ನಿರ್ಮಲವಾಗೋದಕ್ಕೆ ಕಾರಣ ಯಾವದಂದರೆ ಲೋಭಗುಣ ಬಿಡ ಬೇಕು; ಹೀಗಾದರೆ ತನ್ನ ಸಂಕಟದ ಸಮಯಕ್ಕೆ ಉಪಯೋಗವಾದಾರು.

---

೬೪. ನೀತಿಕಥೆ.

ಭಾವಿಯಲ್ಲಿ ಬಿದ್ದ ನರಿಯು.

ಒಂದಾನೊಂದು ದಿವಸ ಒಂದು ನರಿಯು ತೃಷಾತುರಿಯಾಗಿ ಭಾವಿಯೊಳಗೆ ನೀರು ಕುಡಿಯ ಹೋಗಿ ಕಾಲು ಜಾರಿ ಒಳಗೆ ಬಿತ್ತು. ಅಷ್ಟರೊಳಗೆ ಆ ಭಾವೀ ಮೇಲೆ ಒಂದು ತೋಳ ಬರಲಾಗಿ ನರಿಯು ಆ ತೋಳನ್ನ ಕಂಡು ಕೂಗಿ ವಿನಯದಿಂದ ಎಲೋ ಅಪ್ಪನೇ, ನಾನು ಮುಳುಗುತ್ತೇ

ನೆ, ಈ ಸಮಯದಲ್ಲಿ ನೀನು ಬಂದು ಹಗ್ಗವಾಗಲಿ ಅಥವಾ ಮತ್ತೇನಾದರೂ ಇಳಿಸಿ ನಾನು ಅದನ್ನು ಹಿಡಿದು ಮೇಲಕ್ಕೆ ಬರುವ ಸಂಗತಿ ಮಾಡ ಬಾರದೇ ಎಂದು ಹೇಳಲು, ಆ ನರಿಯ ಬಹಳ ವಿಪತ್ತನ್ನು ಕಂಡು, ತೋಳಗೆ ದಯೆಯೂ ಅಂತಃಕರಣಬುದ್ಧಿಯೂ ಹುಟ್ಟಿ, ಎಲೋ ತಮ್ಮನೇ, ನಿನ್ನನ್ನು ಕಂಡು ಬಹಳ ಶ್ರಮೆಯಾದೆನು, ನಿನ್ನ ಮೇಲೆ ದೇವರು ಏನು ಕಾರಣ ಈ ಪ್ರಕಾರ ಕೋಪಿಸಿದ? ಐಯ್ಯೋ ಬಹಳ ಕೆಟ್ಟ ಕೆಲಸವಾಯಿತು ಎಂದು ಹೇಳಿದಲ್ಲಿ, ನರಿಯು ಎಲೋ ಅಣ್ಣನೇ, ನೀನು ಮಾತನಾಡಿದ ಹಾಗೆಯೇ ನಿನ್ನ ಅಂತಃಕರಣ ನಿರ್ಮಲವಾಗಿದ್ದರೆ ನನಗಾಗಿ ಈಗ ಸುಮ್ಮಗೆ ಶ್ರಮ ಪಡುತ್ತಾ ನಿಂದಿರ ಬೇಡ, ನಾನು ಹೊರಗೆ ಬರುವ ಉದ್ಯೋಗವನ್ನು ಶೀಘ್ರದಿಂದ ಮಾಡು, ನಾನು ನೀರು ಗುಟುಕಿಸುತ್ತೇನೆ, ಇನ್ನು ಕೆಲವು ವೇಳ್ಯಕ್ಕೆ ಮರಣ ಹೊಂದುತ್ತೇನೆ, ಇಂಥಾ ಸಮಯದಲ್ಲಿ ಒಣ ದಯೆಯ ಮಾತಿನಿಂದ ನನಗೇನು ಉಪಯೋಗವಾದೀತು ಎಂದು ಹೇಳಿತು.

ತಾತ್ಪರ್ಯ.

ಒಣ ಕರುಣ ತೋರಿಸಿ ಮಾತನಾಡಿದರೆ ಆ ಕರುಣೆಯಿಂದ ಎರಡನೆಯವರ ಶ್ರಮ ಪರಿಹಾರವಾಗೋದಿಲ್ಲ. ಎರಡನೆಯವರ ದುಃಖ ಕಣ್ಣು ಗಂಡು, ಸುಮ್ಮಗೆ ದಯಾಬುದ್ಧಿಯಿಂದ ತಾನು ಕಷ್ಟಿತನಾಗಿ ಮಾತನಾಡಿದರೆ ದುಃಖವುಳ್ಳ ಪುರುಷನ ಮನಸ್ಸಿಗೆ ಎರಡು ಪಾಲು ದುಃಖ ವಿಶೇಷವಾಗುತ್ತದೆ. ತನಗೆ ಅವಘಟಣೇ ವೇಳ್ಯದಲ್ಲಿ ಕೆಲಸದ ಉಪಯೋಗಕ್ಕೆ ಬಿದ್ದು, ಅಯ್ಯೋ ಅಯ್ಯೋ ಎಂದು ಸುಮ್ಮನೆ ಕಷ್ಟದ ಮಾತು ಆಡದಿರುವವನಿಗೆ ತನ್ನ ದುಃಖ ಹತ್ತಿದ್ದು ಖರೆಯಾಗಿ ಕಾಣುತ್ತದೆ. ಅಂಥಾ ಪುರುಷನೇ ತನ್ನವನು, ಅವನೇ ತನ್ನ ಗೆಳೆಯನು, ಅವನೇ ತನಗೆ ಹಿತಕರ್ತನೆಂದು ತಿಳಿಯ ಬೇಕು.

---

೬೫. ನೀತಿಕಥೆ.

ಮೀನಬಲೆಗಾರನು.

ಯಾವನೊಬ್ಬ ಮೀನಬಲೆಗಾರನು ನದಿಯ ತೀರದಲ್ಲಿ ಕುಳಿತು ಮೀ

ನಬಲೆಯನ್ನು ಹಾಕಿ ಆ ಬಲೆಯೊಳಗೆ ಮೀನುಗಳು ಬಂದು ಬೀಳುವದರ ದೆಸೆಯಿಂದ ಕೈಯ್ಯೊಳಗೆ ಒಂದು ಕೋಲು ಹಿಡುಕೊಂಡು ನೀರಿನ ಮೇಲೆ ಬಡಿಯುತ್ತಾ ಇರಲಾಗಿ ಒಬ್ಬ ಹಾದಿಕಾರನು ನೀರಿನ ನಿಮಿತ್ತ ಆ ಹೊಳೆಗೆ ಬರಲು ಈ ಮೀನಗಾರನು ನೀರು ಬಡಿಯೋದರಿಂದ ನೀರು ಕಲಕಾಗಿರುವದ ನೋಡಿ ಈ ಹಾದಿಕಾರನು ಮೀನಗಾರನಿಗೆ ಅಂದದ್ದು: ಏ ಗೆಳೆಯನೇ, ನೀ ಏನು ಮಾಡುತ್ತೀ, ಒಳ್ಳೇದು ನಿನ್ನ ಮನಸ್ಸಿನಲ್ಲಿ ಏನು ತಿಳಿದಿದ್ಧಿ? ನೀನು ನೀರು ಕಿತ್ತು ಕಿತ್ತು ಹಾಕಿ ಗದ್ದಲ ಮಾಡುತ್ತಿಯಲ್ಲಾ! ಇದು ಏನು ಇಂಥಾ ನೀರು ಹ್ಯಾಗೆ ಕುಡಿಯ ಬೇಕು; ನಿನಗಂತು ಏನೂ ಅನ್ನಬಾರದು, ಆದರೆ ನಾನು ಹ್ಯಾಗೆ ಸುಮ್ಮನಿರಲಿ; ಓ ಅಣ್ಣಾ, ಯಾಕೋ ಮಾತಾಡವಲ್ಲಿ ಎಂದು ಸಿಟ್ಟಿನಿಂದ ಈ ಪ್ರಕಾರ ತಳಮಳಗೊಂಡು ಮಾತಾಡುತ್ತಿರಲು, ಈ ಬಲೆಗಾರನು ಮೆಲ್ಲಗೆ ಮಾತಾಡಿದ್ದು: ಎಲಾ ನೀನು ಇಲ್ಲಿ ಯಾಕೆ ನಿಂದಿರುತ್ತಿ? ನಿನ್ನ ವಿಚಾರದಿಂದ ನನಗೆ ಕೊಳಂಬವಿಲ್ಲ; ನಾನು ಖರೆಯಾಗಿ ಹೇಳುತ್ತೇನೆ, ನನಗೆ ಈ ಕೆಲಸದ ವಿನಹಾ ನನ್ನಿಂದ ನಿಂದಿರೋಣಾಗುವದಿಲ್ಲ.

ತಾತ್ಪರ್ಯ.

ಕೆಲವು ಮಂದಿ ತಮ್ಮಿಂದ ಜನರಿಗೆ ಬೇಕಾದಷ್ಟು ಉಪದ್ರವಾದರೂ ಅದರ ವಿಚಾರವೇ ಮಾಡೋದಿಲ್ಲ. ತಮ್ಮ ಸ್ವಾರ್ಥದ ಕೆಲಸ ಅಲ್ಪವಿದ್ದರೂ ಸಾಧಿಸಿದರೆ ತೀರಿತು. ಕಳ್ಳರಾದವರು ಒಂದು ಮನೆಯನ್ನು ಸುಲಿಯ ಬೇಕೆಂದು ಆ ಮನೆಗೆ ನೆರೆಹೊರೆಯಾದ ಮನೆಗಳಿಗೆ ಬೆಂಕಿ ಹಚ್ಚೋದಕ್ಕೆ ಹಿಂದೆ ಮುಂದೆ ನೋಡೋದಿಲ್ಲ. ತಮ್ಮ ಸ್ವಾರ್ಥದ ದೆಶೆಯಿಂದ ಎಷ್ಟೋ ಮಂದಿಯ ಕುಟುಂಬಗಳೊಳಗೆ ವಿರೋಧ ಉತ್ಪನ್ನವಾಗುತ್ತಾ ಇದ್ಧಾವೆ. ರಾಜಕಾರ್ಯಸ್ಥರೊಳಗೆ ರಾಜಕಾರ್ಯದೊಳಗೆ ನಾಲ್ಕು ಮಂದಿ ಏಕತ್ರರಾಗ ಬಾರದೆಂದು ಒಡಕು ಹುಟ್ಟಿಸುತ್ತಾ ಇದ್ಧಾರೆ. ಒಬ್ಬರೊಬ್ಬರಿಂದ ಕಲಹವಾಗಿ ರಕ್ತದ ಕಾಲಿವೆ ಹರಿಯೋ ಹಾಗೆ ಮಾಡುತ್ತಾರೆ. ಸರ್ವರಾಜ್ಯವು ಹಾಳಾಗಿ ತನ್ನ ಕೈಯೊಳಗೆ ಅಧಿಕಾರ ಬರುತ್ತದೆ ಎಂದು, ಹಾಗೆ ಮಾಡಲಿಕ್ಕೆ ನೀಚ ಪುರುಷರ ಅಂತಃಕರಣದ ಮನಸ್ಸು ಚಲನೆ ಸುಧಾ ಆಗೋದಿಲ್ಲ. ಆ ನೀ

ಚ ಪುರುಷರು ಇಂಥಾ ಕೃತ್ಯದಲ್ಲಿ ಈ ಮೀನುಬಲೆಗಾರನಂತೆ ತಮ್ಮ ಮನಸ್ಸು ಘಟ್ಟಿ ಮಾಡಿ ತಮ್ಮ ಕೆಲಸಗಳ ಮಾಡುತ್ತಾ ಇರುತ್ತಾರೆ. ಅವರಿಗೆ ಕೇಳಿದ್ದೇ ಉಂಟಾದರೆ ಹೀಗೆ ಮಾಡದಲೇ ನಮ್ಮಿಂದ ಇರೋಣಾಗೋದಿಲ್ಲವೆಂದು ಹೇಳುತ್ತಾರೆ. ದೇವರೇ ಏನಪ್ಪ, ಈ ಕ್ರೂರಕರ್ಮವೇನಣ್ಣ ಅಂದರೆ ಅವರ ಮನಸ್ಸಿಗೆ ಲೇಶ ಮಾತ್ರ ಬರುವದಿಲ್ಲ. ಇಂಥಾ ಅಧರ್ಮಕರ್ಮಿಗಳನ್ನು ಹಿತಕರ್ತರಾದವರು ತಮ್ಮ ಶಕ್ತಿ ನಡಿಯುವ ಪರಿಯಂತರಕ್ಕೂ ಹೊಡೆದು ಕೆಡವ ಬೇಕು.

---

೬೬. ನೀತಿಕಥೆ.

ಮುಳ್ಳುಗಿಡವ ತಿಂದ ಒಂಟೆಯು.

ಸುಗ್ಗಿದಿವಸದಲ್ಲಿ ಒಬ್ಬಾನೊಬ್ಬ ಹೊಲ ಮಾಡೋ ಗೃಹಸ್ಥನು ತನ್ನ ಮನುಷ್ಯರನ್ನು ಕರಕೊಂಡು ಹೋಗಿ ಹೊಲ ಕೊಯಿಸುತ್ತಾ ಇರುವಲ್ಲಿಗೆ ತನಗೂ ಮನುಷ್ಯರಿಗೂ ಬುತ್ತಿ ಬೇಕೆಂದು ತನ್ನ ಮನೆಯಿಂದ ಒಂದು ಒಂಟೇ ಮೇಲೆ ನಾನಾ ಜೀನಸಿನ ಬುತ್ತಿಯನ್ನು ಹೇರಿಸಿ ತರುತ್ತಿರಲಾಗಿ ಆ ಒಂಟೆಯು ಮಾರ್ಗ ಹಿಡಿದು ನಡದು ಬರುವಾಗ ದಾರಿಯೊಳಗೆ ಒಂದು ಜಾಲೀ ಗಿಡ ಕಂಡು ತಿನ್ನಲಿಕ್ಕೆ ಬಾಯಿ ಹಾಕಿ ಅದರ ಸ್ವಾದವನ್ನು ತಕ್ಕೊಂಡು ತನ್ನ ಮನಸ್ಸಿನಲ್ಲಿ ಅನ್ನುತ್ತದೆ: ತಾನು ವೈಯುವಂಥಾ ಬುತ್ತಿಯನ್ನು ಈ ಹೊಲದೊಳಗಿನ ಮನುಷ್ಯರು ಕಂಡು ಸ್ವಾದಕ್ಕೆ ಆರ್ತರಾಗಿ, ಬಾಯಿ ದ್ರವಗೊಂಡೀತು; ಆದರೆ ಈ ಜಾಲೀ ಗಿಡದ ಮುಳ್ಳಿನಲ್ಲಿರುವ ಸ್ವಾದವು ದೊಡ್ಡ ದೊಡ್ಡ ಶ್ರೀಮಂತರು ಉಂಬೋ ಅನ್ನದೊಳಗೆ ಸಹ ಇರಲಿಕ್ಕಿಲ್ಲ.

ತಾತ್ಪರ್ಯ.

ಒಳಿತು ಕೆಟ್ಟದ್ದು ಅಥವಾ ದುಃಖ ಸುಖ ಇವಕ್ಕೆ ಇಷ್ಟೇ ಪ್ರಮಾಣ ಎಂದು ಹೇಳಲಿಕ್ಕೆ ಬರುವದು ಇಲ್ಲ. ಯಾವನು ಹ್ಯಾಗೆ ಹ್ಯಾಗೆ ಹಚ್ಚಿ ಕೊಂಡಾನೋ ಹಾಗೆ ಹಾಗೆ ರುಚಿ ಹತ್ತುತ್ತದೆ. ಇದಕ್ಕೋಸ್ಕರ ತನಗೆ ಒಳ್ಳೇದು ಎಂದು ಕಂಡಂಥಾ

ದಕ್ಕೆ ಸರ್ವರು ಒಳ್ಳೇದು ಅನ್ನ ಬೇಕು, ತನಗೆ ಕೆಟ್ಟದ್ದು ಎಂದು ಕಂಡಂಥಾದಕ್ಕೆ ಕೆಟ್ಟದ್ದು ಅನ್ನ ಬೇಕು ಎಂದು ಇಚ್ಛೈಸುವವನು ಒಂಟಿಯ ಹಾಗೆ ಮೂರ್ಖನು ಎನ್ನ ಬೇಕು.

---

೬೨. ನೀತಿಕಥೆ.

ಸಾಂಬ್ರಾಣಿಮೃಗವೂ ಅದರ ನೆರಳೂ.

ಒಂದಾನೊಂದು ಸಾಂಬ್ರಾಣಿಮೃಗವು ನದಿಯಲ್ಲಿ ನೀರು ಕುಡಿಯೋ ಸಮಯದಲ್ಲಿ ಆ ನೀರಿನೊಳಗೆ ತನ್ನ ಪ್ರತಿಬಿಂಬ ಬಿಂಬಿಸಿದ್ದನ್ನು ಕಂಡು ಬಹಳ ಶಾಂತತ್ವ ತಾಳಿ ತನ್ನ ಕಾಲುಗಳಿಂದ ಮಸ್ತಕಪರಿಯಂತರವಾಗಿ ಅವಯವಂಗಳನ್ನು ದೃಷ್ಟಿಸಿ ನೋಡಿ ಅಂದದ್ದು: ಅಹಹ! ಈ ನನ್ನ ಮಸ್ತಕದ ಮೇಲಿನ ಕೋಡುಗಳು ಸಂಗಲೆಗೂಡಿ ಬಹು ಸುಂದರವಾಗಿವೆ; ನನ್ನ ಮುಖವು ಶೋಭಿಸುವಂಥಾದ್ದಾಗಿದೆ; ನನ್ನ ವಿಶಾಲ ನೇತ್ರಗಳು ಕಮಲವನ್ನು ನಾಚಿಸುತ್ತಾ ಇದ್ದಾವೆ; ನನ್ನ ಶರೀರ ಕೇವಲ ಮೃದುರೂಪಪುಷ್ಪದಂತೆ ತೋರುತ್ತದೆ; ಒಂದು ವೇಳ್ಯ ಇದರಂತೆ ನನ್ನ ಕಾಲುಗಳು ಸೌಂದರ್ಯವಾಗಿದ್ದರೆ ನಾನು ಯಾರ್ಯಾರನ್ನು ಗಣನೆಗೆ ತರುತ್ತಿದಿಲ್ಲ; ಆದರೆ ಏನು ಮಾಡಲಿ, ಈ ಕಾಲುಗಳು ನನ್ನನ್ನು ನಾಚಿಸುತ್ತವೆ; ಕಾಲುಗಳು ಸಂಣವಾಗಿ ಅಮಂಗಳ ಕಾಣಿಸುತ್ತವೆ; ಹೀಗಿರುವದಕ್ಕಿಂತಲು ಅಗದಿ ಕಾಲುಗಳು ಇಲ್ಲದಿದ್ದರೆ ಅದು ಒಂದು ಒಳ್ಳಿತೇ ಸರಿ. ಹೀಗೆ ಚಿಂತಿಸುವ ಸಮಯದಲ್ಲಿ ಬೆನ್ನು ಹಿಂದೆ ಒಬ್ಬ ಬೇಟೆಗಾರನು ಬರುವಂಥವನಾದನು. ಅವನ ಸುಳುವು ಹೊಳದಾಕ್ಷಣವೆ ಆ ಸಾಂಬ್ರಾಣಿಮೃಗವು ಅಲ್ಲಿಂದ ಓಡುತ್ತಿರಲು ಬೆನ್ನು ಮೇಲೆ ಆ ಬೇಟೆಗಾರನು ಅತಿ ಶೀಘ್ರ ಮಾಡಿ ಬರಲು, ಓಡುವಾಗ ಆ ಸಾಂಬ್ರಾಣಿಮೃಗದ ಕೋಡುಗಳು ಒಂದು ಗಿಡಕ್ಕೆ ತೊಡಕಿ ಶಿಕ್ಕಿ ತಪ್ಪಿಸಿ ಕೊಂಡು ಬೀಳಲಿಕ್ಕೆ, — ಬೇಟೆಗಾರನು

ನೋಡಿ ಓಡಿ ಬಂದು ಹಿಡುಕೊಂಡನು. ಆಗ ಆ ಸಾಂಬ್ರಾಣಿಮೃಗವು ಯೋಚನೆ ಮಾಡುತ್ತದೆ: ನನಗೆ ಕೆಟ್ಟವಾಗಿ ಕಾಣಿಸುತ್ತಿದ್ದ ಕಾಲುಗಳೇ ನನ್ನ ಸಂಕಟದ ಸಮಯದಲ್ಲಿ ನನ್ನನ್ನು ಪಾರ ಮಾಡಿ ಕೊಂಡು ಬಂದವು; ಆದರೆ ಸುಂದರವೆಂದು ನೋಡಿ ನಾನು ಗರ್ವಿಸಿದ ಕೋಡುಗಳೇ ನನ್ನ ಬಂಧನಕ್ಕೆ ಕಾರಣವಾದವು.

ತಾತ್ಪರ್ಯ.

ತನ್ನ ಅವಯುವಗಳು ಸುಂದರವಿಲ್ಲವೆಂದು ಸ್ತ್ರೀಯರು ಖೇದಗೊಳ್ಳಲಾಗದು. ಕುರೂಪವಾಗಿರುವಂಥಾ ಅವಯುವಂಗಳು ಒಂದಾನೊಂದು ಸಮಯದಲ್ಲಿ ಆ ಸ್ತ್ರೀಯರ ಪಾತಿವ್ರತ್ಯಧರ್ಮ ರಕ್ಷಿಸುವ ವಿಷಯದಲ್ಲಿ ಉಪಯೋಗಕ್ಕೆ ಬೀಳುತ್ತವೆ; ಸುಂದರಸ್ವರೂಪದ ಅವಯುವಂಗಳು ಹಾಗೆ ಉಪಯೋಗಕ್ಕೆ ಬೀಳೋದಿಲ್ಲ. ಸ್ತ್ರೀಯರುಗಳಿಗೆ ಪತಿವ್ರತಾಧರ್ಮವೇ ಪ್ರಾಣಸಮಾನವು. ಆ ಧರ್ಮ ಇಲ್ಲದೆ ಹೋದರೆ ಆ ಸ್ತ್ರೀಯರುಗಳು ಪ್ರೇತಸಮಾನವೆಂದು ತಿಳಿಯ ಬೇಕು.

---

೬೮. ನೀತಿಕಥೆ.

ನರಿಯೂ ಕಾಗೆಯೂ.

ಒಂದಾನೊಂದು ಕಾಗೆಯು ಒಂದು ದೊಡ್ಡ ಮಾಂಸದ ಕರಣಿಯನ್ನು ಬಾಯಿಯಲ್ಲಿ ಹಿಡುಕೊಂಡು ಆಕಾಶಕ್ಕೆ ಹಾರಿ ಒಂದು ಉನ್ನತವಾದ ಕೊನೆಯಲ್ಲಿ ಹೋಗಿ ಕುಳುತ್ತಿರಲಾಗಿ ಅದನ್ನ ಕಂಡು ಒಂದು ನರಿಯು ಆ ಮರದ ಕೆಳಗೆ ಬಂದು ಕಪಟದಿಂದ ಆ ಕಾಗೆಯ ಸುಂದರತ್ವವನ್ನು ವರ್ಣಿಸುತ್ತದೆ: ಎಲೇ ಕಾಕರಾಜನೇ, ನಾನು ನಿನಗೆ ಖರೆಯಾದ ಮಾತು ಹೇಳುತ್ತೇನೆ ಕಂಡ್ಯಾ, ಏನಂದರೆ ನಿನ್ನ ಸಮಾನ ರಮ್ಯವಾದ ಪಕ್ಷಿಯನ್ನು ನಾನು ಇಂದಿನ ಪರ್ಯಂತರವೂ ಕಂಡಿದ್ದಿಲ್ಲ; ನಿನ್ನ ಗರಿಗಳು ಎಷ್ಟು ಸುಂದರವಾಗಿ ಕಾಣಿಸುತ್ತವೆ, ಅಹಹ! ಎಂಥಾ ಮೃದುವಾಗಿ ತೋರುತ್ತವೆ; ನಿನ್ನ ಶರೀರದ ಕಾಂತಿಯ ನಾನು ಎಷ್ಟು ವರ್ಣನೆ ಮಾಡಿದರೂ ತೀರದು;

ನಿನ್ನ ಅವಯವಂಗಳ ಸುಂದರತ್ವವನ್ನೇ ಸಾರ್ವಕಾಲ ನೋಡುತ್ತಾ ಇರಬೇಕು ಎಂದು ನನ್ನ ಮನಸ್ಸು ಮೋಹಿಸುತ್ತದೆ; ನಿನಗೆ ಈ ರೀತಿಯ ಅನುಕೂಲದ ಸ್ವರೂಪಸೌಂದರ್ಯ ಇದ್ದ ಮೇಲೆ ನಿನ್ನ ಕಂಠದ ಸ್ವರವು ಸುಸ್ವರವೇ ಇದ್ಧೀತೆಂದು ನನಗೆ ತೋರುತ್ತದೆ; ನಿನ್ನ ಸ್ವರ ಒಂದು ವೇಳ್ಯಕ್ಕೆ ಮಂಜುಳವಾಗಿದ್ದರೆ ನಿನ್ನ ಸಮಾನ ಯಾರು ಇದ್ಧಾರೆ ಎಂಬೋಣಾ, ಆ ಕಾಗೆಯು ತನ್ನ ಪ್ರಶಂಸೆ ತಾನೇ ಕೇಳಿ, ತಾನು ಯಾರು ಇದ್ಧೇನೆ ಎಂಬ ಎಚ್ಚರವನ್ನು ಮರತು, ತನ್ನ ಸ್ಥಳದಲ್ಲೇ ಕೆಲವು ನಟನೆಯನ್ನು ಕೊಂಕು ಮಾಡುತ್ತಾ ವಿಚಾರ ಮಾಡುತ್ತದೆ: ನನ್ನ ಸ್ವರಕ್ಕೆ ಈ ನರಿಯು ಭ್ರಾಂತನಾಗಿದೆ; ಆ ಭ್ರಾಂತಿಯನ್ನು ಬಿಡಿಸ ಬೇಕೆಂದು ಮನಸ್ಸಿನಲ್ಲಿ ನಿಶ್ಚೈಸಿ ಗಾನಕ್ಕೆ ಆರಂಭ ಮಾಡೋಣದರಿಂದ ಬಾಯ್ಯಾಗಿನ ಮಾಂಸದ ಕರಣಿಯು ಕೆಳಗೆ ಬಿತ್ತು. ಆ ಕರಣಿಯನ್ನು ನರಿಯು ತಕ್ಕೊಂಡು ಆ ಕಾಗೆಯ ಹುಚ್ಚುತನವನ್ನು ನೋಡಿ ಗಹಗಹಿಸಿ ನಕ್ಕು ಹೋಗುವಂಥಾದ್ದಾಯಿತು.

ತಾತ್ಪರ್ಯ.

ಪ್ರಶಂಸೆಗೆ ಮೋಹಿಸುತ್ತಾ ಇರುವವನು ಭ್ರಂಶನಾಗುತ್ತಾನೆ ಎಂಬದು ತಿಳಿದು ಆ ಪ್ರಶಂಸೆಗೆ ಭ್ರಮಿತರಾಗದೆ ಇರುವಂಥಾ ಪುರುಷರು ವಿರಳವಾಗಿ ಇರುತ್ತಾರೆ. ಪ್ರಶಂಸೆಯಾದರೂ ನೆಟ್ಟಗೆ ಸಮಜವಾಗಿ ಮಾಡಲಿಕ್ಕೆ ಹೋದರೆ ಸ್ತೋತ್ರ ಮಾಡಿದ್ದು ವ್ಯರ್ಥವಾಗುತ್ತದೆ. ಆದರೆ ಪ್ರಶಂಸೆ ಮಾಡುವಂಥಾ ಪುರುಷನು ಕುಶಲನಾದರೆ ಬಹಳ ಜಾಗ್ರತೇ ಮನುಷ್ಯನಾದರೂ ಅವನ ಮನಸ್ಸು ಹರಣ ಮಾಡುತ್ತಾ ಇದ್ಧಾನೆ. ಹ್ಯಾಗಂದರೆ ಪ್ರಶಂಸೆಗೆ ಮೋಹಿತನಾಗದ ಪುರುಷಗೆ ಪ್ರಶಂಸೆ ಮಾಡುವವನು ಅದೇ ಗುಣವನ್ನೇ ವರ್ಣನೆ ಮಾಡಿದರೆ ಮನಸ್ಸು ಹರಣವಾಗುತ್ತದೆ. ಆದರೆ ಪ್ರಶಂಸೆಯ ಬಲೆ ತಪ್ಪ ಬೇಕಾದರೆ ಒಂದು ಉಪಾಯ ಉಂಟು; ಅದು ಏನಂದರೆ— ತನ್ನ ಗುಣಗಳ ಪರೀಕ್ಷೆ ತಾನೇ ನೆಟ್ಟಗೆ ಮಾಡ ಬೇಕು. ಎರಡನೇಯವರ ಮಾತಿನ ಮೇಲೆ ಹೋಗ ಬಾರದು. ತನ್ನ ಪರೀಕ್ಷೆ ತಾನೇ ನೆಟ್ಟಗೆ ಮಾಡುತ್ತಿರಲಾಗಿ ತನ್ನ ಯೋಗ್ಯತೆ ಎರಡನೇಯವರು ಹೇಳೋದೇನದೆ? ಪ್ರಾಣಿ ಮಾತ್ರಕ್ಕು ತನ್ನಕ್ಕಿಂತಲೂ ಅನ್ಯರುಗಳಿಗೆ ಹೆಚ್ಚಿನವರೂ ಅನ್ನ ಬೇಕೆಂಬ ಇಚ್ಛೆ ಇರೋದಿಲ್ಲವೋ. ಹಾಗೂ

ಒಬ್ಬರ ಯೋಗ್ಯತೆ ಮತ್ತೊಬ್ಬರಿಗೆ ವಾಸ್ತವೀಕ ಖರೇ ಇದ್ದರೂ ತಿಳಿಯೋದಿಲ್ಲವು. ಇದರ ದುಸಕ್ಕೆ ತನ್ನನ್ನು ಪ್ರಶಂಸೆ ಮಾಡುವವನಿಗೆ ಹೊಟ್ಟೆಯೊಳಗೆ ಏನಾದರೂ ಸ್ವಾರ್ಥ ಇದ್ಧೀತು ಎಂದು ತಿಳಿಯ ಬೇಕು.

---

೬೯. ನೀತಿಕಥೆ.

ಎರಡು ನಾಯಿಗಳು.

ಒಂದು ಹೆಣ್ಣುನಾಯಿ ಪ್ರಸೂತವಾಗುವ ಸಮಯದಲ್ಲಿ ನೆರೆಗಡೆ ನಾಯಿಗೆ ಪ್ರಾರ್ಥನೆ ಮಾಡುತ್ತದೆ: ಏ ತಾಯಿ ನಮ್ಮೌವ್ವನೇ, ಒಂದು ತಿಂಗಳ ಪರ್ಯಂತರ ನಿಮ್ಮ ಮನೆಯಲ್ಲಿ ಸ್ಥಳ ಕೊಟ್ಟರೆ ನಾನು ಇದ್ದು ಕೊಂಡು ಹಡದು ಬಾಣಂತಿತನವಾದ ಬಳಿಕ ನಿಮ್ಮ ಮನೆ ಬಿಟ್ಟು ಕೊಟ್ಟು ಹೋದೇನು ಎಂದಲ್ಲಿ, ನಾಯಿ ತಥಾಸ್ತು ಒಳ್ಳೇದವ್ವಾ ಎಂದು ತನ್ನ ಮನೆ ತೆರವು ಮಾಡಿ ಕೊಟ್ಟಿತು. ಮುಂದೆ ಒಂದು ತಿಂಗಳು ಆದ ಮೇಲೆ ಆ ಮನೇ ಯಜಮಾನನ ನಾಯಿಯು ಹಡದ ನಾಯಿಯ ಭೇಟಿಗೆ ಬಂದು ಬಹಳ ಮರ್ಯಾದಿಯಿಂದ ನೀನು ಶರೀರದಿಂದ ಕ್ಷೇಮದಿಂದ ಇದ್ದದ್ದು ನೋಡಿ ನನಗೆ ಬಹಳ ಸಂತೋಷವಾಯಿತು; ಈಗ ನನ್ನ ಮನಸ್ಸಿನಲ್ಲಿ ಹೀಗೆ ಅದೆ: ನೀವು ನಿಮ್ಮ ಕುನ್ನಿಗಳು ಸಹವಾಗಿ ಹೊರಗೆ ಅಡ್ಡಾಡೋದ ನಾನು ನೋಡ ಬೇಕೆಂಬ ಇಚ್ಛೆಯಾಗೆದೆ ಎಂದಲ್ಲಿ, ಅದರ ಮನೋಭಾವ ತಿಳಿದು, ಆ ಈದ ನಾಯಿ ಅಂದದ್ದು: ಸಹಜವ್ವಾ ನನಗೂ ಖಿದಿಯವಾಗುತ್ತದೆ, ನಿನ್ನ ಸ್ಥಳವನ್ನು ಬಹಳ ದಿವಸ ಹಿಡುಕೊಂಡು ಇದ್ದದರಿಂದ ನಿಮಗೆ ಬಹಳ ಆಪತ್ತು ಕಾಣುತ್ತಾ ಇದ್ಧೀತು, ಆದರೆ ಏನು ಮಾಡಲಿ, ನನ್ನ ಕುನ್ನಿಗಳು ಸಣ್ಣವು, ಇನ್ನೂ ಸಾಮರ್ಥ್ಯ ಬರಲಿಲ್ಲ, ನನ್ನ ಕೂಡಾ ಬೆನ್ನ ಹತ್ತಿ ತಿರುಗೋ ಹಾಗೆ ಆಗಲಿಲ್ಲ, ಅದಕ್ಕೆ ನೀವು ಕೃಪೆ ಮಾಡಿ ಇನ್ನೊಂದು ಹದಿನೈದು ದಿವಸ ನನಗೆ ಸ್ಥಳ ಕೊಟ್ಟರೆ ನಿಮ್ಮ ಉ

ಪಕಾರ ಬಹಳ ಹೊತ್ತೇನು ಎಂದಲ್ಲಿ, ಆ ಮನೇ ಧಣಿಯಾದ ನಾಯಿಯು ಮತ್ತೂ ಹದಿನೈದು ದಿವಸದ ತನಕಾ ಠಾವು ಕೊಟ್ಟಿತು. ಆ ದಿವಸಗಳೂ ತೀರಿದವು, ಆದರೂ ಮನೆ ಬಿಡವಲ್ಲದು; ಆಗ್ಗೆ ಆ ಮನೇ ನಾಯಿ ಅನ್ನುತ್ತದೆ: ಎಲೇ ನಾಯಿಯೇ, ಇನ್ನು ಮನೆ ಬಿಡುವಲ್ಲಿ; ನಿನ್ನ ಕುತ್ತಿಗೆ ಹಿಡಿದು ಹೊರಗೆ ಹಾಕ ಬೇಕೆಂಬೋದು ನಿನ್ನ ಮನಸ್ಸಿನಲ್ಲಿ ಇರುತ್ತದೇ ಹ್ಯಾಗೆ? ಈಗ್ಗೆ ನನ್ನ ಮನೆ ನನಗೆ ಬೇಕು ಅಂಬೋಣಾ, ಆ ಈದ ನಾಯಿ ಮಾತನಾಡುತ್ತದೆ: ನೀನೇ ಸರಿಯೇ ನನಗೆ ಹೊರಗೆ ಹಾಕುವಂಥಾಕೆಯೇ, ಹ್ಯಾಗೆ ಹಾಕುತ್ತೀ ಹಾಕು ನೋಡುತ್ತೇನೆ, ಈಗ ಸ್ಪಷ್ಟ ಹೇಳುತ್ತೇನೆ, ತಿಳುಕೋ — ನೀನು ನನ್ನನ್ನು ಜಬರದಸ್ತಿಯಿಂದ ಹೊರಗೆ ಹಾಕುವನಕ ನಿನ್ನ ಮನೆ ನಿನಗೆ ಪ್ರಾಪ್ತಿಯಾಗೋದಿಲ್ಲವು.

ತಾತ್ಪರ್ಯ.

ಕರದಲ್ಲಿ ಮೊಲವಿದ್ದವನೇ ಬೇಟೆಗಾರನು. ಅವರವರ ವಸ್ತು ಅವರವರ ಸ್ವಾಧೀನದಲ್ಲಿದ್ದರೆ ಅವರು ಧಣೀರು ಎಂಬುವ ನೀತಿ ಇರುತ್ತದೆ. ಯಾವದಾದರೂ ತನ್ನ ಜೀವ ಪದಾರ್ಥವ ಎರಡನೆಯವರ ಕೈಗೆ ಶೇರಿಸುವಲ್ಲಿ ಅದು ಪುನಹಾ ತಿರಿಗಿ ಬಂದೀತೆಂದು ದೃಢ ಬರವಸ ಆಗದ ವಿನಹಾ ತನ್ನ ಕೈಯ್ಯಾಗಿನ ಒಡವೆ ಪರರ ಕೈಯಲ್ಲಿ ಕೊಡಲಾಗದು. ಜಾಣನಾದ ಉದಾರಿಯಾದ ಮನುಷ್ಯನು ಎರಡನೆಯವರಿಗೆ ಸರ್ವಸ್ವವೂ ಕೊಡುತ್ತಾನೆ, ಆದರೂ ನಂಬಿಗೆ ಇಲ್ಲದ ಗೃಹಸ್ಥನಿಗೆ ಅಥವಾ ದಗಾಬಾಜಿ ಮಾಡ್ಯಾನು ಎಂಬುವಂಥಾ ಅನುಮಾನ ತೋರಿಸುವಂಥಾ ಮನುಷ್ಯನಿಗೆ ಕೈಗಡವೆಂದು ಕೊಡುವದೇ ಹುಚ್ಚ ಕೆಲಸವು.

---

೨೦. ನೀತಿಕಥೆ.

ನರಿಯೂ ಶಾಹಪಕ್ಷಿಯೂ.

ಒಂದಾನೊಂದು ದಿವಸದಲ್ಲಿ ಒಂದು ನರಿಯು ಒಂದು ಶಾಹಪಕ್ಷಿಯ ಭೋಜನಕ್ಕೆ ಕರಿಯಿತು. ಆ ಶಾಹಪಕ್ಷಿಗೆ ವಿನೋದ ಮಾಡ ಬೇಕೆಂ

ದು ಮನಸ್ಸಿಗೆ ತಂದು ಒಂದು ಸುಂದರವಾದ ತಳಿಗೆಯಲ್ಲಿ ಪಾಯಸವನ್ನು ಹಾಕಿ ಉಭಯತರು ಊಟಕ್ಕೆ ಪ್ರಾರಂಭಿಸಿದರು. ಆಗ್ಯೆ ಶಾಹಪಕ್ಷಿಯ ಮುಖಚುಂಚು ಉದ್ದವಾಗಿದ್ದ ಕಾರಣ ಆ ತಳಿಗೆಯಲ್ಲಿರುವ ಪಾಯಸ ಬಾಯಿಗೆ ಬರ ಬೇಕೆಂಬ ಪ್ರಯತ್ನವನ್ನು ನಾನಾ ಪ್ರಕಾರ ಮಾಡಿದರೂ ಬಾಯಿಗೆ ಬರವಲ್ಲದು. ಅಷ್ಟರೊಳಗೆ ಆ ನರಿಯು ಆ ತಳಿಗೆಯೊಳಗಿನ ಪಾಯಸವೆಲ್ಲಾನ್ನೂ ತಿಂದು ನಾಲಿಗೆಯಿಂದ ತಳಿಗೆ ನೆಕ್ಕಲಾಯಿತು. ಶಾಹಪಕ್ಷಿಯ ಮನಸ್ಸು ನೊಂದು ವ್ಯರ್ಥವಾಗಿ ಹಾಗೆ ಉಪವಾಸಿಯಾಗಿ ತನ್ನ ಮನೆಗೆ ಹೊರಟು ಹೋಗಿ ಆ ಕುನಿಸು ಮನಸ್ಸಿನಲ್ಲಿ ಇಟ್ಟು, ಕೆಲವು ದಿವಸದ ಮೇಲೆ ಈ ನರಿಗೆ ಮೇಜವಾನಿ ಮಾಡಿ ಉದ್ದವಾದ ಗೋಣಿನ ಹೂಜಿಯೊಳಗೆ ಮಾವಿನ ಹಣ್ಣಿನ ರಸವ ತುಂಬಿ ಇಡಲಾಗಿ ಆ ಪಾತ್ರೆಯ ಹೊಟ್ಟೆ ದೊಡ್ಡದು ಕುತ್ತಿಗೆ ಸಣ್ಣದಾಗಿ ಉದ್ದವಾಗಿತ್ತು; ಆದ ಕಾರಣ ಅದರೊಳಗೆ ನರಿಯ ಮುಖ ಹೊಗಲಿಕ್ಕೆ ಅಶಕ್ಯವಾಗಿತ್ತು. ಶಾಹಪಕ್ಷಿ ತನ್ನ ಮುಖದ ಚುಂಚವನ್ನು ಒಳಗೆ ಹಾಕಿ ಆ ರಸವನ್ನು ತಿಂದು ತೋರಿಸಿತು. ಶಾಹಪಕ್ಷಿ ಆಮ್ಲರಸವನ್ನು ತಿನ್ನುತ್ತಾ ತನ್ನೊಳ ಕುತ್ತಿಗೆ ಮೇಲಕ್ಕೆ ಎತ್ತಿದ ಸಮಯದಲ್ಲಿ ಬಾಯ್ಯೊಳಗಿನ ಎಂಜಲತಟಕು ಆ ಪಾತ್ರೆಯ ಮೇಲೆ ಬೀಳುತ್ತಿದ್ದವು. ನರಿಯು ಆ ತಟಕುಗಳ ನೆಕ್ಕಿಕೊಳ್ಳುತ್ತಾ ವೇಳ್ಯವನ್ನು ಕಳಿಯಿತು. ಆದರೆ ಮನಸ್ಸಿನಲ್ಲಿ ಖಿನ್ನವಾಗಿ ತನ್ನ ಮನೆಗೆ ಹೋಗುವ ಸಮಯದಲ್ಲಿ ಆ ಶಾಹಪಕ್ಷಿಯ ಕೂಡ ಮಾತಾಡುತ್ತದೆ: ಎಲೋ ಮಿತ್ರನಾದಂಥಾತನೇ, ನೀ ಮಾಡಿದ್ದು ಯಥಾಯೋಗ್ಯವು, ನಾನು ನಿನಗೆ ಮಾಡಿದ ಹಾಗೆ ನೀನು ನನಗೆ ಮಾಡಿದಿ. ಇದರೊಳಗೆ ಖಿನ್ನವಾಗೋದು ಪ್ರಯೋಜನವಿಲ್ಲವು.

ತಾತ್ಪರ್ಯ.

ಎರಡನೆಯವರಿಗೆ ತಾನು ವಿನೋದ ಮಾಡಿ ಸಂತೋಷವಾಗುವಂಥಾದ್ದು ದೊಡ್ಡ ಮನುಷ್ಯನ ಕೆಲಸವಲ್ಲ. ಹೀಗೆ ಮಾಡುವವನು ಜನರು ತಿರಿಗಿ ವಿನೋದ ಮಾ

ಡೋಣದರಿಂದ ಚೆರಟನಾಗ ಬಾರದು. ತನ್ನ ಕೊಟ್ಟ ರೂಪಾಯಿ ತನಗೆ ತಿರಿಗಿ ಬಂದರೆ ಶರಗಿನಲ್ಲಿ ತಕ್ಕೋ ಬೇಕು. ನರಿ ತಿಳುಕೊಂಡಂತೆ ತಿಳಿಯದೆ ಎರಡನೆಯವರು ತನಗೆ ತಿರಿಗಿ ಅಮರ್ಯಾದೆ ಮಾಡೋಣ, ಅವರಿಗೆ ದೋಷವನ್ನು ಸ್ಥಾಪಿಸುತ್ತಾ ಇದ್ದಾನೆ. ಆದರೆ ತನಗೆ ಹ್ಯಾಗೆ ಕೆಟ್ಟದ್ದು ತೋರುತ್ತದೋ, ಹಾಗೆಯೇ ತಾನು ಮಾಡಿದ್ದು ಪರರಿಗೆ ಕೆಟ್ಟದ್ದು ತೋರೀತು ಎಂದು ವಿಚಾರ ಮಾಡೋದಿಲ್ಲವು. ಶಾಹಪಕ್ಷಿಯಂಥಾದ್ದು ಅಂದರೆ ಕುತ್ತಿಗೆ ಉದ್ದ ಅದರ ಮೋರೆ ಚೂಚುವಾಗಿ ಉದ್ದವಾಗಿರುತ್ತದೆ; ಅದರ ಸ್ವರೂಪ ಹನುಮನ ಹಕ್ಕಿ, ಕೊರಕಂಚಿ, ಕೊಂಚಿಗನ ಹಕ್ಕಿ ಇವುಗಳ ಹಾಗೆಯೇ ಇರುತ್ತದೆ.

---

೭೧. ನೀತಿಕಥೆ.

ಮಲಪಾತರ ಪಕ್ಷಿಯೂ ನರಿಯೂ.

ಒಂದು ಮಲಪಾತರ ಪಕ್ಷಿಯು ತನ್ನ ಮರಿಗಳಿಗೆ ಏನಾದರೂ ಆಹಾರ ಬೇಕೆಂದು ಶೋಧಿಸುತ್ತಿರಲಾಗಿ ಒಂದು ನರಿಯ ಎಳೇ ಮರಿಯು ಬಯಿಲೊಳಗೆ ಆಡುವದ ಕಂಡು ತನ್ನ ಕಾಲ ಉಗುರುಗಳಿಂದ ಹಿಡಿದು ಹಾರಿ ಹೋಗುವ ಸಮಯದಲ್ಲಿ ಅದರ ತಾಯ್ಯಾದ ನರಿಯು ಸಮೀಪದಲ್ಲಿದ್ದು ಸಂತಾಪದಿಂದ ಓಡಿ ಬಂದು ಬಹಳ ಕಕುಲತೆಯ ಸ್ವರದಿಂದ ತನ್ನ ಕಣ್ಣಿನಲ್ಲೇ ದೈನ್ಯಭಾವವನ್ನು ತಂದು ಮೇಲಕ್ಕೆ ಆರ್ತವಾಗಿ ಮಾತಾಡುತ್ತದೆ: ಏ ಯಜೀ ಪಕ್ಷಿತಾಯಿಯೇ, ಬಡಿವಿಯ ಮೇಲೆ ದಯ ಮಾಡು, ನನ್ನ ಮೋಹದ ಕೂಸು ಒಯ್ದು ನನ್ನನ್ನ ಪರದೇಶಿ ಮಾಡ ಬೇಡ, ಈ ನನ್ನ ಬಾಲಕನ್ನ ನನಗೆ ಬಿಡು, ದಾನ ಕೊಟ್ಟ ಹಾಗೆ ಆಗುತ್ತದೆ ಎಂದಲ್ಲಿ, ಆ ಮಲಪಾತರ ಪಕ್ಷಿ ದಯ ಹುಟ್ಟದೆ, ತನ್ನ ಮನದಲ್ಲಿ ಅನ್ನುತ್ತದೆ: ನನ್ನ ಮನೆ ಮಾರು ಉನ್ನತ ವೃಕ್ಷದ ತುದಿಯಲ್ಲಿ ಅದೆ. ಅಲ್ಲಿ ನರಿಯಿಂದ ಏನು ಉಪದ್ರವಾದೀತು ಎಂದು ಗರ್ವದಿಂದ ಈ ನರಿಯ ಪ್ರಾರ್ಥನೆಗೆ ಕಿವಿ ಕೊಡದೆ ಆ ನರಿಯ ಕೂಸನ್ನು ತನ್ನ ಮರಿಗಳ ಗೂಡಿನಲ್ಲಿ

ಒಯ್ದು ಇಡುವಂಥಾದ್ದಾಯಿತು. ಆ ಸಮಯದಲ್ಲಿ ನರಿಗೆ ಬಹಳ ಶಿಟ್ಟು ಬಂದು ಹುಚ್ಚು ಹಿಡಿದು ಮುಯ್ಯಿಗೆ ಮುಯ್ಯಿ ಹ್ಯಾಗೆ ತೀರಿಸ ಬೇಕೆಂದು ಇತ್ತತ್ತ ನೋಡೋ ವೇಳ್ಯದಲ್ಲಿ ಅದೇ ದಿವಸ ಅಲ್ಲೇ ಸಮೀಪದಲ್ಲಿ ಕೊಳ್ಳದ ಒಳಗೆ ಊರ ಜನರು ಒಂದು ಹೆಣ ಸುಡ ಹಾಕಿ ಹೋಗಿದ್ದರು. ಆ ಬೆಂಕಿಯನ್ನು ನರಿಯು ಕಂಡು ಅಲ್ಲಿಗೆ ಹೋಗಿ ಒಂದು ಉರಿಯೋ ಕೊಳ್ಳಿಯ ತಂದು ಆ ಮಲಪಾತರ ಪಕ್ಷಿಯ ಗೂಡಿರುವ ವೃಕ್ಷದ ಕೆಳಗೆ ಎಡಬಲದಲ್ಲಿ ಕಾಷ್ಟಗಳ ಕೂಡಿಟ್ಟು ಆ ವೃಕ್ಷದ ಬೊಡ್ಡಿಗೆ ಬೆಂಕಿಯನ್ನು ಹೊತ್ತಿಕ್ಕಿ ಪ್ರಯೋಗ ಆರಂಭ ಮಾಡೋಣ, ಅದನ್ನು ಆ ಪಕ್ಷಿಯು ಕಂಡು ಭಯವಾಗಿ ಇನ್ನು ಮೇಲೆ ನಾನೂ ನನ್ನ ಮರಿಗಳೂ ಸಹವಾಗಿ ಸುಟ್ಟು ಭಸ್ಮವಾಗಿ ಹೋಗುತ್ತೇವೆ ಎಂದು ತಿಳಿದು ನರಿಗೆ ಪ್ರಾರ್ಥನೆಯನ್ನು ಮಾಡಿ ಬೇಡಿ ಕೊಂಡಿತು: ಏ ನರಿತಾಯಿಯೆ ಕೃಪಾಸಾಗರವೇ, ದಯ ಮಾಡಿ ವೈರತ್ವ ಸಾಕು ಮಾಡು, ನನ್ನಿಂದ ತಪ್ಪಾಯಿತು ಎಂದು ಹೇಳಿ ಆ ನರಿಯ ಶಿಶುವನ್ನು ಜೀವದಿಂದ ತಿರಿಗಿ ಕೊಟ್ಟಿತು.

ತಾತ್ಪರ್ಯ.

ದ್ರವ್ಯದಿಂದ ಅಥವಾ ಅಧಿಕಾರಬಲದಿಂದ ಸಮರ್ಥನಾಗಿದ್ಧೇನೆ ಎಂದು ಭರವಸ ಹಿಡಿದು ಯಾರ್ಯಾರಿಗೂ ಘಾತ ಮಾಡ ಬಾರದು. ನಾನು ದೊಡ್ಡಾಶ್ರಯದಲ್ಲಿದ್ಧೇನೆ, ನನ್ನಿಂದ ಘಾತ ಮಾಡಿಸಿ ಕೊಳ್ಳುವವನು ಬಲಹೀನನಿದ್ಧಾನೆ, ಅವನ ಉಪದ್ರ ನನಗೆ ತಟ್ಟಲಿಕ್ಕಿಲ್ಲ ಎಂದು ಸರ್ವಥೇವ ಮನಸ್ಸಿನಲ್ಲಿ ತರಲಾಗದು. ಅವನು ಎಂಥಾ ಚಿಕ್ಕ ಮನುಷ್ಯನಾಗಿದ್ದ ಕಾಲಕ್ಕೂ ಯಾವ ವೇಳ್ಯಕ್ಕೆ ಯಾವ ಜಾಗಾದಲ್ಲಿ ಯಾವ ಯುಕ್ತಿಯಿಂದ ವೈರವ ತೀರಿಸಿ ಕೊಂಡಾನೋ ತಿಳಿಯೋದಿಲ್ಲ. ಒಂದು ಸಾರಿ ವೈರವು ಪೊಟಮಿತು ಎಂದರೆ ಪುನಹಾ ಶಾಂತ ಹೊಂದೋದು ಕಠಿಣವು. ದೊಡ್ಡ ಅರಸನು ಮಹಾ ಪ್ರಬಲವಾಗಿರುತ್ತಾನಲ್ಲಾ, ಆತನ್ನ ಹೊಡಿಯುವದಕ್ಕೆ ಕಳ್ಳರು ಶಕ್ತರಾಗುತ್ತಾರೆ. ವೈರ ಸಾಧಿಸ ಬೇಕೆಂದು ಜೀವದ ಹಂಗು ತೊರೆಯುದವನು ಸಹಸ್ರಾವಧಿ ಯುಕ್ತಿಯಿಂದ ತನ್ನ ಶತ್ರುವನ್ನು ನಾಶ ಮಾಡ್ಯಾನು. ಕೇವಲ ಅಶಕ್ತ ಭಿಕ್ಷುಕಿಯಾದ ಮುದಿಹೆಂಗಸು ಆದರೂ ಅರಸನ ಮನೆಗೆ ಬೆಂಕಿ ಹಚ್ಚೋದಕ್ಕೆ ಶಕ್ತಳಾಗುತ್ತಾಳೆ.

ಕೇವಲ ಬಡವನೂ ಕೈಲಾಗದವನೂ ಆದರೂ ಮಹಾ ಬಲಿಷ್ಠರ ಕೂಸಿನ ಪ್ರಾಣ ತಕ್ಕೊಂಬೋದಕ್ಕೆ ಶಕ್ತನಾಗುತ್ತಾನೆ. ಇದರ ತುಸಕ ಹೃದಯ ಕಠಿಣವಾಗಿ ಜನರನ್ನು ಪೀಡಿಸುವವನು ಬಹಳ ದೂರ ದೃಷ್ಟಿ ಎಚ್ಚರ ಇಡಬೇಕು.

---

೭೦. ನೀತಿಕಥೆ.

ಕಾಡುಹಂದಿಯೂ ಕತ್ತೆಯೂ.

ಒಂದಾನೊಂದು ಕತ್ತೆಮರಿಗೆ ಅಡಿವಿಯಲ್ಲಿ ಕಾಡುಹಂದಿಯು ಅಕಸ್ಮಾತ್ ಘಟನೆ ಬಿದ್ದ ಸಮಯದಲ್ಲಿ ಆ ಮರಿಯು ವಿನೋದದಿಂದ ನಮಸ್ಕಾರ ರಾಯರೇ ಎಂದು ಹೇಳಿತು. ಅದನ್ನು ಕೇಳಿ ಹಂದಿಯು ಅದರ ಸಲಿಗೆಗೆ ಆಶ್ಚರ್ಯ ಪಟ್ಟು ಕ್ರೋಧಾವೇಷದಿಂದ ಈ ಕತ್ತೆಮರಿಯ ಕರುಳುಗಳ ಹೊರಿಯಕ್ಕೆ ತೆಗಿಯ ಬೇಕೆಂಬಷ್ಟರೊಳಗೆ ಮತ್ತು ವಿವೇಕಕ್ಕೆ ಬಂದು ಆ ಕತ್ತೆಮರೀ ಕೂಡಾ ಮಾತಾಡಿತು: ಎಲೇ ತುಚ್ಛ ಪ್ರಾಣಿಯೇ, ನೀನು ನಿನ್ನ ಮಾರ್ಗ ಹಿಡಿದು ಹೋಗು, ನಾನು ನನ್ನ ಕೋರೆದಾಡೆಯನ್ನು ಕತ್ತೆಯ ರಕ್ತದಿಂದ ಮುಡಿಚಟ್ಟು ಮಾಡೋದಿಲ್ಲ. ಇಲ್ಲದೆ ಹೋದರೆ ನಿನ್ನ ಜೀವ ತಕ್ಕೊಂಬುವದಕ್ಕೆ ನನಗೆ ಒಂದು ಕ್ಷಣ ಹತ್ತುತ್ತಿದ್ದಿಲ್ಲ.

ತಾತ್ಪರ್ಯ.

ಮೂರ್ಖರಾದವರು ತಾವೇ ಜಾಣರೆಂದು ತಿಳಿದು ದೊಡ್ಡವರಿಗೆ ವಿನೋದಾ ಮಾಡಲಿಕ್ಕೆ ಹೋಗುತ್ತಾರೆ. ಅವರಿಂದ ತಮ್ಮ ಪ್ರಾಣ ಉಳಿಸಿ ಕೊಂಡು ಬಂದರಾಯಿತೇ. ಅದೇ ಘನಕಾರ್ಯವಾಯಿತೆಂದು ತಿಳಿಯ ಬೇಕು. ಮೂರ್ಖರು ಮೂರ್ಖರಿಗೆ, ಚಾಕರರು ಚಾಕರರಿಗೆ, ತುಚ್ಛನು ತುಚ್ಛನಿಗೆ ಶಿಟ್ಟು ಬಿಟ್ಟು ವಿನೋದಾರ್ಥಕ್ಕೆ ಸಮಸಮಾನಸ್ಕಂದರಲ್ಲದೆ ದೊಡ್ಡವರು ಒಂದೆರಡಾವರ್ತಿ ಚಿಕ್ಕ ಮನುಷ್ಯನ ಅಪರಾಧಗಳ ಸಹನ ಮಾಡಿದರೆಂದು ಸಣ್ಣ ಮನುಷ್ಯನು ನಿಶ್ಚಿಂತನಾಗಿ ಪುನಃಪುನಹಾ ಅದೇ ಪ್ರಸಂಗಕ್ಕೆ ಹತ್ತಲಾಗದು.

---

೭೩. ನೀತಿಕಥೆ.

ಇಬ್ಬರು ಹೆಂಡರೂ ಗಂಡನೂ.

ಒಬ್ಬಾನೊಬ್ಬ ಪುರುಷಗೆ ಇಬ್ಬರು ಹೆಂಡರು ಇದ್ದರು. ಅವರೊಳಗೆ ಮೊದಲನೇ ಹೆಂಡತಿ ಗಂಡನ ಸಮಾನ ವಯಸ್ಸಿನವಳು. ರೂಪದಿಂದಲೂ ಸಾಧಾರಣ ಪಕ್ಷವಾಗಿದ್ದಳು. ಎರಡನೇ ಹೆಂಡತಿ ಹರೆಯದವಳೂ ಹದಿನಾರು ವರುಷದ ವಯಸಿನಾಕೆ, ಅತಿ ಸುಂದರಿಯೂ; ಅವಳ ರೂಪಕ್ಕೆ, ಗುಣಸಂಪತ್ತಿಗೆ ಗಂಡನು ಬಹಳ ಸಂತುಷ್ಟನಾಗಿದ್ದನು. ಪರಂತು ಪುರುಷನು ಐವತ್ತರ ಮನೆಗೆ ಬಂದ ಕಾರಣದಿಂದ ಅವನ ಯೋಗ್ಯಕ್ಕೆ ಆ ಚಿಕ್ಕ ಸ್ತ್ರೀಯು ಅವನಂತೆ ಸುಖಿ ಇದ್ದಿಲ್ಲವು. ಅವನಿಗೆ ತಲೆಯಲ್ಲಿ ಕೂದಲುಗಳು ಅರ್ಧಾ ಬಿಳೇವು ಅರ್ಧಾ ಕರೇವು ಇದ್ದ ಕಾರಣದಿಂದ ಅವನ ವೃದ್ಧಾಪ್ಯಲಕ್ಷಣ ತೋರುತ್ತಿತ್ತು. ಇದರಿಂದ ಚಿಕ್ಕವಳಿಗೆ ಅಸಹ್ಯ ತೋರಿತು. ಆ ಪುರುಷನ ತಲೆಯನ್ನು ಹಿಕ್ಕೋದಕ್ಕೆ ಚಿಕ್ಕವಳು ಕುಳಿತ ಸಮಯದಲ್ಲಿ ಅವನಿಗೆ ತಿಳಿಯಗೊಡದೆ ಮೆಲ್ಲಗೆ ಯುಕ್ತಿಯಿಂದ ನಿತ್ಯವೂ ಒಂದೊಂದು ನೆರೆ ಕೂದಲು ಕಿತ್ತು ಹಾಕುವಳು. ಯಾಕಂದರೆ ತನ್ನ ಮನಸ್ಸಿನಲ್ಲಿ ನನ್ನ ಗಂಡನ ಅಂತರಂಗದ ಮಾತು ಸರ್ವ ವಿಷಯದಲ್ಲಿ ಹ್ಯಾಗಾದರೂ ಇರಲಿ, ಪರಂತು ಬಹಿರಂಗವಾಗಿ ಮುಪ್ಪಿನ ಗುರುತುಗಳು ಇಷ್ಟಾದರೂ ಕಾಣಿಸದೇ ಹೋಗಲಿ, ಅದು ನನಗೆ ಸಂತೋಷವು ಎಂದು ನೆನಸಿದಳು. ಹಿರೇ ಹೆಂಡತಿಯು ಈ ಬಿಳೇ ಕೂದಲುಗಳು ನನ್ನ ಗಂಡನ ಹಿರಿಯತನಕ್ಕೆ ಭೂಷಣ ಕಾಣಿಸುತ್ತವೆ ಎಂದು ತಿಳಿದು, ತನ್ನ ಗಂಡನ ತಲೆಯನ್ನು ಹಿಕ್ಕೋದಕ್ಕೆ ಸರತಿ ಬಂದ ಒಂದೊಂದು ವೇಳ್ಯಕ್ಕೆ ಕರೇ ಕೂದಲನ್ನು ಕಿತ್ತು ಬಿಸಾಡುವಳು. ಈ ಪ್ರಕಾರ ಉಭಯ ಹೆಂಡರ ಉದ್ಯೋಗವು ಆರು ತಿಂಗಳು ನಡೆಯಲಾಗಿ ಆ ಗಂಡನ ತಲೆಯ ಮೇಲಿನ ಕೂದಲುಗಳು ಒಂದು ಸಹಾ ಉಳಿಯಲಿಲ್ಲವು.

ತಾತ್ಪರ್ಯ.

ಸಾರಾಸಾರ ವಿಚಾರ ತಿಳಿಯದವನ ಕೃಪೆಯಾದರೂ ಕೆಡಕಾಗುತ್ತದೆ. ಗಂಡನ ಹಿತವನ್ನು ಇಚ್ಛಿಸುವ ಸ್ತ್ರೀಯರು ಗಂಡಗೆ ಹಿತಕೃತ್ಯ ಮಾಡ ಬೇಕಾದರೆ ಗಂಡನ ವಿಚಾರಾಂಶದ ಹೊರ್ತು ಮಾಡಲಾಗದು. ಯಾವದೊಂದು ಮಾತು ಸ್ತ್ರೀಯಳಿಗೆ ಚಲೋದು ಕಂಡ ಕಾಲಕ್ಕು ಅದನ್ನ ಆ ಸ್ತ್ರೀಯು ಗಂಡಗೆ ತಿಳಿಸಿ ಮಾಡಿದ್ದೇ ಉಂಟಾದರೆ ಉಭಯತರಿಗೂ ಬಹಳ ಹಿತವಾದೀತು. ಈ ನಡತೆಯು ಸ್ತ್ರೀಯರ ಧರ್ಮವೇ ಸರಿ.

---

೭೪. ನೀತಿಕಥೆ.

ಕಪ್ಪೆಯೂ ಎರಡು ಎತ್ತುಗಳೂ.

ಎರಡು ಎತ್ತುಗಳು ಒಂದು ಕೆರೆಯ ಒಡ್ಡಿನ ಮೇಲೆ ಕಾದಾಡುತ್ತಾ ಇರಲಾಗಿ ಆ ಕೆರೆಯೊಳಗಿನ ಒಂದು ಕಪ್ಪೆಯು ಕಂಡು ಎರಡನೇ ಕಪ್ಪೆಗೆ ಹೇಳುತ್ತದೆ: ಎಲೋ ನೋಡು ನೋಡು, ಅವರದು ಏನು ಅನರ್ಥವಾಗುತ್ತದೆ; ಇನ್ನು ಮೇಲೆ ಅಯ್ಯೋ ನಮ್ಮ ಗತಿ ಏನಾಗುತ್ತದೋ ಎಂದಲ್ಲಿ, ಎರಡನೇ ಕಪ್ಪೆಯು ಅಂದದ್ದು: ಎಲೋ ಆ ಎತ್ತುಗಳನ್ನ ಕಂಡು ನೀನು ಇಷ್ಟ್ಯಾಕೆ ಅಂಜಿ ಕೊಳ್ಳುತ್ತಿ, ಆ ಎತ್ತು ಕಾದಾಡಿದರೆ ನಮಗೆ ಸಮ್ಮಂಧವೇನು, ಅದು ಭಿನ್ನ ಜಾತಿ, ಭಿನ್ನ ರೀತಿ; ಅದರ ಆಹಾರವು ಬೇರೆ. ಅವು ನಮಗೆ ಉಪದ್ರವಾಗ ಬೇಕೆಂದು ಕಾದಾಡೋದಿಲ್ಲ; ಒಂದರನ್ನೊಂದು ಅಂಜಿಸಿ ಓಡಿಸಿ ತನ್ನ ಪಶುಹಿಂಡಿನೊಳಗೆ ತಾವು ಶ್ರೇಷ್ಠವಾಗ ಬೇಕೆಂದು ಗುದ್ದ್ಯಾಡುತ್ತವೆ; ಹೀಗೆ ಇರುತ್ತಿರಲಾಗಿ ನಾವು ಮೂರ್ಖರಂತೆ ನಮ್ಮ ಸ್ಥಳದಲ್ಲಿ ಅಂಜಿ ಕೊಳ್ಳುವದು ಚೆಲೋದಲ್ಲಾ ಅಂಬೋಣ, ಆ ಮೊದಲ ಕಪ್ಪೆ ಮಾತಾಡುತ್ತದೆ: ನೀನು ಅಂದ ಮಾತುಗಳು ಖರೆ, ಪರಂತು ಈಗ ಕಾದಾಡೋ ಎರಡು ಎತ್ತುಗಳಲ್ಲಿ ಒಂದು ಬಲ ಕಡಿಮೆಯಾಗಿ ಸೋತು ಮುರಿದು ಓಡಿ ಈ ಕೆರೆಯ ನೀರೊಳಗೆ ಬಂದೀತು, ಆಗ್ಗೆ ನಮ್ಮ ಹಿಂಡಿನ ಒಳಗೆ ಎಷ್ಟೋ ಕಪ್ಪೆಗಳು ಅದರ ಕಾಲ ಕೆಳಗೆ ತುಳಿಸಿ ಕೊಂಡು

ಪ್ರಾಣದಿಂದ ಹೋಗುತ್ತವೆ; ಇದರ ಮೇಲೆ ನೀ ನೋಡು, ಆ ಕಾದಾಡು ವದಕ್ಕೂ ನಮಗೂ ಸಮ್ಮಂಧ ಎಷ್ಟು ದೂರವದೆ, ಸಮೀಪವದೆ ಎಂದು ತಿಳಕೋ ಬೇಕು.

ತಾತ್ಪರ್ಯ.

ದೊಡ್ಡ ದೊಡ್ಡವರ ಕಲಾಪದೊಳಗೆ ಸಮೀಪದಲ್ಲಿದ್ದ ಬಡ ಜನರು ಪ್ರಾಣದಿಂದೆ ಹೋಗುತ್ತಾರೆ. ಬಡವರಾದವರು ದೊಡ್ಡವರ ಪಕ್ಷವಿಡಿದು ತಾವು ಕಲಾಪಕ್ಕೆ ಹೋದರೆ ನಾಶವಾಗುವದು ಅಗಾಧವೇನು. ಸರ್ವರಿಗೂ ಕಲ್ಯಾಣವಾಗುವ ಕಾರ್ಯದಲ್ಲಿ ದೊಡ್ಡವರ ಸಂಗತಿಗೆ ಸಂಣವರು ಹತ್ತ ಬೇಕು. ಆದರೆ ಕೇವಲ ಜನರ ಹಿತಕಾರಣದಿಂದ ಉದ್ಯೋಗ ಮಾಡುವ ದೊಡ್ಡ ಮನುಷ್ಯರು ವಿರಳವಾಗಿ ಇರುತ್ತಾರೆ, ಬಹಳವಾಗಿ ಜನರ ಒಳತಿನ ನಿಮಿತ್ಯ ಮಾಡಿ ಕಲಹವನ್ನು ಎತ್ತುತ್ತಾರೆ; ಪರಂತು ಅವರ ಲಕ್ಷ್ಯ ಬಹಳ ಸ್ವಾರ್ಥಸಾಧನದ ಮೇಲೆ ಇರುತ್ತದೆ. ಅವರು ಜನರ ದೆಶೆಯಿಂದ ಕಲಹ ಮಾಡುವದಿಲ್ಲವು. ತಮ್ಮ ಕೈಗೆ ರಾಜಾಜ್ಞೆ ಬರ ಬೇಕು. ತಾವು ರಾಜಭೋಗ ಭೋಗಿಸ ಬೇಕು. ತಮ್ಮ ಆಜ್ಞೆಯ ಹಾಗೆ ಸರ್ವರೂ ಇರ ಬೇಕು ಎಂದು ಕಾಳಗ ಮಾಡುತ್ತಾ ಇರುತ್ತಾರೆ. ಅವರಿಗೆ ಅಧಿಕಾರದ ಸ್ಥಳ ಸ್ಥಿರವಾದ ಬಳಿಕ ಪ್ರಥಮ ಉದ್ಯೋಗ ಪ್ರಜಾಪೀಡಣಕ್ಕೆ ಆರಂಭ ಮಾಡುವದೇ. ಅದರ ಸಲವಾಗಿ ಜಾಣನಾದ ಪುರುಷನು ಇಂಥಾ ಕಲಾಪ ಮಾಡುವವರನ್ನ ಬಿಟ್ಟು ದೂರ ಇರ ಬೇಕು. ಅಥವಾ ತನ್ನ ಸಾಮರ್ಥ್ಯ ನಡದರೆ ಎರಡು ಪಕ್ಷದವರನ್ನು ಅದೇ ಸಮಯದಲ್ಲಿ ಹೊಡದು ಕೆಡಹ ಬೇಕು. ಅದರಿಂದ ಜನರ ಪೀಡೆ ಪರಿಹಾರವಾಗುತ್ತದೆ.

---

೨೫. ನೀತಿಕಥೆ.

ಗೋದಲಿಯೊಳಗಿದ್ದ ಸಾರಂಗಮೃಗವು.

ಒಂದಾನೊಂದು ಸಾರಂಗಮೃಗಕ್ಕೆ ಬೇಟೆಗಾರನು ಗಿಡದೊಳಗಿಂದ ನಾಯಿ ಬೆನ್ನ ಹಚ್ಚಿ ಬೆದರಿಸಿದ ಮೂಲದಿಂದ ಓಡಿ ಓಡುತ್ತಾ ಬಂದು, ಒಂದು ಹಳ್ಳಿಯೊಳಗೆ ಒಬ್ಬ ಒಕ್ಕಲಮಗನ ದನದ ಹಕ್ಕೆಯೊಳಗೆ ಸೊಪ್ಪೆಯ ಪೆಂಡೀ ಮರೆಗೆ ಅಡಗಿ ಕೊಂಡಿತು. ಅದನ್ನ ಆ ಗೋದಲಿಗೆ ಕಟ್ಟಿದ

ಒಂದು ಎತ್ತು ಕಂಡು ಬೆದರಿ ಅದರ ಸಂಗಡ ಮಾತನಾಡಿತು: ಎಲಾ ನೀನು ಇಲ್ಲಿ ಬಂದು ಏನು ಪರಿಣಾಮ ಕಂಡು ಕೊಂಡಿ, ಯಾವ ಭಯ ದಿಂದ ನೀನು ಬಂದು ಅಡಗಿ ಕೊಂಡಿದ್ಧೀಯೋ? ಅದೇ ಮರಣ ನಿನಗೆ ಇ ಲ್ಲೇ ಶೀಘ್ರ ಪ್ರಾಪ್ತಿಯಾದೀತು ಎಂದು ನನ್ನ ಬುದ್ಧಿಗೆ ಕಾಣುತ್ತದೆ ಎನ್ನ ಲು, ಆ ಸಾರಂಗವು ಎಲೇ ಮಿತ್ರನೇ, ನೀವು ಸರ್ವರೂ ದಯ ಮಾಡಿ ಸುಮ್ಮನೇ ಮಾತ್ರ ಇರುವಂಥವರಾದರೆ ನನ್ನ ಪರಿಣಾಮವಾದೀತು; ನಾನು ನನ್ನ ಅನುವು ನೋಡಿ ಕೊಂಡು ಶೀಘ್ರದಿಂದ ಹೊರಟು ಹೋ ದೇನು ಎಂದು ಹೇಳಿ, ಸಾರಂಗಮೃಗವು ಸಾಯಂಕಾಲ ಪರಿಯಂತರವೂ ಅಲ್ಲೇ ಅಡಗಿ ನಿಂತಿತು. ಸಾಯಂಕಾಲಕ್ಕೆ ಮೊದಲು ದನ ಕಾಯುವವ ನು ಮೇವಿನ ಹೊರೆಯನ್ನು ತಕ್ಕೊಂಡು ಹಕ್ಕೆಯೊಳಗೆ ಬಂದು ಈ ಮೃಗ ವನ್ನು ನೋಡದಲೇ ಹೊರೆಯನ್ನು ಹಾಕಿದನು. ಅನಂತರದಲ್ಲಿ ಆ ಮ ನೇ ಕಾರಭಾರಿಯು ಬಂದನು. ಅವನು ಕಾಣಲಿಲ್ಲವು. ಆ ಸಮಯದ ಲ್ಲಿ ಸಾರಂಗ ಹರ್ಷನಿರ್ಭರಿತವಾಗಿ ಆ ಎತ್ತುಗಳಿಗೆ ಏ ಗೆಳೆಯರುಗಳಿರಾ ನೀವು ಧನ್ಯರಿದ್ಧೀರಿ; ಇಂದು ನಾನು ನಿಮ್ಮ ಧರ್ಮದಿಂದ ಉಳಕೊಂಡೆ, ನಿಮ್ಮ ಸಮಾನ ಪರೋಪಕಾರಿಗಳು ಎಲ್ಲೆಲ್ಲಿಯೂ ಇರಲಿಕ್ಕಿಲ್ಲ ಅಂದಿತು. ಆ ಮಾತು ಕೇಳಿ ಅವುಗಳಲ್ಲಿ ಒಂದು ಎತ್ತು ಸಾರಂಗಕ್ಕೆ ಹೇಳುತ್ತದೆ: ಎ ಲೋ ನೀನು ಇಲ್ಲಿಂದ ಸುಖರೂಪವಾಗಿ ಪಾರಾಗಿ ನಿನ್ನ ಸ್ಥಳಕ್ಕೆ ಹೋಗ ಬೇಕು ಎಂದು ನಮ್ಮ ಮನಃಪೂರ್ವಕವದೆ; ಇನ್ನು ಮೇಲೆ ದೇವರೇ ನ ಡಿಸ-ಬೇಕು; ಈ ಮನೆಯ ಧಣಿಯು ಇಲ್ಲಿಗೆ ಬರ ಬಾರದು; ಬಂದನಂ ದರೆ ಅವಗೆ ನೂರು ನೋಟಗಳು ಇದ್ದಾವೆ, ಅವನ ದೃಷ್ಟಿಯೊಳಗೆ ಅ ಡಗಿ ಹೋಗಲಾರೆ, — ಹೀಗೆ ಮಾತನಾಡುವಷ್ಟರೊಳಗೆ ಆ ಮನೆಯ ಯ ಜಮಾನನು ಹೊರಗೆ ಹೋಗಿದ್ದಾತನು ಮನೆಗೆ ಬಂದ ಕ್ಷಣದಲ್ಲೇ ಪ್ರಥ ಮದಲ್ಲಿ ಹಕ್ಕೆಯೊಳಗೆ ಹೋಗಿ ಕಮತಿಗರ ಮೇಲೆ ಚಟಪರಿಸಿ ಎಲೋ ಕಮತಿಗರಿರಾ ಬಸ್ಯಾ ಈ ಎತ್ತಿನ ಮುಂದೆ ಮೇವು ಯಾಕೆ ಹಾಕಲಿಲ್ಲ?

ನಾನು ದಿನಂಪ್ರತಿ ಹೇಳುತ್ತೇನೆ, ಆದರೂ ನಾಚಿಕೆ ಇಲ್ಲ; ಎಲೋ ನಾಗೆಯನ ಮುಂದೆ ಇನ್ನೊಂದು ನಾಲ್ಕು ಶಿವಡು ಹಾಕಿಲ್ಲ; ಹನಿಮೇಗೆ ಮೇವು ಹಾಕಿರೋ, ಮದಡು ಲವಡಿ ಮಕ್ಕಳಿರಾ ಎಂದು ಹೇಳಿ ಈ ಬಗೇ ವಟವಟ ತಡವರಿಸಿ ಇತ್ತಲಿಂದ ಅತ್ತ ಅತ್ತಲಿಂದ ಇತ್ತ ತಿರಿಗಿ ಎಲ್ಲಾ ದನಗಳನ್ನು ನೋಡಿ ಪರಾಮ್ಮರಿಕೆ ಮಾಡಿ ಮೇವಿನ ಕಟ್ಟೇ ಕಡೆಗೆ ಬಂದು ದಿಟ್ಟಿಸಿ ನೋಡಲಾಗಿ ಈ ಸಾರಂಗದ ಕೋಡುಗಳು ಅವನ ದೃಷ್ಟಿಗೆ ಬಿದ್ದಾಕ್ಷಣಕ್ಕೆ ಇದು ಏನೆಲೆ, ಸಂದಿಯೊಳಗೆ ಸಾರಂಗವು, ಎಲೆಲೇ ಹಿಡಿಯಿರೆಲೇ ಎಂದು ಆರ್ಭಟದಿಂದ ಒದರಿ ಗುದಗಿ ತಕ್ಕೊಂಡು ಲಾಗಿಸಲಿಕ್ಕೆ ತಾತ್ಕಾಲದಲ್ಲೇ ಆ ಮೃಗದ ಪ್ರಾಣವನ್ನು ಕೊಂದರು.

ತಾತ್ಪರ್ಯ.

ತನ್ನ ಮನೆಯ ಕೆಲಸದ ಚಿಂತೆ ತನಗೆ ಇದ್ದಷ್ಟು ತನಗೆ ಅಗತ್ಯ ಚಾಕರಿಯವರಿಗೆ ಇರೋದಿಲ್ಲ. ಆದಷ್ಟಾಗಲಿ, ಹೋದಷ್ಟು ಹೋಗಲಿ ಎಂದು ಅವರು ನಿಶ್ಚಿಂತರಾಗಿ ಇರುತ್ತಾರೆ. ಯಾವನ ಅನ್ನ ಉಣ್ಣುತ್ತಾರೋ ಅವನಿಗೆ ಹಿತವಾದಷ್ಟು ಮಾಡ ಬೇಕು. ಇದು ಸೇವಕರ ಧರ್ಮವಷ್ಟೇ. ಹೀಗೆ ಸ್ವಪ್ನದಲ್ಲಿಯಾದರೂ ಇರುವದಿಲ್ಲ. ಮನುಷ್ಯ ಮಾತ್ರದವರ ಚಿತ್ತವು ಸಾರ್ವಕಾಲದಲ್ಲಿಯೂ ತಮ್ಮ ತಮ್ಮ ಸ್ವಾರ್ಥದ ಮೇಲೆ ಇರುತ್ತದೆ. ಸಾಧಿಸಿ ಸಾಧಿಸಿದಂತೆ ತಮ್ಮ ತಮ್ಮ ಸ್ವಾರ್ಥಕ್ಕೆ ಹೆಣಗುವವರಾಗುತ್ತಾರೆ. ಅದರಿಂದ ಧಣಿಯರ ಹಿತ ಅವರಿಗೆ ಕಾಣಿಸೋದಿಲ್ಲ. ಹೀಗೆ ನೋಡಲಾಗಿ ತಮ್ಮ ಶರೀರಬಲದಿಂದ ನಿಪಾತವಾಗಿ ಹೋದಂಥಾ ಶ್ರೀಮಂತರು ಸ್ವಲ್ಪವೇ; ಆದರೆ ಸೇವಕರು ಅಡ್ಡಿಸಿದ ಮೂಲದಿಂದ ಮಣ್ಣು ಕೂಡಿ ಹೋದವರೇ ಬಹಳ. ಇದಕ್ಕೋಸ್ಕರ ಧಣೇರು ತಮ್ಮ ಕೆಲಸಕ್ಕೆ ತಾವೇ ಸ್ವಥಾ ಜಾಗ್ರತೆ ಇಡ ಬೇಕು. ಸೇವಕರ ಮೇಲೆ ಕೇವಲ ವಿಶ್ವಾಸದಿಂದ ಇರಲಾಗದು.

---

೭೬. ನೀತಿಕಥೆ.

ನಾಯಿಯೂ ತೋಳವೂ.

ಒಂದಾನೊಂದು ತೋಳವು ಆಹಾರವಿಲ್ಲದೆ ಬಹಳ ದಿವಸ ಉಪ

ವಾಸ ಬಿದ್ದು ಸೊರಗಿ ಕಡ್ಡಿಯಾಗಿ ಆಹಾರದ ತುಸಕ ಮುಗಲಿಗೆ ಬಾಯಿ ತೆಗದು ತಿರುಗುತ್ತಾ ಒಂದು ದಿನ ಬೆಳದಿಂಗಳೊಳಗೆ ಒಬ್ಬ ಒಕ್ಕಲ ಮಗನ ಮನೆಯ ಸಮೀಪಕ್ಕೆ ಬಂದು ಅವನ ಮನೇ ಬಾಗಲ ಒಳಗೆ ಹೋಗುತ್ತಿರಲಾಗಿ ಅಲ್ಲಿ ಅವನು ಸಾಕಿದ ಒಂದು ನಾಯಿಯನ್ನು ಕಂಡಿತು. ಅದರ ಇದರ ಆಗತ ಸ್ವಾಗತ ವಿಚಾರಗಳಾದ ಮೇಲೆ ತೋಳವು ನಾಯಿಗೆ ಅಂದದ್ದು: ಎಲೋ ನೀನು ಬಹಳ ಚೆಲುವಾಗಿ ಕಾಣಿಸುತ್ತಿದ್ಧಿ, ನಾನು ನಿನಗೆ ಖರೆಯಾಗಿ ಹೇಳುತ್ತೇನೆ ಕಂಡ್ಯಾ—ನಿನ್ನ ಸಮಾನ ಪುಷ್ಟತನ, ಕಂಣಿಗೆ ನೋಡಲಿಕ್ಕೆ ಛಂದ, ನಾನು ಇಂದಿನ ವರೆಗೂ ಯಾರನ್ನು ಕಂಡಿಲ್ಲವು; ಇದರ ಕಾರಣವೇನು ಹೇಳ ಬಾರದೇ; ಎಲೋ ನಾನು ನಿಮಗಿಂತ ಐವತ್ತಷ್ಟು ಹೆಚ್ಚಿನ ಉದ್ಯೋಗ ಮಾಡುತ್ತಾ ಇರುತ್ತೇನೆ; ಎಷ್ಟು ಮಾಡಿದ ಕಾಲಕ್ಕು ಹೊಟ್ಟೆಗೆ ತಿಂಬೋದಕ್ಕೆ ಅನ್ನ ದೊರೆಯೋದಿಲ್ಲವು ಎನ್ನಲಾಗಿ, ನಾಯಿ ಹೇಳುತ್ತದೆ: ಎಲೋ ತೋಳನೇ, ನಾನು ಮಾಡಿದಂತೆ ನೀವೂ ಮಾಡಿದ್ದಾದರೆ ನೀವೂ ನನ್ನಂತೆ ಸುಖಿಗಳಾದೀರಿ. ಅದಕ್ಕೆ ತೋಳವು ನೀನು ಏನೇನು ಮಾಡುತ್ತಾ ಇರುತ್ತಿದ್ಧೀ ಎಂದು ಕೇಳಲು, ನಾಯಿ ಹೇಳುತ್ತದೆ: ಮತ್ತೇನು ಮಾಡೋದಿಲ್ಲ ಎಂಬೋಣಾ ತೋಳನು ಇಂಥಾ ಶೇವೆಯನ್ನು ಮನಃಪೂರ್ವಕವಾಗಿ ಮಾಡೇನು, ತಮ್ಮ ಅಡವಿಯಲ್ಲಿ ನಾನು ಕಂಡಾಬಟ್ಟೆ ತಿರಿಗಿ ತಿರಿಗಿ ಛಳಿ ಮಳೆಗಳನ್ನು ಸಹಿಸುತ್ತೇನೆ, ಆ ಶ್ರಮಕ್ಕಿಂತಲು ಮನೆಯ ನೆರಳಿನಲ್ಲಿ ಕುಳಿತು, ಹೊಟ್ಟೆ ತುಂಬಾ ಅನ್ನ ದೊರದ ಮೇಲೆ ಮತ್ತೇನು ಬೇಕು ಎಂದು ಹೇಳಿ, ಉಭಯತರು ಆಪ್ತಾಲೋಚನೆಯ ಮಾತುಗಳಾಡುತ್ತಾ ಇರಲಾಗಿ ಅಷ್ಟರೊಳಗೆ ಈ ನಾಯಿಯ ಕೊರಳಿಗೆ ಹಗ್ಗ ಕಟ್ಟಿದ ಕೋರಿಯ ಕಲೆಯು ತೋಳದ ದೃಷ್ಟಿಗೆ ಬಿದ್ದಿತ್ತು. ಅದನ್ನ ನೋಡಿ ತೋಳನು — ಎಲೋ ತಮ್ಮನೇ, ನಿನ್ನ ಕುತ್ತಿಗೆಯಲ್ಲಿ ಕಾಣಿಸುವಂಥಾ ಕಲೆಯು ಏನು ಎಂದು ಕೇಳಿತು. ನಾಯಿಯು — ಅದು ಏನೂ ಅಲ್ಲಾ ಎನ್ನಲು; ತೋಳನು — ಏ

ನೂ ಅಲ್ಲ ಖರೆ, ಅದರೆ ನನಗೊಂದಿಷ್ಟು ತಿಳಿಸು ಅಂದಿತು. ನಾಯಿ ಹೇಳಿದ್ದು: ನಾನು ಸ್ವಲ್ಪ ಚೇಷ್ಟಾಖೋರ ಇದ್ದೇನೆ, ಮುಂದಿಗೆ ಕಚ್ಚುತ್ತೇನೆ, ಅದಲ್ಲದೆ ಹಗಲು ನಿದ್ರೆ ಮಾಡಿದೆನಂದರೆ ರಾತ್ರಿಯಲ್ಲಿ ಜಾಗ್ರತೆಯಿಂದ ಕಾವಲು ನೆಟ್ಟಗೆ ಆಗುತ್ತದೆ; ಆದ ಕಾರಣ ನನ್ನ ನಮ್ಮ ಧಣಿಯು ಹಗಲೆಲ್ಲಾ ಕಟ್ಟಿ ಹಾಕುತ್ತಾನೆ; ಪರಂತು ಇತ್ತಾಲಾಗಿ ಹೊತ್ತು ಮುಳುಗಿತೋ ಇಲ್ಲವೋ ಎಂಬ ಸಮಯಕ್ಕೆ ನನ್ನ ಕಟ್ಟಿದ ಕುಣಿಕೆ ಉಚ್ಚಿ ಬಿಡೋಣ್ರಾ, ಆ ಮೇಲೆ ನಾನು ಅರಸೇ ಸರಿ, ಬೇಕಾದ ಕಡೆಗೆ ಸಂಚಾರ ಮಾಡ ಬಹುದು, ನನಗೆ ತಿಂಬುಂಬೋ ವಿಷಯದಲ್ಲಿ ನಮ್ಮ ಧಣಿಯು ತನ್ನ ಕೈಯಿಂದ ಎಂಜಲು ತಂದು ತಿನ್ನಿಸುತ್ತಾ ಇದ್ದಾನೆ; ಹಾಗೆಯೇ ಮನೆಯ ಜನರು ಎಲ್ಲರೂ ನನ್ನ ಮೇಲೆ ಮೋಹ ಮಾಡಿ ತಮ್ಮ ತಮ್ಮ ಎಡೆಗಳಲ್ಲಿ ಇದ್ದ ರೊಟ್ಟಿಚೂರು ಮುಂತಾಗಿ ಉಳಿದದ್ದು ನನ್ನ ಹೊರ್ತು ಮತ್ತ್ಯಾರಿಗೂ ಬಿಷ್ಟೋದಿಲ್ಲ; ಈಗ ನೋಡು ಕಂಡ್ಯಾ, ನನ್ನಂತೆ ನೀನು ಮಾಡಿದ್ದೇ ಉಂಟಾದರೆ ನೀನು ಎಂಥಾ ಸುಖಿಯಾದಿಯಲ್ಲ ಎಂಬೋಣ್ರಾ, ಆ ಮಾತು ಕೇಳಿ ತೋಳವು ಹಿಂಬರಿಕಿಲಿಂದ ಹಿಂದಹಿಂದಕ್ಕೆ ಸರಿವುತ್ತ ಇರಲಾಗಿ, ನಾಯಿಯು — ಎಲೋ ಬಾ ಬಾರೋ, ಯಾಕೆ ಓಡುತ್ತಿ ಹೇಳು ಎನ್ನಲಾಗಿ, ತೋಳವು ದೂರ ನಿಂತು ಅಲ್ಲಿಂದಲೇ ಒಲ್ಲೆ ಒಲ್ಲೆನೋ ನಮ್ಮಪ್ಪಾ, ಆ ಸುಖವು ಸುಡಲಿ, ನಾನೊಲ್ಲೆ, ನಿನ್ನ ಸುಖವು ನಿನಗಿರಲಿ, ನನ್ನ ಸಂಗಡ ಮಾತಾಡ ಬೇಕಾದರೆ ಪ್ರತಿಬಾಧಕ ಇಲ್ಲದೇ ಸ್ವತಂತ್ರದ ಮಾತು ಇದ್ದರೆ ಆಡು, ನಿನ್ನಂತೆ ಬಂಧಿಸಿ ಕೊಂಡು ಅರಸುತನವನ್ನು ಕೊಟ್ಟರೂ ನನಗಾಗದು ಎಂದು ಹೇಳಿತು.

ತಾತ್ಪರ್ಯ.

ಸ್ವತಂತ್ರವಾಗಿ ಇದ್ದ ಕಾಲವು ಬಹು ಚೆಲೋದು. ಪರಂತು ಪರರ ಅಂಕಿತವಾಗಿ ದೊಡ್ಡ ಪದವಿ ಬಂದರೂ ಒಳ್ಳೆತಲ್ಲಾ; ಪರಾಧೀನದಲ್ಲಿದ್ದ ಪ್ರಾಣಿಗೆ ಸುಜ್ಞಾನ ದೊಡ್ಡಸ್ತನ ಧೈರ್ಯವೂ ಮತ್ತು ಮಹಾ ಮಹಾ ಸದ್ಗುಣಂಗಳೂ ಇದ್ದರೂ ಅವನ

ಉಪಯೋಗಕ್ಕೆ ಬರುವದಿಲ್ಲವು. ಆ ಕಾರಣವೇನು ಎಂದರೆ—ಅವನು ಒಡೆಯನ ಅಪ್ಪಣೆ ಸೂತ್ರದಂತೆ ನಡಿಯೋದೇ ಪ್ರಮಾಣವವೆಯಲ್ಲಾ; ಮತ್ತು ಒಡೆಯನು ಎಂಥಾ ನೀಚ ಸೇವೆಯಾದರೂ ಹೇಳಿದಂತೆ ಕರ್ತವ್ಯವು. ಹೀಗೆ ಸೇವಕಧರ್ಮದ ಸಿದ್ಧಾಂತವು.

---

೩೩. ನೀತಿಕಥೆ.

ಪರದೇಶಿಟಗರಿನ ಮರಿಯನ್ನು ಕುರಿ ಸಾಕಿದ್ದು.

ಒಂದು ಟಗರಿನ ಮರಿಯು ಪರದೇಶಿಯಾಗಿರಲಾಗಿ ಒಂದು ಕುರಿಯು ಸಾಕಿ ಸಂರಕ್ಷಣೆ ಮಾಡುತಿತ್ತು. ಒಂದಾನೊಂದು ದಿವಸದಲ್ಲಿ ಆ ಕುರಿಯ ಸಂಗತಿಯಲ್ಲಿ ಮರಿಯು ಹೋಗುತ್ತಿರುವಾಗ ಮಾರ್ಗದಲ್ಲಿ ಒಂದು ತೋಳವು ಕಂಡು, ಆ ಮರಿಯ ಸಂಗಡ—ಎಲೋ ಹುಡುಗನೇ ನೀನು ತಪ್ಪಿದಿ; ಈಕೆ ನಿನ್ನ ತಾಯಿಯಲ್ಲ, ನಿಜವಾದ ತಾಯಿ ಮುಂದಿನ ಹಿಂಡಿನೊಳಗೆ ಮೇಯುತ್ತದೆಂದು ಮಾತಾಡಲು, ಆ ಮರಿಯು ಉತ್ತರವಾಗಿ ಹೇಳಿದ್ದು: ಎಲೋ ತಂದೆಯೇ, ನೀನು ಅಂಬುವ ಮಾತು ಖರೆ, ಆದರೆ ನನ್ನ ಹಡದ ತಾಯಿ ನಾನು ಹೊಟ್ಟೆಯಲ್ಲಿ ಇರುವ ಪರ್ಯಂತರ ಉಪಾಯವಿಲ್ಲದೇ ಹೊತ್ತು ಕೊಂಡಿತ್ತು; ಈದ ಕ್ಷಣಕ್ಕೆ ನನ್ನನ್ನು ಈ ಭೂಮಿಯ ಮೇಲೆ ನಿರಾಧಾರದಲ್ಲಿ ಬಿಟ್ಟು ಕೊಟ್ಟು ಹೋಯಿತು; ಅದು ನನ್ನ ತಾಯಿ ಎಂಬದಿದ್ದರೆ ನೀನೇ ಅನ್ನು; ಈ ಸಾಕಿದ ಕುರಿಯೇ ನನ್ನ ತಾಯಿ ಎಂಬೋದು ಸಿದ್ಧಾಂತ; ಈ ತಾಯಿಯು ನಾನು ಪರದೇಶಿ ದಿಕ್ಕು ಇಲ್ಲದವನೆಂದು ತಿಳಿದು ನನ್ನ ಅಂಗೀಕಾರವನ್ನು ಮಾಡಿ ತನ್ನ ಹೊಟ್ಟೇಲಿ ಹುಟ್ಟಿದ ಮಕ್ಕಳಂತೆ ಸರ್ವ ಮಾತಿಗೂ ನನ್ನ ಸಂರಕ್ಷಣೆ ಮಾಡುತ್ತಾಳೆ ಎನ್ನಲಾಗಿ, ತೋಳ ಹೇಳಿತು: ಎಲೋ ಭ್ರಾಂತನೇ, ಯಾವಾಕೆ ನಿನಗೆ ಜನ್ಮ ಕೊಟ್ಟಿದ್ದಾಳೋ ಆಕೆಗೆ ನೀನು ಸಂಮಾನ ಮಾಡುವದು ಯಥಾರ್ಥ

ವು; ನಿನ್ನ ಪ್ರೀತಿಯು ಆಕೆಯ ಮೇಲೆ ಇರ ಬೇಕು ಎಂಬೋರ್ಣಾ, ಆ ಮರಿಯು ಅಂದದ್ದು: ಆ ಕುರಿ ನನಗೆ ಜನ್ಮ ಮಾತ್ರ ಕೊಟ್ಟಿತು ಎಂದು ನಾನು ಹೇಳಲಿಕ್ಕಿಲ್ಲಿ, ನಾನು ಕಪ್ಪು ಕೆಂಪು ಎಂಬೋದು ಎರಡನ್ನು ನೋಡದೆ ಜನ್ಮ ಕೊಟ್ಟಳು; ಇದಲ್ಲದೇ ನನಗೆ ಪುರುಷಜನ್ಮ ಕೊಟ್ಟಲ್ಲಿ ನಾನು ಕಟಕರ ಕ್ರೈಯಲ್ಲಿ ಬೀಳುವವನಾದೆ, ಸರ್ವ ಪ್ರಕಾರದಿಂದ ಆಕೆಯ ಉಪಕಾರ ನನ್ನ ಮೇಲೆ ಇಲ್ಲ; ಇಂಥಾ ತಾಯಿಗೆ ನಾನು ತಾಯಿ ಎಂದು ಹ್ಯಾಗೆ ಅನ್ನ ಬೇಕು.

ತಾತ್ಪರ್ಯ.

ತನಗೆ ಹಿತ ಮಾಡುವವರಿಗೆ ತಾಯಿ ತಂದೆ ಎನ್ನ ಬೇಕು. ಜನ್ಮ ಮಾತ್ರ ಕೊಟ್ಟವರು ತಾಯಿ ತಂದೆಗಳು ಅಲ್ಲ; ತಂದೆ ತಾಯಿ ಮಕ್ಕಳು ಒಬ್ಬರಿಗೊಬ್ಬರು ಉಪಯೋಗ ಬೀಳ ಬೇಕು. ಮಕ್ಕಳಿಗೆ ಅಜ್ಞಾನ ಇರುವ ಪರ್ಯಂತರವು ತಂದೆ ತಾಯಿಗಳು ಪಾಲಿಸಿ ಪೋಷಣೆಯು ಮಾಡ ಬೇಕು; ವಿದ್ಯಾಭ್ಯಾಸಗಳ ಮಾಡಿಸ ಬೇಕು; ಮನಸ್ಸಿನ ಆಟವನ್ನು ಆಡಗೊಡಿಸದೆ ತಮ್ಮ ಅಂಕಿತದೊಳಗೆ ಇಟ್ಟಿರ ಬೇಕು; ಮುಂದೆ ಆ ಹುಡುಗರು ಕಾರ್ಯಕರ್ತರಾದ ಬಳಿಕ ಅವರು ತಾಯಿ ತಂದೆಗಳಿಗೆ ಯಾವ ಮಾತಿನ ನ್ಯೂನತೆ ಬೀಳಗೊಡ ಬಾರದು. ಹೀಗೆ ಪರಸ್ಪರ ಧರ್ಮಗಳು ಇದ್ದಾವೆ. ಬಹಳವಾಗಿ ಹುಡುಗರು ಛಾನಸರುಗಳಾಗಿ ಹುಟ್ಟುತ್ತಾರೆ, ಕೆಲವರು ತಮ್ಮ ವಯಸ್ಸಿನ ಭರದಲ್ಲಿ ತಂದೆ ತಾಯಿಗಳ ಮಾತು ಕೇಳೋದಿಲ್ಲವು. ತಾಯಿ ತಂದೆಗಳು ಕೆಲವು ಮಂದಿ ದುಷ್ಟರು ಇರುತ್ತಾರೆ, ತಮ್ಮ ಮಕ್ಕಳಿಗೆ ಚಿಕ್ಕತನದಲ್ಲಿ ವಿದ್ಯ ಕಲಿಸೋ ವಿಷಯದಲ್ಲಿ ಶ್ರಮ ಮಾಡೋದಿಲ್ಲವು. ತಮ್ಮ ಶಕ್ತ್ಯಾನುಸಾರ ತಮ್ಮ ಮಕ್ಕಳಿಗೆ ಉಣ್ಣಲುಡಲು ಕೊಡೋದಿಲ್ಲವು; ತಾವು ಹಿರಿಯರೆಂದು ತಮ್ಮಗೆ ತೋರುತ್ತದೆ. ತಮ್ಮ ಆಜ್ಞಾಮಹತ್ವದಿಂದ ಹುಡುಗರಿಗೆ ಏನು ಮಾಡಿದರೂ ಹುಡುಗರು ಸಹಿಸಿ ಕೊಂಡು ಇರ ಬೇಕು; ಹೀಗಾಗೋಣಾ, ಆ ಹುಡುಗರು ತಾವು ಮರ್ಯಾದೆಗಳ ಬಿಡುತ್ತಾರೆ; ತಂದೆ ಮಕ್ಕಳು ಬೀಗರು ಗಂಡ ಹೆಂಡರು ಒಬ್ಬರಿಗೊಬ್ಬರು ಪ್ರೀತಿ ಮಾಡುತ್ತಾರೆ. ಹೀಗೆ ಒಬ್ಬರ ಮೇಲೆ ಒಬ್ಬರು ಪ್ರೀತಿ ಇಲ್ಲದವರಿಗೆ ಬಂಧುಗಳೆಂಬೋ ನಾಮ ಮಾತ್ರ ಖರೆ.

೭೯. ನೀತಿಕಥೆ.

ನವಿಲು ತನ್ನ ಸ್ವರಕ್ಕೆ ಖೇದಗೊಂಡದ್ದು.

ಒಂದಾನೊಂದು ದಿವಸದಲ್ಲಿ ಒಂದು ನವಿಲು ತನ್ನ ಸ್ವರವು ಕಠೋರವೆಂದು ಖಿಂನವಾಗಿ ದೇವರಿಗೆ ಪ್ರಾರ್ಥನೆ ಮಾಡಿತು: ಎ ದಯಾಳು ಜಗತ್ಕರ್ತನಾದ ತಂದೆಯೇ, ಧ್ವನಿಯ ವಿಷಯ ಕೋಗಿಲೆಯು ನನ್ನನ್ನು ಗೆಲ್ಲುತ್ತದೆ; ಇದು ನಿನ್ನ ಕೀರ್ತಿಗೆ ನಾಶಕರವಾಗಿದೆ ನೋಡು, ಕೋಗಿಲೆಗಳು ಕೂಗೋಣಾ ಸರ್ವ ಜನರೂ ಅದರ ಕಡಿಗೆ ಕಿವಿಗೊಟ್ಟು ಕೇಳುತ್ತಾ ಇದ್ದಾರೆ. ಈ ರೀತಿಯಿಂದ ಪ್ರಾರ್ಥನೆ ಮಾಡೋ ಮಯೂರದ ಮಾತು ದೇವರು ಕೇಳಿ, ಅದಕ್ಕೆ ಸಮಾಧಾನ ಮಾಡುತ್ತಾನೆ: ಎ ನವಿಲೇ, ನಾಟ ಶ್ರೇಷ್ಠನೇ ಕೇಳು, ಮಾಧುರ್ಯ ಸ್ವರ ವಿಷಯದಲ್ಲಿ ಕೋಗಿಲೆಯೇ ಶ್ರೇಷ್ಠದೆಂದು ನಿನಗೆ ತೋರಿದ್ದಾದರೆ ರೂಪದಿಂದ ದೊಡ್ಡತನದಿಂದ ನೀನು ಸುಖಿ ಇದ್ಧೀ ಎಂದಲ್ಲಿ, ನವಿಲು — ದೇವರೇ, ಮಂಜುಳ ಸ್ವರವಿಲ್ಲದೇ ಬರೇ ರೂಪ ಮಾತ್ರ ತಕ್ಕೊಂಡು ಏನು ಮಾಡ ಬೇಕು ಅಂದಿತು. ಅದಕ್ಕೆ ದೇವರು ಎಲೋ ಮಯೂರನೇ, ನಾನು ಒಬ್ಬೊಬ್ಬರಲ್ಲಿ ಒಂದೊಂದು ಕಳಾಗುಣವ ಇಟ್ಟಿರುತ್ತೇನೆ; ನಿನಗೆ ಸುಂದರತ್ವ, ಗರುಡನಿಗೆ ಬಲ, ಕೋಗಿಲೆಗೆ ಸುಸ್ವರ, ಗೊರವಂಕಪಕ್ಷಿಗೆ ಮನುಷ್ಯರಂತೆ ಮಂಜುಳ ಭಾಷೆ, ಪಾರಿವಾಳಕ್ಕೆ ಶಾಂತಿ, ಈ ರೀತಿಗಳಿಂದ ತಮ್ಮ ತಮ್ಮ ಗುಣಗಳಿಂದ ತುಷ್ಟಿತರಾಗಿ ಇರುತ್ತವೆ; ಇದರಂತೆ ನೀನು ಇರ ಬೇಕು; ಇಲ್ಲದಿದ್ದರೆ ಸುಮ್ಮಗೆ ಆಶೆಗೊಂಡರೆ ದುಖ್ಖ ಮಾತ್ರವೇ ಸರಿ ಅಂದನು.

ತಾತ್ಪರ್ಯ.

ಒಬ್ಬನಿಗೆ ಸರ್ವಗುಣಸಂಪಂನತ್ವ ಇರ ಬೇಕೆಂಬೋ ಇಚ್ಛೆ ದೇವರಿಗೆ ಇರುವದಿಲ್ಲ. ಅದರ ಬೆಸೆಯಿಂದ ಅನೇಕ ಗುಣದ ಆಸ್ಥೆ ಇದ್ದವನು ಅವು ಪ್ರಾಪ್ತಿಯಾಗೋದಿಲ್ಲವೆಂದು ಖಿನ್ನನಾಗ ಬಾರದು. ತನ್ನಲ್ಲಿ ಇದ್ದ ಸದ್ಗುಣಗಳಿಗೆ ಅನಾದರ ಮಾಡ ಬಾರದು, ಮತ್ತು ಶ್ರಮ ಬಿದ್ದು ಅದಕ್ಕೆ ವರ್ಧವನ್ನು ಮಾಡುತ್ತಾ ಹೋಗ

ಬೇಕು; ಸರ್ವಗುಣಗಳ ಸಂಪಾದಿಸಿದ ಫಲಗಳು ಏನಂದರೆ: ಚಿತ್ತಕ್ಕೆ ಸಮಾಧಾನವಾಗ ಬೇಕೆಂಬೋದೇ. ದೇವರು ತನಗೆ ಸದ್ಗುಣಗಳ ಏನು ಕೊಟ್ಟಿದ್ಧಾನೋ ಅಷ್ಟರಿಂದಲೇ ಮನಸ್ಸಿಗೆ ಸಮಾಧಾನ ಮಾಡಿ ಕೊಳ್ಳಲಾಗಿ ಆ ಮನುಷ್ಯನಿಗೆ ಈ ಲೋಕದಲ್ಲಿದ್ಧ ಸುಖ ಪ್ರಾಪ್ತಿ ಆದ ಹಾಗೆ ಆಯಿತು.

---

೨೯. ನೀತಿಕಥೆ.

ಇರುವೆಯೂ ನೊಣವೂ.

ಒಂದಾನೊಂದು ದಿವಸದಲ್ಲಿ ಇರುವೆಗೂ ನೊಣಕ್ಕೂ ನಾನು ದೊಡ್ಡವನೂ ನೀನು ದೊಡ್ಡವನೂ ಎಂಬೋ ವಿಷಯದಲ್ಲಿ ಕಟಕಟೆಯಾಗಿ, ನೊಣವು ಇರುವೆಗೆ ಅಂದದ್ದು: ಏ ಇರುವೇ, ನಿನ್ನ ದೊಡ್ಡತನಕ್ಕೆ ಭ್ರಾಂತಿ ನಿನಗೆ ಇದ್ದ ಹಾಗೆ ಯಾರಿಗೂ ಇಲ್ಲ; ನೋಡು ಯಜ್ಞಯಾಗಾದಿ ಕರ್ಮದಲ್ಲಿ ಪದಾರ್ಥಗಳು ಇರುತ್ತಾವಲ್ಲಾ, ಅವುಗಳ ಮುಂಚೆ ನಾನು ಸೇವಿಸಿದ ಮೇಲೆ ಹಿಂದಾಗಿ ದೇವರಿಗೆ ಪ್ರಾಪ್ತಿಯಾಗುತ್ತವೆ; ಇದರ ಹೊರ್ತು ಗುಡಿಯೊಳಗೆ ಉನ್ನತವಾದಂಥಾ ಸ್ಥಳವು ನನ್ನದು; ನಾನು ದೇವರ ಗುಡಿಯಲ್ಲಿ ಇರುತ್ತೇನೆ, ಮತ್ತೆ ಯಾರೂ ಹಾಗೆ ಇರೋಣಿಲ್ಲ; ಮತ್ತು ರಾಜಸಭೆಯಲ್ಲಿ ಪ್ರವೇಶ ಮಾಡಲಿಕ್ಕೆ ಅಡ್ಡಿ ಅಂತು ಏನೇನೂ ಇಲ್ಲ; ನಾನು ಅರಸುಗಳ ಶಿರಸ್ಸಿನ ಮೇಲೆ ಕೂದ್ರುತ್ತೇನೆ, ಈ ಪ್ರಕಾರ ನಾನು ಶ್ರಮ ಬೀಳದೆ ಊಟಪ್ರಾಶನೆಗಳಿಂದ ಭೋಗಿಸುತ್ತಾ ಇದ್ಧೇನೆ; ಈ ಪ್ರಕಾರ ನಾನು ಸಮಸ್ತರ ಸೌಖ್ಯಪ್ರಧಾನನಾಗಿರಲಿಕ್ಕೆ ನೀನು ಕೇವಲ ತುಚ್ಛಕರವಾದದ್ದು, ಎಂದಿಗೆ ನನಗೆ ಸಮಾನವಾದೀ. ಅದಕ್ಕೆ ಇರುವೆ ಮಾತನಾಡಿದ್ದು: ಕೇಳಿದಿಯಾ ದೊಡ್ಡ ದೊಡ್ಡವರ ಮನೆಯಲ್ಲಿ ಹೋಗಿ ಉಂಬೋಣದರಿಂದ ಪ್ರತಿಷ್ಟೆ ಎಂಬುದು ಖರೆ; ಪರಂತು ನಿನ್ನನ್ನು ಅವರು ಆದರದಿಂದ ಕರದವರಾದರೆ ಉಂಬೋ ಕಾಲಕ್ಕೆ ನೊಣಗಳನ್ನು ಯಾಕೆ ಝಾಡಿಸುತ್ತಾ ಇದ್ಧಾರೆ ಅಂದರೂ ನೀನು ನಾಚಿಗೇಡಿಯಾದ ಕಾರಣ ಎಡೇ ಮೇ

ಲಿಂದ ಬಿಟ್ಟು ಏಳೋದಿಲ್ಲ; ನೀನು ರಾಜಸಭೆಯಲ್ಲಿ ಹೋಗೋದೂ ಅರಸುಗಳ ಶಿರಸ್ಸಿನ ಮೇಲೆ ಕೂಡ್ರೋದೂ ದೊಡ್ಡ ಮಾತೆಂದು ವರ್ಣನೆ ಮಾಡಿ ಹೇಳಿದೆಯಲ್ಲಾ; ಆದರೆ ನನಗೆ ಖಚಿತ ವರ್ತಮಾನ ತಿಳಿದದೆ, ಏನಂದರೆ: ನಾನು ಒಂದು ದಿವಸ ಅಕ್ಕಿಕಾಳು ತಕ್ಕೊಂಡು ನನ್ನ ಮನೆಗೆ ಹೋಗೋ ಮಾರ್ಗದಲ್ಲಿ ನಿಮ್ಮ ಒಳಗಿನ ಒಬ್ಬ ಗೃಹಸ್ಥನು ಬಂದು ಪದಾರ್ಥದ ಮೇಲೆ ಕುಳಿತು ಗುಳಿಗೆ ಮಾಡಿ ನುಂಗುತ್ತಾ ಇದ್ದ ಪದಾರ್ಥದ ಹೆಸರು ಉಚ್ಚಾರ ಮಾಡಲಿಕ್ಕೆ ಬಹಳ ಅಸಹ್ಯ ತೋರುತ್ತದೆ, ಅದಲ್ಲದೆ ನೀನು ದೇವರ ಗುಡಿಯಲ್ಲಿ ಬಹಳ ಹೊತ್ತು ಇರುತ್ತೇನೆ ಅಂದಿಯಲ್ಲಾ; ಆದ ಕಾರಣ ಹೇಳುತ್ತೇನೆ: ನಿನಗೆ ಮನೆಮಾರು ಇಲ್ಲವು, ಉದ್ಯೋಗವಂತೂ ಮೊದಲೇ ಇಲ್ಲವು, ಹೊತ್ತು ಹೋಗದೇ ನೀನು ಗುಡಿಯಲ್ಲಿ ಹೋಗಿ ಕುಂಡ್ರುತ್ತಿದ್ದಿ; ನಮ್ಮಂತೆ ಧಾವತಿ ಮಾಡಿ ಧಾನ್ಯಸಂಗ್ರಹ ಮಾಡೋದಿಲ್ಲಾದ ಕಾರಣ ನಿನಗೆ ಶೀತಗಾಲದಲ್ಲಿ ಉಪವಾಸದಿಂದ ಮೃತ ಹೊಂದೋಣಾಗುತ್ತದೆ; ನಮ್ಮ ಉದ್ಯೋಗದಿಂದ ಶ್ರಮ ಸುಖವನ್ನು ಅನುಭೋಗಿಸುತ್ತಾ ಇದ್ದೇವೆ; ಶೀತಗಾಲದಲ್ಲಿ ನಾವು ಉಂಡು ತಿಂದು ಮನೆಯ ಹೊಸ್ತಲದೊಳಗೆ ಸುಖದಲ್ಲಿ ಇರುತ್ತಾ ಇದ್ದೇವೆ.

ತಾತ್ಪರ್ಯ.

ಉದ್ಯೋಗಗಳು ನಾನಾ ಬಗೆಯಲ್ಲಿ ಇದ್ದಾವೆ. ಎಷ್ಟೋ ಜನರು ಪ್ರಾಪ್ತಿ ಇಲ್ಲದ ಉದ್ಯೋಗ ಮಾಡಿ, ಸುಳ್ಳುಪ್ರಶಂಸೆ ಮಾತ್ರ ತೋರಿಸ ಬೇಕು. ಎರಡನೇ ಜನರ ತಿರಸ್ಕಾರ ಮಾಡುತ್ತಲಿರ ಬೇಕು. ಇದಲ್ಲದೆ ಮತ್ತು ಕೆಲವು ಮಂದಿಗಳು ಹೀಗೆ ಇರುತ್ತಾರೆ; ಯಾವ ಉದ್ಯೋಗಕ್ಕೆ ಎಲ್ಲಿ ಹೋದಲ್ಲಿ ಸರ್ವರ ಪ್ರೀತಿಗೂ ಆಸ್ಪದರಾಗುತ್ತಾರೆ. ಉದ್ಯೋಗ ಮೂಲಕದಿಂದ ರಾಜಸಭೆಯಲ್ಲಿ ಪ್ರವೇಶವಾಗುತ್ತಾರೆ. ಇದಲ್ಲದೆ ಯಾವದಾದರೂ ಏನೂ ಉದ್ಯೋಗವಿಲ್ಲವೆಂದು ವೇಳ್ಯ ಕಳಿಯಲಿಕ್ಕೆ ತಿರುಗುವವನು ರಾಜಸಭೆಯಲ್ಲಿ ಹೋದರೆ ಪ್ರತಿಷ್ಠೆಯು ಹೇಳಲಾಗದು. ಡಾಂಭೀಕತನದಿಂದ ದೇವತಾರ್ಚನೆ ಮಾಡುವವನ ಭಕ್ತಿ ಏನೂ ಕೆಲಸದ್ದಲ್ಲ, ತನ್ನ ಮನೆಯಲ್ಲಿ ತೌಡಿನ ರೊಟ್ಟಿ ಇಲ್ಲದವನಿಗೆ ದೊಡ್ಡವರ ಪಂಕ್ತಿಯಲ್ಲಿಂದ ಮೃಷ್ಟಾನ್ನ ದೊರಕಿದರೂ ಅವನ ದೊ

ಷ್ಠಸ್ತನ ಕೆಲಸದ್ದಲ್ಲ. ಯಾವಗೆ ದೊಡ್ಡಿವನೆನ ಬೇಕೆಂದರೆ, ಉದ್ಯೋಗದಿಂದ ತಾನು ಸಂಪಾದಿಸಿದ ಸಂಪದದ ಸುಖ ಭೋಗಿಸುವವನೇ, ಉದ್ಯೋಗ ಪುರುಷರಲ್ಲಿ ಪ್ರೀತಿ ಇರುವವನೇ, ಆಲಸ್ಯ ತಿರಸ್ಕಾರ ಮಾಡುವವನೇ, ಪದವಿ ಇಲ್ಲದಿದ್ದರೂ ಅಂಥವನೇ ಸರ್ವಮಾನ್ಯನೇ ಖರೆ.

---

೮೦. ನೀತಿಕಥೆ.

ಮುದಿ ನಾಯಿಯು.

ಒಂದಾನೊಂದು ಮುದಿ ನಾಯಿಯು ಪೂರ್ವದಲ್ಲಿ ಯೌವನದೊಳಗಿದ್ದಾಗ್ಗೆ ಬೇಟೆಯಲ್ಲಿ ಬಹಳ ಮೃಗಗಳನ್ನು ಹಿಡಿದು ಧಣಿಯ ಪ್ರೀತಿ ಸಂಪಾದನೆ ಮಾಡಿತ್ತು. ಆ ಸಮಯದಲ್ಲಿ ಧಣಿಯು ಕ್ಷಣಕ್ಷಣಕ್ಕೆ ಮುದ್ದುಗೊಳ್ಳುತ್ತಿದ್ದ ಉತ್ತಮೋತ್ತಮವಾದ ತಿನಿಸುಗಳ ಕೊಡುತ್ತಿದ್ದ; ಅನಂತರ ಮುಪ್ಪಿನ ಕಾಲದಲ್ಲಿ ಒಂದು ದಿವಸ ಆ ಧಣಿಯ ಸಂಗಡ ಬೇಟೆಯಾಡ ಹೋಗಲಾಗಿ, ಸಂಗಡ ಮತ್ತು ಕೆಲವು ನಾಯಿಗಳು ಇದ್ದವಲ್ಲಿ. ಅವುಗಳಿಗಿಂತಲು ಇದು ಮುಂದವರಿದು, ಒಂದು ಚಿಗರಿಯ ಗೋಮಾಳೆಯನ್ನು ಹಿಡಿಯಿತು. ಪರಂತು ಆ ನಾಯಿಯ ಕೆಲವು ಹಲ್ಲುಗಳು ಬಿದ್ದಿದ್ದವು, ಇದ್ದ ಹಲ್ಲುಗಳು ಅಗಲಾಡುತ್ತಿದ್ದವು. ಅದರಿಂದ ಘಟ್ಟ್ಯಾಗಿ ಹಿಡಿಯೋಣಾಗದ ಕಾರಣ ಆ ಚಿಗರಿಯು ಕೊಸರಿ ಕೊಂಡು ಹೋಯಿತು. ಅದು ಕಂಡು ಧಣಿಗೆ ಸಿಟ್ಟು ಬಂದು ಆ ಮುದಿ ನಾಯಿಯನ್ನು ಬಡಿಯಲಿಕ್ಕೆ ಹೊರಟನು. ಆಗ್ಗೆ ಅದು ಹೇಳಿದ್ದು: ಎಲೆಲೇ ಅಧಮನೇ, ಕ್ಷಣ ಮಾತ್ರ ಕೈ ಬಿಗಿ ಹಿಡಿ, ನಾನು ನಿನಗೆ ಪುರಾತ ಸೇವಕನು, ಇದರ ವಿಚಾರ ಏನಾದರೂ ಮಾಡು, ನಾನು ಚಿಗರಿಯನ್ನು ಹೊಡಿಯಲಿಕ್ಕೆ ಮನಸ್ಸಿನಿಂದ ಆಲಸ್ಯ ಮಾಡಿದವನಲ್ಲ, ನನ್ನ ಉಪಾಯ ನಡಿಯದ್ದಕ್ಕೆ ನಾನೇನು ಮಾಡಲಿ, ಈ ವೃದ್ಧಾಪ್ಯಕಾಲಕ್ಕೆ ನಿನ್ನ ಚಾಕರಿಯಾಗೋದಿಲ್ಲವೆಂ

ದು ನಿನಗೆ ಸಿಟ್ಟು ಹುಟ್ಟಿದರೆ ನಾನು ಹಿಂದೆ ಮಾಡಿದ ಚಾಕ್ರಿಗೆ ದೃಷ್ಟಿ ಕೊಟ್ಟು ಆ ಸಿಟ್ಟು ಕಳೆಯುವಂಥವನಾಗು.

ತಾತ್ಪರ್ಯ.

ಬಹಳವಾಗಿ ಧನಿಗಳ ಬುದ್ಧಿ ಇಂಥಾದ್ದೇ. ಎಲ್ಲಿ ಪರ್ಯಂತರ ಸೇವಕರು ಸೇವೆಗೆ ಉಪಯೋಗ ಬೀಳುತ್ತಾರೋ ಅಲ್ಲಿ ಪರ್ಯಂತರ ಧಣಿಗಳ ಪ್ರೀತಿ ಅವರ ಮೇಲಿರುತ್ತದೆ. ತಮ್ಮ ಉಪಯೋಗಕ್ಕೆ ಬೀಳದ ಹಾಗೆ ಆದರೆ ಅವರಲ್ಲಿ ಅವಕೃಪವಾಗುತ್ತದೆ. ಹೀಗೆ ಕೆಲವು ಅಧಮ ಜನರು ತಮ್ಮ ಮೇಲೆ ಹಿಂದೆ ಮಾಡಿದ ಉಪಕಾರಗಳ ಸ್ಮರಣೆಗೆ ತಾರದೇ ವಿದ್ಯಮಾನ ಕಾಲದಲ್ಲಿ ಅನುಪಯೋಗ ಬಿದ್ದರೆ ಅಂಥವನು ಸ್ವಲ್ಪ ಕೆಲಸದವನೆಂದು ವಿಪರೀತವಾಗಿ ಅವನ ಮೇಲೆ ಅಪಕಾರ ಮಾಡಲಿಕ್ಕೆ ನೋಡುತ್ತಾರೆ.

---

೪೧. ನೀತಿಕಥೆ.

ಬೇನೆಯ ಹಾಳಿಹದ್ದು.

ಹಾಳಿಹದ್ದಿನ ಮಗನು ಬಹಳ ದಿವಸ ಬೇನೆ ಬಿದ್ದು ಅಗದಿ ಶಾಂತಿ ಪಡಲಿಲ್ಲ. ಆ ಸಮಯದಲ್ಲಿ ತನ್ನ ಪೂರ್ವ ಕರ್ಮವನ್ನು ನೆನಸಿಕೊಂಡು ಬಹಳ ಚಯಸ್ಥನಾಗಿ ತನ್ನ ತಾಯಿಯ ಸಂಗಡ ಮಾತನಾಡಿದ್ದು: ಅವ್ವ ನನ್ನ ದೆಸೆಯಿಂದ ದೇವರಿಗೆ ಬೇಡಿ ಕೊಂಡು ಭಕ್ತಿಯಿಂದ ಇದ್ದು ನನಗೆ ಏನಾದರೂ ವ್ರತ ಉಪೋಷ್ಯಗಳ ಮಾಡೋದಕ್ಕೆ ಹೇಳ ಬಾರದೇ ಎನ್ನಲು, ಅಪ್ಪಯ್ಯನೇ, ಇದು ಖರೆ, ದೇವರು ನಿನಗೆ ಬೇನೆಯನ್ನು ಹಗುರ ಮಾಡ್ಯಾನು ಎಂಬ ಭರವಸ ನನಗೆ ಕಾಣೋದಿಲ್ಲ; ನೀನು ಜನ್ಮದಾರಭ್ಯವಾಗಿ ಕೊಲ್ಲುವ ಕರ್ಮವನ್ನೇ ಮಾಡುತ್ತಾ ಬಂದಿ; ಜನರ ಪದಾರ್ಥವನ್ನು ಹರಣ ಮಾಡೋದಕ್ಕೆ ನೀನು ಹಿಂದೆ ಮುಂದೆ ನೋಡುವವನಲ್ಲ; ಈ ಹೀನ ಕರ್ಮದ ಪಶ್ಚಾತ್ತಾಪ ನಿನ್ನ ಮನಸ್ಸಿನಲ್ಲಿ ಏನೂ ತೋರಲಿಲ್ಲ; ಆದರೆ ನಾನಾದರೂ ಯಾವ ಮೋರೆ ಇಟ್ಟು ಕೊಂಡು ಪ್ರಾರ್ಥನೆ ಮಾಡಲಿ ಅಂದಳು.

ತಾತ್ಪರ್ಯ.

ನನ್ನಿಂದ ಬಹಳ ದುಷ್ಕರ್ಮಗಳು ಆಗೆವೆ; ಇನ್ನು ಮೇಲೆ ನನಗೆ ಯಾವ ಗತಿಯಾದೀತು ಎಂಬ ವಿಚಾರದೊಳಗೆ ಬಿದ್ದು, ಮರಣಕಾಲಕ್ಕೆ ಮಹಾ ಭಯಗೊಂಡೇನು ಎಂದು ಲಕ್ಷ್ಯೆಯಲ್ಲಿದ್ದು, ಈಗಲೇ ಯಾಕೆ ಸಾವಧಾನನಾಗ ಬಾರದು? ರೋಗದಿಂದ ಗಳಿತನಾಗಿ ಮುಂದೆ ಪಾಪ ಮಾಡೋದಕ್ಕೆ ಶಕ್ತಿಹೀನನಾದ ಕಾಲದಲ್ಲಿ ಮಾಡಿದ ಪಶ್ಚಾತ್ತಾಪ ಖರೆಯಲ್ಲ. ಸತ್ಯವಾದ ಪಶ್ಚಾತ್ತಾಪದ ಹೊರ್ತು ದೇವರು ಕ್ಷಮೆ ಮಾಡೋದಿಲ್ಲ. ಯಾಕಂದರೆ ಇಂಥಾ ಪಾಪಗಳ ಕ್ಷಮೆ ಮಾಡಿದರೆ ಪಾಪಗಳು ಹ್ಯಾಗೆ ಕಡಿಮೆಯಾಗ ಬೇಕು. ಆದ ಕಾರಣ ತನ್ನ ಅಂತ್ಯದ ವೇಳ್ಯಕ್ಕೆ ಸುಖವನ್ನು ಇಚ್ಛೈಸುವ ಪುರುಷನು ಪೂರ್ವದಲ್ಲೇ ಸಾವಧಾನನಾಗಿ ಪಾಪಕೃತ್ಯಕ್ಕೆ ಕೈಗಳ ಬಿಗಿದು ಹಿಡಿದಿರ ಬೇಕು.

---

೪೨. ನೀತಿಕಥೆ.

ಸಿಂಹವೂ ಇಲಿಯೂ.

ಒಂದು ಸಿಂಹವು ಉಷ್ಣ ಕಾಲದಲ್ಲಿ ಅರಣ್ಯದೊಳಗೆ ಬಂದು ಶೀತಳವಾದ ಸ್ವಚ್ಛವಾದ ಮಾವಿನ ವೃಕ್ಷದ ನೆರಳಿನಲ್ಲಿ ಸುಸ್ತುಗೊಂಡು ಮಲಗಿರಲಾಗಿ ಅಲ್ಲಿರುವ ಇಲಿಗಳು ಬಹಳ ಉಪದ್ರ ಕೊಡಲಿಕ್ಕೆ ಪ್ರಾರಂಭ ಮಾಡಿದವು. ಅದರಿಂದ ಸಿಂಹವು ಎಚ್ಚರಾಗಿ ತನ್ನ ಕರಪಂಜರದಿಂದ ಒಂದು ಇಲಿಯನ್ನು ಹಿಡಿಯಿತು. ಹಿಡಿದು ಹಿಸಿಕಿ ಬಿಡೋ ಸಮಯದಲ್ಲಿ ಇಲಿಯು ಸಿಂಹಕ್ಕೆ — ಏ ಮಹಾರಾಯನೇ, ನೀನು ದೊಡ್ಡವನೂ ಸಮಸ್ತ ಮೃಗಗಳಿಗೂ ಅರಸನೂ, ನಾನು ನಿನ್ನ ಮುಂದೆ ಕೇವಲ ಕುಚ್ಚಿತನೂ ಬಡವನೂ, ನನ್ನ ರಕ್ತದಿಂದ ನಿನ್ನ ಕೈಗಳು ಮುಟ್ಟುಚೆಟ್ಟಾಗ ಬಾರದು, ನನಗೆ ಜೀವದಾನ ಕೊಡುವದು ಸ್ವಾಮಿಯವರಿಗೆ ಉಚಿತವದೆ ಎಂದು ಪ್ರಾರ್ಥನೆ ಮಾಡಿ ಹೇಳಲು, ಆ ಮಾತು ಕೇಳಿದಾಕ್ಷಣ ಸಿಂಹರಾಜಗೆ ಕರುಣ ಹುಟ್ಟಿ, ಇಲಿಯನ್ನು ಬಿಟ್ಟು ಕೊಟ್ಟಿತು. ಮುಂದೆ ಕಾಲಾಂತರದಲ್ಲಿ ಅದೇ

ಸಿಂಹವು ಅರಣ್ಯದಲ್ಲಿ ತಿರುಗುತ್ತಾ ಇರಲಾಗಿ, ಅದೇ ಮಾವಿನ ಗಿಡದ ಸಮೀಪದಲ್ಲಿ ಒಬ್ಬ ಬೇಟೆಗಾರನು ಬಲೆಯನ್ನು ಒಡ್ಡಿ ಇರಲಿಕ್ಕೆ ಅದರೊಳಗೆ ಶಿಕ್ಕ ಬಿತ್ತು. ಆಗ ತನಗಿರುವ ಪರಾಕ್ರಮವೆಲ್ಲಾ ಮಾಡಿ ನೋಡಿತು. ಏನಂದರೂ ತನ್ನನ್ನು ಬಿಡಿಸಿ ಕೊಳ್ಳಲಿಕ್ಕೆ ಆಗಲಿಲ್ಲ. ಸಿಂಹವು ಅಚೈತನ್ಯವಾಗಿ ನಿರಾಶೆಯಿಂದ ದೊಡ್ಡ ಸ್ವರ ಮಾಡಿ ಕೂಗಲು, ಆ ಶಬ್ದ ಈ ಇಲಿಯು ಕೇಳಿ ಓಡಿ ಬಂದು ಅದರ ಸಮೀಪಕ್ಕೆ ಹೋಗಿ, ಏ ಮಹಾರಾಜ ಸಿಂಹಭೂಪತಿಯೇ, ನಾನು ಬಂದೆ, ನೀನು ಇನ್ನು ಮೇಲೆ ಅಂಜ ಬೇಡ, ಸ್ವಸ್ಥ ಚಿತ್ತದಿಂದ ಇರು ಎಂದು ಹೇಳಿ, ಇಲಿಯು ತನ್ನ ದಂತಗಳಿಂದ ಬಲೆಯ ಗಂಟುಗಳ ಕತ್ತರಿಸಿ ಸಿಂಹಕ್ಕೆ ಮಾರ್ಗವನ್ನು ಮಾಡಿ ಕೊಟ್ಟಿತು.

ತಾತ್ಪರ್ಯ.

ದೊಡ್ಡವರಿಗಾದರೂ ಸಮಯೋಚಿತದಿಂದ ಸಣ್ಣವನ ಕೈಯಿಂದ ಮಹತ್ಕಾರ್ಯವಾಗುತ್ತದೆ. ಆದ್ದರಿಂದ ತನ್ನ ಆಜ್ಞೆಯೊಳಗೆ ಇರುವವರ ಮೇಲೆ ಆದರದಿಂದ ಕೃಪೆಯನ್ನೆ ಮಾಡುತ್ತಿರ ಬೇಕು. ಸಣ್ಣವರ ಕೈಯಿಂದಲೂ ಉಪಕಾರವಾಗುತ್ತದೆ. ವಿಭವಂಗಳು ಸರ್ವಕಾಲ ಸಮನಾಗಿ ನಡಿಯೋದಿಲ್ಲ. ಆದ ಕಾರಣ ಸರ್ವ ಜನಕ್ಕ ಉತ್ತಮ ಭಾವದಿಂದಲೇ ನಡಿಸ ಬೇಕು. ತನಗೆ ದೇವರು ನಡಿಸಿದ ಕಾಲದಲ್ಲಿ ಜನರುಗಳಿಗೆ ಉಪಕಾರ ಮಾಡಿ ಇಟ್ಟಿದ್ದರೆ ತನ್ನ ಆಪತ್ಕಾಲದಲ್ಲಿ ಆ ಜನರೊಳಗಿಂದ ಒಬ್ಬನಾದರೂ ಉತ್ತಮ ಪುರುಷನು ಹೊರಟಾನು. ಆ ಒಬ್ಬನ ಸಾಹಿತ್ಯದಿಂದಲೇ ತನ್ನ ಸರ್ವ ಸಂಕಟಗಳು ದೂರವಾದಾವು.

---

೪೨. ನೀತಿಕಥೆ.

ಇಲಿಗೆ ಸಿಂಹ ಲಗ್ನವಾದದ್ದು.

ಹಿಂದೆ ಹೇಳಿದ ಕಥೆಯಲ್ಲಿ ಸಿಂಹವು ಬಲೆಯಿಂದ ಬಿಡಿಸಿ ಕೊಂಡು ಹೋದ ಬಳಿಕ ಆ ಇಲಿಗೆ ಪ್ರಸನ್ನನಾಗಿ ಎಲೇ ನಿನ್ನ ಉಪಕಾರವೇ ನನ್ನ ಮೇಲೆ ಬಹಳವಾಯಿತು; ಆದ್ದರಿಂದ ನಿನಗೆ ಬೇಕಾದ್ದು ಬೇಡು, ಕೊಡು

ತ್ತೇನೆ ಎನ್ನಲಾಗಿ, ಆ ಮಾತು ಕೇಳಿ, ಇಲಿಯು ಬಹಳ ಉಬ್ಬಿ ಕೊಂಡು ತನ್ನ ಯೋಗ್ಯತೆಗೆ ಸರಿಯಾಗಿ ಏನು ಬೇಡ ಬೇಕು, ಏನು ಬೇಡ ಬಾರದು ಎಂಬ ವಿಚಾರ ಮಾಡದಲೇ ಸಿಂಹಕ್ಕೆ ವಿಜ್ಞಾಪನೆ ಮಾಡಿ ಕೊಂಡಿತು: ಮಹಾರಾಯ ತಾವು ಸಂತೋಷದಿಂದ ಬೇಕಾದ್ದು ಬೇಡು ಅನ್ನುತ್ತೀರಲ್ಲ; ಅದರಿಂದ ನಾನು ಹಿಡೆಯ ಮಾಡದಲೇ ಬೇಡುತ್ತೇನೆ, ನನಗೆ ನಿಮ್ಮ ಮಗಳ ಕೊಡ ಬೇಕು ಅಂಬೋಣಾ, ಸಿಂಹವು ಆ ಶಬ್ದವನ್ನು ಕೇಳಿದಾಕ್ಷಣಕ್ಕೆ ಮನಸ್ಸಿಗೆ ಬಹಳ ಅಸಹ್ಯ ತೋರಿತು. ಆದರೆ ವಚನ ಶಿಕ್ಷ ಮೂಲಕದಿಂದ ಉಪಾಯವಿಲ್ಲದೆ ಕೊಟ್ಟೇನೆಂದು ಹೇಳಿ ತನ್ನ ಮಗಳನ್ನ ಇವಗೆ ಸ್ವಾಧೀನ ಮಾಡೋದಕ್ಕೆ ಕರತರಲಾಗಿ, ಆ ಸಿಂಹನ ಮಗಳು ತನ್ನ ತಾರುಣ್ಯದ ದುಂದಿನಿಂದ ನಡದು ಬರುತ್ತಿರಲಾಗಿ ಅವಳ ಕಾಲುಸ್ಪರ್ಶದಿಂದ ತತ್ಕಾಲಕ್ಕೆ ಇಲಿಯು ಸತ್ತು ಹೋಯಿತು.

ತಾತ್ಪರ್ಯ.

ತನ್ನಲ್ಲಿ ಸಾರಾಸಾರ ವಿಚಾರವಿಲ್ಲದೇ ಹೋಗಲಾಗಿ ಏನಾದರೂ ಅಸಾಧ್ಯ ಪದಾರ್ಥ ಇಚ್ಛೈಸಿ ಕೊಂಡು ತಾನು ದುಃಖದಲ್ಲಿ ಬೀಳುತ್ತಾನೆ. ಸಾರಾಸಾರವಿಲ್ಲದೆ ದೊಡ್ಡ ಸಾರ್ವಭೌಮರಾಜನಾದ ಕಾಲಕ್ಕಾದರೂ ತನಗೆ ಸುಖ ಮಾಡಿ ಕೊಳ್ಳುವದಕ್ಕೆ ಶಕ್ತನಾಗುವದಿಲ್ಲ. ತಾನು ಹಾಗೆ ಇರುವದರಿಂದ ಕೇವಲ ಬಡವನಂತೆ ದುಃಖ ಅನುಭವಿಸುತ್ತಾನೆ. ಮತ್ತು ತುಚ್ಛನಾದ ಬಡವನಾದರೂ ಸಾರಾಸಾರವಿಚಾರದ ಯೋಗದಿಂದ ಈ ರಾಜಸಂಪತ್ತು ಸುಖವಾದರೂ ಅನುಭೋಗಿಸುತ್ತಾ ಇದ್ಧಾನೆ. ಆ ಸಾರಾಸಾರವಿಚಾರದ ಲಕ್ಷಣ ಎಂತೆಂದರೆ ನಾನು ಯಾರು, ನನ್ನ ಯೋಗ್ಯತೆ ಏನು, ಎಷ್ಟರಿಂದಾಗುತ್ತದೆ ಇತ್ಯಾದಿ ವಿಚಾರವ ನೋಡಿ ಹೆಜ್ಜೆ ಇಡುವದೇ ಸಾರಾಸಾರ ವಿಚಾರವು.

---

೮೪. ನೀತಿಕಥೆ.

ಮೊಲವೂ ಕಪ್ಪೆಯೂ.

ಒಂದಾನೊಂದು ಸಮಯದಲ್ಲಿ ಪ್ರಚಂಡವಾಳಿಯು ಬೀಸುತ್ತಿರಲಾ

ಗಿ, ಗಿಡಗಳೆಲ್ಲಾ ಅಗಳಾಡುತ್ತವೆ. ನೆಲದ ಮೇಲೆ ಇದ್ದ ಕಸಕಡ್ಡಿ ಹಾರುತ್ತವೆ. ಧೂಳಿಯಿಂದ ದಿಕ್ಕುಗಳು ಮುಚ್ಚಿದವು. ಅದರನ್ನ ಕಂಡು ಒಂದು ಪೊದೆಯೊಳಗಿನ ಮೊಲಗಳು ಭಯದಿಂದ ಗಡಬಡಿಸಿ ಅತಿ ಪ್ರಯಾಸದಿಂದ ಬೇಲಿಯನ್ನು ಹಾರಿ ಹೊರಗೆ ಬಿದ್ದು ಜೀವ ಉಳಿಸಿ ಕೊಂಡು ಓಡುತ್ತಾ ಹೋಗೋ ಸಮಯದಲ್ಲಿ ಮುಂದೆ ಒಂದು ನದಿ ಅಡ್ಡ ಬಂತು. ಆ ಕಾಲದಲ್ಲಿ ಮೊಲವು ಕಷ್ಟಿಯಾಗಿ ಅಂಬುತ್ತದೆ: ಎಲೋ ಈಗ ದಾರಿ ಕಷ್ಟಾಯಿತು; ಎತ್ತ ಹೋಗುತ್ತೇವೋ ಅತ್ತಗಡೆಗೆ ವಿಪತ್ತುಗಳು ನಮ್ಮ ಬೆನ್ನು ಹತ್ತುತ್ತವೆ; ಈ ರೀತಿ ಸಂಕಟದೊಳಗೆ ಕಾಲ ಕಳಿಯೋದರಕಿಂತಲೂ ಈ ನದಿಯಲ್ಲಿ ಬಿದ್ದು ಜೀವ ಕೊಡುವದು ಉತ್ತಮವೆಂದು ಸರ್ವ ಮೊಲಗಳು ನಿಶ್ಚಯ ಮಾಡಿ ಕೊಂಡು ಆ ನದಿಯ ಧಡಕ್ಕೆ ಹೋಗಲಾಗಿ, ಅಲ್ಲಿರುವ ಒಂದು ಕಪ್ಪೆಯು ನೀರು ಬಿಟ್ಟು ಹೊರಗೆ ಬಂದಿತ್ತು. ಈ ಮೊಲಗಳನ್ನ ಕಂಡು ಆ ಕಪ್ಪೆಯು ನೀರೊಳಗೆ ಹಾರಿ ತಳಕ್ಕೆ ಹೋಗಿ ಕುಳಿತು ಕೊಂಡಿತು. ಅದನ್ನು ಕಂಡು ಆ ಮೊಲಗಳೊಳಗಿನ ಒಂದು ಮುದಿ ಮೊಲವು ಆ ಕಪ್ಪೆಯ ಕಡಿಗೆ ಕೈ ತೋರಿಸಿ ಎಲೇ ಮೊಲಗಳಿರಾ, ಅದನ್ನು ನೋಡಿರಿ, ಭಯವೆಂಬುವದು ಸರ್ವರ ಬೆನ್ನಿಗೂ ಹತ್ತಿಯದೆ; ಹೀಗಿರಲಾಗಿ ನಾವು ವಿಪತ್ತಿಗೆ ಅಂಜಿ ಜೀವ ಕೊಡೋದರಕಿಂತಲೂ ಧೈರ್ಯ ಹಿಡಿದು ಬಂದ ದುಃಖ ಸಹಿಸಿ ಕೊಂಡು ಸಂಕಟಕ್ಕೆ ಯಾಕೆ ಇದುರಾಗ ಬಾರದು ಎಂದು ಹೇಳಿತು. ಈ ಮಾತು ಎಲ್ಲಾ ಮೊಲಗಳು ಕೇಳಿ ಧೈರ್ಯ ತಾಳಿ ಅಲ್ಲೇ ನಿಂತಿರಲಾಗಿ, ಘಾಳಿಯು ಶಾಂತವಾಗಿ, ಅಲ್ಲೇ ಸ್ವಸ್ಥವಾದವು.

ತಾತ್ಪರ್ಯ.

ಎಷ್ಟೋ ಮಂದಿಗಳು ನಾನಾಪ್ರಕಾರದ ಭಯ ಕಲ್ಪಿಸಿ ಕೊಂಡು ಅಯ್ಯೋ ಹ್ಯಾಗೆ ಆದೀತು, ಏನಾದೀತು ಎಂಬುವಂಥಾ ಚಿಂತೆಯಿಂದ ರಾತ್ರಿಹಗಲು ಕೂಡಾ ಕಳೆಯುತ್ತಾರೆ! ಸಕಲ ದುಃಖಗಳು ತಮ್ಮ ಬೆನ್ನನ್ನೇ ಹತ್ತಿಯುವೆ. ಉಳಿದ ವಿಶ್ವವು

ಸುಖಿಯದೇ ಎಂದು ತಮ್ಮ ಚಿತ್ತದಲ್ಲಿ ಕಾಣಿಸುತ್ತದೆ. ಅವರು ಯಾರಿಗೆ ಸುಖಿಗಳು ಎಂದು ಕಲ್ಪಿಸುತ್ತಾರೋ ಅವರ ದುಃಖಗಳನ್ನು ಈ ಕಲ್ಪಿಸುವವರು ನೋಡಹೋದರೆ ನಾವೇನಿದ್ಧೇವೆ, ನಮ್ಮದೇ ಚಲೋದು ಎಂದು ಅವರಿಗೆ ತೋರುವದು. ದೇವರು ತನ್ನ ಕಡೆಯಿಂದ ಸುಖ ದುಃಖ ಸರ್ವರಿಗೂ ಸಮಾ ಹಂಚಿ ಹಾಕಿರುತ್ತಾನೆ. ಅದು ತಮ ತಮಗೆ ಹೆಚ್ಚು ಕಡಿಮೆಯಾಗಿ ಕಾಣಿಸುತ್ತದೆ; ಅವರ ಹುಚ್ಚುತನವೆಂದು ತಿಳಿಯ ಬೇಕು.

---

೮೫. ನೀತಿಕಥೆ.

ಕಪ್ಪೆಯೂ ನರಿಯೂ.

ಒಂದಾನೊಂದು ದಿನ ಬಹುಭಾಷೆ ಎಂಬ ಕಪ್ಪೆಯು ಕೆರೆಯನ್ನು ಬಿಟ್ಟು ಹೊರಗೆ ಹೊರಟು ಒಂದು ಉನ್ನತ ಸ್ಥಳದಲ್ಲಿ ಹೋಗಿ ಕುಳಿತು ಶಾಬೂತ ಪಕ್ಷಿಗಳ ಸಮಾಚಾರ ತೆಗದು ಕೊಂಡು ಅವುಗಳು ಕೇಳೋ ಹಾಗೆ ದೊಡ್ಡ ಸ್ವರದಿಂದ ಹೇಳುತ್ತದೆ: ಎಲೋ ಪಕ್ಷಿಗಳಿರಾ, ಕೇಳುತ್ತೀರಾ, ನಾನು ಘನವೈದ್ಯನಾಗಿದ್ದೇನೆ, ಯಾವ ತರದ ಎಂಥಾ ರೋಗವಿರಲಿ, ಆ ರೋಗವನ್ನು ದೂರ ಮಾಡಲಿಕ್ಕೆ ನನಗೆ ಬರುತ್ತದೆ; ಹೀಗೆಂದು ತನ್ನ ಮಾತನ್ನಾಡಿ ತನ್ನ ಪ್ರಶಂಸಾ ತೋರಿಸುವದಕ್ಕೆ ಕೆಲವು ಶಾಸ್ತ್ರದ ಒಳಗಿನ ವಚನಗಳು ಎಂದು ಕುರುಕುಟುಕು ಎಂಬೋಣಾ, ಅ ಶಬ್ದ ಶಾಬೂತ ಪಕ್ಷಿಗಳು ಕೇಳಿದವು. ಆದರೆ ಅದರ ಅರ್ಥ ತಿಳಿಯದೆ ಹೋಯಿತು. ಇವನು ಬಲ್ಲಿಂಥಾ ದೊಡ್ಡ ವೈದ್ಯನಾಗಿದ್ಧಾನೆ ಎಂದು ತಿಳುಕೊಂಡು ಆ ಮೇಲೆ ಆ ಕಪ್ಪೆಯು ಏನೇನು ಅನ್ನುತ್ತದೋ ಅದಕ್ಕೆಲ್ಲಾ ಸರ್ವ ಶಾಬೂತಗಳು ತಲೆಗಳ ತೂಗುತ್ತಾ ಇದ್ದವು. ಅದನ್ನ ಅಲ್ಲಿರುವ ಒಂದು ನರಿಯು ಕಂಡು ಈ ನಷ್ಟಕೃತ್ಯ ಸಹಿಸದೆ ಹೋಗಿ ಕ್ರೂರತ್ವದಿಂದ ಕಪ್ಪೆಯ ಕೂಡೆ ಮಾತನಾಡಿದ್ದು: ಎಲೋ ಮೂರ್ಖ, ನಿನ್ನ ತುಟಿಗಳು ಬಾತಂತೆ ಉಬ್ಬಿ ಕೊಂಡವೆ, ನಿನ್ನ ಸರ್ವಾಂಗದಲ್ಲೂ ಕಲೆಗಳು ಬಿದ್ದಿದ್ಧಾ

ವೆ; ನಿನ್ನ ಮೋರೇ ಮೇಲೆ ತೇಜಸ್ಸು ಯಾಕೆ ಕಾಣೋದಿಲ್ಲ? ಇಂಥವನಾದ ನೀನು ಎರಡನೆಯವರ ರೋಗಗಳ ಕಳದೇನು ಎಂದು ಮಾತನಾಡುತ್ತಿದ್ದಿ, ನಿನ್ನ ಮಾತಿಗೆ ನಿನಗೆ ಹ್ಯಾಗೆ ನಾಚಿಕೆ ಬರುವದಿಲ್ಲವೋ?

ತಾತ್ಪರ್ಯ.

ತಮ್ಮ ಶರೀರದಲ್ಲಿದ್ದ ದುರ್ಗುಣಗಳನ್ನು ನೆಟ್ಟಗೆ ಮಾಡಲಾಗದವರು ಎರಡನೆಯವರಿಗೆ ನೆಟ್ಟಗೆ ಮಾಡುತ್ತೇವೆಂದು ಭರಕ್ಕೆ ಬೀಳ ಬಾರದು. ಎರಡನೆಯವರಿಗೆ ಉಪದೇಶ ಮಾಡುವವರ ಆಚರಣೆ ಹೀಗಿರ ಬೇಕು: ಲೋಕದಲ್ಲಿ ಅವರ ಮೇಲೆ ವಿಕಲ್ಪ ಬರ ಬಾರದು, ಅಂದರೆ ಅವರ ಉಪದೇಶ ಮಾನ್ಯವಾದೀತು. ಯಾವ ದೋಷ ಬಿಡ ಬೇಕೆಂದು ಎರಡನೆಯವರಿಗೆ ಉಪದೇಶ ಮಾಡುತ್ತಾನೋ ಆ ದೋಷದಲ್ಲಿ ತಾನು ಆಪ್ತನಾಗಿರುವಂಥಾ ಪುರುಷನ ಮಾತು ಹ್ಯಾಗೆ ಮಾನ್ಯವಾದೀತು, ಅವಗೆ ವಿನೋದವಾಗದಲೇ ಹ್ಯಾಗೆ ನಿಂತೀತು.

---

೮೬. ನೀತಿಕಥೆ.

ಕಾಗೆಯು ನವಲಿನ ಗರಿ ಹಚ್ಚಿ ಕೊಂಡದ್ದು.

ಒಂದಾನೊಂದು ಕಾಗೆಯು ನಮ್ಮ ಜಾತಿ ಬಹು ತುಚ್ಛವು, ನಮ್ಮ ಕುಲದವರು ನೀಚರು, ಇವರ ಸಮಾಗಮಾ ಮಾಡ ಬಾರದು, ನಾನು ದೊಡ್ಡವನಾಗಿರ ಬೇಕು ಎಂದು ಮನಸ್ಸಿನಲ್ಲಿ ತಂದು ನೌಲಿನ ಗರಿಗಳ ಕೂಡಿಸಿ ಕೊಂಡು ಅವನ್ನು ತನ್ನ ಪಕ್ಕದಲ್ಲಿ ಚುಚ್ಚಿ ಕೊಂಡು ನೌಲಿನ ಆಕಾರವಾಗಿ ನೌಲಿನ ಹಿಂಡಿನೊಳಗೆ ಹೊಕ್ಕಿರಲಾಗಿ, ನೌಲುಗಳು ಇದನ್ನು ನೋಡಿದಾಕ್ಷಣಕ್ಕೆ ಗುರ್ತು ಹಿಡಿದು ಅದರ ಸುತ್ತ ಮುತ್ತಿ ಕೊಂಡು ಪ್ರಥಮದಲ್ಲಿ ತಮ್ಮ ಮುಖದ ಚುಂಚುಗಳಿಂದ ಕುಕ್ಕಿ ಕುಕ್ಕಿ ಜೀರ್ಣಮಾಡಿ ಅದು ಮೈಗೆ ಹಚ್ಚಿ ಕೊಂಡ ಸುಳ್ಳುಗರಿಗಳ ಕಿತ್ತು ಕೊಂಡು ತಮ್ಮ ಹಿಂಡಿನೊಳಗಿಂದ ಹೊರಗೆ ಹಾಕಿದವು. ಈ ಅವಸ್ಥೆಯಾದ ಬಳಿಕ ಆ ಕಾಗೆಯು ತನ್ನ ಜಾತಿಯ ಹಿಂಡಿನೊಳಗೆ ಕೂಡ ಬೇಕೆಂದು ಹೋಗಲಾಗಿ, ಆ ಹಿಂ

ಡುಗಳಿಗೆ ಈ ಕಾಗೆಯ ಪೂರ್ವದ ಸೋಗು ಅಂಕಿತ ಇತ್ತಲ್ಲಾ; ಆ ಮೂಲಕದಿಂದ ಇದನ್ನು ತಮ್ಮ ಸಮೀಪಕ್ಕೆ ಬರಗೊಡಲಿಲ್ಲ; ಮತ್ತು ಆ ಹಿಂಡಿನೊಳಗಿನ ಒಂದು ಕಾಗೆಯು ಈ ಕಾಗೆಗೆ ಛೀ ಥೂ ಹಳೀ ಎಂದು ಹೇಳಿ, ಎಲೋ ಮೂರ್ಖನಾದಂಥಾತನೆ, ದೇವರು ನಿನ್ನನ್ನು ಇಟ್ಟ ಸ್ಥಿತಿಯನ್ನು ನೀನು ಬಿಡದಲೇ ಇದ್ದರೆ ಇಂದು ನಿನಗೆ ಅಪಮಾನ ಯಾಕಾಗತ್ತಿತ್ತು ಎಂದು ಮಾತನಾಡಿತು.

ತಾತ್ಪರ್ಯ.

ದೇವರು ತನ್ನನ್ನು ಇಟ್ಟ ಸ್ಥಿತಿ ಕೆಟ್ಟದ್ದು ಎಂದು ತಿಳಿದು ಎರಡನೆಯವರ ಮಹತ್ವವನ್ನು ಅಪೇಕ್ಷಿಸಿ ಸೋಗು ಹಾಕಲಿಕ್ಕೆ ಹೋದದ್ದೇ ಉಂಟಾದರೆ ದುಃಖದಲ್ಲಿ ಬೀಳುತ್ತಾನೆ. ಮತ್ತೆ ತನ್ನ ಸರಿ ಸಮಾನ ಮನುಷ್ಯರಲ್ಲಿ ತಿರಸ್ಕಾರವಾಗುತ್ತಾ ಇದ್ಧಾನೆ. ಇಂಥಾ ಪುರುಷನು ಉಭಯ ಕಡೆಯಿಂದಲೂ ಭ್ರಷ್ಟನಾಗುತ್ತಾನೆ. ಅನ್ಯರು ಇವನ್ನ ತಾತ್ಸಾರ ಮಾಡಿ ಅಪಹಾಸ್ಯ ಮಾಡುತ್ತಾರೆ. ತನ್ನವರು ತಮಗೆ ನಾಚುತ್ತಾರೆಂದು ಅಂಗೀಕಾರ ಮಾಡೋದಿಲ್ಲವು.

---

೮೨. ನೀತಿಕಥೆ.

ಸಿಂಹವೂ ಮೃಗಗಳೂ.

ಒಂದಾನೊಂದು ಸಮಯದಲ್ಲಿ ಸಿಂಹಕ್ಕೂ ಕೆಲವು ಮೃಗಗಳಿಗೂ ಕೂಡಾ ಕರಾರು ಆಯಿತು, ಏನಂದರೆ: ನಾವು ಸರ್ವರೂ ಒಂದೇ ಚಿತ್ತದಿಂದ ಕೂಡಿ ನಡಿಯ ಬೇಕು, ಶಿಕ್ಕಿದ ಪದಾರ್ಥವನ್ನು ಸಮವಾಗಿ ಹಂಚಿ ಕೊಳ್ಳ ಬೇಕು. ಈ ಪ್ರಕಾರ ಮಾತು ಮುಗಿದ ಮೇಲೆ ಒಂದು ದಿವಸ ಸಿಂಹವೂ ನರಿಯೂ ತೋಳವೂ ಕತ್ತೇಖರನೂ ಈ ನಾಲ್ಕು ಮಂದಿಯೂ ಕೂಡಿ ಒಂದು ಚಿಗರಿಯನ್ನು ಕೊಂದರು. ಅದನ್ನ ನರಿಯು ನಾಲ್ಕು ಪಾಲು ಮಾಡಿತು. ಆ ಸಮಯದಲ್ಲಿ ಸಿಂಹವು ಮುಂದಕ್ಕೆ ಬಂದು ನಿಂತು ನಾಲ್ಕು ಭಾಗದ ಒಳಗೆ ಒಂದು ಭಾಗದ ಕಡೆಗೆ ತನ್ನ ಬೊಟ್ಟು ತೋರಿಸಿ

ಹೇಳಿದ್ದು: ಎಲೋ ಕೇಳುತ್ತೀರಾ, ಈ ಭಾಗ ನನಗೆ ಕೊಡಿರಿ, ತಕ್ಕೊಳ್ಳುತ್ತೇನೆ, ಇದಲ್ಲದೆ ಇನ್ನೊಂದು ಪಾಲು ನಾನೇ ತಕ್ಕೊಳ್ಳ ಬೇಕು, ಯಾಕಂದರೆ ನನ್ನ ಸಾಮರ್ಥ್ಯದಿಂದ ನಿಮ್ಮ ಪರಾಕ್ರಮ. ಮತ್ತು ಮೂರನೇ ಭಾಗದ ಕಡೆಗೆ ನೋಡಿ ತಲೆದೂಗಿ ಅಂದದ್ದು: ಇದು ನನ್ನದು, ಈ ಪಾಲು ತಕ್ಕೊಳ್ಳಲಿಕ್ಕೆ ಕಾರಣವೇನಂದರೆ, ನೀವು ಸಮಸ್ತರೂ ನನಗೆ ಸೇವಕರು, ನಾನು ನಿಮಗೆ ಅರಸನು; ಆ ಪಕ್ಷದಲ್ಲಿ ನೀವು ನನಗೆ ಭಯ ಭಕ್ತಿಯಿಂದ ಕೊಟ್ಟರಂತು ಸರಿ; ನಾಲ್ಕನೇ ಭಾಗವೋ ಎಂದರೆ ನೀವು ತಿಳಿದವರೇ ಇದ್ಧೀರಿ, ವಿದ್ಯಮಾನದಲ್ಲಿ ನನಗೆ ಅಡಚಣಿಯ ಸಮಯವಿದೆ, ನಿಮ್ಮ ಸಮುದಾಯದ ದೆಸೆಯಿಂದ ನನ್ನ ಬದೀಲಿ ಭಕ್ಷಿಸಲಿಕ್ಕೆ ವಿಶೇಷವಾಗಿ ಆಹಾರವಿಲ್ಲ, ಈ ಲಕ್ಷಣ ತಿಳಿದು ನನ್ನ ದುಸಕ್ಕೆ ಈ ನಾಲ್ಕನೇ ಭಾಗ ಜತನ ಮಾಡಿ ಇಡೋದು ನಿಮಗೆ ಸಹಜ ಮರ್‍ಯಾದೆಯೇ ಸರಿ; ಯಾಕಂದರೆ ಮುಂದೆ ಅಡಚಣಿ ಬಿದ್ದ ಸಮಯಕ್ಕೆ ಸಂಗ್ರಹವನ್ನು ಇಂದೇ ಮಾಡಿ ಇಡ ಬೇಕು ಎಂಬ ನೀತಿಯುಂಟಾಗಿ, ನಾನು ಹೇಳೋ ಮಾತು ನಿಮಗೆ ಸಮರ್ಪಕ ತೋರೀತು; ಇಲ್ಲವೆಂದರೆ ಅದರೊಳಗೆ ನನ್ನದೇನೂ ಹೋಗೋದಿಲ್ಲ, ನಿಮ್ಮದೇ ನಾಶವಾದೀತು; ಈ ಲಕ್ಷಣ ಲಕ್ಷ್ಯದಲ್ಲಿ ತರುವಂಥವರಾಗಿರಿ ಎಂದು ಹೇಳಿತು.

ತಾತ್ಪರ್ಯ.

ಬಲಹೀನಗೂ ಬಲಿಷ್ಠಗೂ ಆದ ಏಕತ್ವವು ಬಹಳ ದಿವಸ ನೆಟ್ಟಗೆ ನಡಿಯೋದಿಲ್ಲವು. ಬಲಿಷ್ಠನು ಪ್ರಥಮದಲ್ಲಿ ಒಂದುಗೂಡೋ ವೇಳ್ಯಕ್ಕೆ ಆಣೇ ಪ್ರಮಾಣಗಳ ಮಾಡುತ್ತಾನೆ. ಆದರೆ ಸಮಯ ಸಾಧಿಸಿದ ಕಾಲಕ್ಕೆ ಕ್ಲೃಪ್ತ ಮಾಡಿದ್ದು ಮುರಿಯೋದಕ್ಕೆ ಅವನಿಗೆ ವೇಳ್ಯ ಹತ್ತೋದಿಲ್ಲವು. ಇದನ್ನ ತಿಳಿದು ಬಲಿಷ್ಠನ ಕೂಡಾ ಒಂದುಗೂಡೋದು ಮೊದಲೇ ಮೂರ್ಖತ್ವವು. ಒಂದು ಭಾರಿ ಅವನ ಸೂತ್ರಕ್ಕೆ ಹತ್ತಿ ಭ್ರಷ್ಟನಾದ ಮೇಲೆ ಅವನು ನಮಗೆ ಈ ರೀತಿಯಲ್ಲಿ ವಂಚಿಸ ಬೇಕೇ? ನೀವು ನೋಡಿರಿ ಎಂದು ಎರಡನೆಯವರ ಮುಂದೆ ಆಶ್ಚರ್ಯವಾಗಿ ಹೇಳೋದು ಅದಂತು ಅರಿಯದ ಮೂರ್ಖತ್ವವು.

೮೮. ನೀತಿಕಥೆ.

ತೋಳವೂ ಬೆಳ್ಳಕ್ಕಿಯೂ.

ಒಂದಾನೊಂದು ತೋಳವು ಒಂದು ಟಗರ ಹಿಂಡು ತಿನ್ನಲಾಗಿ, ಆ
ಟಗರಿನ ಎಲುಬು ಅದರ ಗಂಟಲ ಒಳಗೆ ಶಿಕ್ಕಿತು. ಆ ವೇದನೆಯಿಂದ ಆ
ತೋಳನು ಭ್ರಾಂತಿ ಹಿಡಿದು ಡಗ್ಗುತ್ತ ಅಡವಿಯಲ್ಲಿ ತಿರುಗುತ್ತಾ ಕಂಡ
ಕಂಡ ಪ್ರಾಣಿಗಳಿಗೆ ದೈನ್ಯದಿಂದ ಎಲೋ ತಂದೆ ಅಣ್ಣ ತಮ್ಮಗಳಿರಾ, ನೀ
ವು ದಯ ಮಾಡಿ ನನ್ನ ಗಂಟಲಲ್ಲಿ ಶಿಕ್ಕಿದ ಎಲಬು ತೆಗದವರಾದರೆ, ನಾ
ನು ಉತ್ತಮ ಕೊಡಪಿಕೆಯನ್ನು ಕೊಟ್ಟೇನು ಎಂದು ಪ್ರಾರ್ಥನೆ ಮಾಡಿ
ಹೇಳಿದ ಮಾತನ್ನು ಕೇಳಿ, ಒಂದು ಬೆಳ್ಳಕ್ಕಿಯು ಅವನ ದಾತೃತ್ವದ ಲೋ
ಭದಿಂದ ಮುಂದಕ್ಕೆ ಬಂದು ನಿಂತು, ತೋಳನ ಕಡೆಯಿಂದ ಆಣೆ ಭಾಷೆಗ
ಳ ಮಾಡಿಸಿ ಕೊಂಡು, ಅದರ ಬಾಯ್ಯೊಳಗೆ ತನ್ನ ಲಂಬಿತ ಗೋಣಿನಿಂದ
ಮುಖವನ್ನು ಹಾಕಿ ಗಂಟಲಲ್ಲಿ ಶಿಕ್ಕಿದಂಥಾ ಎಲುಬನ್ನು ಹೊರಿಯಕ್ಕೆ ತೆಗ
ದು ಹಾಕಿತು. ತರುವಾಯ ಬೆಳ್ಳಕ್ಕಿಯು ತನಗೆ ಕೊಡ ತಕ್ಕ ಸಂಭಾವನೆ
ಯನ್ನು ಕೊಡು ಎಂದು ಬೇಡೋಣಾ, ಆ ತೋಳವು ಶಿಟ್ಟಿನಿಂದ ಕಣ್ಣು
ಕೆರಳಿಸಿ, ಎಲೋ ನಿಂನ್ನಥಾ ಮೂರ್ಖರನ್ನ ನಾನು ತ್ರಿಭುವನದಲ್ಲಿಯೂ
ನೋಡಲಿಲ್ಲ, ನಿನ್ನ ಗೋಣು ಎಲ್ಲಾ ನನ್ನ ಬಾಯ್ಯೊಳಗೆ ಹಾಕಿದ ಸಮ
ಯದಲ್ಲಿ ನಾನು ಕಚ್ಚದಲೇ ನಿನಗೆ ಜೀವ ಉಳಿಸಿದ ಉಪಕಾರ ಮನಸ್ಸಿಗೆ
ತಾರದೆ ಇನ್ನೂ ನಿನಗೆ ಸಾಕಾಗವಲ್ಲದು ಎಂದು ಹೇಳಿತು.

ತಾತ್ಪರ್ಯ.

ಕೇವಲ ಅಧಮರು ಹೀಗೆ ಇರುತ್ತಾರೆ: ಅವರಿಗೆ ಸಹಾಯ ಮಾಡುತ್ತಿರಲಿಕ್ಕೆ
ಎರಡು ದೋಷಗಳು ಪ್ರಾಪ್ತಿಯಾಗುತ್ತಾವೆ, ಏನಂದರೆ ಸಹಾಯಯೋಗ್ಯನಲ್ಲದವ
ಗೆ ಸಹಾಯ ಮಾಡುವದು ನೀತಿಯಲ್ಲ, ಅದು ಒಂದು ದೋಷ; ಮತ್ತೆ ಅವನಿಗೆ ಅ
ನುಕೂಲವಾಗಿ ತಾನು ಸಂಕಟದಲ್ಲಿ ಬೀಳೋಣ ಇದು ಎರಡನೇ ದೋಷ. ಯಾಕಂ
ದರೆ ಉಪಕಾರ ಮಾಡಿದವರಿಗೆ ಅಪಕಾರ ಮಾಡುವದು ದುರ್ಜನರ ಸ್ವಭಾವವೇ

ಸರಿ. ಇಂಥವರ ಕೈಯಿಂದ ತನಗೆ ಹಾನಿಯಾಗದೆ ಉಳಕೊಂಡರೆ ಅದೇವೇ ವಿಶೇಷ ಪ್ರಾಪ್ತಿ ಎಂದು ತಿಳಿಯ ಬೇಕು.

---

೪೯. ನೀತಿಕಥೆ.

ಇಬ್ಬರು ಠಕ್ಕರೂ ಒಬ್ಬ ಕಾಯಿಗಡ್ಡಿ ಮಾರುವವನೂ.

ಒಬ್ಬಾನೊಬ್ಬ ಕಾಯಿಪಲ್ಯದವನ ಅಂಗಡಿಗೆ ಇಬ್ಬರು ಠಕ್ಕರು ಹೋಗಿ, ಅವರೊಳಗೊಬ್ಬನು ಆ ಸೊಪ್ಪುಮಾರುವವನ ದೃಷ್ಟಿ ತಪ್ಪಿಸಿ ಒಂದು ಕುಂಬಳಕಾಯಿ ಹೋಳಿಕೆಯನ್ನು ಕದ್ದು ಕೊಂಡು ತನ್ನ ಸಹವಾಸದವನ ಕೈಯಲ್ಲಿ ಕೊಡುತ್ತಿರಲಾಗಿ, ಆ ಜತೆಗಾರನು ಅದನ್ನು ತನ್ನ ನಿಲುವಂಗಿಯೊಳಗೆ ಅಡಗಿಸಿಟ್ಟನು. ಆ ತೋಟದವನು ನೋಡಲಾಗಿ, ಕುಂಬಳಕಾಯಿ ಹೋಳು ಕಾಣದೆ ಹೋಗೋಣಾ, ಅವನು ನೀವು ನನ್ನ ಕುಂಬಳಕಾಯಿ ಹೋಳು ಕಳವಿಲಿ ತಕ್ಕೊಂಡಿರಿ, ಆ ಹೋಳು ಬಿಷ್ಟು ಕೊಡಿರಿ; ಇಲ್ಲದಿದ್ದರೆ ನಿಮ್ಮ ಸ್ವರೂಪ ಉಳಿಯಲಿಕ್ಕಿಲ್ಲಾ ಎನ್ನಲಾಗಿ, ಆ ಕಳವ ಮಾಡಿದವನು — ಎಲೋ ಅಪ್ಪಾ, ನಾನು ಆಣೆ ಮಾಡಿ ಹೇಳುತ್ತೇನೆ, ನಿನ್ನ ಕುಂಬಳಕಾಯಿ ಹೋಳು ನನ್ನ ಬಳಿಯಲ್ಲಿದ್ದರೆ ನನಗೆ ನಿಸ್ಸಂತಾನವಾದೀತು ಅಂಬೋಣಾ, ಆ ಕುಂಬಳಕಾಯಿ ಹೋಳಿಕೆ ಬಚ್ಚಿಟ್ಟು ಕೊಂಡವನು ಮಾತನಾಡಿದ್ದು: ಎಲೋ ಮಹಾರಾಯ, ನಾನು ನಿನ್ನ ಕುಂಬಳಕಾಯಿ ಹೋಳಿಕೆ ಕಳವಿಲೆ ತಕ್ಕೊಂಡಿದ್ದರೆ ಲೋಕದಲ್ಲಿದ್ದ ಸಮಗ್ರ ಪಾಪಕ್ಕೆ ನಾನು ಗುರಿಯಾಗುತ್ತೇನೆ ಎಂದಲ್ಲಿ, ಆ ಸೊಪ್ಪುಮಾರುವವನು ಹೇಳಿದ್ದು: ಏ ಅಂಣಾ ನಾನು ನಿಮ್ಮ ಮಾತಿನ ಭಾವಾರ್ಥವನ್ನು ತಿಳುಕೊಂಡೆನು, ನಿಮ್ಮ ಉಭಯರೊಳಗೊಬ್ಬನು ಕದ್ದಿದ್ದಾನೆ, ನೀವಿಬ್ಬರೂ ಭ್ರಷ್ಟರಿದ್ದೀರಿ, ಇದರಲ್ಲಿ ನನಗೆ ಸಂಶಯವಿಲ್ಲವು.

ತಾತ್ಪರ್ಯ.

ಸಂಭಾವಿತರ ಮಾತೇ ಪ್ರಮಾಣಸಮಾನವು. ಸುಳ್ಳರು ಸುಳ್ಳುಮಾತು ಆಡಿ ವಂಚಿಸೋದಕ್ಕೆ ಇಚ್ಛಿಸುತ್ತಾರೆ; ಅವರು ಆಣೆ ಮಾಡುವ ವಿಷಯದಲ್ಲಿಯೂ ಹಿಂದೆ ಮುಂದೆ ನೋಡೋದಿಲ್ಲ. ಹೀಗೆ ತಿಳಿದು ಕಳ್ಳರೂ ಸುಳ್ಳರೂ ಠಕ್ಕರೂ ಇವರೆಲ್ಲಾ ಒಂದೇ ಸರದೊಳಗಿನ ಮಣಿಗಳು. ಇವರ ಆಣೆಗಳ ವಿಶ್ವಾಸ ಹಿಡಿಯ ಕೂಡದು. ಕೆಲವರು ತುಂಟರು ಹೀಗೆ ಇರುತ್ತಾರೆ: ತಾವು ತುಂಟತನ ಮಾಡಿದವರಾದರೂ ತಮ್ಮನ್ನು ತುಂಟರೊಳಗೆ ಎಣಿಸುವದಿಲ್ಲವು; ಅಂಥವರು ಆಣೆಗಳ ಮುರಿಯೋದರಲ್ಲಿ ಪಾತಕವದೆ ಎಂದು ತಿಳಿದು ಆಣೆ ಮಾಡ ಬೇಕಾದರೆ ಹೀಗೆ ಮಾಡುತ್ತಾರೆ: ಆ ಆಣೆಯ ಮಾತಿನಲ್ಲಿ ಎರಡು ಪ್ರಕಾರದ ಅರ್ಥವಾಗ ಬೇಕು. ಎಡಕ್ಕೂ ಬಲಕ್ಕೂ ಯಾವ ಕಡೆಗೆ ಹಚ್ಚಿ ಕೊಂಡರೂ ಬರ ಬೇಕು. ಈ ರೀತೀ ಆಣೆ ಮಾಡುವ ಪುರುಷರಂತೂ ಮಹಾ ಪಾತಕಿಗಳೂ ಎನ್ನ ಬೇಕು. ಯಾಕೆಂದರೆ ತನ್ನ ಇಚ್ಛಾಮಾತ್ರದಿಂದ ಲೋಕವನ್ನು ಉತ್ಪಂನ ಮಾಡಿದಂಥಾ, ಹಾಗೂ ನಾಶ ಮಾಡುವಂಥಾ, ಎಲ್ಲರ ಮನಸ್ಸಿಗೆ ಸಾಕ್ಷಿ ರೂಪನಾದಂಥಾ, ದೇವರ ಮುಂದಾದರೂ ಇದರ ಪರಿಯಾಯ ಹೇಳುವದಕ್ಕೆ ಇವರು ತಪ್ಪುವದಿಲ್ಲ.

---

೯೦. ನೀತಿಕಥೆ.

ತೋಟಿಗನೂ ನಾಯಿಯೂ.

ಒಬ್ಬ ತೋಟಿಗನವನ ಬಾವಿಯ ಥಡದಲ್ಲಿ ಅವನ ನಾಯಿಯು ಬೊಗ್ಗಿ ನೀರೊಳಗೆ ನೋಡುತ್ತಿರಲಾಗಿ, ಜಾರಿ ಬಾವಿಯೊಳಗೆ ಬಿದ್ದು ಒದರುತ್ತಿರೋಣ, ಆ ಶಬ್ದವನ್ನು ತೋಟಿಗನು ಕೇಳಿ ಅಲ್ಲಿಗೆ ಬಂದು ನೋಡಿ, ಬಿದ್ದ ನಾಯಿಯನ್ನು ತೆಗೆಯೋ ನಿಮಿತ್ಯವಾಗಿ ಆ ಬಾವಿಯೊಳಗೆ ಕೈ ಹಾಕೋಣಾ, ಆ ನಾಯಿ ಅವನ ಬೊಟ್ಟು ಕಚ್ಚಿತು. ಆಗ್ಗ ಆ ತೋಟಿಗನು — ಎಲೋ ದುಷ್ಟನೇ ನಿನ್ನ ಜೀವವನ್ನು ಉಳಿಸೋ ವಿಷಯವಾಗಿ ನನ್ನ ಕೈ ಬಂದಿರಲಾಗಿ, ಇದಲ್ಲದೆ ಇದೇ ಕೈಯಿಂದ ನಿನ್ನ ಸಂರಕ್ಷಣೆ ಇಂದಿನ ವರಿಗೂ ಆಗಿರಲಾಗಿ, ನನ್ನ ಕೈಗೆ ನೀನು ಉಪದ್ರ ಮಾಡಿದಿಯಲ್ಲಾ,

ಆದ ಕಾರಣ ನೀನು ಮೃತವಾಗು, ನಿನ್ನಂಥಾ ಅಪಕಾರದ ಪ್ರಾಣಿ ಬದುಕಿಸಲಿಕ್ಕೆ ಯೋಗ್ಯವಲ್ಲಾ ಎಂದು ಹೇಳಿ, ಆ ನಾಯಿಯ ಆ ಭಾವಿಯಲ್ಲಿ ಮುಣುಗೋದಕ್ಕೆ ಬಿಟ್ಟು ಹೋಗುವಂಥವನಾದನು.

ತಾತ್ಪರ್ಯ.

ಅಕೃತಜ್ಞನಾದವನು ತನಗೆ ಮಾಡಿದ ಉಪಕಾರವ ವ್ಯರ್ಥ ಮಾಡಿ, ಉಪಕಾರ ಮಾಡಿದವರಿಗೆ ಅಪಕಾರವನ್ನು ಮಾಡುತ್ತಾನೆ. ಆದ ಕಾರಣ ಉಪಕಾರದ ಮನುಷ್ಯನಾಗಿರುವವನು ಉಪಕಾರ ಮಾಡುವದರಲ್ಲಿ ಪಾತ್ರಾಪಾತ್ರ ನೋಡಿ ಮಾಡಬೇಕು. ದುಷ್ಟನ ಮೇಲೆ ಉಪಕಾರ ಮಾಡಿದ್ದೇ ಉಂಟಾದರೆ ಅದು ವ್ಯರ್ಥವಾದೀತು.

---

೭೧. ನೀತಿಕಥೆ.

ಸಾಲೇ ಐಯನೂ ಒದ್ರೋ ಹುಡುಗನೂ.

ಒಂದಾನೊಂದು ಸಾಲೆಯ ಒಬ್ಬ ಹುಡುಗನು ಪಾಲಿವಾಳದ ಕಟ್ಟಿಗೆಯ ತೆಪ್ಪವನ್ನು ತನ್ನ ನಡುವಿಗೆ ಕಟ್ಟಿ ಕೊಂಡು ಹೊಳೆಯಲ್ಲಿ ಈಸಲಿಕ್ಕೆ ಕಲಿಯುತ್ತಾ ಇರಲಾಗಿ, ಒಂದು ದಿವಸ ಅವನು ನನಗೆ ಈಸಲಿಕ್ಕೆ ಬಂದ ಹಾಗೆ ಆಯಿತು; ಇನ್ನು ಮೇಲೆ ಈ ತೆಪ್ಪದ ಪ್ರಯೋಜನವೇನದೆ ಎಂದು ತಿಳಿದು, ಅವನು ಆ ತೆಪ್ಪದ ಕಟ್ಟಿಗೆಯನ್ನು ಹೊಳೆಯ ದಡದಲ್ಲೇ ಇಟ್ಟು, ನದಿಯೊಳಗೆ ಈಸಾಡಲಿಕ್ಕೆ ಬೀಳೋಣ, ಅವನು ಶಳವಿಗೆ ಬಿದ್ದು ತೆರೆಗಳಿಂದ ತಿರುಗಣಿಮಡುವಿಂಗೆ ಬಿದ್ದು ನೀರು ಗುಟಕರಿಸಿ ಕೊಳ್ಳುತ್ತಾ ಇರಲು, ದೈವಯೋಗದಿಂದ ಅಲ್ಲಿ ಒಂದು ಗಿಡದ ಕೊಂಗೆಯು ಹೊಳೆಯ ನೀರ ತೆರೆಗೆ ತೂಗ್ಯಾಡುತ್ತಿತ್ತು. ಅಲ್ಲಿಗೆ ಅವನು ಮುಳುಗುತ್ತಾ ತೇಲುತ್ತಾ ಹೋಗಿ ಆ ಕೊಂಗೆಯನ್ನು ಕೈಯಿಂದ ಘಟ್ಟ್ಯಾಗಿ ಹಿಡುಕೊಂಡು, ಹೋ ನಾನು ಮುಳುಗಿದೆ ಮುಳುಗಿದೆ ಎಂದು ಒದರುತ್ತಿದ್ದನು. ಇವನ ಕರುಣಾರ್ತಶಬ್ದವು ಆ ಸಮಯದಲ್ಲಿ ಸಾಲೆಯಯ್ಯನ ಕಿವಿಗೆ ಬೀಳಲಾ

ಗಿ, ಆ ಐಯನು ಮುಂದಕ್ಕೆ ನೋಡಿ ಆ ಹುಡುಗನು ಸಂಕಟದಲ್ಲಿ ಇರುವದನ್ನು ಕಂಡು, ಆವಾಗ್ಗೆ ಆ ತೆಪ್ಪದ ಕಟ್ಟಿಗೆಯನ್ನು ಆ ಹುಡುಗನ ಸಮಿಾಪಕ್ಕೆ ತೇಲ ಬಿಟ್ಟನು. ಆ ಹುಡುಗನು ಆ ತೆಪ್ಪವನ್ನು ಹಿಡುಕೊಂಡು ಥಡಕ್ಕೆ ಬಂದು ಶೇರಿ ಕೊಂಡನು. ಆ ಸಮಯದಲ್ಲಿ ಆ ಐಯನು ಆ ಹುಡುಗನಿಗೆ — ಎಲೋ ಹುಡುಗನೇ, ಇನ್ನು ಮೇಲೆ ನಿನಗೆ ಮುಂದೆ ಸಂಸಾರ ಎಂಬ ಮಹಾ ನದಿಯನ್ನು ದಾಟಿ ಹೋಗುವದು ಇಟ್ಟದೆ, ನೀನು ಸ್ವತಂತ್ರನಾಗಿ ನಡಿಯಲಿಕ್ಕೆ ಇನ್ನೂ ಪ್ರೌಢನಾಗಲಿಲ್ಲ; ಇದರ ದುಸಕ್ಕೆ ನಿನಗಿಂತಲೂ ಹಿರಿಯರು ಇದ್ದಾರಲ್ಲಾ; ಅವರ ವಚನವನ್ನು ಹೊಳೆಯಲ್ಲಿದ್ದ ಕಟ್ಟಿಗೆಯ ತೆಪ್ಪದಂತೆ ತಿಳುಕೊಂಡು ಹಿರಿಯರ ಮಾತಿಗೆ ಅನಾದರಾ ಮಾಡ ಬೇಡ ಎಂದು ಉಪದೇಶ ಮಾಡಿದನು.

ತಾತ್ಪರ್ಯ.

ಎಷ್ಟೋ ಮಂದಿ ಹೀಗೆ ಅಭಿಮಾನಿಗಳು ಇರುತ್ತಾರೆ. ಅವರು ಸಹಸ್ರಾವಧಿ ಪೇಚುಗಳ ಅನುಭವಿಸಿ ಕೊಂಡಾರು. ಆದರೆ ಎರಡನೆಯವರ ಬುದ್ಧಿ ಕೇಳ ಬೇಕೆಂಬೋದು ತಿಳಿಯಲಿಕ್ಕೆ ಇಲ್ಲ. ಈ ಸಂಸಾರದಲ್ಲಿ ಇರುವದು ಬಹಳ ಕಠಿಣವದೆ; ಇದರೊಳಗೆ ಪರಸಾಹಿತ್ಯಕ್ಕೆ ಅಪೇಕ್ಷಿಸದೆ ಇರುವ ಪುರುಷನು ತೋರೋದಿಲ್ಲವು. ಇನ್ನು ಯೌವನಸ್ಥನಾಗಿದ್ದವನು ಸೃಷ್ಟಿಯ ರೀತಿಯನ್ನು ನಿಶ್ಚಯ ತಿಳಿದವನಲ್ಲ. ಅವನಂತು ಸ್ವಬುದ್ಧಿಯಿಂದಾ ನಡಿಯಲಾಗದು.

---

೯೨. ನೀತಿಕಥೆ.

ಕೋಳಿಯೂ ರತ್ನವೂ.

ಒಂದು ಹರೆಯವಾದ ಹುಂಜ ತನ್ನ ವಾರಿಗೆಯ ಎರಡು ಮೂರು ಹೇಟೆಗಳನ್ನು ಕರಕೊಂಡು ತಿಪ್ಪೆಯ ಕೆದರುತ್ತಾ ಇರಲಾಗಿ, ಅಲ್ಲಿ ಒಂದು ಅಪೂರ್ವ ಪದಾರ್ಥ ಶಿಕ್ಕಿದರೆ ಆ ಸಂಗತಿ ಕೋಳಿಗಳಿಗೆ ಕೊಟ್ಟು ಅವುಗ

ಳ ಮನಸ್ಸು ರಂಜಿಸುತ್ತಾ ಇತ್ತು. ಹೀಗೆ ಇರಲಾಗಿ ಅಕಸ್ಮಾತ್ ಒಂದು ರತ್ನವು ಅದರ ದೃಷ್ಟಿಗೆ ಬಿದ್ದಲ್ಲಿ ಅದರ ಕಾಂತೀ ಮೇಲೆ ಇದು ರತ್ನವೆಂದು ತಿಳುಕೊಂಡಿತು. ಪರಂತು ಅದರ ಉಪಯೋಗ ಹ್ಯಾಗೆ ಮಾಡ ಬೇಕು ಎಂಬದು ಅರಿಕೆ ಇಲ್ಲ. ತರುವಾಯ ತನ್ನ ಮೂರ್ಖತನ ಮುಚ್ಚಿ ಕೊಳ್ಳೋ ದುಸಕ್ಕೆ ಆ ರತ್ನದ ಉಪಹಾಸ ಪ್ರಾರಂಭಿಸಿತು. ತನ್ನ ಪಕ್ಕಗಳ ಪಸರಿಸಿ ತಲೆದೂಗಿ ಮುಖ ವಕ್ರ ಮಾಡಿ, ಎಲೋ ರತ್ನವೇ, ನೀನು ಚಲುವಾಗಿದ್ಧಿ ಖರೆ, ಆದರೆ ನಿನ್ನನ್ನ ಏನು ಮಾಡ ಬೇಕು ಎಂದು ನನ್ನ ಬುದ್ಧಿಯಿಂದ ನೋಡಲಾಗಿ, ನೀನೂ ಈ ಸೃಷ್ಟಿಯೊಳಗಿನ ಸರ್ವ ರತ್ನಗಳೂ ಒಂದು ಜೋಳದ ಕಾಳಿನ ಸರಿಯು ನನಗೆ ಕಾಣಿಸೋದಿಲ್ಲವೆಂದು ಹೇಳಿತು.

ತಾತ್ಪರ್ಯ.

ದೈವಯೋಗದಿಂದ ವಿದ್ಯ ಪ್ರಾಪ್ತಿಯಾಗಲಾಗಿ ಚಲೋದೂ ಕೆಟ್ಟದ್ದೂ, ಇದು ನೀತಿ ಅನೀತಿ ಎಂಬದೂ ತಿಳಿಯುತ್ತದೆ. ಆದರೆ ವಿದ್ಯದ ಉಪಯೋಗ ತಿಳುಕೊಳ್ಳಲಿಕ್ಕೆ ಬಾರದ ಪುರುಷಗೆ ಆ ವಿದ್ಯದಿಂದ ಏನು? ಕೋಳಿಯು ರತ್ನ ಅಲಕ್ಷ್ಯ ಮಾಡಿದಂತೆ ವಿದ್ಯ ತಿರಸ್ಕಾರ ಮಾಡುವ ಮೂರ್ಖರು ಇರುತ್ತಾರೆ. ಅವರು ತಮ್ಮ ಮೂರ್ಖತನ ಮುಚ್ಚಿ ಕೊಳ್ಳುವ ದುಸಕ್ಕೆ ವಿದ್ಯಗಳ ಉಪಹಾಸ ಮಾಡಿ ತಮಗೆ ತಿಳಿದದ್ದೇ ಸ್ಥಾಪಿಸಲಿಕ್ಕೆ ಹತ್ತುತ್ತಾರೆ. ಸತ್ಯಕ್ಕೆ ಪ್ರಾಪ್ತಿಯಾಗೋ ಮಾತುಗಳ ಬಿಟ್ಟು ಉಳಿದ ವಿದ್ಯಗುಣಗಳ ಏನು ಮಾಡ ಬೇಕು ಎಂದು ವಿದ್ವತ್ತು ಇದ್ದರೂ ಸ್ವಲ್ಪ ಕೆಲಸದ್ದು ಎಂದು ಅಲಕ್ಷ್ಯ ಮಾಡುತ್ತಾರೆ.

---

೯೩. ನೀತಿಕಥೆ.

ತೋಳವೂ ಹುಳವೂ.

ಒಂದಾನೊಂದು ಸಮಯದಲ್ಲಿ ಒಂದು ಹುಳವು ಬಿಸಲಿಗೆ ಬಿದ್ದು, ಬಹು ತಪ್ತವಾಗಿ ನೀರಡಿಸಿ ಬಂದು ಹಳ್ಳದ ಒಳಗೆ ನೀರು ಕುಡಿಯಲಿಕ್ಕೆ

ಹೋಗಿರಲಾಗಿ, ಆ ಹಳ್ಳದ ಮೇಲಗಡೆ ಒಂದು ತೋಳವು ನೀರು ಕುಡಿಯುತ್ತಿತ್ತು. ಈ ಹುಳವು ಕೆಳಗಡೆಯ ಭಾಗದಲ್ಲಿ ಇತ್ತು. ಅದು ಈ ತೋಳನ ದೃಷ್ಟಿಗೆ ಬೀಳೋಣು, ಏನಾದರೂ ನಿಮಿತ್ತ ಇಟ್ಟು ಅದನ್ನ ಭಕ್ಷಿಸ ಬೇಕೆಂದು ಮಾತಾಡಿದ್ದು: ಎಲೋ ನೀನು ನೀರು ಹೀಗೆ ಕಲಕು ಮಾಡಿದರೆ ನಾವು ನಮ್ಮ ತೃಷಿ ಹ್ಯಾಗೆ ಕಳಿಯ ಬೇಕು, ನೀನು ಹೀಗೆ ಮಾಡುವ ಕಾರಣವೇನು, ಚಮತ್ಕಾರವಾಗಿ ಹೇಳು, ಇಲ್ಲವಾಯಿತೇ ನಿನ್ನ ಜೀವ ಕಳಕೊಂಡಿ ಅಂಬೋಣು, ಆ ಹುಳಗೃಹಸ್ಥನು ಘಾಬರಿಯಾಗಿ, ನಮಸ್ಕಾರ ಮಾಡಿ ಅಂದದ್ದು: ಕೇಳಿದಿರಯ್ಯಾ ತೋಳರಾಯರೇ, ನೀವು ಅಂಬೋ ಹಾಗೆ ಆದೀತಾದರೆ ಹ್ಯಾಗೆ? ನಿಮ್ಮ ಕಡೆಯಿಂದ ನೀರು ಹರದು ನನ್ನ ಕಡೆಗೆ ಬರುತ್ತವೆ, ಮತ್ತು ಅದನ್ನ ನಾನು ಕುಡಿಯುತ್ತೇನೆ; ಹೀಗಿರಲಿಕ್ಕೆ ನಾನು ಕಳಕು ಮಾಡಿದ ನೀರು ನಿಮ್ಮ ಕಡಿಗೆ ಬಂದವಾದರೆ ಹ್ಯಾಗೆ ಅಂಬೋಣ, ತೋಳವು — ಅದಂತಿರಲಿ, ನೀನು ಲುಚ್ಚಾ ಇದ್ಧೀ, ಈಗ ಆರು ತಿಂಗಳ ಮುಂದೆ ನೀನು ನಮ್ಮನ್ನ ಬಯ್ಯುತ್ತಿದ್ದಿ ಎಂದು ಕೇಳಿದಿವಿ ಎನ್ನಲಾಗಿ, ಹುಳವು ದೇವದೇವ! ಇಂಥಾ ಮಾತು ಹ್ಯಾಗಾದೀತು, ನಾನು ಜನ್ಮ ತಕ್ಕೊಂಡು ಮೂರು ತಿಂಗಳಾಯಿತು; ಅದಕ್ಕೆ ಮುಂಚೆ ನಾನು ಹ್ಯಾಗೆ ಬೈದಿದ್ದೇನಾದೀತು ಎಂದು ಹೇಳಿತು. ಆ ಮಾತು ತೋಳರಾಜಗೆ ಕಟ್ಟಲಾಗಿ ಕ್ರೋಧಾವೇಷ ತಕ್ಕೊಂಡು ಕಣ್ಣು ಕೆರಳಿಸಿ ಕೈ ಕಾಲು, ಅಪ್ಪಳಿಸಿ ಹಲ್ಲು ಕಡಿಯುತ್ತಾ ಹುಳವಿನ ಸಮೀಪಕ್ಕೆ ಬಂದು, ಎಲೇ ರಂಡೇ ಗಂಡಾ, ಲವಡಿಮಗನೇ, ನೀ ಬೈದವನಲ್ಲದಿದ್ದರೆ ನಿನ್ನಪ್ಪ ಬೈದಿದ್ದಾನಾದೀತು, ನೀನೂ ಅವನೂ ಒಂದೇ ಸರಿ ಎಂದು ಆ ಅನಾಥ ಹುಳವಿನ ಪ್ರಾಣ ತಕ್ಕೊಂಡಿತು.

ತಾತ್ಪರ್ಯ.

ಬಲಿಷ್ಠನಾದ ಘಾತಕಿಯ ಮುಂದೆ ತನ್ನ ನಿಜವಾದ ಭರವಸದಲ್ಲಿ ಬಲಹೀನನು ನಿಂದಿರಲಾಗದು.

೯೪. ನೀತಿಕಥೆ.

ಕೋಳಿಯೂ ಗುಬ್ಬಿಯೂ.

ಒಂದಾನೊಂದು ಕೋಳಿಯು ತಿಪ್ಪೆ ಕೆದರುತ್ತಿರಲಾಗಿ, ಸರ್ಪದ ತತ್ತಿಗಳನ್ನು ಕಂಡು ತಾನು ತನ್ನ ಪಕ್ಕದಲ್ಲಿ ಕಾವಿಗೆ ಇಟ್ಟು ಅವನ್ನ ಜೀವಿಸಬೇಕೆಂಬ ದಯದಿಂದ ಆ ತತ್ತಿಗಳ ಮೇಲೆ ಕುಳಿತಿತ್ತು. ಅದರನ್ನ ಕಂಡು ಗುಬ್ಬಿಯು ಅದರ ಸಮೀಪಕ್ಕೆ ಬಂದು ಶಿಟ್ಟಿನಿಂದ ಏನೇ ಕೋಳಿಯೇ, ನಿನಗೇನನ್ನ ಬೇಕು; ಇಂಥಾ ದುಷ್ಟ ಪ್ರಾಣಿಗಳ ಮೇಲೆ ನೀನು ದಯ ಮಾಡುತ್ತಿದ್ಧಿಯಲ್ಲಾ, ಆದ ಕಾರಣ ನಿನಗೆ ನಾನು ಹೇಳುತ್ತೇನೆ, ನಿಶ್ಚಯ ತಿಳುಕೋ, ಈ ಸರ್ಪದ ಮರಿಗಳು ತತ್ತಿಯ ಬಿಟ್ಟು ಕಡೆಗೆ ಹೊರಟವು ಅಂದರೆ ಮೊದಲಿಗೆ ನಿನ್ನ ಪ್ರಾಣವೇ ತಕ್ಕೊಳ್ಳುತ್ತಾವೆ ಎಂದು ಹೇಳಿತು.

ತಾತ್ಪರ್ಯ.

ದುಷ್ಟರಾದವರಿಗೆ ದಂಡನೆಯು ಇರ ಬೇಕು. ಅವರ ಮೇಲೆ ದಯ ಮಾಡಿದ್ಧರೆ ತನ್ನ ನಾಶನಕ್ಕೆ ಕಾರಣವಾಗುತ್ತದೆ. ದುಷ್ಟ ಜಾತಿಯವನಿಗೆ ಅನೇಕ ಉಪಕಾರಗಳ ಮಾಡಿದ ಕಾಲಕ್ಕೂ ಅವನು ತನ್ನ ಸ್ವಭಾವ ಬಿಡಲಿಕ್ಕಿಲ್ಲ.

---

೯೫. ನೀತಿಕಥೆ.

ಗೌಳಿಗನೂ ದೇವರೂ.

ಒಬ್ಬ ಗೌಳಿಗನು, ಆಕಳು ಅರಣ್ಯದಲ್ಲಿ ತಪ್ಪಿಸಿ ಕೊಳ್ಳಲಾಗಿ, ಅದಕ್ಕಾಗಿ ಬಹಳ ಹುಡುಕಿದನು, ಆದರೆ ಶಿಕ್ಕಲಿಲ್ಲವಾದ ಕಾರಣ ದೇವರಿಗೆ ಅವನು ನನ್ನ ಆಕಳ ಕಳ್ಳನನ್ನು ನನ್ನ ದುಷ್ಟಿಗೆ ಬೀಳೋ ಹಾಗೆ ಮಾಡಿದರೆ ನಿನಗೂ ನಾನು ಒಂದು ಕುರಿ ಕಡದೇನು ಎಂದು ಹರಿಕೆ ಹೇಳಿ ಬೇಡಿಕೊಳ್ಳಲಾಗಿ, ಆಗಲೇ ಅಡವಿಯೊಳಗೆ ಒಂದು ಹುಲಿಯು ಆ ಆಕಳ ಮುರಕೊಂಡು ತಿಂಬುವದನ್ನು ಕಂಡನು. ನೋಡಿದ ಕೂಡಲೆ ಗೌಳಿಗ

ನ ಗರ್ಭ ಪಾತವಾಗಿ ಕೈ ಕಾಲು ತಣ್ಣಗಾದವು. ನಡುಗು ಹುಟ್ಟಿ ಪುನ ಹಾ ದೇವರ ಸ್ಮರಣೆಯನ್ನು ಮಾಡಿ ಹರಿಕೆ ಬೇಡಿ ಕೊಳ್ಳುತ್ತಾನೆ: ಎಲೇ ದೇವರೇ, ಆಕಳ ಕದ್ದ ಕಳ್ಳ ನನ್ನ ದೃಷ್ಟಿಗೆ ಬೀಳ ಬೇಕೆಂದು ನಾನು ಹರಿಕೆ ಬೇಡಿ ಕೊಂಡಿದ್ದೆನಲ್ಲಾ, ಅದರಂತೆ ನೀನು ಸಿದ್ಧ ಮಾಡಿ ಕೊಟ್ಟಿ, ಆದರೆ ಈಗ ಈ ಹುಲೀ ಕೈಯ್ಯಾಗಿಂದ ನನ್ನನ್ನು ಬಿಡಿಸಿ ಕೊಂಡು ಉಳಿಸಿದ್ದೇ ಉಂಟಾದರೆ ನಾನು ನಿನಗೆ ಇನ್ನೂ ಎರಡು ಕುರಿಗಳನ್ನು ಕೊಟ್ಟು ಬಿಟ್ಟೇನು.

ತಾತ್ಪರ್ಯ.

ಅಜ್ಞಾನಿಗಳಾದವರು ಲಂಚದ ದೆಶೆಯಿಂದ ಈಶ್ವರನು ತಾವು ಬೇಡಿದ ಹಾಗೆ ಕಾರ್ಯ ಮಾಡಿ ಕೊಟ್ಟಾನು ಎಂದು ತಮ್ಮ ಮನಸ್ಸಿನಲ್ಲಿ ತಿಳುಕೊಳ್ಳುತ್ತಾರೆ. ಹ್ಯಾಗಂದರೆ ಅಜ್ಞಾನಿಗಳಾದ ಹುಡುಗರು ತಮ್ಮ ಇಷ್ಟವಾದ ತಿನಸುಗಳ ನಿಮಿತ್ತದಿಂದ ನಮ್ಮ ತಾಯಿ ನಾವು ಬೇಡಿದ ಹಾಗೆ ಕೊಟ್ಟಾಳು ಎಂದು ತಿಳುಕೊಳ್ಳುತ್ತಾರೆ. ಅದರಂತೆ ಅಜ್ಞಾನರ ತಿಳುವಳಿಕೆ ಆಗುತ್ತದೆ. ಸುಜ್ಞಾನರಾದವರು ಹೀಗೆ ಅರಿಕೆ ಬೇಡಿ ಕೊಂಬೋದೇ ಇಲ್ಲ. ತಮ್ಮನ್ನು ನಿರ್ಮಾಣ ಮಾಡಿದ ದೇವರು ತಮಗೆ ಭೋಕ್ತವ್ಯ ನೇಮಿಸಿದ್ದೇ ನಿಶ್ಚಯವೆಂದು ಸ್ವಸ್ಥದಿಂದ ಇರುತ್ತಾರೆ. ಅಥವಾ ಸಂಕಟ ಸಮಯದಲ್ಲಿ ದೇವರಿಗೆ ಪ್ರಾರ್ಥಿಸ ಬೇಕಾದರೆ ಹೀಗೆ ಬೇಡಿ ಕೊಳ್ಳುತ್ತಾರೆ: ಎಲೋ ದೇವರೇ, ನನ್ನ ಕಲ್ಯಾಣ ಅಕಲ್ಯಾಣ ಸರ್ವವೂ ನೀನೇ ಬಲ್ಲಾತನಾಗಿದ್ಧೀ, ನಾನು ನಿನ್ನವನಾಗಿದ್ಧೇನೆ, ಮನಸ್ಸಿಗೆ ತಿಳದು ನೆಟ್ಟಗೆ ದಯ ಮಾಡ ಬೇಕು.

---

೯೬. ನೀತಿಕಥೆ.

ಸಿಂಹಚರ್ಮದೊಳಗಣ ಕತ್ತೆ.

ಒಂದಾನೊಂದು ಕತ್ತೆಗೆ ಸಿಂಹದ ಕಳೇವರದ ಚರ್ಮವು ಶಿಕ್ಕಿತ್ತು. ಅದನ್ನ ಹೊದ್ದು ಕೊಂಡು ವನಾಂತರದಲ್ಲಿ ತಿರುಗುತ್ತಾ ಇರಲಾಗಿ, ಅದನ್ನ ಕಂಡ ಕಂಡ ಸ್ವಾಪದಗಳು ಭಯದಿಂದ ಓಡುತ್ತಿದ್ದವು. ಈ ರೀತಿ

ಯಿಂದ ಕೆಲವು ದಿವಸಗಳು ದುಂದಿನಿಂದ ವನಚರಗಳನ್ನು ವಂಚಿಸಿ ಕೊಳ್ಳುತ್ತಾ ಇತ್ತು. ಹೀಗಿರಲಾಗಿ ಒಂದು ದಿವಸ ಈ ಕತ್ತೆಗೂ ಒಂದು ನರಿಗೂ ಭೇಟಿಯಾದ ಸಮಯದಲ್ಲಿ ಆ ನರಿಯನ್ನು ಅಂಜಿಸ ಬೇಕೆಂಬ ಚಾಪದಿಂದ ಮೈ ಮೇಲೆ ಆವೇಷ ಬಂದವನಂತೆ ಅರ್ಕಟಸ್ವರದಿಂದ ಒದರಿತು, ಪರಂತು ಆ ಸ್ವರವು ಹ್ಯಾಗೆ ಸಾಧಿಸೀತು, ಸಾಧಿಸಲಿಲ್ಲವು. ಆಗ್ಯೆ ನರಿಯು ಮಾವನವರೇ, ಇನ್ನು ಸಾಕು ಮಾಡಿರಿ, ನೀವು ನಿಮ್ಮ ನಾಲಿಗಿ ಹುದುಗಿಸಿ ಕೊಂಡು ಧ್ವನಿಯನ್ನು ಮಾಡದೆ ಸುಮ್ಮಗಿದ್ದರೆ ನೀವು ಸಿಂಹನೆಂದು ನಾನು ತಿಳಿಯುತ್ತಿದ್ದೆ, ಆದರೆ ತಮ್ಮ ಕೂಗಿನ ಮೇಲೆ ತಾವು ಯಾರೆಂಬದು ನನಗೆ ನಿಶ್ಚಯ ತಿಳಿಯಿತು ಎಂದು ಹೇಳಿತು.

ತಾತ್ಪರ್ಯ.

ಗಿಡದ ಪರೀಕ್ಷೆ ಫಲದಿಂದ ತಿಳಿಯುತ್ತದೆ. ಹಾಗೆ ಮನುಷ್ಯರ ಪರೀಕ್ಷೆ ಭಾಷಣದಿಂದ ತಿಳಿಯುತ್ತದೆ. ಯಾವನಾದರೂ ಮನುಷ್ಯನ ಪರೀಕ್ಷೆ ಮಾಡೋದಿದ್ದರೆ ಅವನ್ನ ಮಾತನಾಡಿಸಿದ್ದಲ್ಲಿ ಅವನು ತನ್ನ ಯೋಗ್ಯತೆ ತನ್ನ ಮುಖದಿಂದ ತೋರಿಸಿ ಕೊಳ್ಳುತ್ತಾನೆ, ಅದರಂತೆ ಎರಡನೆಯವರ ಹೇಳಿಕೆಯಿಂದ ತಿಳಿಯೋದಿಲ್ಲವು. ಆದ ಕಾರಣ ಯಾವ ಮನುಷ್ಯನ ಮನಸ್ಸಿನಲ್ಲಿ ತನ್ನ ಮೂರ್ಖತ್ವ ಜನರಿಗೆ ತಿಳಿಯ ಬಾರದೆಂದು ಇರುತ್ತದೋ ಅವನು ತನ್ನ ನಾಲಿಗೆಯನ್ನು ಬಿಗಿದ್ದಿಡಿದು ಇದ್ದಲ್ಲಿ ಒಳ್ಳೇ ಹಿತವಾಗುತ್ತದೆ. ಆದರೆ ಇಂಥಾ ಸುಲಭ ಯುಕ್ತಿ ಇರಲಾಗಿ ಮಾತನಾಡದೆ ಇರುವದು ಮೂರ್ಖರಿಗೆ ಆಗೋದಿಲ್ಲವು. ಥೆಳ್ಳಗೆ ಹರಿಯುವ ನದಿಯ ಕಳಾಕಳಾ ಶಬ್ದವು ಬಹಳವಾಗುತ್ತದೆ. ಅದರಂತೆ ಅಲ್ಪ ತಿಳುವಳಿಕೆಯ ಪುರುಷನು ಯಾವ ಮಾತಿಂದಾದರೂ ಸಿದ್ಧಾಂತವನ್ನು ಥಟ್ಟನೆ ಹೇಳಿ ಹೋಗುತ್ತಿರುತ್ತಾನೆ. ಅದರಿಂದ ಅವನ ವಸ್ತ್ರಭೂಷಣಾಕೃತಿ ಮೇಲಿಂದ ಅವನ ದೊಡ್ಡಸ್ತನ ಗೂಢದಿಂದ ಇದ್ದರೂ ಅವನ ಮಾತಿನ ಮೇಲೆ ನಿಸ್ಸಂಶಯವಾಗಿ ಅವನ ಮೂರ್ಖತ್ವ ಸ್ಪಷ್ಟವಾಗಿ ತಿಳಿಯುತ್ತದೆ.

---

೯೭. ನೀತಿಕಥೆ.

ಕಪ್ಪೆಗಳು ಅರಸು ಬೇಕೆಂದು ಬೇಡಿ ಕೊಂಡದ್ದು.

ಒಂದಾನೊಂದು ಸರೋವರದಲ್ಲಿ ಸಮಸ್ತ ಕಪ್ಪೆಗಳು ಏಕಸ್ಥರಾಗಿ, ನಾವು ಸರಿ ಬಂದ ಕಡೆಗೆ ತಿರುಗುತ್ತೇವೆ, ಮನಸ್ಸಿಗೆ ಬಂದಂತೆ ಮಾಡುತ್ತೇವೆ, ಇದು ಒಳ್ಳೇದಲ್ಲಾ, ನಮ್ಮ ಮೇಲೆ ಯಾವನಾದರೂ ಒಬ್ಬ ಧಣಿ ಇರ ಬೇಕು, ಅವನ ಭಯದಿಂದ ನಾವು ಸರ್ವರು ನಮ್ಮ ಮರ್ಯಾದಿಗಳಿಂದ ಇದ್ದೇವು ಎಂದು ಯೋಚಿಸಿ ವಿಚಾರ ಮಾಡಿ ಕೊಂಡು, ನಮಗೆ ಒಬ್ಬ ಅರಸನನ್ನು ಕೊಡ ಬೇಕೆಂದು ದೇವರಿಗೆ ಪ್ರಾರ್ಥನೆ ಮಾಡಿದವು. ಅವರ ಬಿಂನಹವನ್ನು ಕೇಳಿ ದೇವರಿಗೆ ನಗೆ ಬಂದು, ಇದು ತಕ್ಕೊಳ್ಳಿ, ನಿಮಗೆ ಅರಸು ಇವನೇ ಎಂದು ಆಕಾಶದಿಂದ ಒಂದು ಕಾಷ್ಟವನ್ನು ಬಿಷ್ಟು ಕೊಟ್ಟನು. ಆ ಕಾಷ್ಟವು ನೀರ ಮೇಲೆ ಬೀಳುವಾಗ್ಯೆ ದೊಡ್ಡ ಶಬ್ದವಾಗಿ ನೀರು ಮೇಲಕ್ಕೆ ತುಳುಕಿ ಸಿಡಿಯೋಣದರಿಂದ ಕಪ್ಪೆಗಳು ಭಯಸ್ಥರಾಗಿ ಆ ಕಾಷ್ಟದ ಸಮೀಪಕ್ಕೆ ಹೋಗಲೊಲ್ಲವು. ಸ್ವಲ್ಪ ಹೊತ್ತಿನ ಮೇಲೆ ಕಾಷ್ಟವು ಸ್ಥಿರದಿಂದ ನಿಂತಲ್ಲಿ ನಡಿಯೋದಿಲ್ಲ, ಅಗಲಾಡೋದಿಲ್ಲ; ಅದು ಕಂಡು ಮೆಲ್ಲ ಮೆಲ್ಲಗೆ ಸಮೀಪಕ್ಕೆ ಬಂದು ಆಡಲಿಕ್ಕೆ ಅದರ ಮೇಲೆ ಕುಳಿತವು. ಆ ಕಪ್ಪೆಗಳು, ಅರಸಿಗೆ ಏನೂ ಜೀವ ಇಲ್ಲ, ಇನ್ನೊಬ್ಬ ಚತಲೋ ಶೋಭನವಂತನಾದ ಅರಸನ್ನ ಬೇಡಿ ಕೊಳ್ಳ ಬೇಕು ಎಂದು ಪುನಹಾ ದೇವರಿಗೆ ಪ್ರಾರ್ಥನೆ ಮಾಡಿದ್ದಲ್ಲಿ ದೇವರು ಶಾಬೂತ ಪಕ್ಷಿಯನ್ನು ಕಳುಹಿಸಿ ಕೊಟ್ಟನು. ಆ ಪಕ್ಷಿ ಬಂದಾಕ್ಷಣವೆ ಕಪ್ಪೆಗಳ ಶೀಳಿ ಶೀಳಿ ತಿನ್ನಲಿಕ್ಕೆ ಆರಂಭ ಮಾಡೋಣ, ಆ ಪ್ರಳಯವು ಸಹಿಸಲಿಕ್ಕೆ ಕೂಡದೆ ಕಪ್ಪೆಗಳು ಮತ್ತೂ ದೇವರಿಗೆ ಪ್ರಾರ್ಥನೆ ಮಾಡಿದವು; ಏನಂದರೆ: ನೀನು ಯಾವನಾದರೂ ಇನ್ನೊಬ್ಬ ಉತ್ತಮ ಅರಸನ್ನ ತರಿಸಿ ಕೊಡ ಬೇಕು, ಇಲ್ಲದಿದ್ದರೆ ನಾವು ಮುಂಚೆಗೆ ಇದ್ದ ಹಾಗೆ ಇರುವಂತೆ ಮಾಡ ಬೇಕು ಎಂ

ಬೋಣ, ಈ ಮಾತು ದೇವರು ಕೇಳಿ ಇನ್ನೊಬ್ಬ ಅರಸನ್ನ ನಾವು ಕೊಟ್ಟರೂ ನಿಮ್ಮ ವಿಚಾರಕ್ಕೆ ಬರೋದಿಲ್ಲ, ಇನ್ನು ಮೇಲೆ ನಿಮ್ಮ ಕರ್ಮ ನೀವೇ ಅನುಭವಿಸ ಬೇಕು ಎಂದು ಹೇಳುವಂಥವನಾದನು.

ತಾತ್ಪರ್ಯ.

ದೇವರು ತಮಗೆ ಕೊಟ್ಟಿರುವ ಸ್ಥಿತಿಗೆ ಅನಾದರಾ ಮಾಡಿ ನೂತನ ಇಚ್ಛೆ ಮಾಡ ಬಾರದು. ಹೊಸ ಇಚ್ಛೆ ಮಾಡಿದ ಮೇಲೆ ಏನು ಬಂದದ್ದು ಭೋಗಿಸ ಬೇಕೇ ಹೊರ್ತು ದೇವರ ಮೇಲೆ ಶಬ್ದ ಯಾಕೆ ಇಡ ಬೇಕು? ಮನಸ್ಸಿಗೆ ಬಾರದೆ ಎರಡನೆಯವನ್ನ ಇಚ್ಛೈಸಿ ತಮಗೆ ತಾವೇ ಅಸ್ವಾಧೀನರಾಗಿ ದುಷ್ಟರಾಗುತ್ತಿರಲಿಕ್ಕೆ ದೋಷ ಯಾರ ಕಡೆಗೆ ಇಡ ಬೇಕು?

---

೯೮. ನೀತಿಕಥೆ.

ಕೋಳಿಗಳ ವಿಷಯ.

ಎರಡು ಕೋಳಿಗಳು ಒಂದು ತಿಪ್ಪೆಯ ಧಣಿಯತನದ ನಿಮಿತ್ತದಿಂದ ಕಡಿದಾಡುತ್ತಾ ಇರಲಾಗಿ, ಒಂದು ಕೋಳಿಯು ಸೋತು ಹೋಗಿ ತನ್ನ ಗೂಡಿನಲ್ಲಿ ಅಡಗಿತು. ಆ ಗೆದ್ದ ಕೋಳಿಯು ಒಂದು ತೆವರಿನ ಮೇಲೆ ಕುಳಿತು ತನ್ನ ರೆಕ್ಕೆಗಳ ಝಾಡಿಸಿ ದೊಡ್ಡ ಸ್ವರದಿಂದ ನಾನು ಗೆದ್ದೆನಣ್ಣಾ ಗೆದ್ದೆನೆಂದು ಕೂಗುತ್ತಿರಲು, ಅಷ್ಟರೊಳಗೆ ಅಲ್ಲಿ ಸಮೀಪದ ಗಿಡದ ಮೇಲೆ ಒಂದು ಗರುಡಪಕ್ಷಿಯು ಬುಭುಕ್ಷಿತವಾಗಿ ಜಪಿಸಿ ಕುಳಿತಿತ್ತು. ಆ ಗರುಡನು ಮರೆಯಾಗಿ ಬಂದು ಈ ಕೋಳಿಯನ್ನು ತಕ್ಕೊಂಡು ಹೋಯಿತು. ಅದನ್ನ ಈ ಅಡಗಿದ ಕೋಳಿಯು ಕಂಡು ಹೊರಗೆ ಬಂದು ಕೋಳಿಗಳ ಹಿಂಡಿನಲ್ಲಿ ನಿಂತು ತನ್ನ ಪರಾಕ್ರಮವನ್ನು ವರ್ಣಿಸಲಿಕ್ಕೆ ಹತ್ತಿತು.

ತಾತ್ಪರ್ಯ.

ಜಯ ಅಥವಾ ಪರಾಜಯ ಪ್ರಾಪ್ತಿ ಆಗುತ್ತಿರಲಿಕ್ಕೆ ಹರ್ಷ ಅಥವಾ ವಿಷಾದ ತಾಳೋದು ಅದೇವೆ ಮೂರ್ಖತ್ವವು. ಸಂಪತ್ತು ಇದ್ದ ಕಾಲದಲ್ಲಿ ಉನ್ಮತ್ತನಾ

೧ ಗರ್ವದಿಂದ ಕೊಬ್ಬೋಣ, ವಿಪತ್ತಿನ ಕಾಲದಲ್ಲಿ ಧೈರ್ಯ ಗೆಟ್ಟು ಕೇವಲ ದೈನ್ಯ ವಾಗೋಣ, ಇವು ಮೂರ್ಖತ್ವವೇ ಸರಿ. ಹಾಗಾದರೆ ಎರಡು ಅವಸ್ಥೆಗಳಲ್ಲಿ ಸಮ ಚಿತ್ತನಾಗಿರುವವನೇ ದೊಡ್ಡವನೆನ್ನ ಬೇಕು, ಅವನೇ ಜ್ಞಾನಿಯು; ಆ ಜ್ಞಾನಿಯ ತಿಳುವಳಿಕೆ ಹ್ಯಾಗಂದರೆ: ಸುಖ ದುಃಖ ಜಯ ಪರಾಜಯವು ಒಂದರ ಹಿಂದೆ ಒಂದು ಮನುಷ್ಯರ ಬೆಂನಿಗೆ ಹತ್ತೇ ಇರುತ್ತವೆ.

---

೯೯. ನೀತಿಕಥೆ.

ಶೀತಗಾಳಿಯೂ ಸೂರ್ಯನೂ.

ಒಂದಾನೊಂದು ಸಮಯದಲ್ಲಿ ತಂಗಾಳಿಯೂ ಸೂರ್ಯನೂ ತಮ್ಮೊಳಗೆ ಕಲಾಪ ಮಾಡಿ ಕೊಂಡರು. ತಂಗಾಳಿಯು ತನ್ನ ಶಕ್ತಿ ದೊಡ್ಡದ್ದು, ಸೂರ್ಯನು ತನ್ನ ಶಕ್ತಿ ದೊಡ್ಡದ್ದು ಎಂದು ಹೇಳುತಾ್ತ ಇರಲಾಗಿ, ಆ ಸಮಯದಲ್ಲಿ ಒಬ್ಬ ಹಾದಿಗನು ಗೊಂಗಡಿ ಹೊದ್ದು ಕೊಂಡು ಅತ್ತಲಾಗಿಂದ ಹೋಗುತ್ತಿರುವಾಗ್ಯೆ ವಾಯು ಸೂರ್ಯ ಇಬ್ಬರೂ ತಮ್ಮೊಳಗೆ ತಾವೇ ತೋಡು ತೆಗದರು; ಈ ಮನುಷ್ಯನ ಮೈ ಮೇಲಿನ ಕಂಬಳಿ ಹಾರಿಸಿದವನೇ ಶ್ರೇಷ್ಠನೆಂದು ನೇಮ ಮಾಡಿ ಕೊಂಡು, ತಂಗಾಳಿಯು ಅವನ ಕಂಬಳಿಯನ್ನು ಹಾರಿಸೋ ನಿಮಿತ್ತವಾಗಿ ಬಹಳ ಬೀಸುತ್ತಿರಲು ಆ ಹಾದಿಕಾರನು ಹ್ಯಾಗೆ ಹ್ಯಾಗೆ ಘಾಳಿ ಘನವಾಯಿತೋ ಹಾಗೆ ಹಾಗೆ ಹೆಚ್ಚಿಕೆ ತನ್ನ ಕಂಬಳಿಯನ್ನು ಸುತ್ತಿ ಕೊಂಡು ಬಿಗಿದು ಹಿಡಿದದರಿಂದ ಅವನ ಕಂಬಳಿಯನ್ನು ಹಾರಿಸ ಕೂಡದೇ ಘಾಳಿಯು ಕುಂಟಿಸಿ ನಿಂತಿತು. ಆ ಮೇಲೆ ಸೂರ್ಯನು ಆಕಾಶದಲ್ಲಿ ಪಸರಿಸಿದ ಘಾಳಿಯನ್ನು ಓಡಿಸಿ ಶೀತ ಇಲ್ಲದ ಹಾಗೆ ಮಾಡಿ ಮೆಲ್ಲ ಮೆಲ್ಲಗೆ ತನ್ನ ಉಷ್ಣವಾದ ಕಿರಣಗಳನ್ನು ಆ ಹಾದಿಕಾರನ ಮೇಲೆ ಯೋಜಿಸಿದಲ್ಲಿ ಅದರಿಂದ ಆ ಹಾದಿಕಾರನು ಬಹಳವಾದ ಆ ಘರ್ಮ ತಡಿಯದೆ ತಾನು ಹೊದ್ದು ಕೊಂಡ ಗೊಂಗಡಿಯನ್ನು ತೆಗದು ಹಾಕಿ ಶೀತಳವಾದ ಹುಲ್ಲಿನ ಮೇಲೆ ಹೋಗಿ ನೆರಳ ನೋಡಿ ಕೊಂಡು ಕುಳಿತು ಕೊಂಡನು.

ತಾತ್ಪರ್ಯ.

ದೇವರು ಮನುಷ್ಯ ಮಾತ್ರರಲ್ಲಿ ಪ್ರಕೃತಿಗಳ ಹೀಗೇ ಇಟ್ಟಿದ್ದಾನೆ: ತನಗೆ ಎರಡನೆಯವರು ಮಾಡಿದ ಬಲಾತ್ಕಾರ ಸಹಿಸೋದಿಲ್ಲ. ಆದ ಕಾರಣ ತಾನು ಅನ್ಯನ ಕೈಯಿಂದ ಏನಾದರೂ ಮಾತು ಮಾಡಿಸೋದಕ್ಕೆ ಬಲಾತ್ಕಾರ ಮಾಡ ಹತ್ತಿದರೆ ಅವನು ಆ ಮಾತು ಮಾಡ ಬಾರದೆಂದು ಆಗ್ರಹ ಮಾತ್ರ ದೃಢ ಮಾಡುತ್ತಾನೆ. ಅಸಹ್ಯ ಶಬ್ದಗಳು ಒಬ್ಬನ ಹೃದಯವನ್ನು ಹೆಪ್ಪುಗೊಳಿಸಿ ಹಟಾ ವೃದ್ಧಿತ್ತಾವೆ ಹ್ಯಾಗೋ ಹಾಗೆಯೇ ಕೋಮಲ ಶಬ್ದಗಳೂ ಶಾಂತಾಚಾರವ ವೃದ್ಧಿ ಮಾಡಿ ಹೃದಯ ಕರಗಿಸಿ ಉಪದೇಶ ಕೇಳೋದಕ್ಕೆ ಅನುಕೂಲ ಮಾಡುತ್ತಾವೆ. ಬಹಳ ದಿವಸ ತೊಟ್ಟು ಅಭ್ಯಾಸವಾದಂಥಾದ್ದು ಒಂದು ಪರಿ ಮಾತು ಬಲಿಷ್ಠವಾಗಿ ಮನೆ ಮಾಡಿ ಇರುತ್ತದಲ್ಲಾ; ಅದನ್ನು ಅನಾಯಾಸದಿಂದ ಬಿಡಿಸಿ ಬಿಟ್ಟೇನು ಎಂದು ಹತ್ತಿದರೆ ಅವನಿಗೆ ಪ್ರಾಣ ಹೋದರೂ ಬಿಡೋದಿಲ್ಲ ಎಂಬ ವಿಷಯದ ಅಭಿಮಾನ ಬೀಳುತ್ತದೆ. ಅದಕ್ಕೆ ಸಾರಾಂಶ: ತಂಗಾಳಿಯಂತೆ ಯಾವನು ವಿರೋಧೋಪಚಾರವನ್ನು ವ್ಯರ್ಥಾ ಸಂಕಲ್ಪಿಸಿ ದೃಢ ಹಿಡಿಯ ಬೇಕೆಂದು ಹತ್ತುವವನಿಗೆ ಅದು ಸಿದ್ಧಿಸುವದಿಲ್ಲ. ಮತ್ತೆ ಸೂರ್ಯನ ಬಿಸಲಿನ ಹಾಗೆ ಉಗ್ರವಿಲ್ಲದೆ ಯುಕ್ತಿಯ ಯೋಚಿಸಿ ದಯ ತೋರಿಸುವವನಿಗೆ ತಾನು ಇಚ್ಛಿಸಿದ್ದು ಸಿದ್ಧಿಗೆ ಹೋದೀತು.

---

೧೦೦. ನೀತಿಕಥೆ.

ದಾಸಿಯೂ ತೋಳವೂ.

ಒಂದು ರಾತ್ರಿಯಲ್ಲಿ ಒಬ್ಬ ಹಟಮಾರಿ ಹುಡುಗನು ಅತ್ತು ರಂಪಾ ಮಾಡುತ್ತಾ ಇರಲಾಗಿ, ಆ ಹುಡುಗನು ಸುಮ್ಮನಾಗೋದಕ್ಕೆ ಆ ದಾಸಿಯು ನಾನಾ ಪ್ರಕಾರ ಮಾಡಿದಳು; ಏನಂದರೂ ಕೇಳಲೊಲ್ಲನು. ಆಗ್ಯೆ ಆ ದಾಸಿಯು ಆ ಹುಡುಗನಿಗೆ ಎಲೋ ನೀನು ಸುಮ್ಮಗಾಗದಿದ್ದರೆ ಹೊರಬಾಗಲ ಹೊರಗೆ ತೋಳ ಬಂದದೆ, ಅದಕ್ಕೆ ನಿನ್ನನ್ನು ಹಿಡ ಕೊಟ್ಟೇನೆಂದು ಹೇಳಿದಳು. ಆ ಸಮಯದಲ್ಲಿ ತಲಬಾಗಿಲ ಹೊರಗೆ ನಿಶ್ಚಯವಾಗಿ ಒಂದು ತೋಳ ಬಂದು ನಿಂತಿತ್ತು. ಅದು ಈ ದಾಸಿಯ ಶಬ್ದವನ್ನು ಕೇಳಿ ಇ

ವಳು ಆಡಿದಂತೆ ಮಾಡ್ತ್ಯಾಳು ಎಂಬ ವಿಶ್ವಾಸದಿಂದ ದಾರಿ ನೋಡಿ ಕೊಳ್ಳು ತ್ತಾ ಬಹಳ ಹೊತ್ತು ಸ್ಥಿರವಾಗಿ ನಿಂತಿತು. ಆ ಹುಡುಗನು ಅಳುತ್ತಳು ತ್ತಾ ದಣಿದು ನಿದ್ದೆಗೊಂಡು ಮಲಗಿತು. ಆ ಬಡ ತೋಳವು ಉಪೋಷ ಣದಿಂದ ಕಾದು ಇದ್ದು ಪುನಹಾ ಅರಣ್ಯಕ್ಕೆ ಹೋಗೋ ಸಮಯದಲ್ಲಿ ಮಾರ್ಗದೊಳಗೆ ಅದನ್ನ ಒಂದು ನರಿಯು ಕಂಡು, ಅಪ್ಪಯ್ಯನೇ, ನಿನ್ನ ಸ ಮಾಚಾರವೇನು, ಈವತ್ತು ನಿನ್ನ ಕಾಲುಗುಂದಿ ಜಾಡ್ಯವಾದ ಹಾಗೆ ಕಾ ಣಿಸುತ್ತದೆ ಎಂದು ಕೇಳಿದಲ್ಲಿ, ತೋಳವು ಎಲೋ ಮಿತ್ರನಾದಾತನೇ, ಅ ದರ ವೃತ್ತಾಂತವೇನೂ ಕೇಳ ಬೇಡ, ಮೊದಲೇ ನಾನು ಹುಚ್ಚನು, ದಾ ಸಿಯ ಮಾತು ಖರೆ ಎಂದು ಮೋಸ ಹೋದೆನು ಅಂದಿತು.

ತಾತ್ಪರ್ಯ.

ಯಾರಾದರೂ ಬರೇ ಮಾತಿನ ಮೇಲೆ ವಿಶ್ವಾಸ ಇಡಲಾಗದು. ಈ ವಿಷಯ ದಿಂದ ಕೆಲವು ಕವಿಗಳು ಅನೃತ ಲಕ್ಷಣ ಸ್ತ್ರೀಯರಲ್ಲೇ ಎಂದು ಸ್ಥಾಪಿಸಿ ಕವನಗ ಳ ಮಾಡಿದ್ಧಾರೆ. ಆದರೆ ಮಾತು ಸಮರ್ಪಕ ಕಾಣಿಸೋದಿಲ್ಲವು. ಬಹಳ ಸ್ತ್ರೀಯ ರು ಚಂಚಲರೇ ಇರುತ್ತಾರೆ. ಅವರ ಮಾತಿನಲ್ಲಿ ತಾಳು ಇರೋದಿಲ್ಲವು. ಮತ್ತು ಕೆಲವು ಸ್ತ್ರೀಯರುಗಳು ಆಡಿದ ವಚನಕ್ಕೆ ಪ್ರಾಣವನ್ನು ಕೊಡುತ್ತಾರೆ. ಆ ಪಕ್ಷ ದಲ್ಲಿ ಪುರುಷರಿಗೆ ಹ್ಯಾಗೆ ಸತ್ಯ ಮಿಥ್ಯವೂ ಎರಡು ಉಂಟೋ ಹಾಗೆ ಸ್ತ್ರೀಯರು ಗಳಲ್ಲಿಯೂ ಉಂಟು. ಮುಖ್ಯ ಸ್ತ್ರೀಯೇ ಆಗಲಿ, ಪುರುಷನೇ ಆಗಲಿ, ಯಾರ ದಾದರೂ ಬರಿಯ ಮಾತಿನ ಮೇಲೆ ವಿಶ್ವಾಸ ಇಡಲಾಗದು. ಅವರು ಆಡಿದ ಮಾ ತುಗಳು ಅವರಿಂದ ಕೂಡಿ ಬಂದಾವೋ ಬಾರವೋ ಎಂದು ಇದರ ವಿಚಾರ ಮಾಡು ತ್ತಾ ಇರ ಬೇಕು.

---

೧೦೧. ನೀತಿಕಥೆ.

ಆವಿಯೂ ಗರುಡಪಕ್ಷಿಯೂ.

ಒಂದು ಆವಿಯು ಭೂಮಿಯ ಮೇಲೆ ನಡನಡದು ಬಹಳ ಕಚಿ ಬಿಚಿಯಾಗಿ ಅದಕ್ಕೆ ಆಕಾಶಮಾರ್ಗದಿಂದ ಈ ಸೃಷ್ಟಿಯ ಚಮತ್ಕಾರ ಹ್ಯಾ

ಗೆ ಕಾಣಿಸುತ್ತದೋ ನೋಡಬೇಕು ಎಂದು ತಿಳಿದು ಪಕ್ಷಿಗಳನ್ನ ಕರದು, ಯಾವದಾದರೂ ಪಕ್ಷಿ ನನ್ನನ್ನು ತೆಗದು ಕೊಂಡು ಆಕಾಶಮಾರ್ಗದಲ್ಲಿ ತಿರುಗಿಸಿ ಈ ಸೃಷ್ಟಿಯ ಕೌತುಕವೆಲ್ಲಾ ತೋರಿಸಿದ್ದೇ ಉಂಟಾದರೆ ಆ ಪಕ್ಷಿಗೆ, ಭೂಮಿಯ ಒಳಗಿರುವ ರತ್ನದ ಗಣಿಯು ನನಗೆ ಗೊತ್ತದೆ, ಅದನ್ನ ನಾನು ತೋರಿಸಿ ಕೊಟ್ಟೇನು ಎಂದು ಹೇಳಿತು. ಗುರುಡಪಕ್ಷಿಯು ಆ ಮಾತಿಗೆ ಒಡಂಬಟ್ಟು ಆವಿಯನ್ನು ತೆಗದು ಕೊಂಡು ಆಕಾಶಮಾರ್ಗದಲ್ಲಿ ತಿರುಗಿಸಿ ಪೃಥ್ವಿಯ ಮೇಲಣ ಸರ್ವ ಚಮತ್ಕಾರವ ತೋರಿಸಿತು. ಆ ಮೇಲೆ ಆವಿಯ ಕೂಡಾ ಗರುಡಪಕ್ಷಿಯು, ಇನ್ನು ಮೇಲೆ ನಿನ್ನ ರತ್ನದ ಗಣಿಯು ಎಲ್ಲಿ ಉಂಟು ತೋರಿಸು ಅಂಬೋಣ, ಆವಿಯು ಗಾಗರಿಸಿ ಹುಚ್ಚುಸೋಗು ತಕ್ಕೊಳ್ಳಲಿಕ್ಕೆ ಹತ್ತಿತು. ಅದನ್ನ ಕಂಡು ಗರುಡನು ಕೋಪಿಷ್ಟನಾಗಿ ಆವಿಯ ಶರೀರದ ಮರ್ಮಸ್ಥಾನದಲ್ಲಿ ತನ್ನ ನಖಗಳನ್ನು ಊರಿ ತತ್ಕಾಲವೇ ಅದನ್ನು ಕೊಂದು ಹಾಕಿತು.

ತಾತ್ಪರ್ಯ.

ಪ್ರತಿಜ್ಞೆ ಮಾಡಿದ ಹಾಗೆ ನಿದರ್ಶನಕ್ಕೆ ಬಾರದೆ ಹೋದರೆ ಅದರಲ್ಲಿ ಅವನಿಗೆ ಹಾನಿಯುಂಟು. ಬಹಳ ಮಾನಸ್ಥನಾಗಿದ್ದರೆ ಅವನ ಪ್ರತಿಷ್ಠೆಯು ಹೋಗುತ್ತದೆ. ಸಾಧಾರಣ ಪುರುಷನಾಗಿದ್ದರೆ ಅವನ ಪ್ರತಿಷ್ಠೆಯು ಹೋಗಿ ದುಃಖಾಪತ್ತುಗಳು ಪ್ರಾಪ್ತಿಯಾಗುತ್ತಾವೆ. ಮತ್ತು ಕೇವಲ ಸುಳ್ಳನಾಗಿ ಎರಡನೆಯವರ ವಂಚಿಸುವವನಿಗೆ ಸರ್ವಸ್ವವು ಹೋಗಿ ಪ್ರಾಣಕ್ಕೂ ವಿಘ್ನ ಬರುತ್ತದೆ.

---

೧೦೨. ನೀತಿಕಥೆ.

ವನವಾಸಿಯೂ ಮಾರ್ಗಸ್ಥನೂ.

ಛಳಿಗಾಲದಲ್ಲಿ ಒಬ್ಬಾನೊಬ್ಬ ವನವಾಸಿ ಅರಣ್ಯದಲ್ಲಿ ತಿರುಗುತ್ತಾ ಇರಲಾಗಿ ಒಬ್ಬ ದಾರಿಕಾರನು ಥಂಡಿಯಿಂದ ಪ್ರೇತಸ್ವರೂಪವಾಗಿದ್ದದ್ದನ್ನು ಕಂಡು ವನವಾಸಿ ದಯ ಪುಟ್ಟಿ, ಎಲೋ ತಮ್ಮನೇ, ಈ ಸಮೀಪದಲ್ಲಿ

ನಮ್ಮ ಗುಡ್ಡದೊಳಗೆ ಗವಿ ಅದೆ, ಅಲ್ಲಿಗೆ ನೀನು ಬಂದದ್ದಾದರೆ ನಿನ್ನ ಥಳಿ ಓಡಿಸುತ್ತೇನೆ ಎನ್ನಲು, ಅದ ಕೇಳಿ ಉಭಯತರು ಗುಹದಲ್ಲಿ ಹೋಗಿ ಕುಂಡ್ರಲು, ಅಲ್ಲಿ ಅಗ್ಗಿಷ್ಟಿಕೆ ಪ್ರಜ್ವಲಿಸಿತು. ಅದರ ಯೋಗದಿಂದ ಥಂಡಿ ಕಳದು ಬಹಳ ಉಷ್ಣಿತರಾದರು. ಆದರೂ ದಾರಿಕಾರನು ಥಳಿಯಿಂದ ನಡುನಡುಗಿ ಅವನ ಬೊಟ್ಟುಗಳು ಶೇಡು ಹಿಡಿದು ಶಡದ ಕಾರಣದಿಂದ ಕಾಸೋ ನಿಮಿತ್ತ ಬೆಂಕಿ ಊದೂದಿ ಕಾಸಿದನು. ಆಗ ವನವಾಸಿ, ನೀನು ಹೀಗ್ಯಾಕೆ ಮಾಡುತ್ತೀ ಎಂಬೋಣ, ಅವನು ಥಂಡಿಯನ್ನು ಕಳಕೊಂಬೋ ನಿಮಿತ್ತ ಎನ್ನಲು, ಆ ವನವಾಸಿ ಮಹಾ ದಯವಂತನಾದ ಕಾರಣ ಅತಿ ದಯ ಹುಟ್ಟಿ ಇವನು ಕೈ ಕಾಸೋ ಗುಣವನ್ನು ನೋಡಿ ಆಶ್ಚರ್ಯವಾಗಿ ಇವನಿಗೆ ಗುಣವಂತನೆಂದು ಕಂದಮೂಲವನ್ನು ಪಾಳ ಮಾಡಿ ಫಲಾರಕ್ಕೆ ಅವನ ಮುಂದೆ ಇಡುತ್ತಾ ಇರಲಾಗಿ, ಅದು ಬಹಳ ಉಷ್ಣವಾಗಿದ್ದ ಕಾರಣ ತನ್ನ ಕೈ ಊದೂದಿ ಕೊಳ್ಳುವದನ್ನು ಕಂಡು ವನವಾಸಿಯು, ನೀನು ಕೈಯ್ಯಾಕೆ ಊದಿ ಕೊಳ್ಳುತ್ತೀ ಎನ್ನಲಾಗಿ, ಬಹಳ ಸುಡುತ್ತದೆ, ತಣ್ಣಗೆ ಮಾಡಿ ಕೊಳ್ಳುತ್ತೇನೆ ಎನ್ನಲು, ವನವಾಸಿಗೆ ಕೋಪ ಬಂದು, ಎಲೋ ನಿನ್ನ ಸಮಾನ ದುರ್ಗುಣಿಗಳ ಸಂಬಂಧ ನನಗೆ ಇರ ಬಾರದು, ಒಂದು ಬಾಯ್ಯಲ್ಲಿ ತಣ್ಣಗೆ ಮಾಡುತ್ತೇನೆ, ಒಂದು ಬಾಯ್ಯಲ್ಲಿ ಬಿಸಿ ಮಾಡುತ್ತೇನೆ ಎಂದು ಹೇಳುತ್ತೀ, ನೀನು ಕೇವಲ ಅಯೋಗ್ಯನು ಎಂದು ವನವಾಸಿಯು ಅವನ ಕುತ್ತಿಗೆ ಹಿಡಿದು ತನ್ನ ಗವಿಯಿಂದ ಹೊರಗೆ ಹಾಕಿ ಬಿಟ್ಟನು.

ತಾತ್ಪರ್ಯ.

ಒಂದೇ ಮುಖದಿಂದ ನಿಂದೆ ಅಥವಾ ಸ್ತುತಿ ಹೀಗೆ ವಿರುದ್ಧಾಚರಣೆ ಮಾಡುವವನಿಗೆ ಸಜ್ಜನರು ಅಸಹ್ಯ ಪಡುವದು ಯೋಗ್ಯವದೆ. ಕೆಲವು ಜನರು ತಮ್ಮ ಕಾರ್ಯಸಾಧಿಸೋ ಸಲವಾಗಿ ರುಚಿಯಾದಂಥಾ, ಕೇಳುವವರಿಗೆ ಆಶೆ ವೃದ್ಧಿಯಾಗುವಂಥಾ ಮಾತುಗಳನ್ನೇ ಆಡುತ್ತಿರುತ್ತಾರೆ. ತಮ್ಮ ಕಾರ್ಯ ಸಾಧಿಸಿದ ಮೇಲೆ ಅದೇ ತಮ್ಮ ಮುಖದಿಂದ ಅವನಿಗೆ ಶೀರಾ ನಿರಾಶೆ ಮಾಡಿ ಬಿಡುತ್ತಾರೆ. ಈ ರೀತಿ

ಚೆಲೋದಲ್ಲ. ಈ ದುರ್ಗುಣಗಳಿಂದ ದೊಡ್ಡ ದೊಡ್ಡವರು ಈ ಸಣ್ಣ ಬುದ್ಧಿಗೆ ಕೂಡಿ ಶ್ರಮದೊಳಗೆ ಬಿದ್ದಿದ್ದಾರೆ. ಅದರಿಂದ ಹೀಗೂ ಹಾಗೂ ಮಾತಾಡುವ ಪುರುಷನ ಸಂಗಡ ಅಲ್ಪ ಪ್ರಸಂಗವೇ ಚೆಲೋದು.

---

೧೦೩. ನೀತಿಕಥೆ.

ತೇಗಳು ನೆಕ್ಕಿದ ತಲೆಯ ಶಿಪಾಯಿ.

ಒಬ್ಬಾನೊಬ್ಬ ಶಿಪಾಯಿೂ ತಲೆಯ ಕೂದಲುಗಳು ವಯಸ್ಸಿನ ಪರತ್ವದಿಂದ ಉದುರಿ ಹೋದ ಕಾರಣ ಪಟ್ಟುದಲೆಯಾಯಿತು. ಅದನ್ನ ಯಾರಿಗೂ ತೋರಗೊಡ ಬಾರದು ಎಂದು ಅವನು ಯಾವಾಗಲೂ ಟೊಪ್ಪಿಗೆಯನ್ನು ಹಾಕುತ್ತಿದ್ದ. ಒಂದು ದಿವಸ ಪೇಟೆಗೆ ಹೋಗಿರಲಾಗಿ ಅಕಸ್ಮಾತ್ ಬಿರುಷಾಳಿಗೆ ಟೊಪ್ಪಿಗೆಯು ಕೆಳಗೆ ಬಿತ್ತು. ಆ ಸಮಯದಲ್ಲಿ ಸಂಗಡಲಿದ್ದ ಕೆಲವು ಜನರು ಆ ಗೃಹಸ್ಥಗೆ ವಿನೋದಾ ಮಾಡುವವರಾದರು. ಅದನ್ನ ಕಂಡು ಅವನು ಅವರಕ್ಕಿಂತಲೂ ಹಾಸ್ಯ ಮಾಡಿ, ಅಪ್ಪಗಳಿರಾ, ನನ್ನ ಟೊಪ್ಪಿಗೆ ನನ್ನ ತಲೆಯ ಮೇಲೆ ಇದ್ದದ್ದು ನನಗೆ ನಿಂದಿರದೆ ಹೋಯಿತು, ಆದ್ದರಿಂದ ಎರಡನೇ ಜನರು ಸುಮ್ಮಗೆ ಯಾಕೆ ನಿಂತಾರು ಅಂದನು.

ತಾತ್ಪರ್ಯ.

ಝುಗಳಗಂಟರಾದ ಮನುಷ್ಯರು ಎರಡನೆಯವರಿಗೂ ತಮಗೂ ಕೂಡಾ ಸುಖ ಕೊಡುವವರಾಗೋದಿಲ್ಲ. ಕುಚೇಷ್ಟೆಯ ಪುರುಷನು ಸರ್ವಥಾ ಝುಗಳವನ್ನೇ ಶೋಧಿಸುತ್ತಾ ಇರ ಬೇಕು, ಅಥವಾ ಛಿದ್ರಗಳ ಹುಡುಕಿ ಎರಡನೆಯವರಿಗೆ ದೋಷ ಇಡುತ್ತಿರ ಬೇಕು. ಇಂಥಾ ಚೇಷ್ಟೆ ಇದ್ದ ಪುರುಷಗೆ ಯಾರ್ಯಾರು ಶೇರುವದಿಲ್ಲ. ಈ ಒಂದು ದುರ್ಗುಣದಿಂದ ಅವನ ಉತ್ತಮ ಗುಣಗಳು ಸಹಾ ಲೋಪವಾಗುತ್ತಾವೆ. ಅದರ ಸಲವಾಗಿ ತನ್ನ ಚಿತ್ತ ಸ್ವಸ್ಥ ಇಡಲಿಕ್ಕೂ ಜನರ ಪ್ರೀತಿ ತನಗೆ ಸಂಪಾದಿಸಲಿಕ್ಕೂ ಅಪೇಕ್ಷಿಸುವವನು ಕಲಹದ ನಿಮಿತ್ತ ಶೋಧಿಸೋದಿಲ್ಲ. ಅಕಸ್ಮಾತ್ ದೃಷ್ಟಿಗೆ ಬಿದ್ದರೂ ಅದರ ಮೇಲೆ ಲಕ್ಷ್ಯ ಇಡೋದಿಲ್ಲ. ಲಕ್ಷ್ಯದಲ್ಲಿ ಬರ ತಕ್ಕ ಸಂ

ಮಂಥವಿದ್ದರೂ ಅದನ್ನ ವಿನೋದದ ಮೇಲೆ ಹಾಕಿ ಕೊಳ್ಳುತ್ತಾನೆ. ಮತ್ತು ಕೆಲವರ ಚೇಷ್ಟೆಗಳು ಹೀಗೆ ಇರುತ್ತವೆ: ಎರಡನೆಯವರ ದುರ್ಗುಣಗಳ ಎತ್ತುತ್ತಿರ ಬೇಕು; ಅದರಿಂದ ಇವರಿಗೆ ಸಂತಾಪ ವೃದ್ಧಿಯಾಗುತ್ತಾ ಹೋದ. ಹಾಗೆ ತಾವು ಸಮಾಧಾನಿಗಳು ಆಗುತ್ತಿರ ಬೇಕು. ಮತ್ತು ಅವರಿಗೆ ಅಧಿಕಾಧಿಕ ಮರ್ಮಭೇದಗಳ ಮಾಡುತ್ತಾ ಹೋಗ ಬೇಕು. ಇಂಥಾ ದುಷ್ಟರಿಗೆ ಅಂತಃಕರಣೆಯಾದ ಪುರುಷನು ಹಲ್ಲು ಮುರಿಯೋದಕ್ಕೆ ಉಪಾಯವೇನಂದರೆ, ಅವರ ಮಾತಿಗೆ ತಾನು ಸಂತಾಪ ಪಡದೆ ಕೌತುಕ ಮಾಡಿ ಆ ಮಾತು ವಿನೋದದ ಮೇಲೆ ತಕ್ಕೊಳ್ಳ ಬೇಕು. ಮತ್ತೆ ಸಮಯೋಚಿತವಾಗಿ ಹೀಗೆ ಮಾಡ ಬೇಕು: ಯಾವಾತ ತನ್ನ ಅಪಹಾಸ್ಯ ಮಾಡುತ್ತಾನೋ ಅವನಿಗಿಂತ ಮುಂದಾಗಿ ತನ್ನ ಅಪಹಾಸ್ಯ ತಾನೇ ಮಾಡಿ ಕೊಳ್ಳ ಬೇಕು.

---

೧೦೪. ನೀತಿಕಥೆ.

ನೌಲೂ ಬೆಳ್ಳಕ್ಕಿಯೂ.

ಒಂದು ಸಮಯದಲ್ಲಿ ಒಂದು ನೌಲು ಬೆಳ್ಳಕ್ಕಿಯನ್ನು ಕಂಡು ತನ್ನ ಹಿಂಗರಿಗಳನ್ನು ಪಸರಿಸಿ ಮೇಲಕ್ಕೆ ಎತ್ತಿ, ಬೆಳ್ಳಕ್ಕಿಯು ತುಚ್ಛ ಪ್ರಾಣಿ ಎಂದು ಮನಸ್ಸಿನಲ್ಲಿ ತಂದು ಅದರ ಮುಂಡೆ ತನ್ನ ಶೃಂಗಾರವರ್ಣದ ಗರಿಯ ಶೋಭೆಯನ್ನು ತೋರಿಸಲಿಕ್ಕೆ ಹತ್ತೋಣ, ಆ ಬೆಳ್ಳಕ್ಕಿಯು ಇದರ ಗರ್ವ ಇಳಿಸ ಬೇಕೆಂದು, ಎಲೋ ನೌಲೇ, ನಿನ್ನ ಸುಂದರಗರಿಗಳ ದೊಡ್ಡಸ್ತಿಕೆಯು ಪ್ರಮಾಣವಾದರೆ ನಿಮ್ಮ ನೌಲುಗಳ ಜಾತಿ ದೊಡ್ಡದು ಖರೆ; ಆದರೆ ನನಗೆ ಹೀಗೆ ಕಾಣುತ್ತದೆ: ನೀನು ಭೂಮಿಯ ಮೇಲೆ ಸಣ್ಣ ಹುಡುಗರ ಹಾಗೆ ಆಡೋದರಕ್ಕಿಂತಲೂ ಅಂತರಿಕ್ಷಮಾರ್ಗದಲ್ಲಿ ತಿರುಗುವದು ಹೆಚ್ಚು, ಇದಕ್ಕೆ ನೀನು ಸಾಮರ್ಥ್ಯವಂತನಾದಿ ಎಂದರೆ ನಿನ್ನ ದೊಡ್ಡಸ್ತನ ಸರಿ ಎಂದು ಹೇಳಿತು.

ತಾತ್ಪರ್ಯ.

ತನ್ನಲ್ಲಿರುವ ಒಂದು ಪರಿ ಸದ್ಗುಣವು ಎರಡನೆಯವರಲ್ಲಿ ಇಲ್ಲವೆಂದು ತುಚ್ಛೀಕರಿಸಲಾಗದು, ಅಥವಾ ಎರಡನೆಯವರಲ್ಲಿ ಸದ್ಗುಣ ಇದ್ದದ್ದು ತನ್ನಲ್ಲಿ ಇಲ್ಲವೆಂದು ತಾ

ನು ತುಚ್ಛ ಎಂದು ಕೊಳ್ಳಲಾಗದು. ಸರ್ವ ಗುಣಸಂಪನ್ನರು ಯಾರೂ ಇರೋದಿಲ್ಲವು. ಆದ ಕಾರಣ ಯಾರಿಗೂ ತುಚ್ಛವೆಂದು ಎಣಿಸೋದು ಮೂರ್ಖತ್ವವು. ಮೇಲೆ ಹೇಳಿದ ಮಾತಿನಲ್ಲಿ ನೌಲು ತನ್ನ ಬಾಹ್ಯಕಾರ್ಯ ಶೋಭೆಯಿಂದ ತಾನು ಪ್ರತಿಷ್ಠವೆಂದು ಕೊಂಡಿತು. ಅದಕ್ಕೆ ಸುಜ್ಞರಾದವರು ಬಾಹ್ಯಕಾರ್ಯದ ಭೂಷಣಗಳನ್ನು ನಿಶ್ಚಯಕ್ಕೆ ತರೋದಿಲ್ಲ. ಹುಡುಗರಿಗೂ ಅಜ್ಞಾನಿಗಳಿಗೂ ಇಂಥವರಿಗೆ ಮಾತ್ರ ಬಾಹ್ಯಕಾರ್ಯಗಳು ಮೋಹಿಸಲಿಕ್ಕೆ ಶಕ್ತವಾಗುತ್ತವೆ. ಆದರೆ ಬುದ್ಧಿವಂತರಾದವರು ಅಂತರಂಗದ ಗುಣಗಳಿಗೆ ಬೆಲೆ ಹೆಚ್ಚು ಮಾಡುತ್ತಾರೆ. ಅಂತರಂಗದ ಸದ್ವಾಸನೆ ಮತ್ತೆ ಲೀನತ್ವ ಇದ್ದಂಥವರಿಗೆ ದೊಡ್ಡವರೆಂದು ಹೇಳುತ್ತಾರೆ. ಶಾಲುಜೋಡಿ, ಭರಜರಿವಸ್ತ್ರ, ರತ್ನದ ಅಲಂಕಾರ, ಇವುಗಳಲ್ಲಿ ಇರುವ ದೊಡ್ಡಸ್ತನ ಏನಂದರೆ: ಆ ವಸ್ತುಗಳ ಮಾಡಿದವನಿಗೆ ಭೂಷಣವಲ್ಲದೆ ಹೊದ್ದಿದ್ದವನಿಗೆ ಏನೂ ಇಲ್ಲ. ಇದರ ಮುಖ್ಯ ತಾತ್ಪರ್ಯ ಇಷ್ಟೇ: ಶಾಲುಜೋಡು ಆದಿ ಮಾಡಿ ಕೊಂಡು ವಸ್ತುಗಳ ಯೋಗದಿಂದ ತಮ್ಮ ಕಡಿಗೆ ಸಂಭಾವಿತತ್ವ ತಂದು ಕೊಳ್ಳುತ್ತಾರೆ. ಆ ಸಂಭಾವಿತತ್ವ ತಮ್ಮನ್ನೇ ಠಕ್ಕಿಸುತ್ತದೆ ಎಂದು ತಿಳಿಯ ಬೇಕು.

---

೧೦೫. ನೀತಿಕಥೆ.

ಇಬ್ಬರು ಮಾರ್ಗಸ್ಥರೂ ಕರಡಿಯೂ.

ಇಬ್ಬರು ಪುರುಷರು ದೇಶಾಂತರ ಹೋಗೋದಕ್ಕೆ ಹೊರಟು ತಮ್ಮೊಳಗೆ ಪರಸ್ಪರವಾಗಿ ಏನಾದರೂ ಅಡಚಣೀ ಆಪತ್ತುಗಳು ಬಂದದ್ದಾದರೆ ಒಬ್ಬನು ಒಬ್ಬಗೆ ಬಿಡ ಬಾರದು ಎಂದು ಆಣೆಭಾಷೆಗಳಿಂದ ನಿಶ್ಚಯ ಮಾಡಿ ಕೊಂಡು ಹೋಗುತ್ತಿರಲಿಕ್ಕೆ, ಒಂದು ಕರಡಿಯು ಅಡವಿಯೊಳಗೆ ಧಾವಿಸಿ ಮೈ ಮೇಲೆ ಬಂತು. ಆ ಸಮಯದಲ್ಲಿ ಆ ಇಬ್ಬರಲ್ಲಿ ಒಬ್ಬನು ತೆಳ್ಳನವನಾಗಿ ಲಘು ಶರೀರದವನಾಗಿರುವದರಿಂದ ಶೀಘ್ರದಿಂದ ಓಡಿ ಹೋಗಿ ಗಿಡ ಹತ್ತಿದನು. ಎರಡನೆಯವನು ಸ್ಥೂಲ ಶರೀರದವನು, ತನ್ನಿಂದ ಓಡೋಣ ಆಗವಲ್ಲದೆಂದು ದಮ್ಮು ಹಿಡುಕೊಂಡು ಭೂಮಿಯ ಮೇಲೆ ನಿಪ್ರಾಣನಾಗಿ ಮಲಗಿದನು. ಆಗ ಆ ಕರಡಿಯು ಅವನ ಸ

ಮಿಾಪಕ್ಕೆ ಬಂದು ಅವನ ಕಿವಿಯನ್ನು ಮೂಸಿ ನೋಡಿ ಇದು ಸತ್ತ ಹೆಣ ವೆಂದು ತಿಳಿದು ಅವನಿಗೆ ಏನೂ ಉಪದ್ರ ಮಾಡದೆ ತಿರಿಗಿ ಹೋದ ಮೇಲೆ, ಗಿಡ ಏರಿದವನು ಇಳಿದು ಕೆಳಗೆ ಬಂದು ನಗುತ್ತಾ, ಎಲೋ, ಗೆಳೆಯನೇ, ನಾನು ಗಿಡದ ಮೇಲಿನಿಂದ ನೋಡುತ್ತಿದ್ದೆ, ಆ ಕರಡಿಯು ನಿನ್ನ ಕಿವಿಯೊಳಗೆ ಏನು ಹೇಳಿತು, ಅದು ಏನು ಹೇಳು ಅಂದಲ್ಲಿ, ಅವನು — ನಿನ್ನಂಥಾ ಹೀನನ ವಚನದ ಮೇಲೆ ಎಂದೆಂದೂ ವಿಶ್ವಾಸ ಇಡಲಾಗದು ಎಂದು ಕರಡಿ ನನಗೆ ಹೇಳಿತು ಅಂದನು.

ತಾತ್ಪರ್ಯ.

ತಮಗೆ ಅಗತ್ಯವಿಲ್ಲದ ವೇಳ್ಯದಲ್ಲಿ ಜನರು ಬಹಳ ಮಾತುಗಳ ತೋರಿಸುತ್ತಾರೆ, ಭರವಸದ ಮಾತುಗಳನ್ನು ಆಡುತ್ತಾರೆ. ಅವರೊಳಗೆ ತನ್ನ ಅಡಚಣೀ ವೇಳ್ಯದಲ್ಲಿ ತನ್ನ ಕೆಲಸಕ್ಕೆ ಬೀಳುವವರು ದೊರಿಯುವದು ಕಠಿಣವದೆ. ಯಾವನೂ ಲೋಕದ ರೀತಿಗಳನ್ನು ತಿಳಿದವನು ಇಂಥಾ ಮಾತುಗಳ ಮೇಲೆ ನಂಬಿಗೆ ಇಡುವದಿಲ್ಲವು. ಬರೇ ಮಾತುಗಳನ್ನು ಯಾವನೂ ಆಡ ಬಾರದು, ಆಡಿದರೂ ಕೇಳುವವನು ಅಂಥಾ ಮಾತಿನ ಮೇಲೆ ವಿಶ್ವಾಸವನ್ನಿಡ ಬಾರದು. ಇದರಿಂದ ಈ ಉಭಯತರಿಗೂ ನಷ್ಟವದೆ.

---

೧೦೬. ನೀತಿಕಥೆ.

ಹುಚ್ಚ ಚೇಷ್ಟೇ ನಾಯಿಯು.

ಒಬ್ಬ ಮನುಷ್ಯನ ಹಂತೀಲಿ ಒಂದು ನಾಯಿ ಇತ್ತು. ಆ ನಾಯಿ ಕಂಡ ಕಂಡವರ ಮೇಲೆ ಧಾವಿಸ ಹೋಗಿ ಕಚ್ಚುತ್ತಿತ್ತು. ಆಗ ಅದರ ಧಣಿಯು ಅದರ ಕುತ್ತಿಗೆಗೆ ಗುದಿಗೆ ಕಟ್ಟಿದನು. ಅದರಿಂದ ಆ ನಾಯಿ ತಾನು ಪ್ರತಿಷ್ಠೆಯುಳ್ಳವನು ಎಂದು ತಿಳಿದು ನೆರೆ ಹೊರೆಯ ನಾಯಿಗಳಿಗೆ ತಿರಸ್ಕಾರ ಮಾಡಿ ತನ್ನ ಸಮಿಾಪಕ್ಕೆ ನಿಲ್ಲಗೊಡುತ್ತಿದ್ದಿಲ್ಲವು. ಆ ನೆರೆಯ ನಾಯಿಗಳೊಳಗೆ ಒಂದು ಮುದಿ ನಾಯಿ — ಎಲೋ ನೀನು ನಿನ್ನ ಕೊರಳ

ಲ್ಲಿರುವ ಒಡವೆಯ ಶೋಭೆಯಿಂದ ನಾನು ದೊಡ್ಡವನೆಂದು ಎಣಿಸುತ್ತಿದ್ದರೆ ನಿನ್ನ ಸ್ಥಳದಲ್ಲಿ ನೀನು ಎಣಿಸಿಕೋ, ಆದರೆ ನಿನ್ನ ಧಣಿಯು ನಿನಗೆ ಈ ಒಡವೆ ಪ್ರತಿಷ್ಠೆಯ ಗುರ್ತು ಎಂದು ಕಟ್ಟಿಲ್ಲ, ಅಪ್ರತಿಷ್ಠೆಯ ಗುರ್ತು ಎಂದು ಕಟ್ಟಿದ್ದಾನೆ ಅಂದಿತು.

ತಾತ್ಪರ್ಯ.

ಕೆಲವು ಕೆಟ್ಟ ಸ್ವಭಾವದ ಜನರು ಹೀಗೆ ಅಭಿಮಾನಿಗಳೂ ಅಲ್ಪ ತಿಳುವಿಕೆಯವರೂ ಇರುತ್ತಾರೆ. ಅವರಲ್ಲಿ ಗುರ್ತಿಗಾಗಿ ದೇವರು ಒಂದೊಂದೇ ಗುಣ ಇಟ್ಟಿರಲಾಗಿ ಅದರ ಅರ್ಥಗಳ ತಮ್ಮ ಮನಸ್ಸಿಗೆ ಬಂದಂತೆ ಮಾಡಿ ಕೊಂಡು ತಮ್ಮ ಸ್ಥಳದಲ್ಲಿ ತಾವು ದೊಡ್ಡವರೆಂದು ಎಣಿಸುತ್ತಾ ಇದ್ದಾರೆ. ಅವರಿಗೆ ನಾಲ್ವರೊಳಗೆ ನೆಟ್ಟಗೆ ಮಾತಾಡಲಿಕ್ಕೆ ಬರೋದಿಲ್ಲ. ಅವರ ಮಾತುಗಳ ಕೇಳಿ ಜನರು ನಗುತ್ತಾರೆ. ಅದರೆ ಅಂಥವನು ಹೀಗೆ ತಿಳುಕೊಳ್ಳುತ್ತಾನೆ: ನನ್ನ ಬುದ್ಧಿ ಬಹಳ ವಿಶಾಲವಾದದ್ದು, ಒಂದು ಸಮಯದಲ್ಲೇ ಅನೇಕ ಕಲ್ಪನೆಗಳು ಸೂಚಿಸುತ್ತಾವೆ, ಅದರಿಂದ ನನಗೆ ಹೀಗಾಗುತ್ತದೆ. ಮೂರ್ಖನೆಂದೂ ಅಥವಾ ಉತ್ತಮ ಶಿಕ್ಷೆ ಇಲ್ಲದವನೆಂದೂ ಜನರು ಅವನನ್ನು ತಿರಸ್ಕರಿಸಿ ಅವನ ಸಂಗತಿ ಮಾಡೋದಿಲ್ಲವು. ಆದರೆ ಅವನು, ನನ್ನ ತೇಜವನ್ನು ಜನರು ಸಹಿಸಲಾರದ ಕಾರಣ ನನ್ನ ಸಮೀಪಕ್ಕೆ ಬರೋದಿಲ್ಲವು ಎಂದು ಹಚ್ಚಿ ಕೊಳ್ಳುತ್ತಾನೆ. ಇಂಥವರು ಕಿಂಚಿತ್ ವಿಚಾರ ಮಾಡಿ ನೋಡಿದ್ದುಂಟಾದರೆ ಅದರಿಂದ ತಮಗೆ ಬಹಳ ಸ್ವಾರ್ಥವಾದೀತು.

---

೧೦೭. ನೀತಿಕಥೆ.

ಒಂದು ಅಡ್ನಾಡಿಹೋತು.

ಒಂದಾನೊಂದು ಅಡ್ನಾಡಿಹೋತು ಸ್ವತಂತ್ರದಿಂದ ತಿರುಗುತ್ತಾ ಒಂದು ದಿವಸ ನೇಗಲು ಹೂಡಿದ ಎತ್ತುಗಳನ್ನ ಕಂಡು ದೂಷಿಸಿ, ಎಲೋ ನಿಮ್ಮ ಧಣಿಗೋಸ್ಕರ ಹೆಗಲ ಮೇಲೆ ನೊಗ ಹೊತ್ತು ಕೊಂಡು ಎಂಟು ಪ್ರಹರವು ನೇಗಲು ಎಳೆಯುತ್ತೀರಿ, ನೀವು ಗಾವದಿ ಸಣ್ಣ ಪ್ರಾಣಿಗಳಾಗಿದ್ಧೀರಿ, ಪರಾಧೀನತ್ವವು ನಿಮಗೆ ಸವಿ ಕಾಣುತ್ತದೆ; ನನ್ನ ನೋಡಿರಿ ಕಂ

ಡಿರಾ, ಕಾಲ ಹ್ಯಾಗೆ ಕಳಿಯುತ್ತೇನೆ; ಮನಸ್ಸಿಗೆ ಬಂದ ಕಡೆಗೆ ಹೋಗುತ್ತೇನೆ; ತಣ್ಣಗಿದ್ದ ನೆರಳಿನಲ್ಲಿ ಕುಂದ್ರುತ್ತೇನೆ; ಉಲ್ಲಾಸ ಬಂದ ಹಾಗೆ ಹಾರ್‍ಯಾಡಿ ಕುಣಿಯುತ್ತೇನೆ; ಸಂತೋಷ ಪಡುತ್ತೇನೆ; ನೀರಡಿಸಿದರೆ ನಿರ್ಮಲವಾದ ಪ್ರವಾಹದ ನೀರು ಕುಡಿಯುತ್ತೇನೆ; ನಿಮಗೆ ಕಲಕ ನೀರು ಶಿಕ್ಕ ಬೇಕಾದರೂ ಪ್ರಯಾಸವಡೆ ಎಂಪಾಕ್ಷಣಕ್ಕೆ, ಆ ಎತ್ತುಗಳು ಕೆಳಗೆ ಮೋರೆ ಮಾಡಿ ಕೊಂಡು ಸುಮ್ಮಗೆ ಕೆಲಸ ಮಾಡುತ್ತಿದ್ದವು. ಕೆಲವು ದಿವಸದ ಮೇಲೆ ಆ ಊರೊಳಗೆ ಒಂದು ಉತ್ಸಹವಾಯಿತು. ಆ ದಿವಸ ಹೋತಿನ ಧಣಿಯು ಅದರ ಕೊರಳಿಗೆ ಹುವ್ವಿನ ಮಾಲೆ ಹಾಕಿ ಶೃಂಗರಿಸಿ ದೇವರಿಗೆ ಹರಿಕೆ ಒಪ್ಪಿಸಲಿಕ್ಕೆ ವೈದು ಅದರ ಕುತ್ತಿಗೇ ಮೇಲೆ ಆಯುಧವ ಇಟ್ಟನು. ಆ ಸಮಯದಲ್ಲಿ ಆ ಎತ್ತುಗಳು ಬಂದು ಹೋತಿನ ಕಿವಿಯೊಳಗೆ, ಎಲೋ ಮೂರ್ಖನೇ, ನಿನ್ನ ಸ್ವತಂತ್ರದ ಪರಿಣಾಮ ಹ್ಯಾಗಾಯಿತು, ನೋಡಿದಿಯಾ, ನಿನ್ನನ್ನು ಇದೇ ಕೆಲಸಕ್ಕಾಗಿ ಸ್ವತಂತ್ರದಿಂದ ಇಟ್ಟಿರುವದು ಸರಿ; ಹಾಗಾದರೆ ನಮ್ಮ ಅವಸ್ಥೆಯೇ ಚಲೋದು ನೋಡು ಎಂದು ಹೇಳಿದವು.

ತಾತ್ಪರ್ಯ.

ಎರಡನೆಯವರು ವಿಪತ್ತಿನಲ್ಲಿರುವಾಗ ಅವರಿಗೆ ಟೊಣಪೇಲಿ ಹೊಡದಂತೆ ಮಾತಾಡುವವರು ಅಂಥವರು ಮೂರ್ಖರೂ ಉನ್ಮತ್ತರೂ ಆಗಿದ್ದಾರೆ. ಅವರ ಕೆಲಸಗಳು ವಿಪರೀತವಾಗಿ ಸರ್ವದಾ ತಿರುಗುತ್ತಾ ಇದ್ದಾವು. ವಿಪತ್ತು ಇದ್ದವರಿಗೆ ಒಂದು ಸಮಯದಲ್ಲಿ ಸಂಪತ್ತು ಪ್ರಾಪ್ತಿಯಾಗುತ್ತದೆ; ಸಂಪತ್ತು ಇದ್ದವರಿಗೆ ವಿಪತ್ತು ಬರುತ್ತದೆ. ಇದಲ್ಲದೆ ಮನಸ್ಸಿಗೆ ಬಂದಂತೆ ತಿರುಗುತ್ತಾರಲ್ಲ, ಅವರಿಗಂತು ಪರಿಣಾಮವೇ ಇಲ್ಲ. ಉದ್ಯೋಗಿಗಳು ತಮ್ಮ ಉದ್ಯೋಗದಲ್ಲಿದ್ದ ಫಲವನ್ನು ಭೋಗಿಸಿ ಕೊಂಡು ಸುಖಿಸುತ್ತಾರೆ. ನೀರುದ್ಯೋಗಿಗಳು, ನಿರಂಕುಶಪುರುಷರು, ಇವರ ಚಲಿತಾರ್ಥ ನಡಿಯೋದಿಲ್ಲಾದ ಕಾರಣ ಅವರು ಮಂದಿಗೆ ವಂಚಿಸಲಿಕ್ಕೆ ಹತ್ತುತ್ತಾರೆ; ಬಲಾತ್ಕಾರ ಮಾಡುತ್ತಾರೆ; ಕಳವು ಮಾಡುತ್ತಾರೆ. ಇಂಥಾ ಕರ್ಮಗಳ ಮಾಡಿ, ನಾವು ಸುಖ ಅನುಭೋಗಿಸುತ್ತಿದ್ದೇವೆಂದು ಸಜ್ಜನರಿಗೆ ನಕ್ಕರೆ, ನಗವಲ್ಲರ್‍ಯಾಕೆ. ಆದರೆ ಸಜ್ಜನ

ರು ಅವರಂತೆ ಮಾಡೋದಿಲ್ಲ. ತಮ್ಮ ಶ್ರಮದಿಂದ ದೊರಕಿದಷ್ಟರ ಒಳಗೆ ಚಲಿತಾರ್ಥ ಮಾಡಿ ಕೊಂಡು ಇರುತ್ತಾರೆ. ಆದರೆ ಕಳ್ಳನೂ ಸುಳ್ಳನೂ ವಂಚಕನೂ ಇಂಥವರಿಗೆ ಕಟ್ಟಕಡೆಯಲ್ಲಿ ಶೆರೆಮನೆಯೂ ಶೂಲವೂ ಎಂದು, ಉದ್ಯೋಗಿಗಳಿಗೆ ತಮ್ಮ ಸ್ಥಿತಿಗಳು ಚಲೋದು ಎಂದು ತಿಳದೀತು. ಮತ್ತು ಅವರು ಕೆಲಸವಿಲ್ಲದ್ದಕ್ಕೆ ವ್ಯಸನಕ್ಕೆ ಬೀಳುತ್ತಾರೆ. ತಿಂಬುಂಬೋ ಸರ್ವ ವ್ಯವಹಾರಪ್ರಮಾಣವು ಉಳಿಯೋದಿಲ್ಲ. ಅದರಿಂದ ಆ ಜನರು ಅಕಾಲಮರಣಕ್ಕೆ ಒಳಗಾಗುತ್ತಾರೆ.

---

೧೦೮. ನೀತಿಕಥೆ.

ಚಿರತೆಯೂ ನರಿಯೂ.

ಒಂದಾನೊಂದು ಸಮಯದಲ್ಲಿ ಒಂದು ಚಿರತೆಯ ಮನಸ್ಸಿನಲ್ಲಿ ತೋರಿದ್ದೇನಂದರೆ: ನನ್ನ ಮೈ ಮೇಲಿನ ವಿಚಿತ್ರವಾದ ಸುಂದರಚುಕ್ಕಿಗಳ ನೋಡಲಾಗಿ ಚಲುವಿಕೆಯಲ್ಲಿ ನನ್ನ ಸಮಾನ ಸಿಂಹವು ಸಹಾ ಹೇಳಕೂಡದು, ಇನ್ನು ಉಳಿದವರ ಪದಾರ್ಥವೇನು ಎಂದು ತಿಳಿದು ಪಶುಮಾತ್ರಗಳನ್ನು ತಿರಸ್ಕಾರ ಮಾಡಲಿಕ್ಕೆ ಹತ್ತಿತು. ಅದು ತಿಳಿದು ನರಿಯು, ತಂದೆಯೇ, ನೀನು ಬಹಳ ತಪ್ಪುತ್ತಿದ್ದಿ; ಆದರೆ ನಾನು ಒಂದು ಮಾತು ಹೇಳುತ್ತೇನೆ; ನೀನು ಮನಸ್ಸಿನಲ್ಲಿ ನಿಶ್ಚೈಸಿ ಕೊಳ್ಳ ಬೇಕು; ಅಂತರಂಗದ ಸದ್ಗುಣಗಳ ಭೂಷಣದ ಹೊರ್ತು ಬಾಹ್ಯದ ಭೂಷಣಕ್ಕೆ ಸುಜ್ಞರು ಭೂಷಣವೆಂಬೋದಿಲ್ಲ ಅಂದಿತು.

ತಾತ್ಪರ್ಯ.

ಸೌಂದರ್ಯನಾಗಿರುವವನು ತಾನು ಸುಂದರನೆಂಬ ಗರ್ವ ಮಾಡದೆ ಪ್ರವರ್ತಿಸಿದರೆ ಅವನ ಸುಂದರತ್ವ ಅವನಿಗೆ ಬಹಳ ಶೋಭೆ ಕೊಡುತ್ತದೆ. ಗುಣವಂತನಾದ ಸೌಂದರ್ಯ ಉಳ್ಳವನು ನಿರ್ಗರ್ವಿಯಾದರೆ ಅವನ ಕೀರ್ತಿ ವೃದ್ಧಿಸುತ್ತಾ ಇದ್ದೀತು.

---

೧೯. ನೀತಿಕಥೆ.

ಬಾವುಗವೂ ನರಿಯೂ.

ಒಂದಾನೊಂದು ಸಮಯದಲ್ಲಿ ಬಾವುಗವೂ ನರಿಯೂ ಇಬ್ಬರೂ ಕೂಡಿ ವನಾಂತರದೊಳಗೆ ಒಂದು ಗಿಡದ ನೆರಳಲ್ಲಿ ರಾಜಕಾರ್ಯದ ಪ್ರಸ್ತಾಪವಾಗಿ ಮಾತನಾಡುತ್ತಾ ಇಬ್ಬರೂ ಕುಳುತಿರಲಾಗಿ ನರಿಯು, ಬಾವುಗರಾಯನೇ, ಕದಾಚಿತ್ ಇಲ್ಲಿ ನಮ್ಮ ಮೇಲೆ ಅವಘಡಪ್ರಸಂಗ ಬಿದ್ದದ್ದುಂಟಾದರೆ ನಾನು ಸಹಸ್ರ ಯುಕ್ತಿಗಳಿಂದ ನಿರ್ವಾಹ ಮಾಡಿ ಕೊಂಡೇನು; ಆದರೆ ನಿನ್ನದು ಮಾತ್ರ ನನಗೆ ಬಲು ಕಠಿಣ ಕಾಣಿಸುತ್ತದೆ ಎಂದಲ್ಲಿ, ಬಾವುಗನು ಮಾತನಾಡಿದ್ದು: ಎಲೇ ಗೆಳೆಯನೇ, ನಾನು ಒಂದೇ ಯುಕ್ತಿ ಮಾತ್ರ ನಿಶ್ಚಯ ತಿಳಿದವನು, ಆ ಯುಕ್ತಿ ತಪ್ಪಿದರೆ ನನಗೆ ಬೇರೆ ಚಲೋ ಗತಿ ಇಲ್ಲಾ ಎಂಬೋಣ, ನರಿಯು ಅಪ್ಪಯ್ಯಾ ಕೇಳಿದೆಯೊ, ನಿನ್ನ ಚಿಂತೆಯೇ ನನಗೆ ಬಹಳ ಹತ್ತಿಯದೆ, ಹಾಗಾದರೆ ಒಂದೆರಡು ಯುಕ್ತಿಗಳಾದರೂ ಕಲಿಸಿದರೆ ನಿನಗೆ ತಿಳದೀತು; ಇಂದಿನ ಕಾಲ ಹೀಗದೆ: ಅವರವರದನ್ನು ಅವರವರೇ ನೋಡಿ ಕೊಳ್ಳ ಬೇಕು. ಒಳ್ಳೇದರ್ಣ್ಲಾ, ಶರಣು ತಕ್ಕೋ, ನಾವು ಹೋಗಿ ಬರುತ್ತೇವೆ ಎಂದು ಹೇಳಿ, ಹೋಗುವ ಸಂಧಿಗೆ, ಹಹಹಾ ಎನ್ನುತ್ತ ಒಬ್ಬ ಬೇಟೆಗಾರನು ನಾಯಿಯನ್ನ ಕರಕೊಂಡು ಬೆನ್ನಗಡೆ ಚಾಗಕ್ಕೆ ಬರೋಣ, ಆ ಸಮಯದಲ್ಲಿ ಬಾವುಗಗೆ ಗಿಡದ ಮೇಲೆ ಏರುವಲ್ಲಿ ಒಳ್ಳೇ ಯುಕ್ತಿ ಗೊತ್ತಿತ್ತು; ಆ ಯುಕ್ತಿಯಿಂದ ತನ್ನ ಜೀವ ಉಳಿಸಿ ಕೊಂಡಿತು. ನರಿಗೆ ಸಹಸ್ರ ಯುಕ್ತಿಗಳು ಇದ್ದರೂ ಆ ಸಮಯಕ್ಕೆ ಒಂದೂ ಉಪಯೋಗಕ್ಕೆ ಬಾರದೆ, ಘಾಬರಿಯಿಂದ ನರಿಯು ಓಡುವ ಸಮಯದಲ್ಲಿ ನಾಯಿಗಳು ಬೆನ್ನು ಹತ್ತಿ ಅದನ್ನ ಹಿಡಿದವು.

ತಾತ್ಪರ್ಯ.

ಎರಡನೆಯುವರಿಗಿಂತ ತಾನು ಬುದ್ಧಿವಂತನು ಎಂದು ಜಂಭ ಮಾಡುವವನು

ಜಾತ್ಯಮೂರ್ಖನಾಗಿರುತ್ತಾನೆ. ಬುದ್ಧಿವಂತನು ಉಚಿತವಾದ ಪ್ರಸಂಗದಲ್ಲಿ ತನ್ನ ಬುದ್ಧಿಯನ್ನು ಉಪಯೋಗಿಸ ಬೇಕು. ಜನರಲ್ಲಿ ವೃಥಾ ಅಹಂಕಾರ ತೋರಿಸುವದರಿಂದ ಅದು ಅಸಹ್ಯವೇ ಸರಿ. ಬುದ್ಧಿ ಇರುವದು ಒಂದೇ. ಆದರೆ ಉತ್ತಮ ಬುದ್ಧಿ ಇದ್ದವನಿಗೆ ಅದು ಸಮಯಕ್ಕೆ ಸೂಚಿಸಿ ಬರುವದರಿಂದ ತಾರುಣೋಪಾಯವಾದೀತು. ಸಹಸ್ರ ಬುದ್ಧಿಯುಳ್ಳವನೇ ಆದರೂ ಅವನು ಸಹಸ್ರಾವಧಿ ಕಲ್ಪನೆಗಳ ಮಾಡುತ್ತಾ ಕುಂಠಿತನಾಗಿ ಕಡೆಗೆ ಮುಣುಗಿ ಹೋದಾನು. ಆದ್ದರಿಂದ ಒಂದೇ ವಿದ್ಯೆ ಆದರೂ ಒಳ್ಳಿತಾಗಿ ಪೂರ್ಣವಾಗಿ ಬರ ಬೇಕು. ಅದೇ ವಿದ್ಯೆ ಕೆಲಸದ್ದು. ಅನೇಕ ವಿದ್ಯೆಗಳು ಬಂದರೆ ಸಮಯಕ್ಕೆ ಒಂದೂ ಉಪಯೋಗಕ್ಕೆ ಬೀಳ ಬೇಕು. ಇಲ್ಲದಿದ್ದರೆ ಆ ವಿದ್ಯೆಗಳಿಂದ ದುಃಖ ಮಾತ್ರ ಲಭ್ಯವಾಗುವದು.

---

೧೧೦. ನೀತಿಕಥೆ.

ಗಿಡಗವೂ ಚಂಡೋಲಪಕ್ಷಿಯೂ.

ಒಂದಾನೊಂದು ಚಂಡೋಲಪಕ್ಷಿಯು ಹುಲುಗಲೀ ಗಿಡದ ಮೇಲೆ ಕುಳಿತು ಗಾನಾ ಮಾಡುತ್ತಾ ಇರಲಾಗಿ, ಆ ನಾದದಿಂದ ಸರ್ವ ಅರಣ್ಯವು ತುಂಬಿತು. ಆ ಧ್ವನಿಯನ್ನು ಕೇಳಿ ಬಭುಕ್ಷಿತವಾದ ಗಿಡಗಪಕ್ಷಿಯು ತಿರುಗುತ್ತಿತ್ತು. ಆ ಗಿಡಗವು ಹುಲುಗಲೀ ಗಿಡದ ಮೇಲೆ ಎರಗಿ ಆ ಚಂಡೋಲಪಕ್ಷಿಯನ್ನು ತನ್ನ ಕಾಲುಗಳ ಪಂಜರದಿಂದ ಹಿಡಿದು ಇನ್ನು ಭಕ್ಷಿಸ ಬೇಕೆಂಬದರೊಳಗೆ ಆ ಚಂಡೋಲಪಕ್ಷಿಯು ಹೀಗೆ ಮಾತಾಡುತ್ತದೆ: ಎಲೋ ನನ್ನ ಮೇಲೆ ದಯ ಮಾಡು, ಈ ನಿಷ್ಠುರ ಕರ್ಮವು ನಿನಗೆ ಯೋಗ್ಯವಲ್ಲಾ, ನೋಡಲಾಗಿ ನಾನು ನಿನಗೆ ಅಪರಾಧಿಯೂ ಅಲ್ಲ, ನನ್ನ ತಿಂದರೂ ನಿನಗೆ ಒಂದು ತುತ್ತು ಪೂರ್ತಿ ಆಗೋ ಹಾಗಿಲ್ಲ, ಯಾವದಾದರೂ ಒಂದು ದೊಡ್ಡ ಪಕ್ಷಿಯನ್ನು ಹೊಡದರೆ ನಿನ್ನ ಕೀರ್ತಿಯು ವೃದ್ಧಿಯಾಗಿ ನಿನ್ನ ಕ್ಷುಧಾ ತೃಪ್ತಿಯೂ ಆದೀತು, ಆದ ಕಾರಣ ಬಡವನಾದ ನನಗೆ ಹೋಗ ಬಿಡು ಅಂದಲ್ಲಿ ಗಿಡಗಪಕ್ಷಿ ಹಹ ಅಪ್ಪ

ನೇ, ನಿನಗೆ ಬೇಕಾದಷ್ಟು ಮಾತಾಡು, ನಾನು ಈ ಹೊತ್ತು ಸಮಗ್ರ ಉಪವಾಸದಿಂದ ಇದ್ದೇನೆ, ದೈವಗತಿಯಿಂದ ನೀನು ನನ್ನ ಕೈಗೆ ದೊರಕಿದಿ, ಈಗ ನನ್ನ ಬಿಡು, ದೊಡ್ಡವುಗಳನ್ನ ಹಿಡಿ ಎನ್ನುತ್ತಿದ್ದೀಯಲ್ಲಾ, ನೀನು ಅಂದಂತೆ ಮಾಡಿದರೆ ಜನರು ಯಾರಿಗೆ ಹುಚ್ಚನೆಂದು ಹೇಳ್ಯಾರು ನೋಡು.

ತಾತ್ಪರ್ಯ.

ಉದ್ಯೋಗಿ ಹೆಚ್ಚು ಕಡಿಮೆ ಲಾಭದ ಕಡೆಗೆ ನೋಡೋದಿಲ್ಲವು. ಕೈಗೆ ಬಂದದ್ದು ಅಂಗೀಕರಿಸುತ್ತಾನೆ. ಕಾಲಗತಿ ತಿಳಿಯೋದಿಲ್ಲವು. ಸಹಸ್ರ ಪ್ರಕಾರದ ವಿಘ್ನಗಳು ನಡುವೆ ಬರುತ್ತಾವೆ. ಮನುಷ್ಯನ ಬುದ್ಧಿ ಚಂಚಲವು. ದೇಹ ಕ್ಷಣಭಂಗುರ. ಈ ರೀತಿ ನಡಿಯುವದನ್ನು ಕಂಡು ಪ್ರಸ್ತುತಕ್ಕೆ ಶಿಕ್ಕಿದ ಲಾಭಗಳ ಬಿಟ್ಟು ಆ ವಿದ್ಯಮಾನದ ಭರವಸಗಳ ಹಿಡಿಯುವವನೇ ಮೂರ್ಖನು. ಕಡೆಗೆ ಪಶ್ಚಾತ್ತಾಪಕ್ಕೆ ಬೀಳುತ್ತಾನೆ.

---

೧೧೧. ನೀತಿಕಥೆ.

ಮೊಂಡಬಾಲದ ನರಿಯು.

ಒಂದು ನರಿಯು ಕಬ್ಬಿಣದ ಸರಪಣಿ ತನ್ನ ಬಾಲಕ್ಕೆ ಶಿಕ್ಕಿರಲಾಗಿ ಅದನ್ನು ಬಿಡಿಸಿ ಕೊಳ್ಳಲಿಕ್ಕೆ ಉಪಾಯವಿಲ್ಲದೇ ಆ ಬಾಲವನ್ನು ಜಗ್ಗಿ ಹರಕೊಂಡು ಓಡಿ ಹೋಗಿ, ಪ್ರಾಣದ ಮೇಲೆ ಬಂದಂಥಾದ್ದು ಬಾಲದ ಮೇಲೆ ಹೋಯಿತೆಂದು ಸಂತೋಷ ಪಟ್ಟು ತನ್ನ ಹಿಂಡಿನ ಒಳಗೆ ಹೋಗುತ್ತಾ ಇರಲಾಗಿ, ಆ ಸಮಯದಲ್ಲಿ ತನ್ನ ಮೋಟ ಬಾಲದ ಖೇದ ಮನಸ್ಸಿನಲ್ಲಿ ಬಹಳ ಹಿಡಿದು ನಾನು ಸತ್ತಿದ್ದರೆ ಒಳ್ಳೇದಿತ್ತು, ಆದರೂ ಊನವಾಗಿ ಇರೋದು ಬಹಳ ಕೆಟ್ಟದ್ದು, ಆದದ್ದಕ್ಕೆ ಉಪಾಯವಿಲ್ಲ, ಇಂಥಾದನ್ನು ಹ್ಯಾಗಾದರೂ ಶೋಭೆಯನ್ನು ಮಾಡ ಬೇಕೆಂದು ಯೋಚನೆ ಮಾಡುತ್ತಿರಲಾಗಿ, ಒಂದು ಯುಕ್ತಿ ಸೂಚಿಸಿತು, ಏನಂದರೆ: ನರಿಗಳ ಹಿಂಡು ಯಾವತ್ತು ನನ್ನಂತೆಯೇ ಆಗ ಬೇಕು; ಆದರೆ ಅವರಿಗೆ ಹೀಗೆ ಹೇಳ ಬೇಕು:

ನಾನು ನನ್ನ ಬಾಲವ ಕೊಟ್ಟು ಇದು ಒಂದು ಹೊಸತಾದ ಚಲ್ವಿಕೆಯ ಮಾಡಿದ್ದೇನೆ, ಇದರಿಂದ ಪ್ರತಿಷ್ಠೆಯದೆ, ನಿಮಗೆ ಸರ್ವತ್ರರಿಗೂ ಮಾಡಲಿಕ್ಕೆ ಯೋಗ್ಯವದೆ. ಈ ರೀತಿ ಯೋಚನೆ ಮಾಡಿ ಕೊಂಡು ನರಿಗಳ ಹಿಂಡಿನೊಳಗೆ ಕೂಡಿ ಮುಂದೆ ಹೊಸ ಪರಿಯ ವಿಷಯಕ್ಕೆ ಬಹಳವಾಗಿ ವಾಕ್ಪಾಂಡಿತ್ಯ ಮಾಡಲಿಕ್ಕೆ ಹತ್ತಿತು. ಏನಂದರೆ: ಸರ್ವೇ ಸಮಸ್ತ ನರಿ ನಾಯಕರೇ, ಈ ಬಾಲದಿಂದ ಏನೇನೂ ಹಿತವಲ್ಲ, ಅದರ ಒಳಗಾಗಿ ನರಿಯ ಬಾಲವೆಂದರೆ ಕೇವಲ ಹೊರೆ ಮಾತ್ರವೇ ಸರಿ, ಆದ ಕಾರಣ ಬಾಲವನ್ನು ತ್ಯಾಗ ಮಾಡಿದಲ್ಲಿ ವಿಲಕ್ಷಣಭೂಷಣ ಒಂದು, ಓಡ ಬೇಕಾದರೆ ಆಲಸ್ಯ ತಟ್ಟೋದಿಲ್ಲ ಒಂದು, ಹೀಗೆರಡು ಇಂಥಾ ಉಪಯೋಗ ಮನಸ್ಸಿನಲ್ಲಿ ತಿಳಿದು ನೋಡಲಾಗಿ, ಅದು ಅನುಭವಕ್ಕೆ ನಿಶ್ಚಯವಾಯಿತು; ಮತ್ತು ಬಾಲವನ್ನು ಕಡಿದು ಹಾಕಿದಾರಭ್ಯ ನಾನು ಬಹಳ ಸುಖಿಯಾಗಿದ್ದೇನೆ; ಇಂಥಾ ಸುಖವು ನನಗೆ ಜನ್ಮದಾರಭ್ಯವಾಗಿದ್ದಿಲ್ಲವು. ಹೀಗೆ ಹೇಳಿ, ಈ ಹಿಂಡಿನೊಳಗೆ ಎಷ್ಟು ಮಂದಿ ನನ್ನ ಶಿಷ್ಯರಾಗುತ್ತೀರಿ ಎಂದು ಸರ್ವರ ಮೋರೆ ನೋಡೋ ಸಮಯದಲ್ಲಿ, ಅದರೊಳಗಿನ ಒಂದು ಮುದಿ ನರಿಯು ಕಳ್ಳಕರ್ಮದಲ್ಲಿ ಬಹಳ ನಿಪುಣವಾಗಿದ್ದದರಿಂದ ಅದು ಇದರ ಕೃತ್ರಿಮವನ್ನು ತಿಳಿದು ಮೋರೆ ಸೊಟ್ಟ ಮಾಡಿ ಕೊಂಡು ಹೇಳಿದ್ದು: ಎಲೋ ಪಂಡಿತರಾಯನೇ, ಇನ್ನು ಮೇಲೆ ನಿಮ್ಮ ಪಾಂಡಿತ್ಯ ಸಾಕು ಮಾಡಬೇಕು, ತಮಗೆ ಬಾಲ ಕಳಕೊಂಡದ್ದು ಹಿತವಾಗಿದ್ದೀತು, ಇದರಲ್ಲಿ ಸಂಶಯವಿಲ್ಲ, ಆದರೆ ನಿಮಗೆ ಬಂದ ಹಾಗೆ ಪ್ರಸಂಗ ನಮ್ಮ ಮೇಲೆ ಬಂದಂದು ನಾವು ಬಾಲಗಳನ್ನು ಬಿಟ್ಟೇವು.

ತಾತ್ಪರ್ಯ.

ಸರ್ವ ಜನರು ನರಿಯಂತೆ ಜಾಗ್ರತರಾಗಿದ್ದರೆ ಯಾರ್ಯಾರೂ ನೂತನ ಬಗೆ ತಕ್ಕೊಳ್ಳಲಿಕ್ಕಿಲ್ಲವು. ಬಹಳ ತರದ ವಸ್ತ್ರಪ್ರಾವರಣಾಲಂಕಾರಾದಿಗಳಲ್ಲಿ ಅಥವಾ ತಿಂಬೋ ವಿಷಯದಲ್ಲಿ ಹೊಸ ಬಗೆ ಹೇಳುತ್ತಾರೆ. ಅದರಲ್ಲಿ ಇದ್ದ ನಿಶ್ಚಯ ನೋ

ಡಲಿಕ್ಕೆ ಹೋದರೆ ಅವರು ಅಹಂಕಾರ ದೊರಕಿಸುವದರ ದೆಶೆಯಿಂದಲೂ ಅಥವಾ ತಮ್ಮಲ್ಲಿ ಏನಾದರೂ ಅವಗುಣವಿದ್ದರೆ ಅವು ಮುಚ್ಚೋ ನಿಮಿತ್ತವಾಗಿಯೂ ಹೊಸ ಪರಿ ತೋರಿಸುತ್ತಾರೆ.

---

೧೧೬. ನೀತಿಕಥೆ.

ಮುದುಕನೂ ಮೃತ್ಯುವೂ.

ಒಬ್ಬ ಕೇವಲ ಶಿಥಿಲವಾದ ಮುದಿ ಪುರುಷನು ಕಟ್ಟಿಗೆ ತರಲಿಕ್ಕೆ ಅಡವಿಗೆ ಹೋಗಿ ಅಲ್ಲಿ ಕಟ್ಟಿಗೆಗಳನ್ನ ಕೂಡಿಸಿ ಹೊರೆಯನ್ನು ಕಟ್ಟಿ ತಲೆಯ ಮೇಲೆ ಹೊತ್ತು ಕೊಂಡು ಬಹಳ ಕಷ್ಟದಿಂದ ಹೆಜ್ಜೆಗಳ ಇಡುತ್ತಿಡುತ್ತಾ ಮನೆಗೆ ಬರುವಾಗ ಹಾದಿ ಬಹಳ ದೂರವಾದ್ದರಿಂದ ತಲೆಯ ಮೇಲೆ ಇರುವ ದೊಡ್ಡ ಹೊರೆಯನ್ನು ಚೆಲ್ಲಿ ಕುಳಿತು ಕೊಂಡಿರುವ ಸಮಯದಲ್ಲಿ ಅವನು, ಎಲೋ ಮೃತ್ಯುವೇ, ಪ್ರಾಣಿ ಮಾತ್ರಕ್ಕೂ ವಿಶ್ರಾಂತಿ ಕೊಡುವವನೇ, ನೀನು ಬಂದು ಒಂದೇ ಸಾರಿಗೆ ಈ ಸರ್ವ ದುಃಖದೊಳಗಿಂದ ಬಿಡಿಸು ಎಂಬೋಣ, ಆ ಮಾತು ಕೇಳಿ ಮೃತ್ಯುವು ಆ ಮುದುಕನ ಮುಂದೆ ಬಂದು ನಿಂತು, ಅಪ್ಪಾ, ನನಗೆ ನೀನು ಯಾಕೆ ಸ್ಮರಿಸಿದೆ ಎಂದು ಕೇಳೋಣ, ಮೃತ್ಯು ಕರೆದ ಕೂಡಲೇ ಬರುವಂತೆ ಸಮೀಪದಲ್ಲೇ ಅದೆ ಎಂದು ಆ ಗ್ರಹಸ್ಥಗೆ ತಿಳಿದಿದ್ದಿಲ್ಲ; ಆದರೆ ಭಯಂಕರವಾದ ಮೂರ್ತಿಯನ್ನು ನೋಡಿ ಸ್ಮೃತಿದಪ್ಪಿ ಬಿದ್ದು ಕೆಲವು ಹೊತ್ತಿನ ಮೇಲೆ ಎಚ್ಚರಾಗಿ ನಡನಡುಗುತ್ತಾ, ಎಲೋ ಮೃತ್ಯುಮಹಾರಾಯನೇ, ನಾನು ಕೇವಲ ಅಶಕ್ತನು, ತಲೆಯ ಮೇಲಣ ಹೊರೆ ದೊಡ್ಡದು, ಅದು ಅಕಸ್ಮಾತ್ ಕೆಳಿಯಕ್ಕೆ ಬಿತ್ತು, ಅಪ್ಪಾ ಅದನ್ನು ಎತ್ತಿ ಹೊರಿಸ ಬೇಕು ಎಂದು ನಾನು ನಿನ್ನ ಸ್ಮರಿಸಿದ್ದೇ ಹೊರ್ತು ಬೇರೆ ಕೆಲಸವೇನೂ ಇಲ್ಲ, ಇದು ಖರೆ ಕಂಡ್ಯಾ, ನಾನು ನಿನಗೆ ಸಲಿಗೆ ಮಾಡಿದೆನೆಂದು ಸಿಟ್ಟು ಬಂದಿದ್ದರೆ ನಿನ್ನ ಕಾಲಿಗೆ ಅಡ್ಡ

ಬೀಳುತ್ತೇನೆ, ಕ್ಷಮೆಗೊಂಡು ಬಂದ ಮಾರ್ಗವಾಗಿ ತಿರಿಗಿ ಹೋಗೋ ಹಾಗೆ ಮಾಡಿರಿ ಎಂದು ಹೇಳಿದನು.

ತಾತ್ಪರ್ಯ.

ಜನರಿಗೆ ಇದು ರೀತಿಯೇ ಬಿದ್ದದೆ: ಅಲ್ಪ ಸ್ವಲ್ಪ ಸಂಕಟಕ್ಕೆ ನನಗೆ ಸಾವು ಬಂದಿದ್ದರೆ ಮೃತ್ಯುವಿಗೆ ವಿನೋದ ಮಾಡುತ್ತಾ ಇರ ಬೇಕು. ಮೃತ್ಯು ಯಾವ ಪರ್ಯಂತರ ದೂರವಿದ್ದೀತೋ ಆ ವರೆಗೆ ಈ ಮಾತು ಛಂದವು, ಮರಣವು ಸಮಿಾಪಿಸಿ ಬರುತ್ತಲೇ ಪುನಹಾ ಸಂಸಾರದ ಭಾರವನ್ನು ವಹಿಸಲಿಕ್ಕೆ ಸಿದ್ಧವಾಗುತ್ತಾರೆ; ಮತ್ತೂ ಕೆಲವು ದಿವಸ ಬದುಕ ಬೇಕೆಂಬ ಆಶೆಯು ಹೆಚ್ಚುತ್ತದೆ. ಎಲುವು ಮಾತ್ರ ಶೇಷ ಉಳದವರಿಗೂ ಸಹಸ್ರ ವಿಪತ್ತುಗಳ ಅನುಭವಿಸುವವರಿಗೂ ಅತಿ ವೃದ್ಧರಿಗೂ ಇನ್ನು ಬದುಕ ಬೇಕೆಂಬ ಪ್ರೀತಿಯು ಬಹಳವಾಗುತ್ತದೆ. ಹೀಗಾದ ಮೇಲೆ ಎಳೇ ಪ್ರಾಯದ ಯೌವನಸ್ಥರಿಗೆ ಬದುಕುವ ವಿಷಯದಲ್ಲಿ ಎಷ್ಟು ಪ್ರೀತಿ ಇರ ಬೇಕೋ? ಮುಖ್ಯ ಮರಣವಾಗೋದು ನಿಶ್ಚಯವೆಂದು ತಿಳಿದು, ಅದು ಬರಲಾಗಿ ಅದಕ್ಕೆ ಭಯಗೊಳ್ಳದೆ ಇರುವವನೇ ತಿಳಿದ ಪುರುಷನು ಎನ್ನ ಬೇಕು.

---

೧೧೩. ನೀತಿಕಥೆ.

ಕಾಮಾತುರದ ಸಿಂಹವು.

ಒಬ್ಬ ಅಡವಿಯ ಮನುಷ್ಯನ ಮಗಳು ಬಹಳ ಚಲುವಿಯಾಗಿದ್ದಳು. ಆಕೆಯನ್ನು ಕಂಡು ಒಂದು ಸಿಂಹವು ಮೋಹಿತವಾಗಿ, ಆ ಸ್ತ್ರೀಯು ತನಗೆ ವಶವಾದರೆ ಜೀವ ಉಳಿಯುತ್ತದೆ ಎಂದು ಆಕೆಯ ತಂದೇ ಬಳಿಗೆ ಹೋಗಿ, ನನ್ನನ್ನು ನೀನು ಅಳಿಯನ್ನ ಮಾಡಿಕೋ ಎಂದು ನಿರ್ದಾಕ್ಷಿಣ್ಯವಾಗಿ ಹೇಳಿತು. ಇಂಥಾ ಹುಚ್ಚ ಮಾತು ಕೇಳಿ ಆ ತಂದೆಯು, ನಾನು ಇಲ್ಲವೆಂದಾಕ್ಷಣ ನನ್ನನ್ನು ಚಿಕ್ಷಿಸೀತು, ಯುಕ್ತಿಯಿಂದ ಉಳುಕೋ ಬೇಕು ಎಂದು ತಿಳಿದು, ಎ ಸಿಂಹರಾಜನೇ, ಚಲೋದದೆ, ನಮ್ಮ ಮಗಳನ್ನ ಕೊಡುತ್ತೇನೆ, ಅವಳು ಬಹು ನಾಜೂಕು ಆಗಿದ್ದಾಳೆ, ಆದರೆ ನಿನ್ನ ಹಲ್ಲೂ ಉ

ಗುರುಗಳೂ ಬಹಳ ತೀಕ್ಷ್ಣವಾಗಿರುವದರಿಂದ ಆಕೆಗೆ ಉಪದ್ರವಾದೀತು, ಹ್ಯಾಗೆ ಮಾಡ ಬೇಕು, ನೀವು ಆ ವಿಷಯವಾಗಿ ಜಾಗ್ರರಾಗಿದ್ದೇವು ಎಂದರೆ ನೀವು ನಮ್ರರಾದೀರಿ ಖರೆ, ಆದರೆ ಆಕೇ ಮನಸ್ಸಿನ ಭಯವು ಹೋಗಲಿಕ್ಕಿಲ್ಲ, ಆವ ಕಾರಣ ನಿನ್ನ ಹಲ್ಲೂ ಉಗುರೂ ತೆಗದು ನನಗೆ ಕೊಡು, ನಾನು ಮಗಳನ್ನ ಕೊಡುತ್ತೇನೆ ಎನ್ನಲಾಗಿ, ಸಿಂಹವು ಕಾಮಬಾಣಕ್ಕೆ ವಶವಾಗಿ, ಹಾಗೆ ಆಗಲಿ ಎಂಬೋಣ, ಆ ಮನುಷ್ಯನು ಸಿಂಹನ ನಖದಂತಗಳನ್ನು ತಕ್ಕೊಂಡು ಅದರ ಮಲಕಿನ ಮೇಲೆ ಹೊಡದನು. ಆ ಕ್ಷಣ ಸಿಂಹವು ಸತ್ತು ಹೋಯಿತು.

ತಾತ್ಪರ್ಯ.

ಕಾಮವಿಕಾರಕ್ಕೆ ಸ್ವಾಧೀನನಾಗುವವನು ಶೂರನೇ ಆಗಲಿ, ಬಲವಂತನೇ ಆಗಲಿ ಕೆಟ್ಟು ಹೋಗುವನು. ಹಾಗೆಯೇ ಶತ್ರುಗಳ ಸವಿ ಮಾತಿಗೆ ಮೋಹಿತನಾಗಿ ತನ್ನ ಜೀವದ ವಸ್ತು ಅವನಿಗೆ ಕೊಡ ಬಾರದು, ಕೊಟ್ಟರೆ ಮರಣವೇ ಪ್ರಾಪ್ತಿಯಾಗುವದು.

---

೧೧೪. ನೀತಿಕಥೆ.

ಹೆಣ್ಣುಸಿಂಹವೂ ಹೆಣ್ಣುನರಿಯೂ.

ಒಂದಾನೊಂದು ಸಿಂಹಕ್ಕೂ ನರಿಗೂ ಗಂಟು ಬಿದ್ದು, ಶ್ವಾಪದಗಳ ಒಳಗೆ ಯಾವ ಜಾತಿಯಲ್ಲಿ ಬಹಳವಾಗಿ ಈಯುತ್ತಾವೆ ಎಂಬ ಪ್ರಸ್ತಾಪ ಹೊರಟಿತು. ಅದಕ್ಕೆ ನರಿಯು — ನಮ್ಮ ಜಾತಿಯಲ್ಲಿ ಬಹಳ ಈಯುತ್ತಾವೆ, ಇದಲ್ಲದೇ ವರುಷಕ್ಕೆ ಒಮ್ಮೆ ಈದರೂ ಒಂದೇ ಸಾರಿ ಬಹಳ ಮರಿ ಈಯುತ್ತಾವೆ, ಉಳಿದ ಜಾತಿಗಳು ವರುಷಕ್ಕೆ ಒಮ್ಮೆ ಈದು ಒಂದೇ ಮರಿ ಕೊಡುತ್ತಾವೆ ಅಥವಾ ಜನ್ಮದಲ್ಲಿ ಒಮ್ಮೆ ಈಯುತ್ತಾವೆ, ಹೀಗಿದ್ದು ಮೂಗು ಮೇಲೆ ಮಾಡಿ ಕೊಂಡು ಗರ್ವದಿಂದ ತಿರುಗುತ್ತಾವೆ ಎಂದು ಹೇಳಿತು. ಆ ಮಾತು ಕೇಳಿ ಸಿಂಹವು ಅಂದದ್ದು: ನನ್ನ ಮೇಲೆ ಹಾ

ಕಿ ಅನ್ನುತ್ತದೆ ಅಲ್ಲ? ಎಂದು ತಿಳಿದು, ನೀನು ಅಂದ ಮಾತು ನಿಶ್ಚಯ, ನಾವು ಜನ್ಮದೊಳಗೆ ಒಂದೇ ಈದರೂ ನಮ್ಮ ಕೂಸುಗಳು ಸರ್ವ ಶ್ವಾಪದಗಳೊಳಗೆ ಅರಸುಗಳಾಗಿ ಇದ್ದಾವೆ.

ತಾತ್ಪರ್ಯ.

ತನ್ನಲ್ಲಿ ಹುಟ್ಟುವಂಥಾದರ ಜಿಲೆ ಎಣಿಕೇ ಮೇಲೆ ಮಾಡ ಬಾರದು; ಸ್ಥಿತಿಯ ಮೇಲೆ ಮಾಡ ಬೇಕು. ಸ್ವಲ್ಪ ಉದ್ಯೋಗ ಮಾಡಿದರೂ ವಿದ್ಯಮಾನದಲ್ಲಿ ಇರುವ ಜನಕ್ಕೂ ಮುಂದೆ ಆಗ ತಕ್ಕಂಥವರಿಗೂ ಉಪಯೋಗ ಬೀಳುವಂಥಾದಿದ್ದರೆ ಪ್ರಶಂಸ ಮಾಡಲಿಕ್ಕೆ ಯೋಗ್ಯವಾಗುತ್ತದೆ. ಇಲ್ಲದಿದ್ದರೆ ನಾಯಿೂ ನರಿಯು ಪೀಳಿಗೇ ಹಾಗೆ ದೇಶಕ್ಕೆ ಉಪದ್ರವೇ. ಹಾಗಾಗ ಬಾರದು. ಕವಿತ್ವ ಮಾಡುವವನು ಮನಸ್ವೀ ಮಾಡಿ ಉಪಯೋಗವೇನು. ಸರ್ವ ಮಾನ್ಯವಾಗುವಂಥಾ ಕವಿತ್ವ ಒಂದೇ ಯಾದರೂ ಪುರುಷಾರ್ಥವಾದೀತು.

---

೧೧೫. ನೀತಿಕಥೆ.

ಹರೆಯದವನೂ ಗ್ರೀಷ್ಮಪಕ್ಷಿಯೂ.

ಒಬ್ಬಾನೊಬ್ಬ ಮನುಷ್ಯನು ಬಹಳ ದ್ರವ್ಯವನ್ನು ಸಂಪಾದಿಸಿ ಮಗನ ಸ್ವಾಧೀನ ಮಾಡಿ ಕೊಟ್ಟು ಮೃತವಾಗಿ ಹೋದನು. ಆ ಮಗನು ಪಟಿಂಗತನದಿಂದ ಜೂಜು ವ್ಯಭಿಚಾರ ಇತ್ಯಾದಿ ವ್ಯವಹಾರದವರ ಸಂಗತಿ ಬಿದ್ದು ದ್ರವ್ಯವನ್ನು ವೆಚ್ಚ ಮಾಡಿ ಬರಿಗೈಯವನಾಗಿ ಪರದೇಶಿ ದೀನನಂತೆ ತಿರುಗುತ್ತಿದ್ದನು. ಪುಷ್ಯಮಾಸ ಸೀತಗಾಲದಲ್ಲಿ ಒಂದು ನದಿಯ ತೀರಕ್ಕೆ ಹೋಗಿರಲಾಗಿ, ಸೂರ್ಯನ ಕಿರಣ ವಿರಳವಾಗಿ ಬಿಸಲು ಬೀಳುತ್ತಿತ್ತು. ಆ ಸಮಯದಲ್ಲಿ ಒಂದು ಗ್ರೀಷ್ಮಪಕ್ಷಿಯು ತಪ್ಪಿ ಬಂದು ನೀರ ಮೇಲೆ ತೇಲೋದು ಕಂಡು ತಾನು ಅಮಲಿನ ದುಂದು ವಿರಿದ ವೇಳ್ಯದಲ್ಲಿ ಬೇಸಿಗೆ ಎಂದು ತಿಳಿದು ತಾನು ಹೊದ್ದ ಮಲಿನ ಅರಿವೆಯನ್ನು ಮಾ

ರಿ ಜೂಜಾಡಿ ಸೋತನು. ಆ ಮೇಲೆ ಛಳೀ ಉಪದ್ರ ಹೆಚ್ಚು ಆಯಿತು. ಆಗ ಆಶ್ಚರ್ಯ ಪಟ್ಟು ಪುನಹಾ ಹೊಳೆಗೆ ಹೋಗಿ ನೋಡುವಾಗ್ಯೆ ಸೀತದಿಂದ ನೀರು ಹೆಪ್ಪುಗೊಂಡು ಆ ಗ್ರೀಷ್ಮಪಕ್ಷಿಯು ಸತ್ತು ಹೋಗಿತ್ತು. ಅದನ್ನ ಕಂಡು ಎಚ್ಚರಾಗಿ ಆ ಪಕ್ಷಿಗೆ ಶಬ್ದ ಇಟ್ಟು — ಏ ಪಕ್ಷಿಯೇ, ನಿನ್ನ ಮೇಲೆ ವಿಶ್ವಾಸವಿಟ್ಟು ಬೇಸಿಗೆ ಎಂದು ಅರಿವೆ ಕಳಕೊಂಡು ಥಂಡಿ ದಿವಸದಲ್ಲಿ ನಾನು ಕೆಟ್ಟು ಹೋದೆನು, ನೀನು ಸತ್ತು ಹೋದಿ ಎಂದನು.

ತಾತ್ಪರ್ಯ.

ಅಮಲಾಗುವವನು, ಜೂಜು ಆಡುವವನು, ಪಟ್ಟಿಂಗರ ಸಂಗತಿಯಲ್ಲಿ ತಿರುಗುವವನು, ವ್ಯಭಿಚಾರಿಗಳ ಸಹವಾಸದಿಂದ ತಿರುಗುವವನು, ನನ್ನ ಹಣವು ಹ್ಯಾಗೆ ತೀರಿತು, ನಾನು ಯಾಕೆ ದರಿದ್ರನಾದೆ ಎಂದು ಆಶ್ಚರ್ಯ ಮಾಡ ಬಾರದು. ಇಂಥಾ ವ್ಯಸನಗಳಿಗೆ ವ್ಯಸನದ ಅಮಲಿನಿಂದ ದಿವಾರಾತ್ರಿಯು ಅದೇ ಛಂದವೆಂದು ಬೇರೇನೂ ಕಾಣಿಸೋದಿಲ್ಲ. ಇದ್ದ ಧನವನ್ನು ಹಾಳು ಮಾಡುತ್ತಾನೆ; ಮತ್ತು ದೊರಕಿಸಿ ಹಾಳು ಮಾಡ ಬೇಕು; ಸಾಲವನ್ನಾದರೂ ಮಾಡಿ ಹಾಳ ಮಾಡ ಬೇಕು ಅನ್ನುತ್ತಾನೆ. ಇಂಥಾ ಪುರುಷರಿಗೆ ದರಿದ್ರವೆಂಬೋ ಶಿಕ್ಷೆ ಬಹಳವಾಗಿ ಆಗುವದು. ಕಣ್ಣಿಗೆ ಕಾಮಣಿ ಬಂದರೆ ನೋಡಿದಷ್ಟೂ ಹಸುರಾಗಿ ಕಾಣಿಸುವಂತೆ ವ್ಯಸನದಿಂದ ಸರ್ವ ಬುದ್ಧೀ ಮಾತುಗಳು ಅವನಿಗೆ ವಿಪರೀತವೇ ಕಾಣಿಸುತ್ತವೆ. ಎಲ್ಲಾ ಹಾಳ ಮಾಡಿದ ಮೇಲೆ ಗ್ರಹಿಸಿ ಫಲವೇನು?

---

೧೧೬. ನೀತಿಕಥೆ.

ಸಾಂಬ್ರಾಣಿಯೂ ಅದರ ಮರಿಯೂ.

ಒಂದು ಸಾಂಬ್ರಾಣಿಯು ತನ್ನ ಹರೇದಲ್ಲಿ ತನ್ನ ಕುಲದವರಿಗೆ ಬಹಳ ಉಪದ್ರ ಮಾಡಲಿಕ್ಕೆ ಹತ್ತಿತು. ನೆಲ ಕಾಲಿನಿಂದ ಕೆದರೋಣ, ಕೋಡುಗಳಿಂದ ಚಿಂವೋಣ, ದೊಡ್ಡ ಧ್ವನಿಯಿಂದ ಒದರೋಣ, ಹೀಗೆ ಮಾಡಿ ಸರ್ವರಿಗೂ ಅಂಜಿಸುತ್ತಿತ್ತು. ಆಗ ಅದರ ಮರಿಯು ತಾಯಿಯ ಕೇಳಿ —

ನೀವು ಬಹಳ ಪರಾಕ್ರಮಿಯ ಡೌಲು ಹಾಕುತ್ತೀರಿ, ಆದರೆ ನಾಯಿಯ ಶಬ್ದ ಕೇಳಿದಾಕ್ಷಣಕ್ಕೆ ಜೀವಕ್ಕೆ ಅಂಜಿ ಕೊಂಡು ಯಾಕೆ ಏಳುತ್ತೀರಿ, ಇದರ ಕಾರಣವನ್ನು ಹೇಳೀರ್ರ್ಯಾ ಎಂದಲ್ಲಿ ಸಾಂಬ್ರಾಣಿಯು ತನ್ನ ಮನಿಗೆ ಹೇಳಿದ್ದು: ನೀವು ಅಂದದ್ದು ಖರೆ, ಅದರ ಕಾರಣ ನನಗೂ ತಿಳಿಯೋದಿಲ್ಲ, ನಾನು ಕುಲದವರ ಒಳಗೆ ಬಲವಂತ ಸರಿ; ಮತ್ತು ನನ್ನ ಕುಲದವರ ಕಡೆಯಿಂದ ನನಗೆ ಜಯವಿಲ್ಲವೆಂದು ತಿಳು ಕೊಳ್ಳುತ್ತೇನೆ; ಆದರೆ ಏನು ಮಾಡಲಿ, ನಾಯಿಯ ಶಬ್ದ ಕಿವಿಗೆ ಬಿದ್ದಾಕ್ಷಣಕ್ಕೆ ನನ್ನ ಹಂಸ ಹಾರುತ್ತದೆ; ಅಲ್ಲಿಂದ ಆದಷ್ಟು ತ್ವರೆ ಮಾಡಿ ಓಡಿ ಹೋಗುತ್ತೇನೆ.

ತಾತ್ಪರ್ಯ.

ಘಾತಕತನದ ಡೌಲು ಹಾಕುತ್ತಾರಲ್ಲ? ಅವರ ಡೌಲು ಅವರ ಸಂಗತಿಯವರ ಕೂಡಾ ನೋಡ ಬೇಕು. ಎರಡನೇ ಶೂರರ ಮುಂದೆ ಅವನ ನಿಲ್ಲೋಣವಾಗುವದಿಲ್ಲ. ಯಾರ ಬಾಯ್ಯಲ್ಲಿ ಹಗಲೂ ಇರಳೂ ಯುದ್ಧದ ಮಾತುಗಳು ಹೊರಡುತ್ತವೋ ಅವನ ಕಡೆಗೆ ಯಾವನಾದರೂ ಕಣ್ಣು ಕಿಸಿದು ನೋಡಿದರೆ ಸಾಕು. ಅವನ ಕೈ ಕಾಲೇ ಹೋಗುತ್ತವೆ. ಇಂಥಾ ಸುಳ್ಳು ಆಡಂಬರ ಮಾಡುವವರ ನೀರಿಳಿಸುವಲ್ಲಿ ಚಮತ್ಕಾರವದೆ; ಹ್ಯಾಗಂದರೆ: ಅವರು ಡೌಲು ಒಡ್ಡುವಾಗ ಎರಡನೆಯವರು ಭಯ ನಾಚಿಕೆ ರೋಷ, ಈ ಮೂರರ ಗೊಂದಲದೊಳಗೆ ಬೀಳುವ ಹಾಗಾಗುತ್ತದೆ. ಅವನ್ನು ಹಿಡಿಯದಲೆ ಧೈರ್ಯ ಮಾಡಿ ಸ್ವಲ್ಪ ಪರಾಕ್ರಮ ತೋರಿಸಿದರೆ ಶೋಭ ಉಳಿಯುತ್ತದೆ. ಆದಾಗ್ಯೂ ಅವರ ಯತ್ನವಿಲ್ಲ. ಪ್ರಸಂಗ ಬಂತಂದರೆ ಎದೆ ಒಡೆದು ಹೋಗುತ್ತದೆ. ಆದರೂ ಅವರ ಸಹಜ ಸ್ವಭಾವ ಕಡೆಗೆ ತಿಳಿಯದೆ ಹೋಗಲಿಕ್ಕಿಲ್ಲ.

---

೧೧೭. ನೀತಿಕಥೆ.

ಕತ್ತೆಯೂ ಸಿಂಹನ ಬೇಟೆಯೂ.

ಒಂದು ಸಮಯದಲ್ಲಿ ಸಿಂಹವು ಕತ್ತೆಯನ್ನು ಕರಕೊಂಡು ಬೇಟೆಗೆ ಹೋಗ ಬೇಕೆಂದು ಮನಸ್ಸಾಗಿ ಕತ್ತೆಗೆ — ನೀನು ಒಂದು ಗಿಡದ ಪೊದೆಯೊ

ಳಗೆ ಅಡಗಿ ಕೊಂಡು ದೊಡ್ಡ ಧ್ವನಿಯಿಂದ ಅಕಸ್ಮಾತ್ ಭಯಂಕರವಾದ ಶಬ್ದ ಮಾಡು, ಹೊರೆಗೆ ಬರ ಬೇಡ, ಯಾಕಂದರೆ ಸಾರಂಗಗಳು ಭಯ ದಿಂದ ಘಾಬರಿಯಾಗಿ ಕೂಡಿ ಹೋದಾವು, ನಾನು ಹೊರಗೆ ಕಣಿವೆ ಕಟ್ಟಿ ನಿಂದಿರುತ್ತೇನೆ, ಆ ಹಾದಿಯಿಂದ ಬರುವಷ್ಟನ್ನೂ ಹೊಡದು ಹಾಕು ತ್ತೇನೆ ಎಂದು ಹೇಳಿತು. ಕತ್ತೆಯು ಅದರಂತೆ ಮಾಡುತ್ತಿರಲಾಗಿ ಸಾರಂ ಗಗಳು ಓಡಲಿಕ್ಕೆ ಹತ್ತಿದವು. ಸಿಂಹವು ಕಣಿವೆಯೊಳಗೆ ನಿಂತು ಒಂ ದೊಂದನ್ನೆ ಹೊಡೆಯುತ್ತಾ ಹೋಯಿತು. ಹೀಗಾಗಿ ಸಿಂಹನ ಹೊಟ್ಟೆ ಪೂರ್ತಿ ತುಂಬಿತು. ಆ ಮೇಲೆ ಸಿಂಹ ಕತ್ತೆಗೆ ಕರದು ಮಾತಾಡುತ್ತದೆ: ಎಲೋ ತಮ್ಮಾ, ಚೆಲೋದು ಮಾಡಿದಿ, ಇನ್ನು ಸಾಕು ಮಾಡು; ಇತ್ತ ಲಾಗೆ ಬಾ. ಇದನ್ನು ಕೇಳಿ ಕತ್ತೆಯು ಸಿಂಹನ ಸಮೀಪಕ್ಕೆ ಬಂದು, ತಾ ನು ಒಳ್ಳೇ ಕೆಲಸ ಮಾಡಿದೇ ಎಂದು ಮನಸ್ಸಿನಲ್ಲಿ ತಿಳುಕೊಂಡು, ಸಿಂಹ ರಾಜನೇ, ನಾನು ಮಾಡಿದ್ದು ನಿನ್ನ ಮನಸ್ಸಿಗೆ ಬಂತೇ ಹ್ಯಾಗೆ ಎಂದಲ್ಲಿ, ಸಿಂಹವು ಏನು ಹೇಳಲಿ, ಕತ್ತೆಯೇ, ಬಹಳವಾಗಿ ಮನಸ್ಸಿಗೆ ಬಂತು, ನಿನ್ನ ಗುರ್ತು ಇಲ್ಲದಿದ್ದರೆ ನಾನು ಸಹಾ ಆ ಕ್ಷಣಕ್ಕೆ ಅಂಜಿ ಓಡಿ ಹೋ ಗುತ್ತಿದ್ದೆ ಎಂದು ಹೇಳಿತು.

ತಾತ್ಪರ್ಯ.

ಕೆಲವು ಮಂದಿ ಕತ್ತೇ ಹಾಗೆ ದೊಡ್ಡ ದೊಡ್ಡ ಗರ್ಜನೆಗಳನ್ನ ಮಾಡಿ ತಿಳಿಯದ ಮಂದಿಗೆ ಭಯವನ್ನು ಹುಟ್ಟಿಸುತ್ತಾರೆ. ಅವರ ಸ್ವರೂಪ ಬಲ್ಲವರಿಗೆ ಕೌತುಕ ಮಾತ್ರವಾಗುತ್ತದೆ. ಇಂಥಾ ಪುರುಷರನ್ನು ಎಲ್ಲ್ಯಾವರೂ ಕಂಡರೆ ಆಗಲೇ ಕಿಂಚಿ ತ್ತು ಸೂಕ್ಷ್ಮ ಶೋಧನೆ ಮಾಡ ಬೇಕು. ಅಂದರೆ ಅವರಿಂದ ಭಯ ಪಡೋದು ಪ್ರ ಯೋಜನವಿಲ್ಲವೆಂದು ತಿಳಿದೀತು.

೧೧೮. ನೀತಿಕಥೆ.

ಮುದುಕನೂ ಕತ್ತೆಯೂ.

ಒಬ್ಬ ಮುದುಕನು ತನ್ನ ಕತ್ತೆಯನ್ನು ಮೇಯಿಸುತ್ತಾ ಇರಲಾಗಿ ತನ್ನ ಶತ್ರುವು ಬೆನ್ನ ಮೇಲೆ ಬಂದನೆಂದು ಕತ್ತೆಯನ್ನು ತ್ವರೆಯಿಂದ ಓಡಿಸಲಿಕ್ಕೆ ಹತ್ತೋಣ, ಆ ಕತ್ತೆಯು ಅವನಿಗೆ — ಎಲೋ ಧಣಿಯೇ, ನಿನ್ನ ವೈರಿಯು ಬಂದರೆ ನನ್ನ ಬೆನ್ನ ಮೇಲೆ ಕಂಟಲೆ ಹೇರ್ಯಾನು; ಇಷ್ಟೇ ಹೊರ್ತು ಮತ್ತೇನು ಮಾಡ್ಯಾನು ಎಂಬೋಣ, ಅದಕ್ಕೆ ಮುದುಕನು, ಹೇರ್ಯಾನು ಸರಿ ಸಂಶಯವೇನು ಅಂದನು. ಕತ್ತೆಯು, ಇಷ್ಟೇಯಾದರೆ ನಾನಾದರೂ ಯಾಕೆ ಓಡಲಿ, ನನಗೆ ಕಂಟಲೆ ಹೊರೋದು ಬಿಡದ ಕರ್ಮವಾದ ಮೇಲೆ ನನಗೆ ಧಣಿಗಳು ಯಾರಾದರೂ ಆಗಲಿ, ಅದರ ಸಂತೋಷ ದುಃಖ ಎರಡೂ ಸಮವೇ ಸರಿ ಅಂದಿತು.

ತಾತ್ಪರ್ಯ.

ಬಡ ಜನರು ರಾಜ್ಯಅಸ್ತವ್ಯಸ್ತದಲ್ಲಿ ಚಿತ್ತ ಹಾಕ ಬಾರದು. ಹಾಕಿದರೆ ಪೇಚಿಗೆ ಮಾತ್ರ ಬಿದ್ದಾರು. ಮೊದಲಿದ್ದ ಅರಸನು ಹೋಗಿ ಎರಡನೆಯವನಾದರೆ ಬಡವನಾದನು. ಇನ್ನು ಹೆಚ್ಚು ಬಡವನಾಗುತ್ತಾನೆ ಎಂಬೋದು ಇಲ್ಲ. ಮುಂಚಿಗಿಂತ ಹೆಚ್ಚು ಕೆಲಸ ಮಾಡುವವನಾಗುತ್ತಾನೆ ಎಂಬೋದಿಲ್ಲ. ಹೀಗೆ ಇರಲಿಕ್ಕೆ ನಾಲ್ಕು ಮಂದಿ ಸ್ವಾರ್ಥಸಾಧಕರು ಇಲ್ಲದ ಅಭಿಮಾನ ಹಾಕಿ ದಂಗೆಯನ್ನು ಎಬ್ಬಿಸುತ್ತಾರೆ. ಆ ಕಾಟಕಾಯಿ ತೀರಿದ ಮೇಲೆ ಅವರಿಗೆ ಲಾಭವಂತೂ ಆಗೋದೇ ಇಲ್ಲ. ಅವರಿಗೆ ನಷ್ಟ ಪ್ರಾಪ್ತಿಯಾದರೆ ಶೂಲದ ಮೇಲೆ ಬೀಳೋದು ಬರುತ್ತದೆ.

---

೧೧೯. ನೀತಿಕಥೆ.

ಪ್ರವಾಸದ ಡಾಂಭಿಕನು.

ಒಬ್ಬ ಪುರುಷನು ಬಹಳ ದಿವಸ ಪ್ರವಾಸ ಮಾಡಿ ತನ್ನ ಮನೆಗೆ ತಿರಿಗಿ ಬಂದ ಮೇಲೆ ತನ್ನ ಗುರುತಿನವರಿಗೆ ತಾ ನೋಡಿದಂಥಾ ಕೌತುಕ

ವನ್ನು ಬಣ್ಣಿಸಿ ಹೇಳುವದರೊಳಗೆ ತಾನು, ಅಳಕಾಪುರಿಪಟ್ಣಕ್ಕೆ ಹೋಗಿದ್ದೆ, ಅಲ್ಲೇ ಜನರು ಹದಿನೈದು ಮೊಳ ಹಾರುತ್ತಾರೆ, ಆದರೆ ಅವರಿಗೂ ನನಗೂ ಪಣ ಬಿದ್ದಿತ್ತು, ಹಾರಿದೆವು, ಆದರೆ ನನ್ನ ಹಾರಿಕೆಗೆ ಅವರ್‍ಯಾರೂ ಹತ್ತಲಿಲ್ಲ ಎಂದು ಒಂದು ಮೃಷ ಹೇಳಿದನು. ಆ ಮಾತು ನಿಜವೆಂದು ಯಾರೂ ತಿಳುಕೊಳ್ಳಲಿಲ್ಲ. ಅವನು ಅದು ಕಂಡು ಅವರಿಗೆ ನಿಶ್ಚಯ ತೋರ ಬೇಕೆಂದು ಆಣೆ ಮಾಡಲಿಕ್ಕೆ ಹತ್ತಿದ. ಆಗ್ಯೆ ಕೇಳುವವರೊಳಗೊಬ್ಬನು — ನಮ್ಮಪ್ಪನೇ, ಇಷ್ಟೊಂದು ಸಂಕಟದೊಳಗೆ ಯಾಕೆ ಬೀಳುತ್ತಿ, ಕೈಯಾಗಿನ ಕಂಕಣ ನೋಡಲಿಕ್ಕೆ ಕನ್ನಡಿ ಬೇಕೇ, ಈಗ ನಿನ್ನ ಮನಸ್ಸಿನಲ್ಲಿ ಇದೇ ಅಳಕಾಪುರಿ ಎಂದು ತಿಳುಕೊಂಡು ಅಲ್ಲಿ ಹಾರಿದ ಹಾಗೆಯೇ ಇಲ್ಲಿ ಹಾರಿ ತೋರಿಸು ಎಂಬುವದನ್ನು ಆ ಡಾಂಬಿಕನಾದವನು ಕೇಳಿ ನಾಚಿಕೆ ಪಟ್ಟು ಸುಮ್ಮನೇ ಕುಳಿತನು.

ತಾತ್ಪರ್ಯ.

ಯಾವನಾಗಲಿ ಪರದೇಶದಲ್ಲಿ ತಿರುಗಲಿ, ಅಥವಾ ಇದ್ದ ದೇಶದಲ್ಲೇ ಇರಲಿ, ಡಾಂಭಿಕದ ಮಾತು ತನ್ನ ಬಾಯ್ಯಿಂದ ತಾನು ಹೇಳ ಬಾರದು. ತನ್ನ ಘನತೆ ತಾನು ಹೇಳಿದರೆ ಜನರಿಗೆ ನಿಶ್ಚಯು ತೋರೋದಿಲ್ಲವೆಂತ ಆಣೆ ಮಾಡಲಿಕ್ಕೆ ಹೋದರೆ ಸಂದೇಹ ವೃದ್ಧಿಯಾಗುತ್ತದೆ. ಖರೆಯಾದ ಮಾತಿನ ಅವಸ್ಥೆ ಹೀಗಾದ ಮೇಲೆ ಸುಳ್ಳು ಬಣಿಸಿ ಹೇಳಿದರಂತು ಏನಾದೀತು? ನಾಲ್ಕು ಮಂದಿ ಕುಳಿತಾಗ ಏನಾದರೂ ಸುಳ್ಳು ಬೊಗಳುತ್ತಾರೆ. ಅದು ಸಂಗಡಲೇ ತಿಳಿಯುತ್ತದೆ. ಆ ದೇಶ ನೋಡಿದವನು ಒಬ್ಬನಾದರೂ ಇರುತ್ತಾನೆ. ಅವನು ಅದೇ ಕ್ಷಣಕ್ಕೆ ಸಾಕ್ಷಿಗೆ ಬರುತ್ತಾನೆ.

---

೧೨೦. ನೀತಿಕಥೆ.

ಗರುಡಪಕ್ಷಿಯೂ ಬೆಕ್ಕೂ ಹೆಣ್ಣುಹಂದಿಯೂ.

ಒಂದಾನೊಂದು ದೊಡ್ಡ ಆಲದ ಮರದ ತುದಿಯಲ್ಲಿ ಒಂದು ಗರುಡಪಕ್ಷಿಯು ಗೂಡು ಕಟ್ಟಿ ತನ್ನ ಮರಿಗಳ ಇಟ್ಟು ಕೊಂಡು ಸುಖದಿಂದ ಇ

ರಲು, ಅದೇ ಮರದ ನಡುಹೋಟೆಯಲ್ಲಿ ಒಂದು ಅಡವೀ ಬೆಕ್ಕು ತನ್ನ ಕುಟುಂಬ ಸಹಿತ ಇರಲಾಗಿ, ಅದೇ ಮರದ ಬುಡದ ಹೋಟೆಯಲ್ಲಿ ಕಾಡ ಹಂದಿಯು ತನ್ನ ಕುನ್ನಿಗಳ ಇಟ್ಟು ಕೊಂಡು ಸುಖದಿಂದ ಇರಲು, ಹೀಗೆ ಮೂವ್ವರೂ ತಮ್ಮ ತಮ್ಮ ಸಂಸಾರಗಳ ಮಾಡಿ ಕೊಂಡು ಪ್ರಪಂಚದಲ್ಲಿ ಪರಮ ಪ್ರೀತಿಯಿಂದಿರುವಾಗ್ಯೆ, ಒಂದಾನೊಂದು ದಿವಸ ಅಡವೀ ಬೆಕ್ಕು ಗರುಡಪಕ್ಷಿಯ ಬಳಿಗೆ ಬಂದು, ಏನವ್ವ ಪಕ್ಷಿಯೇ, ಕ್ಷೇಮವೋ ಎಂದು ಸುಖಲಾಭಗಳ ವಿಚಾರಿಸಿದ ಮೇಲೆ, ಬೆಕ್ಕು — ಅವ್ವನೇ ಈ ವೃಕ್ಷದ ಬೊಡ್ಡಿಯಲ್ಲಿ ಕಾಡ ಹಂದಿಯೂ ಮನೆ ಮಾಡಿ ಕೊಂಡು ಅದೆ, ದಿನ ಒಂದಕ್ಕು ಮರದ ಬೊಡ್ಡೀ ಮಣ್ಣು ಕೆದರಿ ಗುದ್ದಲಿಸಿ ನಾಶ ಮಾಡುತ್ತದೆ, ಗಿಡದ ಬೇರು ಸಡಲಿ, ಬುಡ ಮೇಲಾಯಿತೆಂದರೆ ಸರ್ವ ವಿಷಯದಿಂದಲೂ ಕುಟುಂಬಘಾತವಾದೀತು ಎಂದು ಹೇಳಲಾಗಿ, ಪಕ್ಷಿಯು ಬಹಳ ಚಿಂತಾಕ್ರಾಂತವಾಗಿ ಕುದಿಯುತಾ್ತ ಇತ್ತು. ಆ ಮೇಲೆ ಬೆಕ್ಕು ಕಾಡ ಹಂದಿಯ ಬಳಿಗೆ ಬಂದು, ಏನು ಎಬೇ ಅವ್ವಾ, ಒಳ್ಳಿತಾಗಿ ಇದ್ದಿಯಾ ಎಂದು ಅದರ ಕರಳು ಕರಗುವಂತೆ ಮಾತನಾಡಿ, ಕೇಳಿದಿ ಏನು ಅವ್ವಾ, ಈ ಮರದ ತುದಿಯಲ್ಲಿ ಇರುವ ಗರುಡಪಕ್ಷಿಯು ತನ್ನ ಮರಿಗಳ ಮುಂದೆ ಈ ಕಾಡ ಹಂದಿಯು ಹೊರಗೆ ಸಂಚಾರ ಮಾಡಲಿಕ್ಕೆ ಹೋದ ವೇಳ್ಯದಲ್ಲಿ ಅದರ ಮಕ್ಕಳನ್ನು ತಂದು, ನಿಮಗೆ ತಿನ್ನಲಿಕ್ಕೆ ಕೊಟ್ಟೇನು ಎಂದು ಹೇಳುತ್ತಿತ್ತು; ನಾನು ಕೇಳಿ ಬಹಳ ದುಖ್ಖವಾಗಿ ಇದನ್ನು ನಿನಗೆ ಹೇಳ ಬೇಕೆಂದು ಬಂದೆನು, ಹೋಗಿ ಬರುತ್ತೇನವ್ವಾ ಎಂದು ಹೇಳಿ ತನ್ನ ಸ್ಥಳಕ್ಕೆ ಹೋಯಿತು. ಗರುಡಗೂ ಕಾಡ ಹಂದಿಗೂ ಪರಸ್ಪರ ವೈರ ಬೆಳದು ತಮ್ಮ ತಮ್ಮ ಗೂಡುಗಳ ಬಿಟ್ಟು ಎಲ್ಲಿಗೂ ಹೋಗಲಿಲ್ಲ. ಹೀಗಾಗಿ ಆಹಾರ ಮೊದಲಾಗಿ ಇಲ್ಲದೆ ಎರಡೂ ಮೃತಿ ಹೊಂದಿ ಹೋದವು. ತರುವಾಯ ಅವುಗಳನ್ನು ಮರಿಗಳ ಸಹವಾಗಿ ಬೆಕ್ಕು ತಿಂದು ಬಿಟ್ಟಿತು.

ತಾತ್ಪರ್ಯ.

ಗುಣಜ್ಞರಾದ ಪುರುಷರಲ್ಲಿ ಬಹು ಜನರ ಬಳಿಕೆಯಾಗುತ್ತದೆ. ಅದರೊಳಗೆ ಚಾಡರು ಇದ್ಧಾರಲ್ಲಾ, ಪರಸ್ಪರವಾಗಿ ವೈರ ಬೆಳಸಿ ನಾಶ ಮಾಡ ಬೇಕೆಂಬುವದು ಅವರ ಸಹಜ ಧರ್ಮ. ಚಾಡಿಗಾರರು ನೆರೆಯಲ್ಲಿದ್ದವರಿಗೆ ಅತಿ ತೀವ್ರವಾಗಿ ನಷ್ಟ ಮಾಡುತ್ತಾರೆ. ಆದರೆ ಅಂಥಾ ಜನರನ್ನ ಪರೀಕ್ಷೆ ಮಾಡಿ ಇಟ್ಟು ಅವರ ಹೇಳಿಕೇ ಮಾತಿನ ಮೇಲೆ ನಿಶ್ಚಯವಿಡ ಬಾರದು. ವಿಶ್ವಾಸವಿಟ್ಟರೆ ಗರುಡ ಕಾಡ ಹಂದಿಯಂತೆ ಆದೀತು.

---

೧೦೧. ನೀತಿಕಥೆ.

ತಂಗಿಯೂ ಅಣ್ಣನೂ.

ಒಬ್ಬಾನೊಬ್ಬ ಪುರುಷಗೆ ಇಬ್ಬರು ಮಕ್ಕಳು ಒಂದು ಹೆಣ್ಣು ಒಂದು ಗಂಡು ಇರಲಾಗಿ, ಆ ಹುಡುಗನು ಬಹಳ ಚಲುವನು, ಹುಡುಗಿಯು ಸಾಧಾರಣ ರೂಪವತಿ. ಒಂದು ದಿವಸ ಕನ್ನಡಿ ಸಮೀಪದಲ್ಲಿ ಮಕ್ಕಳು ಇಬ್ಬರೂ ಆಡುತ್ತಿರಲಾಗಿ, ಹುಡುಗನು ತಂಗಿಗೆ, ಅವ್ವಾ ಕನ್ನಡಿಯಲ್ಲಿ ಮೋರೆ ನೋಡು, ಯಾರದು ಚೆಲೋದು ಕಾಣಿಸುತ್ತದೆ ಎಂಬೋಣ, ಆ ಹುಡುಗಿಗೆ ಬಹಳ ವಿಷಾದ ತಟ್ಟಿ ತಂದೆಯ ಬಳಿಗೆ ಹೋಗಿ ಈ ವೃತ್ತಾಂತದ ದೂರು ಹೇಳಲಾಗಿ, ಮಗನ್ನ ಕರೆದು, ಎಲಾ ಮಗನೇ, ಕನ್ನಡಿ ನೋಡೋ ಧರ್ಮ ಸ್ತ್ರೀಯರಿಗಲ್ಲದೇ ಪುರುಷರ ಕಾರ್ಯವಲ್ಲವೆಂದು ಹೇಳಿ ಇಬ್ಬರಿಗೂ ಸಮಾಧಾನ ಮಾಡಿ ಪುನಹಾ ಹೇಳುತ್ತಾನೆ: ಇನ್ನು ಮೇಲೆ ನೀವು ಕನ್ನಡಿ ನೋಡುವ ಕ್ರಮ ಹೇಳುತ್ತೇನೆ; ಮಗನೇ, ಈ ನಿನ್ನ ಸೌಂದರ್ಯಮುಖಕ್ಕೆ ದುರ್ಗುಣದ ಮಲಿನವಿಲ್ಲವಲ್ಲ ಎಂದು ತಿಳಿಯೋದಕ್ಕೆ ನೋಡು; ಮಗಳೇ ನಿನ್ನ ಮುಖದಲ್ಲಿ ನ್ಯೂನತೆ ಇದ್ದದ್ದು ನಿನ್ನ ಗುಣಗಳಿಂದ ತುಂಬಿ ಕೊಂಡು ಪೂರ್ಣವಾಗೆದೋ ಇಲ್ಲವೋ ನೋಡು ಎಂದು ಹೇಳಿದನು.

ತಾತ್ಪರ್ಯ.

ಈ ಸೃಷ್ಟಿಯಲ್ಲಿದ್ದ ಜನರು ತಮ್ಮ ಬುದ್ಧಿ ಎಂಬೋ ಕನ್ನಡಿಯಲ್ಲಿ ನೋಡಿ, ನಮ್ಮ ಗುಣಗಳೊಳಗೆ ಇರುವ ಅವಗುಣಗಳನ್ನು ತ್ಯಾಜ್ಯ ಮಾಡುತ್ತಾ ಇರ ಬೇಕು. ಯಾವ ಸುಂದರಪುರುಷನಾದರೂ ತನ್ನ ಅಂತರಂಗದ ಸದ್ಗುಣಗಳ ನೋಡ ಬೇಕು. ಅದರಿಂದ ಜನಪ್ರಿಯನಾದಾನು. ಮಧುರಭಾಷಣ ಉತ್ತಮಭಾವ ಮೊದಲಾದ ಉತ್ತಮ ಗುಣಗಳಿಂದ ಶೋಭಿತನಾದರೆ ಸರ್ವರಿಗೂ ಪ್ರೀತ್ಯಸ್ಥನಾಗುತ್ತಾನೆ. ಅವನ ರೂಪದ ಕಡೆಗೆ ಜನರು ನೋಡೋದಿಲ್ಲ. ಸುಳ್ಳುಭಾಷಣದ ಮಿಂಚು ಸತ್ಯಭಾಷಣದ ರತ್ನಕ್ಕೆ ಹ್ಯಾಗೆ ಸಮ ಬಂದೀತು. ಈ ರೀತಿ ತಿಳಿದು ಸದ್ಗುಣಗಳನ್ನು ಹಿಡಿದು ನಡಿಯ ಬೇಕು.

---

೧೨೨. ನೀತಿಕಥೆ.

ನರಿಯೂ ಮಂಗವೂ.

ಒಂದು ಸಮಯದಲ್ಲಿ ಸರ್ವ ಪಶುಗಳು ಕೂಡಿ ಮರ್ಕಟಗೆ ಅರಸ ಪಟ್ಟಾ ಕಟ್ಟಿದವು. ಈ ಮಂಗ ಅಜ್ಞಾನದ ಮೃಗ. ಇದಕ್ಕೆ ಒಂದು ದಿವಸ ಮೋಸ ಮಾಡಿ ಅಷ್ಟೂ ಪಶುಗಳೂ ಮೋರೆ ತಗ್ಗಿಸುವಂತೆ ಮಾಡ ಬೇಕೆಂದು ನರಿಯು ಆಲೋಚನೆ ಮಾಡುತ್ತಾ ಇತ್ತು. ಕೆಲವು ದಿವಸಗಳು ಹೋದ ಮೇಲೆ ಒಬ್ಬ ಬೇಡನು ಒಂದು ಕೊಳ್ಳದೊಳಗೆ ಮಾಂಸ ಹಚ್ಚಿ ಬಲೆ ಹಾಕಿರಲಾಗಿ, ಅದನ್ನು ಕಂಡು ನರಿಯು ಮಂಗರಾಜನಲ್ಲಿ ಹೋಗಿ, ಒಂದು ಸ್ಥಳದಲ್ಲಿ ದ್ರವ್ಯದ ಇಡೀ ಗಂಟು ಅದೆ, ಅದರ ಹತ್ತರ ಯಾರೂ ಇಲ್ಲ, ಅಂಥಾ ಬದುಕು ಅರಸುಗಳದಲ್ಲದೆ ಮತ್ಯಾರದೂ ಅಲ್ಲವೆಂಬದು ತಮಗೆ ಬಿನ್ನಹ ಮಾಡಿ ಕೊಂಡೆ ಅಂದಿತು. ಮಂಗರಾಜನು ಆ ಕಪಟವಿಚಾರ ತಿಳಿಯದೆ ಅದನ್ನ ತಕ್ಕೊಳ್ಳಲಿಕ್ಕೆ ಹೋಗಿ ಆ ಮಾಂಸಕ್ಕೆ ಕೈ ಹಚ್ಚುತ್ತಿರಲಾಗಿ ಆ ಕ್ಷಣವೆ ಆ ಬಲೆಯೊಳಗೆ ಬಿದ್ದು ಬಹಳ ನಾಚಿಕೊಂಡು ನರಿಯ ಸಂಗಡ ಅಂಗಲಾಚಿ ಕೊಂಡು, ಎಲೇ ನರಿಯೇ, ನೀನು ಮಹಾ ಘಾತಕಿ, ರಾಜದ್ರೋಹಿ, ಪಾತಕಿಯಾಗಿದ್ದೀ; ಒಳ್ಳೇದು ಏನು ಚಿಂ

ತೆ ಇಲ್ಲ, ನಿನಗೆ ದೊಡ್ಡ ಶಿಕ್ಷೆ ಮಾಡೇನು ಎಂದು ಹೇಳಿತು. ಆ ಮಾತು ಕೇಳಿ ನರಿಯು ಕಿಲಿಕಿಲಿ ನಕ್ಕು ಹೋಗೋ ಸಮಯದಲ್ಲಿ ಹಿಂದಕ್ಕೆ ತಿರಿಗಿ ನೋಡಿ ತಲೆಯನ್ನು ತೂಗುತ್ತಾ, ಎಲೇ ಮಂಗ, ನೀನು ಅರಸನು ಎನ್ನಿಸುತ್ತಿದ್ದಿ. ಇದು ಬಲೆ ಎಂದು ನಿನಗೆ ಹ್ಯಾಗೆ ತಿಳಿಯಲಿಲ್ಲ ಎಂದು ಹೇಳಿ ಹೋಯಿತು.

ತಾತ್ಪರ್ಯ.

ಅಲ್ಪ ಬುದ್ಧಿಯುಳ್ಳ ಪುರುಷರು ರಾಜ್ಯದ ಕಾರಭಾರ ತಲೆಯ ಮೇಲೆ ತಕ್ಕೊಳ್ಳಲಾಗದು, ಒಂದು ವೇಳ್ಯದಲ್ಲಿ ತಕ್ಕೊಂಡಲ್ಲಿ ತನ್ನದೂ ಜನರದೂ ಸ್ವಾರ್ಥಗಳು ಮುಣುಗುತ್ತಾವೆ. ಇಂಥಾ ರಾಜಧಾನಿಯ ಕೆಲಸಕ್ಕೆ ಯೋಗ್ಯನಾಗಿರುವವನು, ಸತ್ಯಭಾಷೆಯಾಗಿರುವವನು, ಕೀರ್ತಿಯುಳ್ಳವನಾಗಿ ಯಜಮಾನನಾಗಿರುತ್ತಾನೆ. ಪರಾಕ್ರಮ ಹೀನನಾಗಿ ಬರೇ ಹೆಸರಿನ ಮೇಲೆ ದೊಡ್ಡಸ್ತನ ತರ ಬೇಕೆಂದು ಆಶಿಸುವವನಿಗೆ ಅದು ಸಾಧಿಸದೆ ಹೋಗಿ ಲಘುತ್ವ ಮಾತ್ರ ಬರುತ್ತದೆ.

---

೧೦೩. ನೀತಿಕಥೆ.

ತೇಗಿನ ಗಿಡ, ಮುಳ್ಳಿನ ಗಿಡ.

ಒಂದು ಅರಣ್ಯದ ಮಧ್ಯದಲ್ಲಿ ಒಂದು ತೇಗಿನ ಗಿಡವು ನೆಟ್ಟಗೆ ಉನ್ನತವಾಗಿ ಬೆಳದಿದ್ದು ತನ್ನ ದೊಡ್ಡಸ್ತನದಿಂದ ಗರ್ವ ಹಿಡಿದು ತನ್ನ ಕೆಳಗೆ ಹುಟ್ಟಿದ ಗಿಡಗಳಿಗೆ ನಿರಂತರವೂ ಧಿಕ್ಕರಿಸುತ್ತಾ ಇರಲಾಗಿ, ಆ ಕೆಳಗಿನ ಗಿಡಗಳಲ್ಲಿ ಇರುವ ಒಂದು ಮುಳ್ಳುಗಿಡವು ಸಹಿಸಿ ಕೊಳ್ಳದೆ ಒಂದು ದಿವಸ ತೇಗಿನ ಗಿಡಕ್ಕೆ, ಎಲೇ ತಂದೆಯೇ, ನೀನು ಬಹಳ ಗರ್ವ ಯಾಕೆ ಮಾಡುತ್ತಿದ್ದೀ ಹೇಳು ಎನ್ನಲಾಗಿ, ತೇಗಿನ ಗಿಡವು ಅಂದದ್ದು: ನಾನು ಸಮಸ್ತ ವೃಕ್ಷಗಳಲ್ಲಿ ಶ್ರೇಷ್ಠನಾಗಿದ್ದೇನೆ, ನನ್ನ ತಲೆ ಮೇಘಮಂಡಲವನ್ನು ಛೇದಿಸಿ ಹೋಗೆದೆ, ನನ್ನ ಕೊಂಬೆಗಳು ಹನ್ನೆರಡು ಕಾಲವೂ ಹಸರುಗೊಂಡು ಹೊಳೆಯುತ್ತಾ ಇದ್ದಾವೆ, ನೀವು ನೀಚರಾಗಿ ಬಂದ ಬಂದವ

ರಿಂದ ತುಳಿಸಿ ಕೊಳ್ಳುತ್ತೀರಿ, ನನ್ನ ಎಲೇ ಮೇಲಿನ ನೀರಿನ ಪ್ರವಾಹಕ್ಕೆ ನೀವು ಮುಳುಗಿ ಹೋಗುವಿರಿ ಎಂದಲ್ಲಿ, ಮುಳ್ಳುಗಿಡವು ಮಾತಾಡುತ್ತದೆ: ನೀನು ಹೇಳಿದಷ್ಟು ಹಾಗಿರಲಿ, ನಾನು ಹೇಳುತ್ತೇನೆ, ಆ ಮಾತು ನಿಜವೆಂದು ತಿಳುಕೋ, ಏನಂದರೆ: ಕಟ್ಟಿಗೆ ಕಡಿಯುವ ಅಣ್ಣಾ ಬಂದು ಕಡಿಯಲಿಕ್ಕೆ ನಿನ್ನ ಮೇಲೆ ಕೊಡಲಿ ಕಡತ ಹಾಕುವ ಸಮಯದಲ್ಲಿ ನಮ್ಮ ಒಳಗಿನ ಕನಿಷ್ಟ ಗಿಡಗಳಿಗೆ ನಾನು ಸರಿಯಾಗಿದ್ದರೆ ಉಳಿಯುತ್ತಿದ್ದೆನಲ್ಲ ಎಂದು ನೀನು ಇಚ್ಛೇ ಮಾಡಿಯೆ ಕಂಡ್ಯಾ? ದೊಡ್ಡಸ್ತನದ ಗರ್ವ ಯಾರಿಗೂ ಸಲ್ಲ.

ತಾತ್ಪರ್ಯ.

ದೊಡ್ಡವರಿಗೆ ಉಪಾಧಿ ಬಹಳ ಇರುತ್ತವೆ. ಅಷ್ಟು ಉಪಾಧಿಗಳು ಸಣ್ಣ ಮನುಷ್ಯರಿಗಿಲ್ಲ. ಆದ್ದರಿಂದ ದೊಡ್ಡವರೂ ಸಣ್ಣವರೂ ಇವರ ಸುಖ ದುಃಖದ ವಿಚಾರ ಮಾಡಲಾಗಿ ದೊಡ್ಡವರದು ಚೆಲೋದು ಎಂದು ಅನ್ನಲಿಕ್ಕೆ ಅನಘುಡ ಕಾಣಿಸೀತು. ಹೀಗಿರಲಾಗಿ ಪದವಿ ಸಂಪತ್ತುಗಳಿಂದ ದೊಡ್ಡವರಾದವರು ಗರ್ವ ಮಾಡಲಾಗದು. ಅದರೊಳಗೆ ಗರ್ವದಿಂದ ಸಣ್ಣವರನ್ನು ತಿರಸ್ಕಾರ ಮಾಡುವದು ಕೇವಲ ಮೂರ್ಖತನವು.

---

೧೦೪. ನೀತಿಕಥೆ.

ಅರಸನೂ ಅವನ ಮಿತ್ರರೂ.

ಒಂದಾನೊಂದು ಸಮಯದಲ್ಲಿ ಒಬ್ಬ ಅರಸನು ತನ್ನ ತೋಟ ನೋಡುವ ನಿಮಿತ್ತ ಮಿತ್ರಜನ ಸಹಿತವಾಗಿ ಹೋದನು. ತೋಟದಲ್ಲಿ ಫಲಪುಷ್ಪ ಭರಿತವಾದ ಬೇರೆ ಬೇರೆ ಗಿಡಗಳು ಇದ್ದವು. ಅವುಗಳನ್ನು ನೋಡಿ ಅರಸಿನ ಸಂಗಡ ಇದ್ದ ಸ್ನೇಹಿತರಲ್ಲಿ ಒಬ್ಬನು, ತನಗೆ ಮದ್ರಾಮಲ್ಲಿಗೇ ಗಿಡ ಇರಲಿ ಅಂದನು. ಮತ್ತೊಬ್ಬ, ತನಗೆ ಕಣಗಿಲೀ ಗಿಡ ಇರಲಿ ಅಂದನು. ಈ ಪ್ರಕಾರವಾಗಿ ಉಳಿಕಿ ಸ್ನೇಹಿತರೆಲ್ಲ ಫಲವಾಗದ ಒಂದು ಒಂದು ಗಿಡ ತಮ್ಮದನ್ನು ತಮ್ಮದನ್ನು ಮಾಡಿ ಕೊಂಡರು. ಅದನ್ನು ಕಂಡು ಅರಸು ಆ

ಶ್ಚರ್ಯ ಪಟ್ಟು ಅಂದದ್ದು: ನಿಮ್ಮ ಇಚ್ಛೆಗೆ ಬಂದ ಗಿಡಗಳ ನೀವು ಮಾಡಿ ಕೊಳ್ಳಿರಿ, ಆದರೆ ತೆಂಗಿನ ಗಿಡ ನನಗಿರಲಿ, ಅದರ ಫಲಗಳು ಮನುಷ್ಯರಿಗೆ ಪ್ರಿಯಕರವಾದವು, ಮತ್ತು ತೆಂಗಿನ ಗಿಡದ ಸರ್ವಾಂಗದಿಂದಲೂ ಉಪ ಯೋಗವದೆ ಎಂದಲ್ಲಿ, ಸ್ನೇಹಿತರು ಕೇಳಿ ತಮ್ಮ ತಲೆಗಳ ತೂಗಿ ಎಲೋ ಅರಸೇ, ಇದರ ದೆಶೆಯಿಂದ ನಿಮಗೆ ಮಹಾ ಜ್ಞಾನಿ ಎಂದು ಹೇಳುತ್ತಾರೆ; ಆ ಮಾತು ಖರೆ, ಉಪಯೋಗದ ಹೊರ್ತು ಸುಮ್ಮನೆ ಪ್ರೀತಿಯಿಂದ ಯಾರಾದರೂ ಅಭಿಮಾನ ಹಿಡಿಯೋದು ಮೂರ್ಖತನವು ಅಂದನು.

ತಾತ್ಪರ್ಯ.

ಏನಾದರೂ ಮಾಡ ಬೇಕಾದರೆ ಕೇವಲ ಪ್ರೀತಿಯ ದುಸಕೆ ಮಾಡ ಬಾರದು. ಯಾರನ್ನು ತನ್ನ ಆಶ್ರಿತನೆಂದು ಮಾಡಿ ಇಡ ಬೇಕಾದರೆ ಅವರಿಂದ ಏನಾದರೂ ಉ ಪಯೋಗ ನೋಡಿ ಇಡ ಬೇಕು. ಕೇವಲ ಶೋಭೆಯ ನೋಡಿ ಇಡ ಬಾರದು.

---

೧೦೫. ನೀತಿಕಥೆ.

ಗೂಗೆಯೂ ಜಿಟ್ಟಿಯೂ.

ಒಂದು ಮುದಿ ಗೂಗೆಯು ಗಿಡದ ಹೋಟೆಯೊಳಗೆ ಮಲಗಿತ್ತು. ಆ ಗಿಡದ ಕೆಳಗೆ ಜಿಟ್ಟಿಯು ಗಾನಕ್ಕೆ ಆರಂಭ ಮಾಡಲಾಗಿ, ಆ ಗೂಗೆಯು ಎರಡು ಮೂರು ಸಾರಿ ಪ್ರಾರ್ಥನೆ ಮಾಡಿ ಕೊಂಡಿತು: ಎಲೋ ಜಿಟ್ಟಿಯೇ, ನೀನು ಇಲ್ಲಿಂದ ಹೋಗು, ನನಗೆ ಉಪದ್ರವ ಮಾಡ ಬೇಡ, ನಿನ್ನ ಕಿರಿಕಿರಿ ಯಿಂದ ನನ್ನ ನಿದ್ದೆ ಮರಿಯುತ್ತದೆ ಎಂದಲ್ಲಿ, ಆ ಜಿಟ್ಟಿಯು ಗೂಗೆಗೆ ಧಿ ಕ್ಕರಿಸಿ ಬೈಯಲಿಕ್ಕೆ ಹತ್ತಿತು: ನೀನು ಅಲ್ಪನೂ ಕಳ್ಳನೂ ಆಗಿದ್ದಿ, ರಾತ್ರೇ ಕಾಲಕ್ಕೆ ಹೊರಗೆ ತಿರಿಗಿ ಕಳ್ಳತನದಿಂದ ಹೊಟ್ಟೆ ಹೊರೆಯುತ್ತಿ, ಹಗಲೊತ್ತು ಗಿಡದ ಹೋಟೆಯೊಳಗೆ ಮಲಗುತ್ತಿ, ಅಡಗಿ ಕೊಳ್ಳುತ್ತಿ ಎಂದು ಈ ಪ್ರ ಕಾರ ಅಂಬೋಣಾ, ಗೂಗೆಯು, ಎಲೋ ಗೃಹಸ್ಥನೇ, ನೀನು ಬಾಯಿ

ಮುಚ್ಚು, ಇಲ್ಲದಿದ್ದರೆ ಕೆಟ್ಟೀ ಅಂದರೂ ಜಿಟ್ಟಿಯು ಕೇಳದೆ ಹೆಚ್ಚು ಹೆಚ್ಚಾಗಿ ಗಾನಕ್ಕೆ ಆರಂಭ ಮಾಡಿತು. ಆಗ್ಯೆ ಗೂಗೆಯು ಜಿಟ್ಟಿಗೆ ಕಪಟ ಸ್ತುತಿ ಮಾಡಲಿಕ್ಕಾರಂಭಿಸಿತು. ಹ್ಯಾಗಂದರೆ: ಎಲೋ ತಂದೇ, ಕ್ಷಮೆ ಮಾಡು, ನನ್ನಿಂದ ಅಪರಾಧ ಮುಂಚಿತು ಖರೆ; ಆದರೆ ಅದು ಈಗ ನನಗೆ ಅನುಭವಕ್ಕೆ ಬಂತು, ಎಚ್ಚರದಿಂದ ಇರ ಬೇಕಾದರೆ ನಿನ್ನ ಸುಸ್ವರದ ಗಾನ ಕೇಳುತ್ತಾ ಇರ ಬೇಕು; ನಿನ್ನ ಮಧುರ ಸ್ವರದ ಮುಂದೆ ಬಾರಿಸುವ ಸಾರಂಗೀ ಸ್ವರ ಯಾತಕ್ಕೆ ಹತ್ತೀತು, ನಿನ್ನ ಗಾಯನ ಕೇಳಿ ಕೋಗಿಲೆಗಳು ನಾಚಿ ಕೊಂಡವು, ನನಗೆ ನೆನವು ಒಳ್ಳೆಶ್ತಾಯಿತು, ಏನಂದರೆ ಒಂದು ಅಮೃತದ ಕುಪ್ಪಿ ದೇವರು ಕೊಟ್ಟಿದ್ಧಾನೆ, ಅದರೊಳಗೆ ನಿನಗೂ ಬೇಕಾದರೆ ಒಂದು ಬಟ್ಟಲು ಕೊಟ್ಟೇನು, ನಿನ್ನ ಕಂಠ ಗಾನ ಮಾಡಿ ಮಾಡಿ ಶೋಣವಾಗಿದ್ಧೀತು, ಹೀಗೆ ನನಗೆ ಕಾಣುತ್ತದೆ ಎಂಬೋಣಾ, ಜಿಟ್ಟಿಗೆ ನೀರಡಿಕೆಯಾಗಿತ್ತು. ಅಮೃತ ಇಸ ಕೊಳ್ಳ ಬೇಕೆಂದು ಆ ಜಿಟ್ಟಿಯು ಗೂಗೆಯ ಸಮೀಪಕ್ಕೆ ಹೋಗಲಾಗಿ ಆ ಗೂಗೆಯು ಎತ್ತಿ ಕೊಂಡು ಬಾಯ್ಯೊಳಗೆ ಹಾಕಿ ನುಂಗಿ ಬಿಟ್ಟಿತು.

ತಾತ್ಪರ್ಯ.

ಪ್ರಕೃತಿಪ್ರಕೃತಿಗಳು ಭಿನ್ನಭಿನ್ನಗಳಾಗಿರುತ್ತವೆ. ಒಬ್ಬನ ಪ್ರಕೃತಿಗೆ ಮತ್ತೊಬ್ಬ ಮಾಡಿದ್ದು ರುಚಿಸೋದಿಲ್ಲ. ಇದಕ್ಕಾಗಿ ಒಂದು ಎರಡಾವರ್ತಿ ಪ್ರಾರ್ಥನೆ ಮಾಡಿದವನಿಗೆ ಉಪದ್ರ ಕೊಡ ಬಾರದು. ಇದು ಹೊರ್ತು ಅವನಿಗೆ ಪುನಹಾ ಉಪದ್ರ ಮಾಡಿ ಕಲಹ ಮಾಡುವದಂತು ಕೇವಲ ದುರ್ವೃತ್ತಿಯು. ಹೀಗೆ ಮಾಡುವವರ ಉಪದ್ರವ ಕಂಡು ಅವರಿಗೆ ಶಿಕ್ಷೆ ಮಾಡಿದರೂ ಆಶ್ಚರ್ಯವಲ್ಲವು.

---

೧೦೬. ನೀತಿಕಥೆ.

ಒಕ್ಕಂಣಿನ ಚಿಗರಿಯು.

ಒಂದು ಒಕ್ಕಂಣಿನ ಚಿಗರಿಯು ಸಮುದ್ರತೀರದಲ್ಲಿ ಮೇಯುತ್ತಾ

ಇರಲಾಗಿ, ತನ್ನ ಮನಸ್ಸಿನಲ್ಲಿ, ಕುರುಡ ಕಣ್ಣು ಸಮುದ್ರದ ಕಡೆಗೆ ಮಾಡಿ ಚಲೋ ಕಂಣು ದೇಶದ ಕಡೆಗೆ ಮಾಡಿದ್ದರೆ ಮೋಸ ಬಂದಾಗ ತಿಳದೀತು ಎಂದು ಹಂಚಿಕೆ ಹಾಕಿತು. ಹಾಗೆ ಮಾಡಿ ನಿರ್ಭಯದಿಂದಿರಲಾಗಿ ಬಹಳ ದಿವಸದಿಂದ ಅದರ ಮೇಲೆ ಹೊಂಚು ಹಾಕಿದ್ದ ಒಬ್ಬ ಬೇಟೆಗಾರನು ನಾವಿಯೊಳಗೆ ಕುಳಿತು ನೀರ ಕಡೆಯಿಂದ ಮೆಲ್ಲಗೆ ಬಂದು ಸಮೀಪದಲ್ಲಿ ನೇವರ ಹಾಕಿ ತುಬಾಕೀ ಗುಂಡು ಹೊಡದು ಚಿಗರಿಯನ್ನು ಕೆಡವಿದನು. ಅದು ಪ್ರಾಣೋತ್ಕ್ರಮಣಸಮಯದಲ್ಲಿ ಮಾತಾಡಿತು: ಭವಿಷ್ಯ ಅಗಮ್ಯವದೆ, ಯಾವ ಕಡೆಗೆ ಅಂಜಿಕೆ ಇಟ್ಟಿದ್ದೆನೋ ಆ ಕಡೆಯಿಂದ ಉಪದ್ರವಿಲ್ಲವು; ಯಾವ ಕಡೆಗೆ ಭಯವಿಲ್ಲವೆಂದು ನಿಶ್ಚಿಂತೆಯಲ್ಲಿದ್ದೆನೋ ಅದೇ ಕಡೆಯಿಂದ ಕಡೆಗಂಡೆನು.

ತಾತ್ಪರ್ಯ.

ಈ ಜೀವಿಗಳ ಹಿಂದೆ ನಾನಾ ಪ್ರಕಾರದ ಭಯಗಳು ಹತ್ತಿಯವೆ. ಅದಕ್ಕೆ ತಾನು ಬೇಕಾದಷ್ಟು ಜಬರಿಸಿದರೂ ನಿರ್ಭಯ ಎಂದಿಗೂ ಆಗಲಿಕ್ಕಿಲ್ಲ. ಈ ಪ್ರಪಂಚಕ್ಕೆ ಬರುವ ಮಾರ್ಗ ಒಂದೇ ಆದರೆ ಇಲ್ಲಿಂದ ಹೋಗೋ ಮಾರ್ಗಗಳು ಅಸಂಖ್ಯಾತವಾಗಿದ್ದಾವೆ. ಹೀಗಿರುವಾಗ್ಯೆ ತನ್ನ ವಿಚಾರ ಎಷ್ಟಂತ ನಡದೀತು. ತನಗೆ ಲಕ್ಷ್ಯದೊಳಗೆ ತೋರುವ ಅಥವಾ ಪ್ರತ್ಯಕ್ಷ ಕಾಣಿಸುವ ವಿಘ್ನಗಳಿಂದ ತಪ್ಪಿಸಲಿಕ್ಕೆ ಬಂದೀತು; ಆದರೆ ತನ್ನ ಕಣ್ಣಿಗೆ ಕಾಣದಂಥಾ, ಲಕ್ಷಕ್ಕೆ ತೋರದಂಥಾ ಘಾತಗಳು ಸಹಸ್ರಾವಧಿ ತನ್ನ ಕೆಲಬಲಕ್ಕೆ ಇರುತ್ತವೆ. ಅದರಿಂದ ಹ್ಯಾಗೆ ಪಾರುಗಾಣ ಬೇಕು? ಅದಕ್ಕೆ ಉಪಾಯವೇನಂದರೆ: ತನಗೆ ಭಯವಿಲ್ಲವೆಂದು ಎಂದಿಗೂ ತಿಳಿಯಲಾಗದು, ಮತ್ತು ಭಯ ಉಂಟೆಂದು ನಿರ್ಭಯವಾಗುವ ಯತ್ನ ಬಹಳವಾಗಿ ಮಾಡಬಾರದು, ನಿರ್ಭೀತನಾಗುವದು ತನ್ನ ಸ್ವಾಧೀನವಿಲ್ಲದ ಪಕ್ಷದಲ್ಲಿ ಭಯದ ಚಿಂತೆ ಹಗಲೂ ಇರಳೂ ಮಾಡೋದು ಮೂರ್ಖತನವು. ಅದು ಮನುಷ್ಯರಂಥಾ ವಿವೇಕಿ ಪ್ರಾಣಿಗಳಿಗೆ ಯೋಗ್ಯವಲ್ಲವು.

೧೦೭. ನೀತಿಕಥೆ.

ಜಲಮನುಷ್ಯನೂ ಕಬಾಡಿಗನೂ.

ಒಬ್ಬಾನೊಬ್ಬ ಕಬಾಡಿಗನು ಹೊಳೆಯ ಥಡದಲ್ಲಿದ್ದ ಗಿಡಗಳ ಕಡಿಯುತ್ತಿರಲಾಗಿ, ಅವನ ಕೈಯ್ಯಾಗಿನ ಕೊಡಲಿ ಜಾರಿ ನೀರೊಳಗೆ ಬಿತ್ತು. ಅದು ನೆಲೆ ಇಲ್ಲದ ದೊಡ್ಡ ಮಡುವಿನಲ್ಲಿ ಬಿದ್ದು ಶಿಕ್ಕದೆ ಇರುವದರಿಂದ ಬಹಳ ಶೋಕವನ್ನು ಮಾಡಲಿಕ್ಕೆ ಹತ್ತಿದನು. ಆ ಪ್ರಳಾಪವನ್ನು ಕೇಳಿ ಒಬ್ಬ ಜಲಮನುಷ್ಯನು ಅವನಿಗೆ ಪ್ರತ್ಯಕ್ಷವಾಗಲು, ಆ ಕಬಾಡಿಯು ತನ್ನ ದುಃಖದ ಕಾರಣವನ್ನು ಬಿನ್ನಪಗೈಯಲು, ಆ ಜಲಮನುಷ್ಯನು ನೀರೊಳಗೆ ಮುಳುಗಿ ಒಂದು ಬಂಗಾರದ ಕೊಡಲಿಯನ್ನು ತಂದು ತೋರಿಸಿ, ಇದು ನಿನ್ನ ಕೊಡಲಿ ಹೌದೇನೋ ಎಂಬೋಣಾ, ಅವನು ಇದು ನನ್ನದಲ್ಲಾ ಎನ್ನಲಾಗಿ, ಮತ್ತು ಮುಳುಗಿ ಒಂದು ಬೆಳ್ಳಿಯ ಕೊಡಲಿ ತಂದು ತೋರಿಸಲು, ಇದು ನನ್ನದಲ್ಲಾ ಎಂದಲ್ಲಿ, ಆ ಜಲಮನುಷ್ಯನು ಮತ್ತು ಮುಳುಗಿ ಅವನು ಕಳಕೊಂಡ ಕಬ್ಬಿಣದ ಕೊಡಲಿಯನ್ನು ತಂದು ತೋರಿಸಲಾಗಿ, ಕಬಾಡಿಯು ನೋಡಿ ಬಹಳ ಹರ್ಷಿತನಾಗಿ ತೆಗದು ಕೊಳ್ಳಲು, ಆ ಜಲಮನುಷ್ಯನು ಕಂಡು ಅತಿ ತುಷ್ಟನಾಗಿ ಆ ಬಂಗಾರ ಮತ್ತು ಬೆಳ್ಳಿಯ ಕೊಡಲಿಗಳನ್ನು ಅವನಿಗೆ ದಯ ಮಾಡಿ ಇನಾಮವಾಗಿ ಕೊಟ್ಟನು. ಈ ವರ್ತಮಾನ ಆ ಕಬಾಡಿಯ ಗೆಳಿಯಕಬಾಡಿಯು ತಿಳಿದು ಅದೇ ಹೊಳೆಯ ತೀರಕ್ಕೆ ಹೋಗಿ ತನ್ನ ಕೈಯ್ಯಾಗಿನ ಕೊಡಲಿಯನ್ನು ನೀರೊಳಗೆ ಬಿಟ್ಟು ಪ್ರಳಾಪಿಸುತ್ತಾ ಇರಲಾಗಿ, ಆ ಜಲಮನುಷ್ಯನು ಮುಂನಿನಂತೆ ಬಂದು ನೀರೊಳಗೆ ಮುಳುಗಿ ಬಂಗಾರದ ಕೊಡಲಿಯನ್ನು ತಂದು ಇದು ನಿನ್ನದು ಹೌದೇ ಎನ್ನಲಾಗಿ, ಆ ಬಂಗಾರವನ್ನು ಕಂಡು ಚಿತ್ತಚಂಚಲನಾಗಿ, ಇದೇ ಹೋಗಿದ್ದ ನನ್ನ ಕೊಡಲಿ ಎಂದು ಘಾಬರಿಯಿಂದ ಆ ಕೊಡಲಿ ತಕ್ಕೊಳ್ಳಲಿಕ್ಕೆ ಹೋಗೋಣ, ಆ ಜಲಮನುಷ್ಯನು ಇವನ ದುರಾಭಿಲಾಷೆಯನ್ನು ನೋ

ಡಿ ಆ ಬಂಗಾರದ ಕೊಡಲಿಯನ್ನು ಕೊಡದೆ ಅವನ ಕಬ್ಬಿಣಕೊಡಲಿ ಸಹಾ ಸಿಕ್ಕದ ಹಾಗೆ ಮಾಡಿದನು.

ತಾತ್ಪರ್ಯ.

ಜನರು ಬಹಳ ಅನ್ಯಾಯವಾಗಿ ನಡೆಯೋದಕ್ಕೆ ಅನುಸರಿಸುತ್ತಿದ್ಧಾರೆ. ವಿಶ್ವಾಸದಲ್ಲಿ ಠಕ್ಕುತನದಿಂದ ವರ್ತಿಸೋ ವಿಷಯಕ್ಕೆ ಅನೇಕ ಜನರು ಅನೇಕ ಕಾರಣಗಳ ಹೇಳುತ್ತಾರೆ. ಅವರು ಯಾಕೆ ಹೇಳವಲ್ಲರು, ಹೇಳಲಿ. ಆದರೆ ನೋಡುವಾಗ್ಯೆ ಪ್ರಮಾಣಿಕತ್ವದ ಸಮಾನ ಗುಣಗಳು ಇಲ್ಲವು. ಇದಕ್ಕೆ ಅನುಭವ ನೋಡಿರಿ. ಕ್ರಿಯಾವಂತ ಗ್ರುಹಸ್ಥಗೆ ಇಹಲೋಕದಲ್ಲೇ ಸರ್ವ ಕೆಲಸಗಳಲ್ಲಿ ವಿಶ್ವಾಸಿಸುತ್ತಾರೆ; ಮತ್ತು ಅವನು ದೊಡ್ಡವನೆಂದು ಮನ್ನಿಸುತ್ತಾರೆ. ಹಾಗೆಯೇ ಪರಲೋಕ ಪ್ರಾಪ್ತಿಯ ಸಲವಾಗಿ ನೋಡಲಿಕ್ಕೆ ಸತ್ಯಕ್ಕೆ ಪ್ರುಶಂಸೆ ಎಂಬ ಶಬ್ದವೇ ಇಲ್ಲವೆಂದು ಕ್ರಿಯೆಯುಳ್ಳ ಮನುಷ್ಯನ್ನ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸಜ್ಜನನೆಂದು ಸನ್ಮಾನಿಸುತ್ತಾರೆ.

---

೧೨೮. ನೀತಿಕಥೆ.

ತೋಳವೂ ನರಿಯೂ ಮಂಗವೂ.

ಒಂದು ಮಂಗನ್ನ ಮುಖ್ಯ ಪಂಚನನ್ನು ಮಾಡಿ ಕೊಂಡು ತೋಳವು ನರಿಯ ಮೇಲೆ ಫಿರ್ಯಾದಿ ತಂದಿರಲಾಗಿ, ಆ ಪಂಚಾಯಿತದ ಕೌತುಕವ ನೋಡಲಿಕ್ಕೆ ಉಳಿದ ಮೃಗಪಶುಗಳು ಆ ಸಭೆಗೆ ಬಂದಿರಲಾಗಿ, ಆ ತೋಳನ ಫಿರ್ಯಾದಿಯ ಮಾತು ತೀರಿದ ಬಳಿಕ, ನರಿಯು — ನಾನು ಈ ತೋಳನ ವಸ್ತು ತಂದಿಲ್ಲವೆಂದು ಉತ್ತರ ಕೊಟ್ಟಿತು. ಆ ಮೇಲೆ ಇಬ್ಬರ ಮಾತು ವಿಚಾರ ಮಾಡಿ ಮಂಗವು ಸಾರಂಶ ಹೇಳುತ್ತದೆ, ತೋಳಗೆ, ನಿನ್ನದು ಇಂಥಾ ವಸ್ತು ಹೋದ್ದು ಸುಳ್ಳು ಎಂದು, ನರಿಗೆ, ನೀನು ಇಡೀ ಗಂಟು ತಿಂದದ್ದು ನಿಜವು. ಇದರೊಳಗೆ ಸಂಶಯವೇನೂ ಇಲ್ಲವೆಂದು ಹೀಗೆ ಹೇಳಿ, ನೀವಿಬ್ಬರೂ ನೀಚರು ಎಂದು ಠರಾಯಿಸಿ ಸಭೆಯು ಎದ್ದು ಹೋಯಿತು.

ತಾತ್ಪರ್ಯ.

ಹೀನನು ಎಂದು ಒಂದು ಸರ್ತಿ ಪ್ರಸಿದ್ಧಕ್ಕೆ ಬಂದ ಬಳಿಕ ಅವನ ನಿಜಕ್ಕೆ ಯಾರ್‍ಯಾರೂ ಮನ್ನಿಸುವದಿಲ್ಲ. ತೋಳಗೆ ಎರಡನೆಯವರ ವಿತ್ತ ಹರಣ ಮಾಡುವದು ಸಹಜ ಗುಣವು. ನರಿಯು ಠಕ್ಕುತನದಲ್ಲಿ ಅತಿ ಹೆಚ್ಚಾದದ್ದು ಎಂದು ಪ್ರಸಿದ್ಧವದೆ. ಆದ ಕಾರಣ ಅದರಂತೆ ನ್ಯಾಯ ನಿವಡಿಸಿತು.

---

೧೨೯. ನೀತಿಕಥೆ.

ಹೊಳೆಯ ಮೀನೂ ಸಮುದ್ರದ ಮೀನೂ.

ಹೊಳೆಯೊಳಗಣ ಒಂದು ಮೀನು ನದಿ ತುಂಬಿ ಹೋಗೋ ಕಾಲವಿಗೆ ಬಿದ್ದು ಸಮುದ್ರದೊಳಗೆ ಹೋಗಲಾಗಿ, ಅಲ್ಲಿಯ ಜಲಚರಗಳು ಈ ಮೀನನ್ನು ತೃಣ ಸಮಾನ ನೋಡಲು, ಈ ಮೀನು — ನನ್ನ ದೇಶವೂ ನನ್ನ ಜಾತಿಯೂ ನನ್ನ ಕುಲವೂ ನಿಮಗಿಂತಲೂ ಚೆಲೋದದೆ, ಆದ ಕಾರಣ ನೀವು ಸರ್ವರೂ ನನಗೆ ಉನ್ನತ ಸ್ಥಳದಲ್ಲಿ ಕುಳ್ಳಿರಿಸಿ ಕೊಂಡು ಮಾನ ಕೊಡ ಬೇಕು ಎಂದಲ್ಲಿ, ಆ ಮಾತು ಸಮುದ್ರದೊಳಗಿನ ಸಣ್ಣ ಮೀನು ಕೇಳಿ, ಎಲೋ ಇನ್ನು ಮೇಲೆ ಇಂಥಾ ಮಾತು ಆಡ ಬೇಡವು, ಕದಾಚಿತ್ ನಾನೂ ನೀನೂ ಒಂದೇ ಬಲೆಯಲ್ಲಿ ಶಿಕ್ಕಿದಾಗ ನಿನಗೆ ಶಿಳದೀತು, ಉನ್ನತ ಸ್ಥಾನ ಯಾರದು ಎಂದು ಶಿಳಿಯುವದಕ್ಕೆ ಆ ಬಂಧನಸಮಯದಲ್ಲಿ ಬೇಕಾದಷ್ಟು ಬೆಲೆಯನ್ನು ಕೊಟ್ಟು ಶ್ರೀಮಂತಜನರು ನನ್ನನ್ನು ಭಕ್ಷಿಸಲಿಕ್ಕೆ ಕೊಂಡು ಹೋದಾರು, ಆದರೆ ನಿನ್ನನ್ನು ಬಡ ಜನರಿಗೆ ಸ್ವಲ್ಪ ಬೆಲೆಗೆ ಮಾರ್‍ಯಾರು ಅಥವಾ ಆಯವಾಗಿ ಪುಕ್ಕಟ್ಟೆ ಕೊಟ್ಟಾರು.

ತಾತ್ಪರ್ಯ.

ಪರಸ್ಥಳದಲ್ಲಿ ಹೋಗಿ, ಆ ಸ್ಥಳದ ನಿಂದೆ ಮಾಡುವದೂ ತನ್ನ ದೇಶದ ಸ್ತುತಿ ಮಾಡುವದೂ, ಈ ರೀತಿ ಮಾಡುವವನು ಅಡ್ನಾಡೀ ಮನುಷ್ಯನೆನ್ನ ಬೇಕು. ಸರ್ವರಿಗೂ ತಮ್ಮ ತಮ್ಮ ಸ್ವದೇಶದ ಮೇಲೆ ಪ್ರೀತಿ ಇರುವದು ಸ್ವಭಾವಿಕವೇ ಸರಿ. ಪರ

ದೇಶವನ್ನು ತಿರಸ್ಕಾರ ಮಾಡಿ ಸ್ವದೇಶ ವರ್ಣನೆ ಮಾಡೋಣ, ಆ ದೇಶದ ಜನರು ಅವನಿಗೆ ನಿಷೇಧವ ಮಾಡಿ ಸ್ವದೇಶವನ್ನು ಪ್ರಶಂಸೆ ಮಾಡ್ಯಾರು. ನಿಶ್ಚಯವಾಗಿ ನೋಡಲಾಗಿ ತಮ್ಮ ದೇಶ ಚಲೋದು ಎಂದು ಹೇಳಿದರೆ ತನಗೆ ದೊಡ್ಡಸ್ತನ ಬರುತ್ತದೋ? ಏನೂ ಇಲ್ಲ. ಅದಕ್ಕೆ ತನ್ನ ಅಂಗಗುಣಗಳು ಬೇಕು; ಅದಕ್ಕೋಸ್ಕರ ಯಾವ ದೇಶದಲ್ಲಿರುವವನಾಗಲಿ, ವಿದ್ವಾಂಸನಾಗಿ ಗುಣವಂತನಾಗಿದ್ದರೆ ಅವನೇ ಸರ್ವ ದೇಶದಲ್ಲಿಯೂ ಪ್ರತಿಷ್ಠಾವಂತನಾಗುತ್ತಾನೆ.

---

೧೩೦. ನೀತಿಕಥೆ.

ದೇವಶರ್ಮನೆಂಬ ಪಂಡಿತನು.

ಒಂದಾನೊಂದು ಸಮಯದಲ್ಲಿ ದೇವಶರ್ಮನೆಂಬ ಪಂಡಿತನು ಆಡುತ್ತಿರಲಾಗಿ, ಅದನ್ನು ಕಂಡು ಮತ್ತೊಬ್ಬ ಪಂಡಿತನು ಅವನ್ನ ವಿನೋದ ಮಾಡುತ್ತಿರಲಿಕ್ಕೆ ಅವನ ಗರ್ವ ಇಳಿಸ ಬೇಕೆಂದು ದೇವಶರ್ಮನು ಒಂದು ಧನುಸ್ಸು ತರಿಸಿ ಅದರ ಹೆದೆಯನಿಳಿಸಿ ನೆಟ್ಟಗೆ ಮಾಡಿ ಜಮೀನಾ ಮೇಲೆ ಇಟ್ಟು ಆ ಪಂಡಿತಗೆ— ಈ ಗುಟ್ಟು ಹೇಳಿದರೆ ನೀನು ವಿದ್ವಾಂಸ ಖರೆ ಎಂಬೋಣ, ಆ ಪಂಡಿತನು ಆ ಗುಟ್ಟು ಬಿಚ್ಚಲೊಲ್ಲದೆ ದೇವಶರ್ಮನಿಗೆ— ಇದರ ಅರ್ಥ ನನಗೆ ತಿಳಿಯೋದಿಲ್ಲ, ನೀನೇ ಹೇಳು ಅಂದಲ್ಲಿ, ದೇವಶರ್ಮನು — ನಿನಗೆ ತಿಳಿಯದಿದ್ದರೆ ನಾನು ಹೇಳುತ್ತೇನೆ, ಕೇಳು, ಈ ಧನುಸ್ಸು ಸರ್ವದಾ ಬಾಗಿ ಕೊಂಡಿದ್ದರೆ ಚಮತ್ಕಾರ ಮುರಿದು ಹೋದೀತು, ಕೆಲಸ ಬಿದ್ದ ಕಾಲಕ್ಕೆ ತತ್ತತ್ಸಮಯದಲ್ಲಿ ಮಣಿಸಿದರೆ ಬಹಳ ದಿವಸ ತಾಳೀತು, ಮತ್ತು ಹೆಚ್ಚಿಗೆ ಕೆಲಸ ಮಾಡೀತು ಅಂದನು.

ತಾತ್ಪರ್ಯ.

ಮನುಷ್ಯನ ಮನಸ್ಸು ಈ ಧನುಸ್ಸಿನ ಹಾಗೆ ಅದೆ. ಆ ಮನಸ್ಸನ್ನು ಸಾರ್ವಕಾಲದಲ್ಲಿ ವೇಧಿಸಿ ಇಡುತ್ತಿರಲಾಗಿ, ಮನಸ್ಸಿನಲ್ಲಿ ಶಕ್ತಿ ಕ್ಷೀಣವಾಗಿ ತಾದೃಶ ಉಪಯೋಗಕ್ಕೆ ಬೀಳಲಿಕ್ಕಿಲ್ಲ ಎಂದು, ವಿನೋದವೂ ಮತ್ತೆ ಊಟವೂ, ಇವು ಚಿತ್ತಕ್ಕೆ

ವಿಶ್ರಾಂತಿಕರವು. ಹಾಗೆಯೇ ಬುದ್ಧಿಗೆ ತೀಕ್ಷ್ಣತೇ ತರುವಂಥಾವು ಎಂದು ವಿನೋದ ಆಟಗಳು ನಿರ್ದೋಷಗಳಾಗಿದ್ದಾವೆ. ಪ್ರಸಂಗೋಚಿತ ದೊಡ್ಡವರಾದರೂ ಆಡುವದು ಯೋಗ್ಯವು.

---

೧೩೧. ನೀತಿಕಥೆ.

ಡೊಂಬ ಕಾಗೆಯೂ ಪಾರಿವಾಳವೂ.

ಒಂದು ಗೂಡಿನೊಳಗೆ ಪಾರಿವಾಳಗಳು ಇರುತ್ತಿರಲಾಗಿ ಆ ಹಿಂಡಿನೊಳಗೆ ಒಂದು ಡೊಂಬ ಕಾಗೆಯು ತನ್ನ ಗರಿಗಳ ಬೆಳ್ಳಗೆ ಮಾಡಿ ಕೊಂಡು ಅವರೊಳಗೆ ಹೊಕ್ಕು ಮೌನದಿಂದ ಇದ್ದ ಕಾರಣ ಅದು ಪಾರಿವಾಳಗಳ ಲಕ್ಷ್ಯದೊಳಗೆ ಬರಲಿಲ್ಲ. ಹೀಗೆ ಕೆಲವು ದಿವಸಗಳು ಹೋದ ಬಳಿಕ ಒಂದು ದಿವಸ ಆ ಕಾಗೆಯು ತನ್ನ ಕಾಪಟ್ಯದ ಸ್ವರೂಪವನ್ನು ಮರತು ತನ್ನ ನಿಜಸ್ವರದಿಂದ ಕೂಗಲಾಗಿ, ಆ ಸ್ವರದ ಮೇಲೆ ಪಾರಿವಾಳಗಳು ಗುರ್ತು ಶಿಳಿದು ಆ ಕಾಗೆಗೆ ಶಿಕ್ಷೆ ಮಾಡಿ ಹೊರಗೆ ಹಾಕಿದವು. ಕಾಗೆಯು ತನ್ನ ಜಾತಿಯ ಹಿಂಡಿನೊಳಗೆ ಹೋಗುತ್ತಿರಲಾಗಿ, ಅದರ ಗರಿಗಳ ವರ್ಣಗಳನ್ನು ಕಂಡು, ಇದು ನಮ್ಮ ಜಾತಿಯೊಳಗಿನದಲ್ಲವೆಂದು ಕಾಗೆಗಳು ಹೊರಗೆ ಹಾಕಿದವು. ಈ ಪ್ರಕಾರದಿಂದ ಆ ಡೊಂಬ ಕಾಗೆಯು ತನ್ನಲ್ಲಿ ಇಲ್ಲದ ಯೋಗ್ಯತೆ ತರಲಿಕ್ಕೆ ಹೋಗಿ ತನ್ನ ಜಾತಿ ಸಹಾ ಕಳಕೊಂಡು ಕಾಗೆಯ ಒಳಗೂ ಇಲ್ಲ, ಪಾರಿವಾಳದ ಒಳಗೂ ಇಲ್ಲದ ಹಾಗಾಯಿತು.

ತಾತ್ಪರ್ಯ.

ವೇಷಧಾರಿಗಳು ಜನರಿಗೆ ಬಹಳ ದಿವಸ ತನಕ ಠಕ್ಕಿಸಲಿಕ್ಕೆ ಶಕ್ತರಾಗೋದಿಲ್ಲವು. ಅವರ ಮಾತುಗಳೂ ಅವರ ಆಚರಣೆಗಳೂ ಒಂದು ವೇಳ್ಯವಾದರೂ ಅವರ ಸೋಗಿಗೆ ಹೆಚ್ಚು ಕಡಿಮೆ ಬೀಳುತ್ತವೆ. ಆ ಮೇಲೆ ಅವರ ಭವಿಷ್ಯ ಪ್ರಕಾಶವಾಗಿ ಸುಜ್ಞ ಪುರುಷರ ಲಕ್ಷ್ಯಕ್ಕೆ ಬರುತ್ತದೆ.

---

೧೩೦. ನೀತಿಕಥೆ.

ಗುಬ್ಬಿಯೂ ಮೊಲವೂ.

ಒಂದಾನೊಂದು ಗರುಡಪಕ್ಷಿಯು ಒಂದು ಮೊಲವನ್ನು ಹಿಡಿದು ಅದರ ಹೆಡಕಿನ ಮೇಲೆ ಕುಳಿತ್ತಿರಲಾಗಿ ಅಲ್ಲೇ ಸಮೀಪದ ಗಿಡದ ಮೇಲೆ ಕೂತಿರುವ ಗುಬ್ಬಿಯು ಮೊಲಕ್ಕೆ — ನೀನು ಖರೆವಂದರೆ ಮೂರ್ಖನಾಗಿದ್ಧೀ, ನಿನ್ನ ಜನ್ಮ ವ್ಯರ್ಥವು, ನೀನು ಸುಮ್ಮನೆ ಕುಳಿತು ಯಾಕೆ ಸಾಯುತ್ತಿದ್ದಿ, ಏಳು, ನಡಿಯಲಿಕ್ಕೆ ಆರಂಭ ಮಾಡು, ನೀನು ಚಾಪಲ್ಯ ಜಾತಿಯವನಾಗಿದ್ಧೀ, ಶತ್ರುವಿನ ಕೈಯೊಳಗಿಂದ ಸಾಹಸದಿಂದ ಹೊರಟು ಹೋಗುವಿ ಎಂದು ಹೇಳಿ ಮೊಲಕ್ಕೆ ಧಿಕ್ಕರಿಸುತ್ತಾ ಇರುವ ಸಮಯದಲ್ಲಿ, ಒಂದು ಗಿಡಗನು ಬಂದು ಎರಗಿ ಗುಬ್ಬಿಯನ್ನು ಎತ್ತಿ ಕೊಂಡು ಹೋಯಿತು. ಆ ಸಮಯದಲ್ಲಿ ಗುಬ್ಬಿಯು ಬಹಳ ಸಾಹಸ ಮಾಡಿದರೂ ಗಣ್ಯ ಮಾಡದೆ ಗಿಡಗ ಬೈಯುತ್ತಿರಲಾಗಿ ಮೊಲವು ಕಂಡು ಪ್ರಾಣೋತ್ಕ್ರಮಣಕಾಲದಲ್ಲಾದರೂ ಸಮಾಧಾನ ಹಿಡಿದು, ಎಲೋ ಗುಬ್ಬಿಯೇ, ನಿನಗೆ ಪೇಚು ಇಲ್ಲವೆಂದು ನನ್ನನ್ನು ಹೀನೈಸುತ್ತಿದ್ಧಿಯಲ್ಲಾ, ಈಗ ನಿನ್ನ ಮೇಲೆ ನನ್ನಂಥಾ ಪ್ರಸಂಗವೇ ಬಿದ್ದು ಇಧೆ, ನೀನು ಹ್ಯಾಗೆ ಮಾಡುತ್ತಿದ್ಧೀ ನೋಡುತ್ತೇನೆಂದು ಹೇಳಿತು.

ತಾತ್ಪರ್ಯ.

ತಮ್ಮ ಮೇಲೆ ಸಂಕಟ ಬಂದ ಕಾಲಕ್ಕೆ ಜನರು ಘಾಬರಿಯಾಗುತ್ತಾರೆ, ಅಲ್ಲದೆ ಎರಡನೆಯವರಿಗೆ ಮಾತ್ರ ಶಾಸ್ತ್ರಾರ್ಥಗಳನ್ನು ಹೇಳುತ್ತಾರೆ. ಇಂಥಾ ಪುರುಷರು ಉಪಹಾಸಕ್ಕೆ ಮಾತ್ರ ಕಾರಣವಾಗುತ್ತಾರೆ.

---

೧೩೧. ನೀತಿಕಥೆ.

ಬೃಹಸ್ಪತಿಯು.

ಒಂದಾನೊಂದು ಸಮಯದಲ್ಲಿ ಬೃಹಸ್ಪತಿಯು, ತನಗೆ ಮನುಷ್ಯ

ರು ಎಷ್ಟು ಮನ್ನಿಸುತ್ತಾರೆಯೋ ನೋಡ ಬೇಕೆಂದು ಮನಸ್ಸಿನಲ್ಲಿ ಯೋಚಿಸಿ ಮನುಷ್ಯರೂಪ ತಕ್ಕೊಂಡು ಭೂಲೋಕಕ್ಕೆ ಇಳಿದು ಬಂದು ಪ್ರತಿಮೆಗಳ ಮಾಡುವವನ ಅಂಗಡಿಗೆ ಹೋಗಲಾಗಿ, ಆ ಮೂರ್ತಿಗಾರನು ಅನೇಕ ತರದ ಮೂರ್ತಿಗಳನ್ನು ಮಾರೋ ನಿಮಿತ್ತ ಮಂಡಿಸಿ ಇಟ್ಟಿರಲಾಗಿ, ಆ ಮೂರ್ತಿಗಳ ಒಳಗೆ ಇಂದ್ರನನ್ನೂ ಕುಬೇರನನ್ನೂ ಬೃಹಸ್ಪತಿ ನೋಡಿದವನಾಗಿ, ಮೂರ್ತಿಗಳ ಖರೀದಿಗೆ ಬಂದಿದ್ದೇನೆ ಎಂಬ ಭಾವ ತೋರಿಸಿ ಇಂದ್ರನ ಮೂರ್ತಿಯ ಕಡಿಗೆ ಬೊಟ್ಟು ತೋರಿಸಿ, ಎಲೋ ಈ ಮೂರ್ತಿಗೆ ಏನು ತಕ್ಕೊಳ್ಳುತಿದ್ದಿ ಎಂದಲ್ಲಿ, ಅವನು ಎರಡು ದುಡ್ಡು ಅಂಬೋಣ, ಕುಬೇರನ ಮೂರ್ತಿಗೆ ಏನು ಅಂದಲ್ಲಿ, ಸ್ವಲ್ಪ ಹೆಚ್ಚು ಬಿದ್ದೀತು ಎಂಬೋಣ, ಬೃಹಸ್ಪತಿಯು ತಲೆದೂಗಿ, ಒಳ್ಳೇದು ಈ ಬೃಹಸ್ಪತೀ ಮೂರ್ತಿಗೆ ಬೆಲೆ ಹೆಚ್ಚು ಇದ್ದೀತೋ ಹ್ಯಾಗೆ ಎಂಬೋಣ, ಮೂರ್ತಿಗಾರನು — ಇಂದ್ರ ಕುಬೇರ, ಈ ಎರಡು ಮೂರ್ತಿಗಳನ್ನು ನೀನು ತಕ್ಕೊಂಡದುಂಟಾದರೆ ಬೃಹಸ್ಪತೀ ಮೂರ್ತಿಯನ್ನು ಕೊಸರಾಗಿ ಪುಗಶಾಟೆ ಕೊಟ್ಟೇನು ಎಂದು ಹೇಳಿದನು. ಆ ಮಾತು ಕೇಳಿ ಬೃಹಸ್ಪತಿಯು ಮನಸ್ಸು ಮುರ ಕೊಂಡು ಹಿಂದಕ್ಕೆ ಹೋದನು.

ತಾತ್ಪರ್ಯ.

ತಾನು ಸನ್ಮಾರ್ಗಿಯಾಗಿ ನಡದು ಉಚಿತ ಕರ್ಮ ಆಚರಿಸಿ ಮತ್ತು ತನ್ನ ದೇಶಕ್ಕೂ ಇಷ್ಟರಿಗೂ ತನಗೂ ಕಲ್ಯಾಣವಾಗ ಬೇಕೆಂದು ಉದ್ಯೋಗ ಮಾಡುವ ಪುರುಷನು ಜನರು ಏನಾದರೂ ಯಾಕೆಂನವಲ್ಲರು ಎಂದು ಅದನ್ನು ಕೇಳೋ ಉದ್ಯೋಗ ಮಾಡ ಬಾರದು. ತನ್ನ ಪ್ರಶಂಸೆಯು ಜನರ ಮುಖದಿಂದ ಕೇಳ ಬೇಕೆಂದು ಉದ್ಯೋಗ ಮಾಡುವವನು ಬುದ್ಧಿವಂತರ ಲಕ್ಷ್ಯದೊಳಗೆ ತನ್ನ ತೂಕ ಕಡಿಮೆ ಎಂದು ತಿಳಿಸುವಂಥವನಾಗುತ್ತಾನೆ. ಅವನಿಗೆ ಬೃಹಸ್ಪತಿಯಂತೆ ನಿರ್ಣಯಕ್ಕೆ ಕಾರಣವಾಗುತ್ತದೆ.

೧೩೪. ನೀತಿಕಥೆ.

ಶೂರಸೇನ ಅರಸನೂ ಅವನ ದಾಸನೂ.

ಒಂದಾನೊಂದು ಸಮಯದಲ್ಲಿ ಬೇಸಿಗೇ ಕಾಲದೊಳಗೆ ಶೂರಸೇನನೆಂಬ ಅರಸನು ನಗರದ ಹೊರಗೆ ಸಂಚಾರ ಮಾಡಿ ತಿರಿಗಿ ಬರುವಾಗ್ಗೆ ಮಾರ್ಗದಲ್ಲಿರುವ ತನ್ನ ಸ್ವಂತವಾದ ದಿವ್ಯ ವನದೊಳಗೆ ಹೊಕ್ಕು ನಾನಾ ಪ್ರಕಾರದ ಗಿಡಜಾತಿಗಳ ಕೌತುಕ ನೋಡುತ್ತಾ ಅಲ್ಲಿಂದಿಲ್ಲಿ ಇಲ್ಲಿಂದಲ್ಲಿಗೆ ಅಡ್ಡಾಡುತ್ತಿರಲು, ಆ ತೋಟದಲ್ಲಿದ್ದ ಅರಸನ ದಾಸನು ಕೈಕಾರಂಜಿ ತೆಗದು ಕೊಂಡು ಸನ್ನಾಹ ಮಾಡಿ ಅರಸನ ಮುಂದೆ ಚಳಿ ಚಲ್ಲುತ್ತಾನೆ. ಈ ಚಾಕರಿ ಬಿಟ್ಟು ದೊಡ್ಡ ಪದವಿಗೆ ಏರ ಬೇಕೆಂಬುವ ಆಶೆಯಿಂದ ಅರಸನನ್ನು ಮೆಚ್ಚಿಸಲಿಕ್ಕೆ ಬಹಳ ಆಸ್ಥೆಯಿಂದ ಚಾಕರಿ ಮಾಡುತ್ತಾನೆ. ಅರಸನು ಎತ್ತೆತ್ತ ತಿರುಗುತ್ತಾನೋ ಅತ್ತತ್ತ ಮುಂದೊರಿದು ಅಡ್ಡಡ್ಡ ಹೋಗಿ ಚಳಿ ಹಾಕುವನನ್ನು ಕಂಡು, ಓಹೋ ಇವನು ಸ್ವಾರ್ಥದ ನಿಮಿತ್ತ ಹೀಗೆ ಮಾತಾಡುತ್ತಾನೆಂದು ಅರಸನ ಲಕ್ಷ್ಯದೊಳಗೆ ಬಂದು ದಾಸನನ್ನು ಕರೆಯಲಾಗಿ, ಅವನು ಆ ಕ್ಷಣ ಮುಂದೆ ಬಂದು ಆಶಾಚರಿತನಾಗಿ ನಿಂದಿರಲಾಗಿ ಅರಸನು, ಎಲಾ ನೀನು ನಿನ್ನ ಕೆಲಸ ಬಿಟ್ಟು ಇಷ್ಟು ತನಕ ಶ್ರಮೆ ಪಟ್ಟಿಯಲ್ಲಾ, ಇದರ ಪ್ರಯೋಜನವೇನೂ ಇಲ್ಲ, ನಿನ್ನ ಕೆಲಸದಲ್ಲಿ ನೀನು ಚಿತ್ತವಿಟ್ಟು ಉಪಯೋಗ ಬಿದಿದ್ದರೆ ಈಗಲೆ ನಿನ್ನ ಸಂಶಯ ಬಿಡಿಸುತ್ತಾ ಇದ್ದೆ, ಅದಲ್ಲದೆ ಈ ಕೃತಿಗೆ ನಿನ್ನ ಆಶೆ ನಮ್ಮ ಕಡೆಯಿಂದ ಸಫಲವಾಗಲಿಕ್ಕಿಲ್ಲವು.

ತಾತ್ಪರ್ಯ.

ಕಾರ್ಯಪೂರ್ತಿಯಿಂದ ಮುಂದಾಗಿ ಆರ್ಜನೆ ಮಾಡೋ ಪುರುಷರು ಇದ್ದಾರೆ. ಅವರು ಎರಡನೆಯವರಿಗೆ ತುಷ್ಟಿ ಆಗ ಬೇಕೆಂದು ಹ್ಯಾಗ್ಹ್ಯಾಗೆ ಅಧಿಕವಾದ ಉದ್ಯೋಗ ನಿಷ್ಫಲವಾಗುತ್ತದೆ.

೧೩೫. ನೀತಿಕಥೆ.

ಇದ್ದಲಿಮಾರುವವನೂ ಅಗಸನೂ.

ಒಂದಾನೊಂದು ಪಟ್ಟದೊಳಗೆ ಒಬ್ಬ ಇದ್ದಲಿಮಾರುವವನು ಒಂದು ಕೆಲಸದ ನಿಮಿತ್ತವಾಗಿ ಹೋಗಿದ್ದನು. ಅವನ ಊರ ಅಗಸನು ಅಲ್ಲೇ ಹೋಗಿದ್ದನು. ಇವರಿಬ್ಬರಿಗೂ ಭೇಟಿಯಾಗಿ ಒಬ್ಬರಿಗೊಬ್ಬರು ತಮ್ಮ ತಮ್ಮ ಕ್ಷೇಮಸಮಾಚಾರಗಳನ್ನು ವಿಚಾರಿಸಿ ಕೊಂಡ ಮೇಲೆ ಇದ್ದಲಿ ಮಾರುವವನು ಅಗಸನಿಗೆ — ನಿನ್ನ ಮನೆಯ ವಿಚಾರ ನೆಟ್ಟಗೆ ಇಲ್ಲ, ನೀನು ನಮ್ಮಲ್ಲಿ ಬಂದು ಇರುವ ಹಾಗೆ ಮಾಡು ಎಂಬೋಣಾ, ಅಗಸನು — ಎಲೋ ಗೆಳಿಯನೇ, ಇಂಥಾ ಮಾತು ಹ್ಯಾಗಾಧೀತು, ನಿನ್ನ ಸಹವಾಸದಲ್ಲಿ ನಿಂತದ್ದೇ ಉಂಟಾದರೆ ನಾನು ಒಗದು ಕೊಂಡು ಬಂದ ಹೊದಿಕೆಗಳು ಸಂಜೆ ಆಗುವದಕ್ಕಿಂತ ಮುಂಚೆಯೇ ನಿನ್ನ ಇದ್ದಲಿಯ ಧೂಳು ಕುಳಿತು ಕಪ್ಪು ಆದಾವು ಎಂದು ಹೇಳಿದನು.

ತಾತ್ಪರ್ಯ.

ಈ ಲೋಕದಲ್ಲಿ ಯಾರಾದರೂ ಸಹವಾಸ ಮಾಡ ಬೇಕಾದರೆ ಬಹಳ ವಿಚಾರ ಮಾಡ ಬೇಕು. ತಾನು ಗುಣವಂತನಾಗಿದ್ದರೂ ನಿರಂತರದಲ್ಲಿ ದುರ್ಗುಣಿಗಳ ಸಂಗತಿಯಾದರೆ ಅವನು ತನ್ನಂತೆ ಮಾಡ್ಯಾನು. ಅದರ ದೆಶೆಯಿಂದ ತನ್ನ ಹಿತವನ್ನು ವಿಚಾರ ಮಾಡುವಂಥವನು ಕುಮನುಷ್ಯರನ್ನ ಬಿಟ್ಟು ದೂರ ಇರ ಬೇಕು, ಕುಜನರ ಸಂಗತಿ ತನಗೆ ಸಹಮೂಲ ನಾಶ ಮಾಡೀತು. ಅಂಥವರ ಸಮಾಗಮದಲ್ಲಿ ನಿರ್ಲೇಪರಾಗಿ ನಿಂತರೂ ಅದು ಜನರಿಗೆ ನಿಜ ಕಾಣಿಸಲಿಕ್ಕಿಲ್ಲ. ಯಾಕೆಂದರೆ ದುಸ್ಸಂಗತೀ ಯೋಗದಿಂದ ಅವನ ಗುಣ ತನ್ನ ಗುಣ ಬೆರಕಿ ಆದಾವು. ಆ ಮೇಲೆ ಅವನ ಕಪ್ಪೂ ಇವನ ಕೆಂಪೂ ಎಂದು ನಿವಡಿಸುವ ಶ್ರಮವನ್ನು ಜನರು ಮಾಡಲಿಕ್ಕಿಲ್ಲ. ಪ್ರತಿಷ್ಠೆ ಎಂಬದು ಸ್ವಚ್ಛವುಳ್ಳ ಶಲೆಯ ನೀರಿನ ಹಾಗೆ ಅದೆ. ಆ ನೀರೂ ಊರ ಮುಂದಿನ ಲಂಡಿಕೇ ಹಳ್ಳದ ನೀರೂ ಕೂಡಿ ಹರಿಯಲಿಕ್ಕೆ ಹತ್ತಿದರೆ ಹ್ಯಾಗೆ ಕಲಕಾಗುತ್ತದೋ ಹಾಗೆಯೇ ದುಷ್ಟ ಸಂಗತಿಯಿಂದ ಪ್ರತಿಷ್ಠೆ ಮಲಿನವಾಗುತ್ತದೆ.

೧೩೬. ನೀತಿಕಥೆ.

ಸಾರಂಗಿಯವನು.

ಒಬ್ಬ ಸಾರಂಗಿಯವನು ಶೆರೆಗಾರರ ಅಂಗಡಿಯಲ್ಲಿ ಹೋಗಿ ಹಾಡೋಣ ಬಾರಿಸೋಣ ಮಾಡಿ ಸರಾಯಿ ಕುಡಿಯುವ ಜನರಿಗೆ ಬಹಳ ರಂಜನೆ ಮಾಡುತ್ತಿದ್ದ. ಅವರು ನಿತ್ಯದಲ್ಲು ಅವನಿಗೆ—ವಾಹವ್ವಾ ಶಾಬಾಸು ಎಂದು ಹೇಳುತ್ತಿದ್ದರು. ಅದನ್ನು ಕೇಳಿ ಸಾರಂಗದವನು, ಒಂದು ದಿವಸ ನಾನು ನಾಟಕಸಭೆಯಲ್ಲಿ ಗುಣ ವಿಸ್ತಾರ ಮಾಡಿ ದ್ರವ್ಯವೂ ಕೀರ್ತಿಯೂ ಒಮ್ಮೆಯೇ ದೊರಕಿಸಿಕೋ ಬೇಕೆಂಬ ಆರ್ತನಾಗಿ ಮನಸ್ಸಿನಲ್ಲಿ ಯೋಚಿಸಿದನು. ಒಂದು ದಿವಸ ಅವನ್ನ ಕಂಡು ನಾಟಕಗಾರನು ಸಭೆಯಲ್ಲಿ ಕರಕೊಂಡು ಹೋದನು. ಅಲ್ಲಿ ಜಾಗದ ವಿಸ್ತಾರದಿಂದ ಮತ್ತು ಮಂದಿಯ ಗದ್ದಲದಿಂದ ಇವನ ಸ್ವರವೂ ಸಾರಂಗಿಯ ನಾದವೂ ಲೋಪವಾಗಿ ಯಾರಿಗೂ ಕೇಳಿಸಲಿಲ್ಲ. ಇವನ ಸಮೀಪದಲ್ಲಿದ್ದ ಜನರಿಗೆ ಮಾತ್ರ ಕೇಳಿಸಿತು. ಅದೇ ಸ್ಥಳದಲ್ಲಿ ದೊಡ್ಡ ದೊಡ್ಡ ಗಾಯಕರೂ ಬಾರಿಸುವವರೂ ಹಾಡಿ ಬಾರಿಸೋದನ್ನು ಕೇಳಿದ ಅವರ ಕಿವಿಗಳಿಗೆ ಇವನು ಹಾಡಿ ಬಾರಿಸಿದ್ದು ನೆಟ್ಟಗೆ ತೋರದೆ ಕರ್ಕಶವಾಗಿ ಅವರು ತಮ್ಮ ಮೂಗು ಶಿರುವಲಾಗಿ ಅವರಂತೇ ಸರ್ವರೂ ಹೇಹೇ ಎಂದು ಸಾರಂಗಿಯವನ್ನ ನಿರ್ಣಯ ಮಾಡಿ ಸ್ಥಳ ಬಿಡಿಸಿ ಹೊರಗೆ ಹಾಕಿ ಬಿಟ್ಟರು.

ತಾತ್ಪರ್ಯ.

ಅಜ್ಞಾನಿಗಳ ಪ್ರಶಂಸನದ ಮೇಲೆ ತಾನು ಪ್ರೌಢನೂ ಮಾನಿತನೂ ಎಂದು ತಿಳುಕೊಳ್ಳುವವನು ಜನರುಗಳಲ್ಲಿ ಉಪಹಾಸಕ್ಕೆ ಒಳಗಾಗುತ್ತಾನೆ. ಚಾರ್ವಾಕನಾಗಿ ಇರುವವನು ಅಡ್ನಾಡೀ ಜನರನ್ನು ರಂಜಿಸುತ್ತಾನೆ ಅಲ್ಲದೆ ಪಂಡಿತಜನರ ಮುಂದೆ ಬಾಯ್ಯತ್ತಿ ಅವರನ್ನು ಸಂತೋಷ ಪಡಿಸಲಿಕ್ಕೆ ಹ್ಯಾಗೆ ಶಕ್ತನಾದಾನು. ಆದಕಾರಣ ಕೇವಲ ರಂಜಿಸುವ ವಿಷಯಕ್ಕೆ ಲಕ್ಷ್ಯ ಕೊಡದೆ ತನ್ನ ಯೋಗ್ಯತೆಯನ್ನೂ ಕೇಳುವವರ ಯೋಗ್ಯತೆಯನ್ನೂ ರಂಜನೆ ಮಾಡ ತಕ್ಕ ಗುಣದಲ್ಲಿ ತನ್ನ ಪರಿಪೂರ್ಣತೆ

ಯನ್ನು ನೋಡ ಬೇಕು. ಇಲ್ಲದೇ ಹೋದರೆ ಮಾಡಿದ ಶ್ರಮವೆಲ್ಲಾ ವ್ಯರ್ಥವಾಗಿ ತಿರಿಗಿ ಜನದೊಳಗೆ ಉಪಹಾಸ್ಯ ಮಾತ್ರವಾದೀತು.

---

೧೨೭. ನೀತಿಕಥೆ.

ಕೃತಘ್ನನಾಯಿ ಕುರಿಗಳ ತಿಂದದ್ದು.

ಒಬ್ಬಾನೊಬ್ಬ ಕುರುಬನು ತನ್ನ ನಾಯಿಯ ಮೇಲೆ ಬಹಳ ವಿಶ್ವಾಸ ವಿಟ್ಟು ತಾನು ಹೊರಗೆ ಹೋಗುವಾಗ್ಯೆ ತನ್ನ ಯಾವತ್ತು ಕುರಿಗಳನ್ನು ಅದರ ಸ್ವಾಧೀನ ಮಾಡಿ ಸರ್ವ ಭಾರವನ್ನು ಅದರ ಮೇಲೆ ಇಕ್ಕಿದ್ದನು. ಮತ್ತು ನಾಯಿಯು ಸಂತೋಷದಿಂದ ಚಾಕರಿ ಮಾಡ ಬೇಕೆಂದು ದಿನಂ ಪ್ರತಿ ಅದಕ್ಕೆ ಬೆಣ್ಣೀ ಚಕ್ಕರಿ ತಿನ್ನಿಸಿ ಅದರ ಸಂಗಡ ಪ್ರೀತಿಯ ಮಾತುಗಳನ್ನಾಡುತ್ತಾ ಇರಲಾಗಿ, ಆ ನಾಯಿಯು ಈ ಧಣೀ ಕಾಣದ ಹಾಗೆ ಒಂದೊಂದೆ ಕುರಿಯನ್ನು ಹೊಡದು ತಿನ್ನುತ್ತಾ ಇತ್ತು. ಕೆಲವು ದಿವಸದ ಮೇಲೆ ಆ ಕುರುಬಗೆ ಅದು ತುಬ್ಬು ಹತ್ತಿ ಅದನ್ನು ಕೊಲ್ಲ ಬೇಕೆಂದು ಮಾಡಿದಾಗ, ನಾಯಿಯು — ಎಲೋ ನನ್ನ ಧಣೀಯೇ, ನೀನು ನನ್ನನ್ನು ಘಾತ ಮಾಡ ಬೇಡ, ನಾನು ಬಡವ, ಹಳೇ ಚಾಕರ ಇದ್ಧೇನೆ, ಒಂದೆರಡನ್ಯಾಯ ನನ್ನ ಕಡೆಯಿಂದ ಆಗಿದ್ದಾವು, ಅಷ್ಟರ ನಿರ್ದಯವಾಗಿ ನನಗೆ ದೇಹಾಂತಶಾಸನವ ಮಾಡುವದು ಯೋಗ್ಯವಲ್ಲ, ತೋಳವು ಕುರಿಗಳಿಗೆ ದಿನಂಪ್ರತಿ ಉಪದ್ರವ ಮಾಡುತ್ತದೆ, ಅದರ ಮೇಲೆ ನನ್ನ ಬಿಟ್ಟು ಶಿಟ್ಟು ತೀರಿಸಿಕೋ ಬೇಕು ಎಂದದಕ್ಕೆ, ಕುರುಬನು — ಎಲೋ ಅಪ್ರಯೋಜಕನೇ, ತೋಳನಕ್ಕಿಂತಲೂ ನಿನಗೆ ಶತಗುಣ ಹೆಚ್ಚು ಶಾಸನ ಮಾಡ ಬೇಕು, ಯಾಕಂದರೆ ತೋಳನ ಕಡೆಯಿಂದ ಅಪಕಾರವಾಗುವದು ಸಹಜವೇ ಸರಿ, ಅದಕ್ಕೆ ನಾನು ಎಚ್ಚರವಾಗಿರುತ್ತೇನೆ, ಆದರೆ ನೀನು ವಿಶ್ವಾಸವುಳ್ಳ ಚಾಕರನೆಂದು ನಾನು ನಿನ್ನ ಭರವಸದ ಮೇಲೆ ಇರುತ್ತಿದ್ದೆ, ಹೀಗೆ ನಿನ್ನನ್ನು ಸಂರಕ್ಷಣೆ ಮಾಡಲಾಗಿ ನಿನ್ನ ಕಡೆಯಿಂದ ಅಪಕಾರವಾದದ್ದು ಬಹಳ

ದುಃಖವದೆ. ನಿನ್ನ ಕೃತಘ್ನತೆ ಕ್ಷಮೆ ಮಾಡುವದು ಯೋಗ್ಯವಲ್ಲವು ಎಂದನು.

ತಾತ್ಪರ್ಯ.

ಯಾರಿಗೆ ತಾನು ಒಳ್ಳೇದು ಮಾಡುತ್ತಾನೋ, ಯಾರ ಮೇಲೆ ವಿಶ್ವಾಸ ಇಡುತ್ತಾನೋ, ಯಾರ ಸಂಗಡ ಮಿತ್ರಬುದ್ಧಿಯಿಂದ ನಡಿಯುತ್ತಾನೋ, ಅವರ ಕಡೆಯಿಂದ ಅಪಕಾರವಾದರೆ ಅದನ್ನು ಸಹಿಸಲಿಕ್ಕೆ ಕೂಡೋದಿಲ್ಲ; ಮತ್ತು ಕ್ಷಮೆ ಆಗೋದಿಲ್ಲ. ಇಂಥಾ ಅಪಕಾರಿಗಳಿಂದ ಶತ್ರುಗಳು ಇಂಥಾದನ್ನು ನೂರು ಮಾಡಿದರೂ ಇವರು ಮಾಡಿದ ಒಂದು ಪಾಲಿನಷ್ಟು ತೋರುವದಿಲ್ಲ. ವ್ಯಥೆಯಾಗುತ್ತದೆ ಎಂದು ತಿಳಿದು ಇಂಥಾ ಅಪರಾಧಿಗಳಿಗೆ ಶಾಸನ ಮಾಡುವಲ್ಲಿ ತಾರತಮ್ಯ ನೋಡದೆ ತನ್ನ ಮನೋವ್ಯಥೇ ಪ್ರಕಾರ ಮಾಡ ಬೇಕು.

---

೧೩೮. ನೀತಿಕಥೆ.
ಇಂದ್ರನೂ ಕತ್ತೆಯೂ.

ಒಂದಾನೊಂದು ಕತ್ತೆಯು ಹೊರೆಯನ್ನು ಹೊತ್ತು ಹೊತ್ತು ಬೇಸತ್ತು ದೇವರಿಗೆ—ಏ ದೇವರೇ, ಇನ್ನೊಬ್ಬ ಧಣಿಯನ್ನು ಕೊಡು ಎಂದು ಪ್ರಾರ್ಥನೆ ಮಾಡಿ ಹೇಳಿ ಕೊಂಡಲ್ಲಿ, ದೇವರು ಒಬ್ಬ ಕುಂಬಾರನ ಸ್ವಾಧೀನ ಮಾಡಿ ಕೊಟ್ಟನು. ಅವನಲ್ಲಿಯೂ ಗಂಟು ಹೊತ್ತು ಹೊತ್ತು ಬೇಸತ್ತು ಪುನಹಾ ದೇವರಿಗೆ, ಸ್ವಾಮಿಾ, ನನಗೆ ಇನ್ನೊಬ್ಬ ಧಣಿ ಕೊಡ ಬಾರದೇ ಎಂದು ಪ್ರಾರ್ಥನೆ ಮಾಡಿ ಹೇಳಿ ಕೊಳ್ಳೋಣ, ಅದನ್ನ ಮೊಚ್ಚೆಗಾರನ ಸ್ವಾಧೀನ ಮಾಡಿದ. ಅವನಲ್ಲಿ ಇದ್ದು ಬಹಳ ಪಶ್ಚಾತ್ತಾಪಕ್ಕೆ ಬಿದ್ದು ಮಾತನಾಡುತ್ತದೆ: ನನ್ನಂಥಾ ಮೂರ್ಖರು ಯಾರೂ ಇಲ್ಲ, ಈ ಮೊಚ್ಚೆಗರವನು ಅವರಿಬ್ಬರಿಗಿಂತಲೂ ದುಷ್ಟನು, ಜೀವ ಇರುವ ಪರಿಯಂತರ ಕೆಲಸ ತಕ್ಕೊಂಡು ಸತ್ತ ಮೇಲೆ ನನ್ನ ತೊಗಲು ಸಹಾ ಮೊಚ್ಚೆ ಮಾಡುತ್ತಾನೆ.

ತಾತ್ಪರ್ಯ.

ಇದ್ದ ಸ್ಥಿತಿಗೆ ಬೇಸತ್ತು ಹೊಸ ಸ್ಥಿತಿಯಲ್ಲಿ ಸುಖವಾದೀತು ಎಂದು ತಿಳುಕೊಳ್ಳುವವನೇ ಅಜ್ಞಾನಿಯು. ಸುಖ ದುಃಖಗಳು ಸರ್ವ ಸ್ಥಿತಿಯಲ್ಲಿಯೂ ಇರುತ್ತಾವೆ ಎಂದು, ತಾನು ಇದ್ದ ಸ್ಥಿತಿಯೊಳಗೆ ಸಂತೋಷವಿರ ಬೇಕು. ಯಾಕಂದರೆ ಹೊಸ ಸ್ಥಿತಿಯೊಳಗೆ ಸುಖವಾದೀತೆಂದು ಪ್ರಮಾಣವಿಲ್ಲವು. ಒಂದು ವೇಳೆ ಹೆಚ್ಚು ದುಃಖವೇ ಆದೀತು.

---

೧೫೯. ನೀತಿಕಥೆ.

ಊರ ಇಲಿಯೂ ಪಟ್ಣದ ಇಲಿಯೂ.

ಒಂದಾನೊಂದು ಊರ ಇಲಿಯು ಬಹಳ ಬೋಳೆತನದ ಮೇಲೆ ಇತ್ತು. ಅದರ ಮನೆಗೆ ಪುಷ್ಟವಾಗಿರುವ ಒಂದು ಪಟ್ಣದ ಇಲಿಯು ಇದರ ದರುಶನಾರ್ಥವಾಗಿ ಬಂತು. ಈ ಎರಡು ಇಲಿಗೆ ಪೂರ್ವ ಪರಿಚಿತಿ ಇತ್ತು. ಆದ್ದರಿಂದ ಬಹಳ ಆದರಪುರಸ್ಕರದಿಂದ ಇಲಿಯನ್ನು ಉಪಚಾರ ಮಾಡಿ ತನ್ನ ಮನೆಯಲ್ಲಿದ್ದ ಸಾಹಿತ್ಯವು, ಹೊಲಗಳಲ್ಲಿದ್ದ ಗೋಧಿ ಉಮ್ಮಿಗಿ ಸುಲಿಕಾಯಿ ಬಟ್ವಕಡಲೆ ಚಕ್ಕರೀ ಚೂರು ಮುಂತಾಗಿ ಶಹರಿನ ಇಲಿಯ ಮುಂದೆ ಸುರಿವಿ ವಾಚೋಪಚಾರದಿಂದ ಪರಾಂಮರಿಸಲಾಗಿ ಪಟ್ಣದ ಇಲಿಗೆ ಏನೂ ಸೌಖ್ಯ ತೋರಲಿಲ್ಲ. ಆಗ ಊರ ಇಲಿಗೆ ಹೇಳಿದ್ದು: ಎಲೋ ಯಜಮಾನನೇ, ನನಗೆ ಅಪ್ಪಣೆ ಆದರೆ ನಿರ್ಮಲ ಮನಸ್ಸಿನಿಂದ ಮಾತಾಡೇನು ಎನ್ನಲಾಗಿ, ಅದು ಏನೈಯ್ಯಾ ಹೇಳು ಅಂದಾಗ, ಹಾಗಾದರೆ ಇಂಥಾ ಕಠಿಣ ಜಾಗದಾಗೆ ಇರುತ್ತಿದ್ದಿ ಹ್ಯಾಗೆ; ಇದು ಅರಣ್ಯ, ಇದರಲ್ಲಿ ಗಿಡ ಗಂಟೆ ಗುಡ್ಡ ಹಾಗೇ ನೀರಿನ ಹಳ್ಳ ಇದರ ಹೊರ್ತು ದೃಷ್ಟಿಗೆ ಮತ್ತೇನೂ ಬೀಳುವದಿಲ್ಲ; ಪಕ್ಷಿಗಳ ಕಲಕಲಾಟ ಇದಕ್ಕಿಂತ ಮನುಷ್ಯರ ಶಬ್ದ ಒಳ್ಳೇದಲ್ಲವೇ; ಮತ್ತು ಇಂಥಾ ಹಾಳು ಅಡವಿಗಿಂತ ರಾಜಮಂದಿರ ಒಳ್ಳೇದಲ್ಲವೇ; ಮತ್ತು ನಾನು ಹೇಳುತ್ತೇನೆ, ಈ

ಮಾತು ಪ್ರಮಾಣ ಹಿಡಿದು ಪಟ್ಣಕ್ಕೆ ಬಾ; ನನಗೆ ಬಹಳ ಸಮಾಧಾನವಾ
ದೀತು, ಇನ್ನು ಮೇಲೆ ವಿಚಾರ ಮಾಡ ಬೇಡ, ಬೇಗ ನಡಿ, ಮತ್ತೆ ಈ
ಮರ್ತ್ಯಲೋಕದಲ್ಲಿ ಇರೋಣ ಕ್ಷಣಭಂಗುರ; ಇಂಥಾ ಸ್ಥಳದಲ್ಲಿ ಕಾಲ
ಕ್ರಮಣ ಮಾಡೋದರಕ್ಕಿಂತಲೂ ಆನಂದದಲ್ಲಿ ನನ್ನ ಮಹಾ ಸಂಸ್ಥಾನ
ದಲ್ಲಿ ಇರೋಣವೆಂದು ಕರೆಯಲು, ಈ ಬಡಾಯಿಯ ಮಾತು ಕೇಳಿ ಈ ಮು
ದಿ ಇಲಿಗೆ ಮೋಹ ಬಿದ್ದು, ಎರಡೂ ಕೂಡಿ ಹೊರಟು ರಾತ್ರೆಯಲ್ಲಿ ನಗ
ರಪ್ರವೇಶ ಮಾಡಿದವು. ಅತ್ತತ್ತ ಮುಂದೆ ಹೋಗುವದರೊಳಗೆ ಮುಂ
ದೆ ಆ ಇಲಿಯು ಒಂದು ದೊಡ್ಡ ಮನೆಯನ್ನು ಕಂಡು ಅದರೊಳಗೆ ಪ್ರ
ವೇಶ ಮಾಡಿತು. ಅಲ್ಲಿ ಮುಂದಿನ ದಿವಸ ಲಗ್ನಸಮಾರಂಭವಾಗಿತ್ತು.
ನಾನಾ ಜಿನಸುಗಳನ್ನು ಇಡುವ ಕೊಠಡಿಯ ಹೊಕ್ಕವು. ಅಲ್ಲಿ ನಾನಾ
ಪಕ್ವಾನ್ನ ಫಲಾದಿಗಳು ತುಂಬಿದ್ದವು. ಮತ್ತು ಮನುಷ್ಯಸಂಚಾರ ಇಲ್ಲ
ದ್ದನ್ನು ನೋಡಿ ಊರ ಇಲಿಗೆ ಸಂತೋಷವಾಯಿತು. ಆಗ ನಗರದ ಇಲಿ—
ಅಪ್ಪನವರೇ, ತಾವು ಮಧ್ಯದ ಮನೆಯಲ್ಲಿ ಕುಳಿತಿರ ಬೇಕು, ನಾನು ಬಂ
ದು ಒಂದು ಪದಾರ್ಥವನ್ನು ತಂದು ಕೊಟ್ಟೇನು, ಅದನ್ನು ಭೋಜನ
ಮಾಡಿ ಅದರ ಸ್ವಾದಸಮಾರಂಭವನ್ನು ನನಗೆ ಹೇಳ ಬೇಕು ಎಂದು
ಹೇಳಿ, ಆ ಮನೆಯಲ್ಲಿ ಎಷ್ಟು ಫಲ ಪಕ್ವಾನ್ನಗಳಿದ್ದವೋ, ಅದರಲ್ಲಿ ಒಂ
ದೊಂದು ಅನುಕ್ರಮದಿಂದ ತಂದು ತಂದು ತನ್ನ ಮಿತ್ರಗೆ ಕೊಡಲಾಗಿ, ಆ
ಪದಾರ್ಥಗಳ ರುಚಿ ನೋಡಿ ಆನಂದೋದ್ರೇಕವಾಗಿ ಅಹಹಾ ಎಂದು ಕ
ಣ್ಣು ಮುಚ್ಚಿ ಮುಚ್ಚಿ ಸ್ವಾದ ಗೈಯುತ್ತಾ, ಸೋತ್ರ ಮಾಡಿ ಒಂದು
ಘಳಿಗೆ ಆನಂದದಿಂದ ಕಾಲಕ್ರಮಣ ಮಾಡುವಷ್ಟರೊಳಗೆ ಆ ಕೊಠಡಿಯ
ಬಾಗಲು ತೆಗೆಯುವದಕ್ಕೆ ಬಂದರು. ಆಗ ಈ ಗುಲ್ಲಾದ ಲಕ್ಷಣ ತಿಳಿದು
ಉಭಯ ಇಲಿಗಳೂ ಹಿಂದಕ್ಕೆ ಲಂಘಿಸಿ ಒಂದು ಮೂಲೆಯೊಳಗೆ ಕುಳಿ
ತು ಕೊಂಡವು. ಅದೇ ಸಮಯದಲ್ಲಿ ಎರಡು ಬಾವುಗಗಳು, ಮಹಾ ಪ
ರಾಕ್ರಮಿಗಳೂ ದೇಹಸಾಮರ್ಥ್ಯನಿಧಿಗಳೂ, ಬಂದು ಘೋರ ಧ್ವನಿಯಿಂದ

ಕೂಗಿ ಆರ್ಭಟಿಸಲಾಗಿ, ಆ ಶಬ್ದವನ್ನು ಊರ ಇಲಿಯು ಕೇಳಿ ಎದೆ ಒಡದು ದುಃಖದಿಂದ ರೋದನ ಮಾಡಲಿಕ್ಕೆ ಪ್ರಾರಂಭಿಸಿತು. ಆಗ ಮೆಲ್ಲಗೆ ಪಟ್ಣದ ಇಲಿಯು — ಅಪ್ಪಾ, ನಿನ್ನ ಹಳ್ಳಿಯೊಳಗೆ ಇಷ್ಟೊಂದು ಸುಖವದೆ ಹ್ಯಾಗೆ ಎನ್ನಲು, ಆ ಊರ ಇಲಿ — ಅಣ್ಣನೇ, ನಿನ್ನ ಸುಖ ನಿನಗಿರಲಿ, ನನಗೆ ನನ್ನ ಊರೇ ಒಳ್ಳೇದು; ಕಾಳು ಕಡ್ಡಿ ಹೊಲ ಮನೆಗಳಲ್ಲಿ ಇದ್ದದ್ದು ಉಂಡು ನಿಶ್ಚಿಂತೆಯಲ್ಲಿ ಇರೋದು ಚೆಲೋದು; ಹಗಲೂ ಇರಳೂ ಜೀವಕ್ಕೆ ಸಂಶಯವಾದ ಸ್ಥಳದ ಪಕ್ವಾನ್ನದ ಸೌಖ್ಯ ನನಗೇನೂ ಬೇಡ ಎಂದು ಹೇಳಿತು.

ತಾತ್ಪರ್ಯ.

ತ್ಯಾಗ ಭೋಗದ ಪೂರ್ತಿ ದ್ರವ್ಯವಿದ್ದು ನಿರುಪದ್ರದಿಂದ ಏಕಾಂತದ ಗ್ರಾಮವಾಸವೇ ಒಳ್ಳೇದು. ಪಟ್ಣದಲ್ಲಿ ನಾನಾ ಪ್ರಕಾರವಾದ ಜೀನಸುಗಳನ್ನು ಶರೀರದಿಂದ ಮನಸ್ಸಿನಿಂದ ಉಪದ್ರದೊಡನೆ ಭೋಗಿಸಿ ದೊಡ್ಡ ಭಾಗ್ಯವಂತನಾಗಿ ಇರುವದು ಏನೂ ಕೆಲಸದ್ದಲ್ಲ. ಹೀಗಂದಿಯಾದರೆ ಗ್ರಾಮದಲ್ಲಿ ಇಷ್ಟು ಸುಖವಿರಲಾಗಿ ಮಂದಿ ಪಟ್ಣವಸ್ತಿ ಯಾಕೆ ಮಾಡುತ್ತಾರೆ ಅಂದರೆ ಅದಕ್ಕೆ ನಾನಾ ಪ್ರಕಾರದ ಕಾರಣಗಳು ಇದ್ದಾವೆ. ಯಾವ್ಯಾವಂದರೆ, ಕೆಲವರು ವಾದದ ಸಂಮಂಧದಿಂದ, ಕೆಲವು ಮಂದಿ ರಾಜಕಾರ್ಯದಿಂದ, ಕೆಲವರು ಉದ್ಯೋಗಸಂಮಂಧದಿಂದ, ಕೆಲವರು ಗುಣವಂತರ ಸಮಾಗಮವಾಗ ಬೇಕೆಂದೂ, ಕೆಲಬರು ತಮ್ಮ ಹಿರಿಯರ ಸ್ಥಳವೆಂದೂ, ಕೆಲವರು ಜ್ಞಾನಿಗಳ ಸಮಾಗಮದಾಪೇಕ್ಷೆಯಿಂದ, ಕೆಲವರು ದೊಡ್ಡ ಸ್ಥಳದಲ್ಲಿ ಸಂಪತ್ತು ದೊರಕಿಸ ಬೇಕೆಂಬುವದರಿಂದ, ಕೆಲವರು ವಿದ್ವಾಂಸಕುಶಲಿಗಳು ನಗರದಲ್ಲಿ ವಾಸ ಮಾಡಿದರೆ ಬೇಡಿದಷ್ಟು ದ್ರವ್ಯ ಶಿಕ್ಕೀತು, ಅದನ್ನು ತಮ್ಮ ಗ್ರಾಮಕ್ಕೆ ತಕ್ಕೊಂಡು ಹೋಗಿ ಸುಖವನ್ನು ಭೋಗಿಸ ಬಹುದು ಎಂದು ಪಟ್ಣವಾಸ ಮಾಡುತ್ತಾರೆ. ಮತ್ತು ಕೆಲಬರು ಜನ್ಮದಾರಭ್ಯ ನಗರದಲ್ಲೇ ಕಷ್ಟ ಮಾಡುತ್ತಾರೆ. ಅವರು ವಾರ್ಧಕ್ಯಕಾಲದಲ್ಲಿ ನಗರವನ್ನು ಬಿಟ್ಟು ಬೇರೊಂದು ದೇಶದ ನದಿತೀರದಲ್ಲಿ ಅಥವಾ ತೀರ್ಥದಲ್ಲಿ ಹೋಗಿ ಸುಖದಿಂದ ಆಯುಷ್ಯ ಹಾಕ ಬೇಕೆಂದು ಸಹಾ ಯೋಚಿಸುತ್ತಾರೆ. ನಗರವಾಸದಲ್ಲಿದ್ದ ಜನರು ಗ್ರಾಮವಾಸ ಮಾಡ ಬಾರದು ಎಂದು ಹೇಳುವವರು ಯಾರೂ ಕಾಣಿಸೋದಿಲ್ಲ. ಹಿಂದೆ ಇದ್ದ ದೊಡ್ಡ ದೊಡ್ಡ ಕವಿಗಳು ಈ ವರ್ಣನೆ ಮಾಡಿದ್ದಾರೆ, ಹ್ಯಾಗಂದರೆ, ಮನಸ್ಸು

ಸ್ವಸ್ಥ ಇಡ ಬೇಕಾದರೆ, ಪುಣ್ಯ ಕರ್ಮ ಆಚರಣೆ ಮಾಡೋದಕ್ಕೆ, ಅಥವಾ ಆರೋಗ್ಯ ಭೋಗಿಸಲಿಕ್ಕೆ ವಿಜನವಾಸವಲ್ಲದೆ ಎರಡನೇ ಸಾಧನವಿಲ್ಲ.

---

೧೪೦. ನೀತಿಕಥೆ.

ಇಲಿಯೂ ಜೊಂಡಿಗನೂ.

ಒಂದಾನೊಂದು ಇಲಿಯು ಬುಭುಕ್ಷಿತದಿಂದ ಕೃಶವಾಗಿ ಬಹಳ ಸಾಹಸದಿಂದ ಒಬ್ಬ ಧಣೀ ಕೊಟ್ಟಿಗೆಮನೆಯ ಮಾಡದ ಕಡೆಯಿಂದ ತೂತು ಮಾಡಿ ಒಳಗೆ ಹೊಕ್ಕು ಅಲ್ಲಿ ಕೆಲವು ದಿವಸ ಧಾನ್ಯಗಳನ್ನು ತಿಂದು ಪುಷ್ಟ ತರವಾಗಿ ಆ ಕೊಟ್ಟಿಗೇ ಒಳಗಿಂದ ಹೊರಡಲಿಕ್ಕೆ ಬಹಳ ಯತ್ನ ಮಾಡಿದರೂ ಗಡುತರವಾದ ಶರೀರ ಹೊರಗೆ ಬರಲಿಕ್ಕೆ ತೂತಿನಲ್ಲಿ ಹಿಡಿಸಲೊಲ್ಲದು. ಸಮೀಪದಲ್ಲಿರುವ ಒಂದು ಜೊಂಡಿಗವು ಅದನ್ನು ಕಂಡು, ಎಲೋ ಮಿತ್ರನೇ, ಹೊರಗೆ ಹೋಗ ಬೇಕೆಂದು ನಿನಗೆ ಇಚ್ಛೆ ಇದ್ದರೆ ಮುಂಚಿನ ಹಾಗೆಯೇ ನೀನು ಸೊರಗಿದರೆ ಇಲ್ಲಿಂದ ಹೊರಟು ಹೋದೀ ಎಂದು ಹೇಳಿತು.

ತಾತ್ಪರ್ಯ.

ಬಡತನ ಸೋಸಿ ಶ್ರೀಮಂತನಾದವನಿಗೆ ಬಹಳವಾಗಿ ಬಡತನದ ಸುಖ ಅನುಭವಿಸಲಿಕ್ಕೆ ಶಿಕ್ಕುವದಿಲ್ಲ. ಬಡತನದೊಳಗಿನ ಸುಖವು ದೈವವುಳ್ಳವರಿಗಿಲ್ಲ. ಶ್ರೀಮಂತನ ಬೆನ್ನ ಹಿಂದೆ ಅನೇಕ ಸುಖಗಳೂ ಉಪಾಧಿಗಳೂ ಇರುತ್ತವೆ. ಬಡವರಿಗೆ ಇವು ಇರೋದಿಲ್ಲ. ಉಪಾಧಿಗೆ ಬೇಸರಗೊಳ್ಳುವವನು ಸಂಪತ್ತಿಗೂ ಬೇಸತ್ತು ಕೊಳ್ಳಬೇಕು. ಹಾಗಾದರೆ ಇಚ್ಛೈಸಿದ ಸುಖವು ಪ್ರಾಪ್ತಿಯಾಗುತ್ತದೆ. ಇದರ ಹೊರ್ತು ಎರಡನೇ ಉಪಾಯವೇನೂ ಇಲ್ಲ.

---

೧೪೧. ನೀತಿಕಥೆ.

ಹೊಟ್ಟೆಯೂ ಅವಯವವೂ.

ಒಂದಾನೊಂದು ಸಮಯದಲ್ಲಿ ಕೈ ಕಾಲು ಮೊದಲಾದ ಅವಯವಗಳು — ನಾವು ಬಹಳ ಶ್ರಮೆ ಮಾಡಿ ದೊರಕಿಸ ಬೇಕು, ಈ ಹೊಟ್ಟೆ ಕೆಲಸವಿಲ್ಲದೆ ಕೂತು ಕೊಂಡೇ ತಿನ್ನ ಬೇಕು, ಇದು ಏನು? ಇಂದಿನ ತನಕ ಆದದ್ದಾಯಿತು, ಇನ್ನು ಮೇಲೆ ಹೊಟ್ಟೆ ತಾನೇ ಉದ್ಯೋಗ ಮಾಡಿ ತಾನೇ ತಿನ್ನಲಿ, ನಮಗೆ ಅದರ ಅಗತ್ಯವೇನೂ ಇಲ್ಲವೆಂದು ವಿಚಾರ ಮಾಡಿ ತಮ್ಮ ತಮ್ಮೊಳಗೆ ಆಣೆಗಳು ಮಾಡುತ್ತವೆ; ಕೈಯು ಅನ್ನುತ್ತದೆ: ಇನ್ನು ಮೇಲೆ ಹೊಟ್ಟೇ ತುಸಕ ಒಂದು ಬೊಟ್ಟು ಅಗಳಾಡಿದರೆ ನನ್ನ ಬೊಟ್ಟುಗಳು ಕಡದು ಬೀಳಲಿ; ಬಾಯಿ ಅನ್ನುತ್ತದೆ: ಇನ್ನು ಮೇಲೆ ತುತ್ತು ತಕ್ಕೊಂಡರೆ ನನಗೆ ಹುಳಗಳು ಬೀಳಲಿ; ಹಲ್ಲುಗಳು ಅನ್ನುತ್ತವೆ: ಇನ್ನು ಮೇಲೆ ನಾವು ತುತ್ತು ಕಚ್ಚಿದರೆ ನಮಗೆ ನಿಸ್ಸಂತಾನವಾಗಲಿ. ಹೀಗೆಲ್ಲಾ ಆಣೆಗಳ ನಿಶ್ಚಯ ಮಾಡಿ ಕೊಂಡು ನಿಂತಿರಲಾಗಿ ಕಡೆಗೆ ಆದ ಅವಸ್ಥೆಯಿಂದ ಸರ್ವಾವಯವಗಳು ಒಣಗಿ ಹೋದವು, ತೊಗಲೂ ಎಲುಬೂ ಮಾತ್ರ ಉಳಿದವು. ಆ ಸಮಯದಲ್ಲಿ ತಿಳುವಳಿಕೆ ಬಂದು ಮಾತನಾಡುತ್ತವೆ: ನಾವು ಒಳ್ಳೇ ಮಾತು ಮಾಡಲಿಲ್ಲ, ಹೊಟ್ಟೆಯ ಹೊರ್ತು ನಮಗೆ ಪರಿಣಾಮವೇ ಇಲ್ಲ, ಹೊಟ್ಟೆಯು ಸ್ವಥಾ ಉದ್ಯೋಗ ಮಾಡುವದಿಲ್ಲ ಖರೆ, ಆದರೆ ನಮ್ಮ ಯೋಗದಿಂದ ಹೊಟ್ಟೆ ಪೋಷಣವಾಗುತ್ತದೆ, ಹೊಟ್ಟೆ ಉಂಡದರಿಂದ ನಮ್ಮ ಪೋಷಣವಾಗುತ್ತದೆ.

ತಾತ್ಪರ್ಯ.

ಒಂದು ಸಮಯದಲ್ಲಿ ರಾಜಧಾನಿಯೊಳಗೆ ಹೀಗೆ ಆಯಿತು: ಯುದ್ಧಪ್ರಸಂಗದಿಂದ ಸರಕಾರದಲ್ಲಿ ದ್ರವ್ಯ ಇಲ್ಲದೇ ಹೋದ್ದರಿಂದ ಅರಸನು ಪ್ರಜೆಗಳಿಗೆ ಮೇಲಿಂದ ಮೇಲೆ ಪಟ್ಟಿ ಮಾಡಲಾಗಿ ಪ್ರಜೆಗಳು ಆ ಸಂಕಟಕ್ಕೆ ಬೇಸತ್ತು ಊರು ಬಿಟ್ಟು ಹೊರಗೆ ಹೋಗಿ ಒಕ್ಕಟ್ಟಾಗಿ, ನಾವು ದುಡಿಯ ಬೇಕು, ಸರಕಾರದವರು ಆಯತ ತಿನ್ನ

ಬೇಕು, ಇದೇನು? ಇನ್ನು ಮೇಲೆ ಸರಕಾರಕ್ಕೆ ಏನೇನೂ ಕೊಡ ಬಾರದು ಎಂದು ನಿಶ್ಚಯ ಮಾಡಲು, ಅವರ ಆಗ್ರಹ ಕಂಡು ಅರಸನು ತನ್ನ ಪ್ರಧಾನಿಯ ಕಡಿಗೆ ಕಳುಹಿಸಲು, ಆ ಪ್ರಧಾನಿಯು ಈ ಹೊಟ್ಟೀ ಅವಯುವಗಳ ಪ್ರಸಂಗವನ್ನು ಹೇಳಲಾಗಿ, ಅವರು ಕೇಳಿದಾಕ್ಷಣಕ್ಕೆ ಅರಸನಿಗೆ ಅನುಕೂಲವಾಗಿ ಅರಸನೂ ಪ್ರಜೆಗಳೂ ಸುಖದಿಂದಿರುತ್ತಿದ್ದರು. ಸಾರಾಂಶ, ಪ್ರಜೆಗಳು ಸರಕಾರಕ್ಕೆ ದ್ರವ್ಯ ಕೊಡದಿದ್ದರೆ ಅವರ ಖರ್ಚು ಕಡಿಮೆಯಾಗುವದು. ಆದರೆ ಕಳ್ಳರು ಹಗಲೇ ಸುಲಿಗೆ ಮಾಡ್ಯಾರು; ಒಬ್ಬರಿಗೊಬ್ಬರು ಕೇಳರು, ಪುಂಡಾಟ ಹೆಚ್ಚುವದು; ಹೀಗಾಗಿ ಅರಸುಗಳೂ ಪ್ರಜೆಗಳೂ ಒಮ್ಮೆಯೇ ನಾಶ ಹೊಂದ್ಯಾರು.

---

೧೪೦. ನೀತಿಕಥೆ.

ಕತ್ತೆಯೂ ಸಿಂಹವೂ ಕೋಳಿಯೂ.

ಒಂದು ಕತ್ತೆಯೂ ಒಂದು ಕೋಳಿಯೂ ಒಂದೇ ಸ್ಥಳದಲ್ಲಿ ಮೇಯುತ್ತಾ ಇರಲಾಗಿ ಎದುರಿಗೆ ಒಂದು ಸಿಂಹ ಬಂದದ್ದನ್ನು ಕಂಡು ಕೋಳಿಯು ದೊಡ್ಡ ಶಬ್ದ ಮಾಡಿತು. ಆ ಶಬ್ದವನ್ನು ಕೇಳಿ ಸಿಂಹವು ಅಂಜಿ ಹಿಂದಕ್ಕೆ ಪಲಾಯನ ಮಾಡುತ್ತಾ ಇರಲಾಗಿ, ಕತ್ತೆಯು, ತನಗೆ ಅಂಜಿ ಸಿಂಹ ಓಡುತ್ತದೆ ಎಂದು ತಿಳಿದು ವೇಗದಿಂದ ಸಿಂಹನ ಬೆನ್ನು ಹತ್ತಿತು. ಆಗ್ಯೆ ಕೋಳಿಯ ಧ್ವನಿ ಇಲ್ಲದ್ದರಿಂದ ಸಿಂಹವು ಹಿಂದಕ್ಕೆ ತಿರಿಗಿ ಕತ್ತೆಯ ಗೋಣು ಹಿಡಿಯಿತು. ಆಗ ಕತ್ತೆ — ದೇವ ದೇವ ನಾನು ಎಂಥಾ ಮೂರ್ಖನು, ಷಂಡನಾಗಿದ್ದು ಧೈರ್ಯವನ್ನು ಕೈ ಕಡಾ ತೆಗದು ಕೊಂಡು ಮೃತ್ಯುವಿನ ಬಾಯಿಗೆ ತುತ್ತಾದೆನಲ್ಲ; ಇಲ್ಲದಿದ್ದರೆ ಇಷ್ಟು ಹೊತ್ತಿಗೆ ನನ್ನ ಮನೆಗೆ ಹೋಗಿ ಸುಖದಿಂದಿರುತ್ತಿದ್ದೆ ಅಂದಿತು.

ತಾತ್ಪರ್ಯ.

ತನ್ನಲ್ಲಿ ತ್ರಾಣ ಇಲ್ಲದೆ ಸಾಮರ್ಥ್ಯವನ್ನು ಕೈಗಡ ತರಲಿಕ್ಕೆ ಹೋಗುವವನು ಘಾಸಿ ಬೀಳುವನು. ಸ್ಥಳದ ಮಹಿಮೆಯಿಂದ ಅಥವಾ ಸಂಗತಿಯುವರ ಮಹತ್ವ

ದಿಂದ ಒಂದು ಸಮಯದಲ್ಲಿ ತನಗೆ ಯಾರಾದರೂ ಅಂಜಿದ ಕಾಲಕ್ಕು ಅವನು ತನಗೆ ಅಂಜುತ್ತಾನೆ ಯೆಂದು ನಿಶ್ಚಯ ಮಾಡಿ ಕೊಂಡು ಅವನಿಗೆ ಸರಿಯಾಗಿ ಮಾಡಲಿಕ್ಕೆ ಹೋಗ ಬಾರದು. ತನ್ನ ತ್ರಾಣವನ್ನು ನೋಡಿ ವರ್ತಿಸ ಬೇಕು.

---

೧೪೨. ನೀತಿಕಥೆ.

ಮಂಗವೂ ನರಿಯೂ.

ಒಂದಾನೊಂದು ಮಂಗವು ನರಿಗೆ ಪ್ರಾರ್ಥನೆ ಮಾಡಿ, ನಿನ್ನ ಉದ್ದವಾದ ದುಂಡು ಬಾಲದೊಳಗೆ ಒಂದು ಸಣ್ಣ ತುಂಡು ನನಗೆ ಕೊಟ್ಟರೆ ನಾನು ನನ್ನ ಸ್ವರೂಪ ಮುಚ್ಚಿ ಕೊಂಡೇನು, ಆದ್ದರಿಂದ ಛಳಿ ಘಾಳಿಗಳ ಉಪದ್ರವು ಆಗಲಿಕ್ಕಿಲ್ಲವು, ನಿನ್ನ ಬಾಲವು ನಿನಗೆ ಸಾಕಾಗಿ ಹೆಚ್ಚಾಗಿ ಅದೆ, ಅದನ್ನು ನೀನು ಮಣ್ಣಿನಲ್ಲಿ ಹೊರಳಿಸುತ್ತಿದ್ದಿ, ಅದರೊಳಗೆ ಸ್ವಲ್ಪ ನನಗೆ ಕೊಟ್ಟರೆ ನಿನಗೆ ಇಕ್ಕಟ್ಟಾಗಲಿಕ್ಕಿಲ್ಲ, ನನಗೆ ಕೆಲಸವಾದೀತು ಎಂದಲ್ಲಿ, ನರಿಯು ಅಂದದ್ದು: ಎಲೋ ಮೂರ್ಖ, ನನ್ನ ಬಾಲ ಹೆಚ್ಚು ಅದೆ ಎಂದು ಆಡುತ್ತಿ, ಅದು ಹ್ಯಾಗೂ ಇರಲಿ, ನಿನಗೆ ತಿಳಿಯೋದಿಲ್ಲ, ನಾನು ಹೇಳುತ್ತೇನೆ, ಕೇಳು, ನಾನು ಸಾಯ್ಯೋ ಪರ್ಯಂತರ ನನ್ನ ಬಾಲವು ಹೀಗೆ ಮಣ್ಣಿನಲ್ಲಿ ಹೊರಳಿಸೇನಲ್ಲದೆ ಅದರೊಳಗಿನದೊಂದು ಕೂದಲಾದರೂ ನಿನಗೆ ಕೊಡಲಿಕ್ಕಿಲ್ಲವು.

ತಾತ್ಪರ್ಯ.

ಕೆಲವು ಮಂದೀ ಹತ್ತರ ಬಹಳ ದ್ರವ್ಯವಿರುತ್ತದೆ. ಅವರ ನಿರ್ವಾಹವಾಗಿ ಬಹಳ ಉಳಿಯುವಷ್ಟು ದ್ರವ್ಯವಿದ್ದಾಗ್ಯೂ ಲೋಭದಿಂದ ಇನ್ನೂ ಶಿಕ್ಕಿದರೆ ಒಳ್ಳೇದು ಎಂದು ಕಲ್ಪನೆ ಮಾಡೋ ಜನರ ಕಡೆಯಿಂದ ಒಂದು ಕಾಸು ಆದರೂ ಪರೋಪಕಾರಕ್ಕೆ ಶಿಕ್ಕಲಿಕ್ಕಿಲ್ಲವು.

---

೧೪೪. ನೀತಿಕಥೆ.

ಕತ್ತೆಯೂ ನಾಯಿಯೂ.

ಒಂದಾನೊಂದು ಸಮಯದಲ್ಲಿ ಕತ್ತೆಯು ತನ್ನ ಮನಸ್ಸಿನಲ್ಲಿ, ನಾಯಿೞ ಕುನ್ನಿಯ ಮೇಲೆ ನಮ್ಮ ಧಣಿಯು ಬಹಳ ಪ್ರೀತಿ ಮಾಡುತ್ತಾನೆ, ಅದಕ್ಕೆ ನಾನು ಅದರಂತೆ ಹಾರ್ಯಾಡಿ ಓಡ್ಯಾಡಿ ಬಾಲ ಗುಂಡಾಳಿಸಿ ತೊಡೆಯ ಮೇಲೆ ಹೊರಳಿದರೆ ಧಣಿಗೆ ಮೆಚ್ಚಿನವನಾದೇನು ಎಂದು ವಿಚಾರ ಮಾಡುವಷ್ಟರೊಳಗೆ ಆ ಧಣಿಯು ಹೊಲಕ್ಕೆ ಹೋಗಿ ಮನೆಗೆ ಬಂದು ಅಂಗಳದ ಕಟ್ಟೇ ಮೇಲೆ ಕುಳಿತಿರುವಾಗ ಕತ್ತೆಯು ಆತನ ಇದುರಿಗೆ ಬಂದು ಈ ಕಡೆಯಿಂದ ಆ ಕಡೆಗೆ ಆ ಕಡೆಯಿಂದ ಈ ಕಡೆಗೆ ಹಾರ್ಯಾಡಲಿಕ್ಕೆ ಹತ್ತಿ ದೊಡ್ಡ ಸ್ವರದಿಂದ ಒದರಿತು. ಇದನ್ನು ನೋಡಿ ಆ ಧಣಿಯು ಪಕಪಕನೆ ನಕ್ಕನು. ಇದಕ್ಕಿಂತ ಇನ್ನೂ ವಿಶೇಷ ಕೌತುಕ ತೋರಿಸಿದರೆ ಮುಂದೆ ಆತನ ಜೀವದ ಮೇಲೆ ಬಂದೀತು ಎಂದು ತಿಳಿಯದೆ, ತನ್ನ ಹಿಂಗಾಲು ಎರಡನ್ನು ನೆಲಕ್ಕೂರಿ ಮುಂಗಾಲು ಎರಡನ್ನು ಬಹಳ ಪ್ರೀತಿಯಿಂದ ಧಣಿಯ ಎದೇ ಮೇಲೆ ಇಟ್ಟು, ಮುಂದೆ ಆತನ ತೊಡೆಯ ಮೇಲೆ ಕುಳ್ಳಿರ ಬೇಕೆಂಬೋದರೊಳಗೆ ಆತನು ದೊಡ್ಡ ಧ್ವನಿಯಿಂದ ಒದರಿ ಆರ್ಭಟ ಮಾಡಲಾಗಿ, ಅದನ್ನು ಕೇಳಿ ಮನೆಯೊಳಗಿಂದ ಒಬ್ಬನು ಬಡಿವೆ ತಕ್ಕೊಂಡು ಬಂದು ಕತ್ತೆಯನ್ನು ಬಡಿದು ಕೆಡವಿದನು. ಆಗ ಆ ಕತ್ತೆಯ ಮನಸ್ಸಿನಲ್ಲಿ, ಧಣಿಯ ಕೃಪೆ ಸಂಪಾದಿಸ ಬೇಕೆಂದು ಮಾಡಿದರೆ ಅದು ಸರ್ವರಿಗೂ ಸಾಧಿಸುವದಿಲ್ಲವೆಂದು ತೋರಿತು.

ತಾತ್ಪರ್ಯ.

ಅನೇಕ ಪುರುಷರು ನಾಯಿೞ ಕುನ್ನಿಯ ಹಾಗೆ ಚೇಷ್ಟೆ ಮಾಡಿ ತಮ್ಮ ಧಣಿಗೆ ರಂಜನೆ ಮಾಡುತ್ತಾರೆ. ಅದು ಅವರಿಗೆ ಸರಿ ಸಾಧಿಸುತ್ತದೆ. ಇದರಂತೆ ನೋಡಿ ಎರಡನೆಯವರು ಮಾಡೇವಂದರೆ ಕತ್ತೆಯ ಹಾಗೆ ಕಷ್ಟದಲ್ಲಿ ಬಿದ್ದಾರು. ಯಾಕಂ

ದರೆ ಮನುಷ್ಯರ ಪ್ರಕೃತಿ ಗುಣಗಳು ಬೇರೆ ಬೇರೆ ಇರುತ್ತವೆ. ಅದರಲ್ಲಿ ರಮಿಸ
ಬೇಕಾದರೆ ಭಿನ್ನ ಭಿನ್ನ ಇರುತ್ತವೆ.

---

೧೪೫. ನೀತಿಕಥೆ.

ಪಶೂ ಪಕ್ಷಿಯೂ ತೊಗಲಬಾವಲಿಯೂ.

ಒಂದಾನೊಂದು ಸಮಯದಲ್ಲಿ ಪಶುಗಳಿಗೂ ಪಕ್ಷಿಗಳಿಗೂ ದಾರು
ಣಯುದ್ಧವಾಗಲಾಗಿ, ಆಗ ತೊಗಲಬಾವಲಿಯು ವಿಚಾರ ಮಾಡಿತು:
ನನ್ನ ಶರೀರಸ್ಥಿತಿ ನೋಡುವಲ್ಲಿ ನಾನು ಪಕ್ಷಿಯೋ ಪಶುವೋ ಎಂದು
ಜಗದಲ್ಲಿ ಇದರ ಸಂದೇಹವದೆ; ಅದು ಈ ಹೊತ್ತಿಗೆ ನನಗೆ ಚನ್ನಾಗಿದೆ,
ಆದರೆ ನಾನು ಬೇರೆ ಇದ್ದು ಏನಾಗುತ್ತೇನೋ ಅದು ಮೊದಲು ತಿಳಿಯ
ಬೇಕು, ಆ ಮೇಲೆ ಬೇಕಾದ ಪಕ್ಷ ಹಿಡಿಯ ಬಹುದು ಎಂದು ಯೋಚಿ
ಸುವಷ್ಟರೊಳಗೆ ಎರಡು ಬಲಗಳು ಕೂಡಿ ಬಹಳ ಯುದ್ಧ ಮಾಡಿ ಕೊಂ
ಡವು. ಅದು ನೋಡಿ ತೊಗಲಬಾವಲಿಯು ಮೊದಲು ಪಕ್ಷಿಗಳಿಗೆ ಗೆಲ
ವು ಆಧೀತು ಎಂದು ಅವುಗಳ ಕಡೆಗೆ ಬಂದಿತ್ತು. ಮತ್ತು ದೂರದಲ್ಲಿ
ಯಾವ ಕಡೆಗೆ ಜಯವಾಗುತ್ತದೊ ಆ ಕಡೆಗೆ ಹೋಗೋಣ ಎಂದು ಜ
ಪಿಸಿ ನೋಡುತ್ತಿರುವಲ್ಲಿ ಪಶುವುಗಳ ಕಡೆಗೆ ಗೆಲವು ಆದ ಹಾಗೆ ತೋರಿ
ತು: ಆಗ್ಯೆ ಅದು ಪಶುವುಗಳ ಕಡೆಗೆ ಹೋಗಿ, ನನ್ನ ಮೋರೆಯೂ ಇಲಿ
ಯ ಮೋರೆಯೂ ಒಂದೇ ಪ್ರಕಾರವದೆ, ಆದ ಕಾರಣ ನಾನು ಪಕ್ಷಿಯಲ್ಲ,
ಪಶುವೇ ಇದ್ದೇನೆ, ನನ್ನನ್ನು ನಿಮ್ಮ ಸಮೂಹದಲ್ಲಿ ತಕ್ಕೊಳ್ಳಿರಿ, ನಾನು ನಿ
ಮಗೆ ಸರ್ವದಾ ಕಲ್ಯಾಣ ಚಿಂತಿಸಿ ಕೊಂಡಿದ್ದೇನು, ಎಂದೆಂದೂ ವಿಪರೀ
ತವಾಗೆನು ಅಂದಿತು. ಪಶುಗಳು ಆ ಮಾತು ಮನ್ನಿಸಿದವು, ಕಡೆಗೆ ಗ
ರುಡಪಕ್ಷಿಯು ಬಹಳ ಸಾಹಸ ಮಾಡಿ ಪಶುಗಳನ್ನು ಮುರಿದು ಬಿಟ್ಟಿತು.
ಆಗ್ಯೆ ತೊಗಲಬಾವಲಿಯು, ತನ್ನ ಜೀವ ಉಳಿಸಿಕೋ ಬೇಕೆಂದು ನಮ್ಮ

ಜಾತಿಯವರ ಕೈಗೆ ಶಿಕ್ಕಿ ಅಪಮಾನವಾಗ ಬಾರದು ಎಂದು ಅಲ್ಲಿಂದ ಓಡಿ ಬಂದು ಅಂದು ಮೊದಲು ಇಂದು ಕಡೆ ಗಿಡದ ಹರಿಯೊಳಗೆ ಗುಡ್ಡಗಂಹರದಲ್ಲಿ ಹೊಕ್ಕೊಂಡು ಕಾಲ ಕಳಿಯುತ್ತದೆ. ಹಗಲಲ್ಲಿ ಪಕ್ಷಿಗಳು ಕಂಡಾವು ಎಂದು ಹೊರಗೆ ಬರೋದಿಲ್ಲವು; ರಾತ್ರಿಯಲ್ಲಿ ಸಂಚಾರ ಮಾಡಿ ಕೊಂಡು ಇರುತ್ತದೆ.

ತಾತ್ಪರ್ಯ.

ವೈರಿಗಳ ಒಳಗೆ ಕೂಡಿ ತನ್ನ ಜಾತಿಯವರಿಗೆ ಘಾತ ಮಾಡುವಂಥಾದ್ದು ಅತಿ ನೀಚ ಕೃತ್ಯವು. ಇದನ್ನು ಮಾಡುವವರನ್ನು ಕಂಡು ಜೀವಕ್ಕೆ ಮುನಿಯುತ್ತಾರೆ. ಒಂದು ವೇಳ್ಯದಲ್ಲಿ ಉಳಿದರೆ ಅವನು ಜಗತ್ತಿನಲ್ಲಿ ಮೋರೆ ತೋರಿಸುವದು ಕಷ್ಟವು. ಆ ಪಾಪಿಷ್ಟನು ಎಲ್ಲಿ ಹೋದರೂ ಮಂದಿಯು ಅಲ್ಲೇ ಅವಗೆ ನಿಂದೆ ಮಾಡುತ್ತಾರೆ.

---

೧೪೬. ನೀತಿಕಥೆ.

ಕೋಳಿಯೂ ನರಿಯೂ.

ಒಂದು ಕೋಳಿಯು ಉನ್ನತ ಗಿಡದ ಮೇಲೆ ಕುಳಿತು ದೊಡ್ಡ ಧ್ವನಿ ಮಾಡಿ ಒದರುತ್ತಿತ್ತು. ಆ ಶಬ್ದವೆಲ್ಲಾ ಅರಣ್ಯದಲ್ಲಿ ತುಂಬಿ ಪ್ರತಿಧ್ವನಿಯಾಯಿತು. ಆಗ ಒಂದು ನರಿಯು ಗ್ರಾಸಾರ್ಥವಾಗಿ ಅಲ್ಲೇ ತಿರುಗುತ್ತಿತ್ತು. ಆ ಧ್ವನಿಯ ಕೇಳಿ ಆ ಠಾವಿಗೆ ಬಂದು ನೋಡಿದರೆ ಆ ಕೋಳಿಯು ಎತ್ತರವಾದ ಸ್ಥಳದಲ್ಲಿತ್ತು. ಕೈಗೆ ಶಿಕ್ಕುವ ಹಾಗೆ ಇಲ್ಲದ್ದನ್ನು ನೋಡಿ ಅದಕ್ಕೆ ಆವೇಶ ತುಂಬಿಸಿ ಕೆಳಗೆ ತರ ಬೇಕೆಂಬ ಕಪಟದಿಂದ ನರಿಯು ಆ ಗಿಡದ ಸಮಿಾಪಕ್ಕೆ ಹೋಗಿ — ಅಣ್ಣಾ, ನಿನ್ನನ್ನು ನೋಡಿ ನಾನು ಬಹಳ ಸಮಾಧಾನ ತಾಳಿದೆ, ಆದ್ದರಿಂದ ಬಂದು ನಿನ್ನನ್ನು ಅಪ್ಪಿಕೋ ಬೇಕೆಂದರೆ ಆಗೋದಿಲ್ಲವಾದ ಕಾರಣ ನೀನು ಬೇಗನೆ ಕೆಳಗೆ ಬಂದರೆ ಭೇಟಿಯಾದೀತಾಗಿ ಬಂದಿಯಾ ಎನ್ನಲು, ಕೋಳಿಯು — ಯಾಕಪ್ಪ ಎಂಬೋಣ, ನರಿ

ಯು — ಅಪ್ಪ ನಿನಗೆ ನಿಜ ಹೇಳುತ್ತೇನೆ, ಕೆಳಗೆ ಬರೋಣವು ನಿನಗೆ ಮೋಸ
ವೆಂದು ತೋರೀತು, ಆದಾಗ್ಯೂ ನೀನು ನನ್ನ ಗೆಳಿಯನಾದ ಮೇಲೆ ನಿನಗೆ
ಹೆದರಿಕೆ ಏನು ಅಂಬೋಣ, ಕೋಳಿಯು — ಅಪ್ಪಾ ನೀನಂತೂ ನನ್ನ ಗೆಳಿಯ
ನು, ನಿನ್ನಿಂದ ನನಗೆ ಭಯವಿಲ್ಲದಿದ್ದರೂ ಎರಡನೆಯವರ ಕೈಗೆ ಶಿಕ್ಕಿದೆನಾ
ದರೆ ನನ್ನ ಅವಸ್ಥೆ ಕಠಿಣವಾದೀತು ಎಂದಾಗ, ನರಿಯು — ಎಲೋ ನನ್ನ ಜೀ
ವಸಖನೇ, ಇಗೋ, ಈಗ ಪಶುಗಳಿಗೂ ಪಕ್ಷಿಗಳಿಗೂ ಸಮಾಧಾನವಾಯಿ
ತು, ಒಬ್ಬರಿಗೊಬ್ಬರು ಘಾತ ಮಾಡ ಬಾರದು, ಸರ್ವರೂ ಸಖ್ಖರೆ ಬೆಲ್ಲದ
ಹಾಗೆ ಇರ ಬೇಕು, ಹೀಗಿರದೆ ಈ ನಿಬಂಧನೆ ಮುರಿಯುವವನಿಗೆ ಬಹಳ
ಶಿಕ್ಷೆಯಾದೀತು, ಹೀಗೆ ನಿಶ್ಚೈಸಿದ್ದು ಜಗತ್ತೆಲ್ಲಾ ತಿಳಿದದೆ, ನಿನಗೆ ಮಾ
ತ್ರ ಯಾಕೋ ತಿಳಿಯಲಿಲ್ಲವು, ಅದೇ ನನಗೆ ಆಶ್ಚರ್ಯ ಕಾಣುತ್ತದೆ ಎಂ
ದು ಹೇಳಲಾಗಿ, ಕೋಳಿಯು ಗೋಣ ತೆಗದು ಹೊರಗೆ ನೋಡಲು, ನರಿ
ಯು — ಅಂಣನವರೇ, ನೀವು ಬಹಳವಾಗಿ ಆದರದಿಂದ ನೋಡೋ ಭಾವ
ವನ್ನು ಹೇಳಿದರೆ ನಾನು ಸಂತೋಷವಾದೇನು ಎಂದಲ್ಲಿ, ಕೋಳಿಯು — ಎ
ಲೋ ಗೆಳಿಯನೇ, ಅಲ್ಲಿ ದೂರ ಒಬ್ಬ ಬೇಟೆಗಾರನು ಮತ್ತು ನಾಲ್ಕಾರು
ನಾಯಿಗಳು ಕಾಣುತ್ತವೆ ಎಂಬೋಣ, ನರಿಯು — ತಂದೆಯೇ ಇನ್ನು ಶರ
ಣು, ಶರಣು ತಕ್ಕೋ, ನಾನು ಹೋಗಿ ಬರುತ್ತೇನೆ ಎಂದಲ್ಲಿ, ಕೋಳಿಯು —
ಅಣ್ಣ ಅಣ್ಣಾ ಹೋಗ ಬೇಡ, ಇಗೋ ಈಗ ಕೆಳಗೆ ಬಂದೆ, ಮತ್ತು ಇಂದೇ ಸ
ಲ್ಲಾ ಮುಗಿದಿರಲು ನಾಯಿಗಳು ನಿನಗೇನೂ ಉಪದ್ರ ಮಾಡಲಿಕ್ಕಿಲ್ಲಾ
ಎಂದು ಹೇಳಿತು. ಅದಕ್ಕೆ ನರಿಯು — ಒಲ್ಲೆ ಒಲ್ಲೆನಪ್ಪಾ, ಸಲ್ಲಾ ಪ್ರಖ್ಯಾ
ತವಾಗದೆ ಖರೆಯಾದರೆ ಆ ಸುದ್ದಿ ಈ ನಾಯಿಗಳು ಕೇಳ್ಯಾವೋ ಇಲ್ಲ
ವೋ ಯಾರು ಬಲ್ಲರು ಅಂದಿತು.

ತಾತ್ಪರ್ಯ.

ಠಕ್ಕುಬುದ್ಧಿಯವನು ಠಕ್ಕನಿಗೆ ಠಕ್ಕಿಸಿದರೆ ನೋಡಿ ಸಂತೋಷ ಪಡುತ್ತಾನೆ. ಧೂ
ರ್ತನ ವಾಣಿಯು ಚಂದನದ ಹಾಗೆ ಬಹಳ ತಂಪು. ಆದರೆ ಅವನ ಒಳಗೆ ಕತ್ರಿ

ಇರುತ್ತದೆ. ಅದರ ದೆಶೆಯಿಂದ ನಿಮಿತ್ತದ ಹೊರ್ತು ಬಹಳ ಮುಮುತಾಭಾಷೆಗಳು ಕಿವಿಗೆ ಬಿದ್ದರೆ ಅಲ್ಲಿ ವಿಶೇಷ ಸಾವಧಾನ ಇರ ಬೇಕು. ಧೂರ್ತನ ಮಾಯಾವಿತನ ತಿಳಿದು ಅವನ ಕೈಗೆ ಶಿಕ್ಕದವನು ಆ ಧೂರ್ತನನ್ನು ಪಶ್ಚಾತ್ತಾಪಕ್ಕೆ ಕೆಡವುತ್ತಾನೆ. ಅವನೇ ದಕ್ಷ ಪುರುಷನು ಎನ್ನ ಬೇಕು.

---

೧೪೭. ನೀತಿಕಥೆ.

ಒಕ್ಕಲಿಗನೂ ಅವನ ಮಗನೂ.

ಒಬ್ಬಾನೊಬ್ಬ ಒಕ್ಕಲಿಗನು ಸಾಯುವ ಸಮಯ ಸಮೀಪಿಸಿದ್ದನ್ನು ಕಂಡು, ನಾನು ಇಂದಿನ ವರಿಗೂ ಬಾಳ್ವೆ ಮಾಡಿದೆ, ಇನ್ನು ಮೇಲೆ ನನ್ನ ಹಿಂದೆ ನನ್ನ ಮಕ್ಕಳು ನಡಿಸ ಬೇಕು ಎಂದು ಎಲ್ಲಾ ಮಕ್ಕಳನ್ನು ತನ್ನ ಹೊರಸಿನ ಸಮೀಪಕ್ಕೆ ಕರದು, ಎಲೇ ಹುಡುಗರಾ, ನನ್ನ ಹೊಲ ಮನೆ ಬದುಕು ಬಾಳ್ವೆ ಎಲ್ಲಾ ನಿಮ್ಮದದೆ, ನೀವು ಸರ್ವರೂ ಕೂಡಾ ಇದ್ದೀರಿ, ನನ್ನ ಉಳದ ಗಂಟು ಹೊಲದಾಗೆ ಮೊಳ ಉದ್ದದಲ್ಲಿ ಹುಗುದದೆ, ಆದದರಿಂದ ಆ ಹೊಲ ಮಾತ್ರ ಎರಡನೆಯವರ ಕೈಗೆ ಹತ್ತ ಕೊಡ ಬೇಡಿರಿ ಎಂಬೋಣ, ಅದು ಕೇಳಿ ಆ ಹುಡುಗರು, ತಂದೆಯು ದ್ರವ್ಯ ಹುಗುದು ಇಟ್ಟಿದ್ದಾನೆ ಎಂದು ನಿಶ್ಚೈಸಿ ಕೊಂಡರು. ತರುವಾಯ ತಂದೆಯು ಮೃತವಾದನು. ಆ ಮೇಲೆ ಅವರು ಹೊಲಕ್ಕೆ ನಟ್ಟು ಬಿರದೆ ಎಂದು ಕಡಿಯುವ ನೆವನ ಮಾಡಿ, ಮೊಳ ಮೊಳ ಉದ್ದಕ್ಕೆ ಹೊಲವನ್ನು ಸಮಗ್ರ ಕಡಿದರು. ಅಲ್ಲಿ ದ್ರವ್ಯ ಏನೂ ಶಿಕ್ಕಲಿಲ್ಲ. ಆದರೆ ಹೊಲ ಮಾತ್ರ ಹಸನಾಯಿತು. ಅದರಲ್ಲಿ ಬೆಳೆಯು ಬಹಳ ಬೆಳದು ದ್ರವ್ಯಸ್ಥರಾದರು.

ತಾತ್ಪರ್ಯ.

ಬುದ್ಧಿ ಇದ್ದವನು ಥಾವತಿ ಮಾಡಿದರೆ ಅವನಿಗೆ ದ್ರವ್ಯಲಾಭವು ಅವಶ್ಯವಾಗುತ್ತದೆ. ಉದ್ಯೋಗದೊಳಗೆ ಹೊಲ ಮಾಡೋದರ ಸಮಾನ ಉದ್ಯೋಗ ಎರಡನೇದಿಲ್ಲ. ಸ್ವಥಾ ಹೊಲ ಮಾಡುವವರಿಗೆ ಪರಿಶ್ರಮ ಇರುತ್ತದೆ. ಆರೋಗ್ಯಲಾಭ ಮತ್ತು

ಈ ಸಂಸಾರದಲ್ಲಿ ನಿರ್ವಾಹಕ್ಕೆ ಬೇಕಾದ ಪದಾರ್ಥ, ಅದಕ್ಕೆ ನೂನ್ಯ ಬೀಳುವದಿಲ್ಲ. ಆದ ಕಾರಣ ಸುಜ್ಞರು ಹೊಲ ಮನೆಗಳನ್ನು ಆದರದಿಂದ ಮಾಡ ಬೇಕು; ಅದರಲ್ಲಿ ಮಾಡಿದ ಶ್ರಮವು ನಿಶ್ಚಯವಾಗಿ ವ್ಯರ್ಥವಾಗೋದಿಲ್ಲ, ಮತ್ತು ಲಾಭಕ್ಕೆ ಅನುಮಾನವಿಲ್ಲ; ಇಂಥಾದ್ದು ಇದು ಒಂದೇ ಉದ್ಯೋಗವದೆ, ಈ ಉದ್ಯೋಗ ಮಾಡುವವನಿಗೆ ಸರ್ವಸ್ವವೂ ಕಳ್ಳರು ತಕ್ಕೊಳ್ಳಲಿಕ್ಕೆ ಶಕ್ತರಾಗುವದಿಲ್ಲ.

---

೧೪೮. ನೀತಿಕಥೆ.

ಕುದುರೆಯೂ ಸಿಂಹವೂ.

ಒಂದಾನೊಂದು ಸಾಕಿದ ಕುದುರೆಯನ್ನು ಸಿಂಹವು ನೋಡಿ ಬಹಳ ಕಾಂಕ್ಷೆ ಮಾಡಿ, ಇದರ ಮಾಂಸದೊಳಗಿನ ಒಂದು ತುಣಕಾದರೂ ಕಡಿಯಲಿಕ್ಕೆ ಶಿಕ್ಕಿದರೆ ಒಳ್ಳೇದು ಎಂದು ಕುದುರೆ ತನ್ನ ಕೈಗೆ ಪ್ರಾಪ್ತವಾಗ ಬೇಕೆಂಬೋ ಹಾವದಿಂದ ವೈದ್ಯನ ಸೋಗು ತಕ್ಕೊಂಡು, ಸರ್ವತ್ರ ಪಶುಗಳಿಗೆ ಹೀಗೆ ತಿಳಿಸಿತು: ನಾನು ದೇಶ ದೇಶ ತಿರಿಗಿ ನಾನಾ ಪ್ರಕಾರದ ಔಷಧಗಳನ್ನೂ ವನಸ್ಪತಿಗಳನ್ನೂ ಅನುಭವಕ್ಕೆ ತಕ್ಕೊಂಡು ಇದ್ದೇನೆ, ಪಶುಗಳಿಗೆ ನನ್ನ ಕೈಯಿಂದ ಯಾವ ರೋಗವಾದರೂ ಹೋಗದೇ ನಿಂತಿಲ್ಲವೆಂಬೋಣ, ಆ ಮಾತು ಕೇಳಿ ಕುದುರೆಯು ಠಕ್ಕು ಮಾಡ ಬೇಕೆಂದು ಕಪಟದಿಂದ ಕಾಲು ಕುಂಟಿಕೋತ ಸಿಂಹನ ಸಮೀಪಕ್ಕೆ ಬಂದು, ವೈದ್ಯರಾಜನೇ, ನನ್ನ ಹಿಂಗಾಲಿಗೆ ಮುಳ್ಳು ಮುರಿದು ಬಹಳ ದಣಿ ಕೊಳ್ಳುತ್ತೇನೆ, ದಯ ಮಾಡಿ ಉಪಾಯ ಮಾಡ ಬೇಕು ಎಂದು ಹೇಳಿತು. ಸಿಂಹವು ಸಮೀಪಕ್ಕೆ ಬಂದು ಕಾಲು ನೋಡೇನು ಎಂಬೋಣ, ಕುದುರೆಯು ಸಮೀಪಕ್ಕೆ ಹೋಗಿ ಹಿಂಗಾಲಿನಿಂದ ಒಂದು ಸರ್ತಿ ಒದ್ದಲ್ಲಿ ಸಿಂಹನ ತುಟಿ ಹರಿದು ಘಾಯದಲ್ಲಿರುವ ಸಮಯಕ್ಕೆ, ಕುದುರೆಯು ನಾಲ್ಕು ಕಾಲುಗಳಿಂದ ಹಾರಿ ಹಾರಿ ಓಡಿ ಹೋಗಿ, ನನ್ನ ಠಕ್ಕಿಸ ಬೇಕೆಂದು ಬಂದವಗೆ ನಾನೇ ಠಕ್ಕಿಸಿ ಬಂದೆನೆಂದು ಬಹಳ ಸಮಾಧಾನ ತಿಳುಕೊಂಡಿತು.

ತಾತ್ಪರ್ಯ.

ಠಕ್ಕರಿಗೆ ಠಕ್ಕಿಸಿದರೆ ಬಹಳ ಸಂತೋಷವಾಗುತ್ತದೆ. ಆದರೂ ಕೃತ್ರಿಮ ಮಾಡೋಣ, ಠಕ್ಕಿಸೋಣ, ಇವು ನೀಚರ ಕರ್ಮಗಳು. ಉತ್ತಮರಿಗೆ ಅದು ಯೋಗ್ಯವಲ್ಲ. ತಥಾಪಿ ತನಗೆ ಠಕ್ಕಿಸಲಿಕ್ಕೆ ಯಾವನಾದರೂ ಬಂದರೆ ಅವನಿಗೆ ತಾನು ಕಾಪಟ್ಯದಿಂದ ಮನೋರಥ ಸಿದ್ಧಿಗೆ ಹೋಗದ ಹಾಗೆ ಮಾಡ ಬೇಕು. ಹೀಗೆ ನೀತಿಯುಂಟು.

---

೧೪೯. ನೀತಿಕಥೆ.

ಸಿಂಹವೂ ಕರಡಿಯೂ ನರಿಯೂ.

ಒಂದಾನೊಂದು ಅರಣ್ಯದಲ್ಲಿ ಒಂದು ಸಿಂಹವೂ ಒಂದು ಕರಡಿಯೂ ಎರಡು ಕಡೆಯಿಂದ ಓಡಿ ಧಾವತಿಯಿಂದ ಜಿಗಿದಾಡುತ್ತಾ ಛಂದದಿಂದ ಸತ್ತು ಬಿದ್ದ ಚಿಗರಿ ಇದ್ದಲ್ಲಿ ಒಂದೇ ವೇಳ್ಯಕ್ಕೆ ಬಂದವು. ಆ ಚಿಗರೀ ದೆಶೆಯಿಂದ ಎರಡೂ ಕಡಿದಾಡಿ ಬಹಳ ಹೊತ್ತು ಯುದ್ಧ ಮಾಡಿ ಕೊಂಡವು. ಆ ಎರಡಕ್ಕೂ ಘಾಯವಾಗಿ ಭೂಮಿಯ ಮೇಲೆ ಬೀಳಲಿಕ್ಕೆ, ಅಕಸ್ಮಾತ್ ಆ ಮಾರ್ಗದಿಂದ ಒಂದು ನರಿಯು ಬಂದು ಅವುಗಳ ಅವಸ್ಥೆಯ ಕಂಡು ಛಟ್ಟಿತನದಿಂದ ಆ ಎರಡರ ನಡುವೆ ಹೋಗಿ ಆ ಸತ್ತ ಚಿಗರಿಯನ್ನು ತಕ್ಕೊಂಡು ಹೋಯಿತು. ಅವು ಎರಡೂ ಪರಾಕ್ರಮಿಗಳು; ಆದರೆ ಶಕ್ತಿ ಇಲ್ಲದ ಕಾರಣ ಕಸ ಕೊಳ್ಳಲಾರದೆ ಸುಮ್ಮನೆ ನೋಡುತ್ತಿದ್ದವು. ಆ ಸಮಯದಲ್ಲಿ ಆ ಉಭಯತರಿಗೂ ವಿವೇಕವಾಗಿ ತಮ್ಮ ತಮ್ಮೊಳಗೆ — ನೋಡಿದಿರಾ ನಮ್ಮ ಕಡದಾಟದ ಫಲ, ಕೇವಲ ಹೀನನು ಬಂದು ಆಮಿಷ ತಕ್ಕೊಂಡು ನಡದನು, ಅದನ್ನು ಬಿಡಿಸಿ ಕೊಳ್ಳಲಿಕ್ಕೆ ನಾವಿಬ್ಬರೂ ಶಕ್ತಿ ಇಲ್ಲದವರಾದಿವಿ ಎಂದು ಮಾತಾಡಿ ಕೊಂಡವು.

ತಾತ್ಪರ್ಯ.

ಯಾವದೊಂದು ಪದಾರ್ಥದ ಸಲವಾಗಿ ಜನರು ಕಡದಾಡಿ ನ್ಯಾಯಾಧಿಪತಿಯ ಕಡೆಗೆ ಹೋಗುತ್ತಾರೆ. ಅಲ್ಲಿಯ ವಕೀಲರಿಗೆ ಕೈ ಸಾಧಿಸುತ್ತದೆ. ಇವರು ಕಡದಾಟ

ಮಾಡಿ ಮಾಡಿ ದಣಿಯುತ್ತಾರೆ. ವಕೀಲರಿಗೆ ಲಾಭವಾಗುತ್ತದೆ. ನ್ಯಾಯವೆಂಬೋ ಶಬ್ದಕ್ಕೆ ವಿಚಾರ ಮಾಡುತ್ತಾ ಇರಲಾಗಿ ಕೇವಲ ನೀತಿಯೇಯಾದರೆ ಅದೇ ನ್ಯಾಯವೇ ಮನುಷ್ಯರಿಗೆ ಆಪತ್ತಿಗೆ ಕಾರಣವಾಗುತ್ತದೆ. ನ್ಯಾಯದ ಭರವಸಕ್ಕೆ ಬಿದ್ದವರು ಬಹಳವಾಗಿ ಭಿಕ್ಷೆಗೆ ಗುರಿಯಾಗ್ಯಾರೆ. ಹಟಕ್ಕೆ ಬಿದ್ದು ಸಾಲಗಳ ಮಾಡಿ ಸಂಕಟದಲ್ಲಿ ಬಿದ್ದಿದ್ದಾರೆ. ಅದಕ್ಕಿಂತಲೂ ನಾಲ್ಕು ಮಂದಿ ಬುದ್ಧಿಮಂತರಾದ ಉತ್ತಮ ಮನುಷ್ಯರ ಕಡೆಯಿಂದ ತಂಟೆ ಯಾಕೆ ತೀರಿಸಿ ಕೊಳ್ಳ ಬಾರದು. ಒಬ್ಬನು ನೀತಿವಂತನೂ ಭಕ್ತಿವಂತನೂ ಆದ ಮೇಲೆ ಅವನಿಗೆ ಪರಮಾರ್ಥದ ಹಾದಿ ತೋರಿಸುವವರು ಬೇಕಿಲ್ಲವು. ಮಿತಿ ಆಹಾರದ ಶರೀರಕ್ಕೆ ವೈದ್ಯರು ಕೆಲಸವಿಲ್ಲವು. ನ್ಯಾಯವಾಗಿ ನಡಿಯುವವನಿಗೂ ಪ್ರಮಾಣಿಕತನದಿಂದ ಇರುವವನಿಗೂ ಕದಾಚಿದ ಜ್ಞಾನದಿಂದ ವಾದ ಬಿದ್ದರೆ ತೀರ್ಪು ಯಾರಾದರೂ ಹೇಳಿದಂತೆ ಕೇಳುವವನಿಗೂ ಆ ನ್ಯಾಯಾಧಿಪತಿಗಳ ಕಡೆಗೆ ವಕೀಲರ ಕಡೆಗೆ ಕೆಲಸ ಬೀಳೋದಿಲ್ಲ. ಹಿರಿಯರ ಕಡೆಯಿಂದಲೂ ತೀರದೆ ಹೋದರೆ ಧರ್ಮಶಾಸ್ತ್ರ ಬಲ್ಲಂಥಾ ಉತ್ತಮರೂ ಬುದ್ಧಿವಂತರೂ ಆಗಿರುವ ಪ್ರಸಿದ್ಧಿ ಪುರುಷರ ಮುಂದೆ ವೃತ್ತಾಂತ ಹೇಳಿ ಅವರು ಹೇಳಿದಂತೆ ನಡಿಯುವದು ಯೋಗ್ಯವದೆ. ಅವನಿಂದಲೂ ತೀರದೆ ಸಂದೇಹ ಬಿದ್ದರೆ ಅದಕ್ಕೆ ತಮ್ಮೊಳಗೆ ತಾವೇ ಉಪಾಯ ಮಾಡಿ ಕೊಂಡು ತಂಟೇ ತೀರಿಸಿ ಕೊಳ್ಳುವದು ಒಳ್ಳೇದದೆ.

---

೧೫೦. ನೀತಿಕಥೆ.

ಇಲಿಗಳ ಸಭೆಯು.

ಒಂದಾನೊಂದು ಸಮಯದಲ್ಲಿ ಇಲಿಗಳು ತಮ್ಮ ಹಿಂಡುಗಳ ಕೂಡಿಸಿ ಕೊಂಡು, ಬೆಕ್ಕಿನ ಕಡೆಯಿಂದ ನಮ್ಮ ಪ್ರಾಣವ ಬಿಡಿಸಿ ಕೊಂಬೋದಕ್ಕೆ ಬಲವಂತವಾದ ಯುಕ್ತಿ ಯಾವದು ಎಂದು ವಿಚಾರ ಮಾಡಿ ಕೊಂಡು ಅನೇಕ ತರದ ಕಲ್ಪನೆಗಳು ಸಕಲರಿಂದ ಬಹಳ ಹೊರಟವು. ಅದರಲ್ಲಿ ಚವಶಿ ನಚವಶಿಗಳು ಆದವು. ಆ ಸಮಯದಲ್ಲಿ ಅದರಲ್ಲಿ ಒಂದು ಎಳೇ ವಯಸ್ಸಿನ ಇಲಿಯು ಮುಂದಾಗಿ ಬಂದು ತನ್ನ ಪಾಂಡಿತ್ಯವ ತೋರಿಸಿ ಕಡೆಗೆ, ಬೆಕ್ಕಿನ ಕೊರಳಿಗೆ ಘಂಟೆ ಕಟ್ಟ ಬೇಕು, ಇದೇ ಮುಖ್ಯವಾದ ಯುಕ್ತಿ

ಯು; ಆ ಘಂಟೆ ಸ್ವಲ್ಪ ಅಲಗಾಡೋದು ನಾವು ಸಾವಧಾನವಾಗಿ ನಮ್ಮ ನಮ್ಮ ಹೋರಿನಲ್ಲಿ ಹೊಕ್ಕೊಳ್ಳ ಬಹುದು ಎಂದು ಹೇಳಿತು. ಈ ಮಾತು ಸಕಲರೂ ಕೇಳಿ, ಶಾಬಾಸು, ಈ ಯುಕ್ತಿ ಬಹಳ ಒಳ್ಳೇದು ಎಂದು ತಲೆದೂಗಿ ದರು. ಮತ್ತೆ ಕೆಲವರು, ಈ ಯುಕ್ತಿ ತೆಗದಾತನೇ ನಮ್ಮ ಸರ್ವರ ಕಡೆ ಯಿಂದ ಮಾನಪತ್ರ ಹೊಂದ ಬೇಕು ಎಂದಾಗ, ಆ ಹಿಂಡಿನೊಳಗಿರುವ ಒಂದು ಹಿರೇ ಇಲಿಯು ಈ ಸಮಸ್ತವನ್ನು ನೋಡಿ ಎದ್ದು ನಿಂತು, ಎ ಲೋ ಗೆಳಿಯಗಳಿರಾ, ಇಂಥಾ ಆಲೋಚನೆ ತೆಗದನಲ್ಲಾ, ಇದು ಕೇವಲ ಯುಕ್ತಿಯೇ ಸರಿ, ಮತ್ತು ಕುಶಲವುಳ್ಳಂಥಾದ್ದು ಖರೆ. ಇದರಲ್ಲಿ ಸಂಶ ಯವಿಲ್ಲ. ಆದರೆ ಇನ್ನೊಂದು ಆತನ ಮುಖದಿಂದ ಕೇಳಿ ತಿಳಿಯ ಬೇಕು, ಏನಂದರೆ, ಬೆಕ್ಕಿನ ಕೊರಳಲ್ಲಿ ಹ್ಯಾಗೆ ಘಂಟೆಯನ್ನು ಕಟ್ಟ ಬೇಕು; ಈ ಕಾ ರ್ಯ ಇವರಲ್ಲಿ ಯಾವ ಇಲಿ ಮಾಡುತ್ತದೆ ಎಂದು ತಿಳಿಯೋ ಪರ್ಯಂ ತರ ಈತಗೆ ಮಾನಪತ್ರ ಕೊಡಲಾಗದು ಎಂದಲ್ಲಿ, ಇದನ್ನು ಸರ್ವರೂ ಕೇಳಿ ಆ ಎಳೇ ಇಲಿಗೆ ಉಪಹಾಸ ಮಾಡಿದರು.

ತಾತ್ಪರ್ಯ.

ಬಾಯಿಯಿಂದ ಆಲೋಚನೆಗಳಲ್ಲಿ ಪುಷ್ಕಳ ಮಾತುಗಳು ಸುಲಭ ಕಾಣಿಸುತ್ತ ವೆ. ಆದರೆ ಮಾಡುವಾಗ ಅದು ಕಠಿಣವಾಗಿ ತೋರುತ್ತದೆ. ಆದದರಿಂದ ಒಂದು ವರಿ ಯುಕ್ತಿ ಹೇಳಲಿಕ್ಕೆ ಒಬ್ಬನು ಮುಂದಾದರೆ ಈ ಮಾತು ಸಿದ್ಧಿಗೆ ಹೋದೀತೆಂ ಬದು ತನ್ನ ಪ್ರತ್ಯಯಕ್ಕೆ ತಂದು ಕೊಡದ ತನಕ ನಿಶ್ಚೈಸ ಬಾರದು.

---

೧೪೧. ನೀತಿಕಥೆ.

ಸಿಂಹವೂ ಕತ್ತೆಯೂ ನರಿಯೂ.

ಒಂದಾನೊಂದು ಸಮಯದಲ್ಲಿ ಸಿಂಹವೂ ಕತ್ತೆಯೂ ನರಿಯೂ, ಈ ಮೂವ್ವರು, ನಾವು ಮೃಗಬೇಟಿಗೆ ಹೋದಲ್ಲಿ ಏನಾದರೂ ಶಿಕ್ಕಿದ್ದನ್ನು ಹಂಚಿ ಕೊಳ್ಳ ಬೇಕೆಂದು ಕರಾರು ಮಾಡಿ ಕೊಂಡರು. ಆ ಮೇಲೆ ಅವರು

ಒಂದು ಪುಷ್ಟಿಯಾದ ಸಾಂಬ್ರಾಣಿಯನ್ನು ಹೊಡದರು. ಅದನ್ನು ಪಾಗ ಮಾಡು ಎಂದು ಸಿಂಹನು ಕತ್ತೆಗೆ ಹೇಳಿದನು. ಆದೇ ಪ್ರಕಾರ ಕತ್ತೆಯು ಸರಿಯಾಗಿ ಮೂರು ಪಾಲು ಮಾಡಲು, ಸಿಂಹಗೆ ಸಿಟ್ಟು ಬಂದು, ಆ ಕತ್ತೆಯನ್ನು ಕರಳು ಹೊರ ಬೀಳೋ ಹಾಗೆ ಕ್ಷಣದಲ್ಲಿ ಕೊಂದು ಹಾಕಿ, ಅದೇ ಕೆಲಸವನ್ನು ನರಿಗೆ ಹೇಳಿತು. ಆ ನರಿಯು ಬಹಳ ಬುದ್ಧಿಶಾಲಿಯಾಗಿ ಎಚ್ಚರವಿಟ್ಟು, ತಾನು ಅದರೊಳಗೆ ಸ್ವಲ್ಪ ಚೂರು ಮಾತ್ರ ತಕ್ಕೊಂಡು ಉಳಿದ ವಿಶಿಷ್ಟವನ್ನು ಸಿಂಹನ ಮುಂದೆ ಇಟ್ಟು ಎಲೇ ರಾಜಾಧಿರಾಜನೇ, ನನಗೆ ಈ ಚೂರೇ ಸಾಕು, ಸಮಗ್ರವನ್ನು ತಾವೇ ಅಂಗೀಕರಿಸ ಬೇಕು ಎಂದಲ್ಲಿ, ಆ ಸಿಂಹನು ಬಹಳ ಸಂತುಷ್ಟನಾದನು. ಮತ್ತು ನರಿಗೆ— ಅಪ್ಪಾ, ಇಂಥಾ ರಾಜಮಾನ್ಯದ ರೀತಿಯನ್ನು ನಿನಗೆ ಯಾರು ಕಲಿಸಿದರು ಎಂದಲ್ಲಿ, ನರಿ ಅಂದದ್ದು: ಮಹಾರಾಜಸ್ತುತ್ಯ ಪ್ರಭುವೇ, ದಯ ಮಾಡಿ ಕೇಳಿದರೆ ಹೇಳುತ್ತೇನೆ, ಈ ವಿಷಯದಲ್ಲಿ ನನ್ನ ಗುರುವು ಎದುರಿಗೆ ಬಿದ್ದಿದ್ದಾನಲ್ಲಾ, ಈತನಂತೆ ಆದೀತು ಎಂಬ ಆಲೋಚನೆಯೇ, ಮತ್ತೆ ಯಾರನ್ನ ಕೇಳೋ ಅವಶ್ಯ ಕಾಣಲಿಲ್ಲ.

ತಾತ್ಪರ್ಯ.

ಏಕ ಚಿತ್ತದಿಂದ ಶಿಕ್ಷೆ ತಕ್ಕೊಳ್ಳಲಿಕ್ಕೆ ಹತ್ತುವವನಿಗೆ ಸಕಲರ ಆಚರಣೆಯ ಪರಿಣಾಮ ಕಂಡು ಬಹಳ ಮಾತುಗಳ ತಿಳದಾನು. ಹಿಂದಿನ ಕಾಲದ ಪುರುಷರ ಕಥೆಗಳನ್ನೂ ಹಾಗೆ ಸಾಂಪ್ರತಕಾಲದಲ್ಲಿ ಆಗುವಂಥಾದ್ದನ್ನೂ ಮನಸ್ಸಿಗೆ ತಂದು ನೋಡುತ್ತಿರಲಿಕ್ಕೆ ಅದರಲ್ಲಿ ತನ್ನ ನಡಾವಳಿಯ ವಿಷಯ ಸರ್ವ ಪ್ರಕಾರದ ದೃಷ್ಟಾಂತ ತೋರೀತು. ಅದರಿಂದ ಬಹಳ ಹಿತವಾದೀತು. ಎರಡನೆಯವನು ತುಂಬಿದ ನದಿಯಲ್ಲಿ ತೇಲಿ ಹೋಗುವದು ನೋಡಿ ತಾನೇ ಘಾಬರಿಯಾಗಿ ಪಾರಾಗುತ್ತಾನೆ. ಎರಡನೆಯವರು ಎಡವಿದ್ದನ್ನು ಕಂಡು ತಾನು ಜಪಿಸಿ ನಡಿಯುತ್ತಾನೆ. ಇಂಥಾದರ ಗುಣದೋಷ ತಿಳುಕೊಳ್ಳುವವನಿಗೆ ಯಾವ ಸಮಯದಲ್ಲಿ ಹ್ಯಾಗೆ ನಡಿಯ ಬೇಕು, ದೊಡ್ಡವರು ಅಥವಾ ಬಡವರು, ಇವರಿಗೆ ಹ್ಯಾಗೆ ನಡಿಸ ಬೇಕು ಇತ್ಯಾದಿ ವಿಷಯದಲ್ಲಿ ಅಡ್ಡಿ ಬೀಳೋದಿಲ್ಲವು.

---

೧೫೨. ನೀತಿಕಥೆ.

ಮುದಿ ಸಿಂಹವು.

ಒಂದಾನೊಂದು ವೃದ್ಧಸಿಂಹವು ಸಾಮರ್ಥ್ಯವಿಲ್ಲದೆ ಹೋಗಿ ಸಾಯಲಾಗಿ ಬಿದ್ದಿರಲು, ಈ ವರ್ತಮಾನ ಕೇಳಿ ಇದರ ಉಪದ್ರದಿಂದ ದಣಿಕೊಂಡಂಥಾ ಮೃಗಪಶುಗಳು ತಮ್ಮ ತಮ್ಮ ದಾವು ತೀರಿಸಿ ಕೊಳ್ಳ ಬೇಕೆಂದು ಅದರ ಹತ್ತಿರ ಬಂದವು; ಅವುಗಳಲ್ಲಿ ಹಂದಿಯು ಕಾರುಮಿಂಚಿನ ಹಾಗೆ ಶುಭ್ರವಾಗಿರುವ ತನ್ನ ಕೋರೆಯನ್ನು ಚುಚ್ಚಿತು. ಹಾಗೇ ಎತ್ತು ತನ್ನ ಸರಳ ಕೊಂಬಿನಿಂದ ಚುಚ್ಚಿ ರಕ್ತಧಾರೆ ಹರಿಸಿತು. ಇವು ನಿತ್ರಾರಿಸಿ ದಾವು ತೀರಿಸಿ ಕೊಂಡವು ಎಂದು, ಕತ್ತೆಯು ತಿರಿಗಿ ನಿಂತು ಸಿಂಹದ ಮೋರೆಗೆ ಒದ್ದಿತು. ಆಗ ಸಿಂಹವು ಪ್ರಾಣ ಬಿಡುವ ಸಮಯದಲ್ಲಿ — ಎಲೋ ದೇವರೇ, ಈ ದುಃಖ ಸಹಿಸಲಾರೆನು, ಶೂರರ ಕೈಯಿಂದ ಆದ ತೊಂದರೆಗಳನ್ನು ತಾಳ ಬಹುದು, ಇಂಥಾ ನೀಚ ಪಶುಗಳ ಕೈಯಿಂದಾದದ್ದು ಸೋಸುತ್ತೇನಲ್ಲ, ಇದರಕ್ಕಿಂತಲು ಸಹಸ್ರ ಮೃತಿಯ ದುಃಖವು ಕಠಿಣ ಕಾಣಿಸೋದಿಲ್ಲವೆಂದು ಹೇಳಿತು.

ತಾತ್ಪರ್ಯ.

ತಮಗೆ ಪ್ರಾಣಿ ಮಾತ್ರರೂ ಸಕಲರೂ ಮನ್ನಿಸ ಬೇಕು, ಉಪದ್ರವ ಮಾಡ ಬಾರದು ಎಂಬ ಇಚ್ಛೆ ಇದ್ದರೆ ತಾವು ಸರ್ವರಿಗೂ ಹಿತವನ್ನೇ ಮಾಡುತ್ತಿರ ಬೇಕು. ಸುಮ್ಮನೆ ಯಾರಿಗೆ ಯಾರೂ ಮಾನಿಸುವದಿಲ್ಲ. ತನಗೆ ದೊಡ್ಡಸ್ತನ ಇದ್ದ ವೇಳೆಯಲ್ಲಿ ಯಾರಿಗೂ ಕಂಟಕನಾಗದೆ ಚೆಲೋ ರೀತಿಯಿಂದ ನಡೆದು ಇದ್ದರೆ ವಿಪತ್ತು ಬಂದ ಕಾಲಕ್ಕಾದರೂ ಯಾರೂ ಛಳಿಸಲಿಕ್ಕಿಲ್ಲ; ಮತ್ತು ಸಂಕಟದ ಸಮಯದಲ್ಲಿ ವೈರಿಗಳು ದೃಷ್ಟಿಗೆ ಬೀಳಲಿಕ್ಕಿಲ್ಲ. ಯಾವ ಕಡೆಗೆ ನೋಡಿದರೂ ಸಹಾಯ ಮಾಡುವವರೇ, ಸ್ನೇಹಿತರೇ ದೃಷ್ಟಿಗೆ ಬಿದ್ದಾರು.

೧೫೩. ನೀತಿಕಥೆ.

ಮುದುಕನೂ ಅವನ ಮಕ್ಕಳೂ.

ಒಬ್ಬ ಮುದುಕನಿಗೆ ಐದು ಮಂದಿ ಮಕ್ಕಳಿದ್ದರು. ಅವರು ತಮ್ಮೊಳಗೆ ನಿತ್ಯವೂ ಕಡದಾಡುತ್ತಿದ್ದರು. ಅದರ ದೆಶೆಯಿಂದ ಆತನು ಮಕ್ಕಳಿಗೆ ನಾನಾ ಪ್ರಕಾರ ಹೇಳಿದರೂ ಕೇಳದೆ ಇರುವದರಿಂದ ವ್ಯರ್ಥವಾಯಿತಲ್ಲಾ ಎಂದು ಮನಸ್ಸಿನಲ್ಲಿ ದುಃಖ ಪಟ್ಟು ಕಡೆಗೆ ಯುಕ್ತಿ ಮಾಡಿ ಐದು ಮಂದಿ ಮಕ್ಕಳನ್ನು ತನ್ನ ಇದುರಿಗೆ ಕರಿಸಿ ಒಂದು ಕಟ್ಟಿಗೆಯ ಪೆಂಡೇ ತರಿಸಿ ಮಕ್ಕಳಿಗೆ — ನೀವು ಸರ್ವರೂ ಇದನ್ನು ಸತ್ವದಿಂದ ಮುರಿದು ನನಗೆ ಕೊಡಿರಿ ಎಂದಲ್ಲಿ, ಮಕ್ಕಳು ಸರ್ವರೂ ತ್ರಾಣ ಮಾಡಿದರು. ಆದರೆ ಪೆಂಡೆಯೊಳಗಣ ಕಟ್ಟಿಗೆಗಳು ಒಂದಕ್ಕೊಂದು ಆಶ್ರಯವಾಗಿದ್ದ ಕಾರಣ ಯಾರಿಂದಲೂ ಮುರಿಯೋಣವಾಗಲಿಲ್ಲ. ಆ ಮೇಲೆ ಮುದುಕನು ಪೆಂಡೆಯನ್ನು ಬಿಚ್ಚಿ ಅದರೊಳಗಿನ ಕಟ್ಟಿಗೆ ಒಬ್ಬೊಬ್ಬರ ಕೈಯಲ್ಲಿ ಒಂದೊಂದು ಕೊಟ್ಟು ಮುರಿಯಲಿಕ್ಕೆ ಹೇಳಲಾಗಿ, ಅಷ್ಟು ಕಟ್ಟಿಗೆಗಳನ್ನು ಒಂದು ಕ್ಷಣ ಮಾತ್ರಕ್ಕೆ ಮುರಿದು ಹಾಕಿದರು. ಆಗ ತಂದೆಯು ಮಕ್ಕಳಿಗೆ — ನೀವು ಸರ್ವರೂ ಸತ್ವದಿಂದ ಒಬ್ಬರಿಗೊಬ್ಬರು ಆಶ್ರಯ ಮಾಡಿ ಕೊಂಡಿದ್ದರೆ ನಿಮಗೆ ಉಪದ್ರವ ಮಾಡಲಿಕ್ಕೆ ಅಶಕ್ಯವು. ಸತ್ವ ಇಲ್ಲದೆ ಹೋದರೆ ಒಬ್ಬ ಅಧಮ ಅಥವಾ ಒಬ್ಬ ಹೆಂಗಸು ನಿಮ್ಮನ್ನು ಹೊಡದಾರು ಎಂದು ಹೇಳಿದನು.

ತಾತ್ಪರ್ಯ.

ಸರ್ವ ಕಾಲವೂ ತಮಗೆ ಒಳ್ಳೇದಾಗ ಬೇಕೆಂಬೋದಿದ್ದರೆ ಮನುಷ್ಯರು ಪರಸ್ಪರವಾಗಿ ಐಕ್ಯದಿಂದ ಮಿತ್ರತ್ವ ದೃಢ ಮಾಡ ಬೇಕು. ಅನೇಕತ್ವವಾಗುವ ರಾಜ ಕುಟುಂಬ ಶಕ್ತಿಹೀನವಾಗಿ ಶತ್ರುವಿಗೆ ಸುಸಾಧ್ಯವಾದೀತು. ಅದಕ್ಕೆ ತಮ್ಮ ತಮ್ಮೊಳಗೆ ಕಡದಾಡುವವರೇ ತಾವೇ ಲಯಕ್ಕೆ ಕಾರಣವಾಗುತ್ತಾರೆ. ಇದಕ್ಕಾಗಿ ರಾಜ್ಯದೊಳಗೆ, ಬಂಧು ಬಳಗದೊಳಗೆ, ಸಭೆಯೊಳಗೆ, ಕುಟುಂಬದೊಳಗೆ, ಅಥವಾ ಒಂದು

ಕೆಲಸ ಆರಂಭಿಸಿದ ನಾಲ್ಕು ಮಂದಿಯೊಳಗೆ ಕಲಹ ಪ್ರಾಪ್ತಿಯಾದರೆ ವಿನಾಶಕಾಲ ಸಮೀಪಕ್ಕೆ ಬಂತು ಎಂದು ತಿಳಿಯ ಬೇಕು. ಒಬ್ಬ ತಾಯಿ ತಂದೇ ಹೊಟ್ಟೆಯಲ್ಲಿ ಹುಟ್ಟಿದವರು ಐಕ್ಯದಿಂದಿರೋಣ, ಒಬ್ಬರಿಗೊಬ್ಬರು ಹಿತ ಮಾಡೋಣ, ಅದಂತು ಸಹಜವೇ ಸರಿ. ಒಬ್ಬರ ಕೈಯಿಂದ ಹೇಳಿಸಿ ಕೊಂಡು ಮಾಡುವದು ಹೀಗಲ್ಲ. ದುಃಖಕ್ಕೆ ಸಮ ಹಂಚಿಗೆ ಎಂದರೆ ಸುಖವು ದ್ವಿಗುಣವಾಗಿ ತೋರುತ್ತದೆ.

---

೧೫೪. ನೀತಿಕಥೆ.

ಮುದುಕಿಯೂ ಒಕ್ಕಲಗಿತ್ತೇರೂ.

ಒಬ್ಬ ಮುದುಕಿಯು ತನ್ನ ಒಕ್ಕಲಗಿತ್ತಿಯರಿಗೆ — ಕೋಳಿ ಕೂಗುತ್ತಲೇ ಬೆಳಗಾಯಿತೆಂದು ಎಬ್ಬಿಸಿ ಕೆಲಸಕ್ಕೆ ಹಚ್ಚುತ್ತಿದ್ದಳು. ಒಂದು ಸಮಯದಲ್ಲಿ ಒಕ್ಕಲಗಿತ್ತಿಯರು — ಈ ದುಷ್ಟ ಕೋಳಿಯು ತಮ್ಮ ತಂಗಳನಿದ್ದೆಯ ಕೆಡಿಸುತ್ತದೆ, ಇದನ್ನು ಕೊಂದು ಬಿಟ್ಟರೆ ಮುದುಕಿಯ ಉಪದ್ರ ನಿಂತೀತು ಎಂದು ತಿಳುಕೊಂಡು ಆ ಕೋಳಿಯನ್ನು ಕೊಂದು ಹಾಕಿದರು. ಇನ್ನು ಬೆಳಗಾಗುವ ತನಕ ಮುದುಕಿಯು ತಮ್ಮನ್ನ ಎಬ್ಬಿಸಲಿಕ್ಕೆ ಇಲ್ಲವೆಂದು ಸಂತೋಷದಿಂದಿರಲಾಗಿ, ಈ ಹುಂಜ ಸತ್ತ ಮೇಲೆ ಬೆಳಗಾಗುವ ವೇಳೆ ತಿಳಿಯದಕ್ಕೆ ಆ ಮುದುಕಿ ಆ ದಿನದಾರಭ್ಯ ಅರ್ಧ ರಾತ್ರಿಯಲ್ಲೇ ಅವರನ್ನು ಎಬ್ಬಿಸಲಿಕ್ಕೆ ಹತ್ತಿದಳು.

ತಾತ್ಪರ್ಯ.

ಏನಾದರೂ ಮಾಡ ಬೇಕಾದರೆ ಅದರ ಪರಿಣಾಮ ಮುಂದೆ ಹ್ಯಾಗಾದೀತೆಂದು ಪೂರ್ವದಲ್ಲೇ ವಿಚಾರ ಮಾಡಿ ಕೊಳ್ಳ ಬೇಕು. ಇಲ್ಲದಿದ್ದರೆ ಸುಖದ ದುಸಕ ಮಾಡಿದ ಉದ್ಯೋಗವೇ ದುಃಖಕ್ಕೆ ಕಾರಣವಾದೀತು.

---

೧೫೫. ನೀತಿಕಥೆ.

ನೌಲೂ ಕಾಗೆಯೂ.

ಒಂದಾನೊಂದು ಸಮಯದಲ್ಲಿ ಎಲ್ಲಾ ಪಕ್ಷಿಗಳು ತಮ್ಮೊಳಗೆ ಒಬ್ಬ ಅರಸನ್ನ ಮಾಡ ಬೇಕೆಂದು ಕೂಡಿರಲಾಗಿ, ಆ ಪ್ರಸ್ತಾಪದಲ್ಲಿ ನೌಲು ಮುಂದೆ ನಿಂತು ಬಂಗಾರವರ್ಣದ ತನ್ನ ಗರಿಗಳನ್ನು ನಿಂದಿರಿಸಿ ಅದರ ಶೋಭೇ ಕಡೆಗೆ ಸರ್ವರ ಕಣ್ಣುಗಳು ಹತ್ತ್ಯೋ ಹಾಗೆ ಮಾಡಿತು. ಆ ವೇಳ್ಯದಲ್ಲಿ ಎಲ್ಲಾ ಪಕ್ಷಿಗಳು ಅದನ್ನೇ ಅರಸನ್ನ ಮಾಡೋದಕ್ಕೆ ಸಮ್ಮತಿ ಕೊಟ್ಟರು. ಅದರ ಪ್ರಶಂಸಾ ಮಾಡಿ ಮುಂದೆ ಮೂರು ದಿವಸದ ಮೇಲೆ ರಾಜ್ಯಪದಕ್ಕೆ ಕುಳ್ಳಿರಿಸೋದಕ್ಕೆ ನಿಶ್ಚಯ ಮಾಡೋದರೊಳಗೆ ಒಂದು ಕಾಗೆಯು ಮುಂದೆ ಬಂದು ನಿಂತು ನೌಲಿಗೆ — ಎಲೋ ರಾಜಾಧಿರಾಜನೇ, ನಾನು ನಿನ್ನ ದಾಸಾನುದಾಸನು, ನನಗೊಂದು ಶಂಕೆ ಬಂದದಲ್ಲಾ, ಅಪ್ಪಣೆಯಾದರೆ ಅರಿಕೆ ಮಾಡೇನೆಂಬೋಣ, ನೌಲು — ಅಪ್ಪಯ್ಯನೇ ನಿರ್ಭಯದಿಂದ ಮಾತನಾಡು ಎಂದು ಹೇಳಿತು. ಆಗ ಕಾಗೆಯು — ಎಲೋ ರಾಜನೇ, ನಾವು ನಿನ್ನನ್ನು ಅರಸನ್ನ ಮಾಡಿ ಕೊಂಡು ನಮ್ಮ ಪ್ರಾಣ ನಿನ್ನ ಸ್ವಾಧೀನ ಮಾಡಿದೆವು; ನಮ್ಮ ಸರ್ವರ ಭಾರ ನಿನ್ನ ಮೇಲೆ ಅದೆ, ಆದರೆ ಕದಾಚಿತ್ ಗರುಡ, ಹಾಳಿಹದ್ದು, ರಣಹದ್ದು, ಇವರ ಕಡೆಯಿಂದ ನಮ್ಮಂಥಾ ಬಡವರಿಗೆ ಘಾತ ಬಂದರೆ ಅದರ ಪರಾಭವ ತಾವು ಯಾವ ರೀತೀಲಿ ಮಾಡಿಸೀರಿ ಎಂಬ ಈ ಸಂಶಯವನ್ನು ಬಿಡಿಸಿ ಭಯ ನಿವಾರಿಸ ಬೇಕು ಎಂದಲ್ಲಿ, ಈ ಪ್ರಶ್ನೆಯ ಕೇಳಿ ತಕ್ಷಣವು ಎಲ್ಲಾ ಪಕ್ಷಿಗಳಿಗೆ ವಿಚಾರ ಉತ್ಪನ್ನವಾಗಿ, ಕಾಗೆರಾಜ ಹೇಳಿದ ಮಾತು ನಿಜವೂ ಸತ್ಯವೂ, ಈ ಸೌಂದರ್ಯ ಪಕ್ಷಿಯಿಂದ ನಮ್ಮ ಸಂರಕ್ಷಣೆ ಆಗಲಿಕ್ಕಿಲ್ಲ, ಈ ಅರಸು ಉಪಯೋಗವಿಲ್ಲ ಎಂದವು.

ತಾತ್ಪರ್ಯ.

ಯಾರಾದರೂ ತಮ್ಮ ಸಮುದಾಯದೊಳಗೆ ತಮಗೆ ಮುಖ್ಯನನ್ನ ಯೋಚಿಸಬೇಕಾದರೆ ಹೊರಗಿನ ಚಂದಾಚಾರದ ಮೇಲೆ ಮೋಹಿಸ ಯೋಚಿಸಲಾಗದು; ಸರ್ವರ ಹಿತ ಮಾಡೋ ವಿಷಯದಲ್ಲಿ ಗುಣ, ಶಕ್ತಿ, ಬುದ್ಧಿ, ಚತುರತೆ, ಹೀಗೆ ಇದ್ದವನ್ನ ನೋಡಿ ಯೋಚಿಸ ಬೇಕು. ಜನರು ಹಾಗೆ ಮಾಡೋದಿಲ್ಲ. ಬರೇ ಶ್ರೀಮಂತತನದ ಮೇಲೆ ದೃಷ್ಟಿ ಇಟ್ಟು ಮೂರ್ಖಗೆ ಅನುಸರಿಸುತ್ತಾರೆ. ಅದರಿಂದ ಬಹಳ ಮಾತುಗಳು ಅವರ ಕಡೆಯಿಂದ ಅನನ್ವಿತವಾಗುತ್ತವೆ.

---

೧೫೬. ನೀತಿಕಥೆ.

ಗಿಳಿಯೂ ಪಂಜರವೂ.

ಒಬ್ಬ ದೊಡ್ಡ ಮನುಷ್ಯನ ಕಡೆಗೆ ಒಂದು ಗಿಣಿ ಇತ್ತು. ಅದಕ್ಕೆ ಒಳ್ಳೇ ಒಳ್ಳೇ ಪದಾರ್ಥವನ್ನು ತಿನ್ನಲಿಕ್ಕೆ ನಿತ್ಯವೂ ಹಾಕಿ ದೊಡ್ಡ ಪಂಜರದಲ್ಲಿ ಇಟ್ಟು ಸಾಕುತ್ತಿರಲಾಗಿ, ಆ ಪಂಜರವನ್ನು ತೋಟದ ಗಿಡದ ಕೆಳಗೆ ಕಲ್ಲಿನ ಕಟ್ಟೆ ಕಟ್ಟಿ ಅದರ ಮೇಲೆ ಇಟ್ಟಿದ್ದನು. ಯಾಕಂದರೆ ಬೇಸಿಗೇ ಕಾಲದಲ್ಲಿ ಘಾಳಿಯಿಂದ ಗಿಳಿಯು ಸುಖ ಪಡ ಬೇಕು. ಮನೆಯ ಯಜಮಾನನೂ ಅವನ ಕಡೆಯವರೂ ಗಿಳಿಯ ಸಮಿಾಪಕ್ಕೆ ಹೋಗಲಾಗಿ, ಅದು ಮಧುರ ಸ್ವರದಿಂದ ಅಚ್ಛೇದ ಶಬ್ದಗಳಿಂದ ಮಾತನಾಡಿ ಗರಿಯನ್ನು ಅರಳಿಸುತ್ತಿತ್ತು. ಯಜಮಾನನು ತನ್ನ ಕೋಮಲ ಕೈಗಳಿಂದ ಅದರ ಮೇಲೆ ಕೈ ಆಡಿಸಿ ಹೀಗೆ ಸುಖದಿಂದ ಇಟ್ಟರೂ, ನಿತ್ಯವೂ ಬೇರೆ ಪಕ್ಷಿಗಳು ಅರಣ್ಯದೊಳಗೆ ನಿರಾತಂಕದಿಂದ ಗಿಡಗಳ ಮೇಲೆ ಕುಂದ್ರುತ್ತಾವೆ, ಅವುಗಳಂತೆ ತಾನು ನಿರಾತಂಕವಾಗಿ ಎಂದಿಗಿದ್ದೇನು ಎಂದು ಚಿಂತಿಸುತ್ತಿರಲಾಗಿ, ಒಂದು ದಿವಸ ಸೇವಕಜನರು ಪಂಜರದ ಬಾಗಲು ತೆಗದು ಪುನಹಾ ಮುಚ್ಚಲಿಕೆ ಮರತರು. ಗಿಳಿಯು ಅದೇ ಸಮಯ ಸಾಧಿಸಿ ಹೊರಟು ಹೋಗಿ, ಉಳದಷ್ಟು ಕಾಲವಾದರೂ ಸುಖದಿಂದ ಕಳದೇನು ಎಂದು

ಓಡಿ ಹೋಯಿತು. ಆದರೆ ಅರಣ್ಯಕ್ಕೆ ಹೋಗಿ, ಹೊಸ ಹೊಸ ಇಕ್ಕಟ್ಟಿನ ಲ್ಲಿ ಬಿದ್ದು ಕಷ್ಟ ಪಡುವಾಗ್ಯೆ, ಪೂರ್ವದಲ್ಲೇ ನಾನು ದುಃಖಿ ಎಂದು ಮ ನಸ್ಸಿನಲ್ಲಿ ಮಾತ್ರ ಅಂದಿದ್ದೆ, ಈಗ ಪ್ರತ್ಯಕ್ಷವಾಯಿತು ಅಂದು ಕೊಂಡಿ ತು. ಆಗ ಈ ಗಿಳಿಯ ಬಾಯಿಯಿಂದ ಮನುಷ್ಯರ ಶಬ್ದ ಕೇಳಿ ಬೇರೆ ಪಕ್ಷಿಗ ಳು ತಮ್ಮ ಚುಂಚುಗಳಿಂದ ಚುಚ್ಚಿ ಯಾತನೆ ಪಡಿಸಲಿಕ್ಕೆ ಹತ್ತಿದವು. ಸವಿ ಸವಿ ಅನ್ನ ಕೂತಲ್ಲಿ ತಿನ್ನುತಿತ್ತು, ಅದು ಇಲ್ಲದೆ ಈಗ ಕಷ್ಟ ಪಟ್ಟು ಹೊಟ್ಟೆ ತುಂಬಿ ಕೊಳ್ಳ ಬೇಕಾದರೆ ಅಭ್ಯಾಸವಿಲ್ಲದ ಮೂಲ ಉಪಾಸ ಮಾಡಲಿಕ್ಕೆ ಹತ್ತಿತು, ಛಳೀ ಮಳೇ ಉಪದ್ರಕ್ಕೆ ಮನೆ ಇಲ್ಲದೆ ಗರಿಗಳು ತೋಯ್ದು ಛಳಿ ಯಿಂದ ನಡುಗಲಿಕ್ಕೆ ಹತ್ತಿತು; ನಾಜೂಕಾದ ಪ್ರಕೃತಿಯ ಪಕ್ಷಿಯು ಕಷ್ಟದಲ್ಲಿ ಬಿದ್ದು ಮರಣವಾಗೋ ಸಮಯದಲ್ಲಿ ತನಗೆ ತಾನೇ—ಅಹಾ ರೇ ಗಿಳಿಯೇ, ಪುನಹಾ ನಿನಗೆ ಒಂದು ವೇಳ್ಯ ಪಂಜರವು ಪ್ರಾಪ್ತಿಯಾದರೆ ನೀನು ಹೊ ರಗೆ ತಿರುಗೋದಕ್ಕೆ ಎಂದೆಂದಿಗೂ ಹೋಗಲಿಕ್ಕಿಲ್ಲ, ಆದರೆ ಅದು ಈಗ ಹ್ಯಾಗೆ ಪ್ರಾಪ್ತಿಯಾದೀತು ಎಂದು ಅಂದು ಕೊಂಡು ಕಣ್ಣು ಮುಚ್ಚಿ ಜೀವ ಬಿಟ್ಟಿತು.

ತಾತ್ಪರ್ಯ.

ಸಮಸ್ತವು ಅನುಕೂಲವಾಗಿರುತ್ತಿರಲು, ಸ್ವೇಚ್ಛೆಯಿಂದ ತಿರುಗೋ ಬುದ್ಧಿ ಯವನು ಈ ಮಾತಿನಿಂದ ಶಿಕ್ಷೆ ತಕ್ಕೋ ಬೇಕು. ಸ್ವತಂತ್ರವು ವಿಪತ್ತಿಗೆ ಸಹಾಯ ವಾಗಿರುತ್ತದೆ, ಅದು ಕೆಲಸದ್ದಲ್ಲವು. ಅಂಬಿಗನ ಹೊರ್ತು ನಾವಿ ಸಮುದ್ರದಲ್ಲಿ ಪೂ ರೈಸುವದಿಲ್ಲ. ಸರದಾರನ ಹೊರ್ತು ದಂಡಿಗೆ ಪರಿಣಾಮವಿಲ್ಲ. ಹಾಗೆಯೇ ಸ್ತ್ರೀ ಯರೂ ಹುಡುಗರೂ ಸ್ವಥಾ ಬಾಳುವ ಶಕ್ತಿ ಇಲ್ಲದವರೂ, ನಾವು ಪರತಂತ್ರದವರಂ ದು ಯಾಕೆ ಖೇದ ಮಾಡ ಬೇಕು? ಇಲ್ಲದ ಕಷ್ಟಗಳ ಕಲ್ಪಿಸಿ ಕೊಂಡು ಸಂಕಟದಲ್ಲಿ ಯಾಕೆ ಬೀಳ ಬೇಕು?

---

೧೫೭. ನೀತಿಕಥೆ.

ಗುಬ್ಬಿಯೂ ಬೇರೆ ಪಕ್ಷಿಗಳೂ.

ಒಬ್ಬ ಒಕ್ಕಲಿಗನು ಹೊಲದಲ್ಲಿ ಪುಂಡಿಬೀಜ ಬಿತ್ತುತ್ತಿರಲಾಗಿ, ಒಂ

ದು ಗುಬ್ಬಿಯು ಅದರ ವಿಷಯ ಆಲೋಚನೆ ಮಾಡಿ ಇತರ ಪಕ್ಷಿಗಳಿಗೆ — ಎಲಾ ನೀವು ಸರ್ವರೂ ಅನುಕೂಲವಾದರೆ ಈ ಪುಂಡಿಬೀಜ ಕೆದರಿ ನಾಶ ಮಾಡುವ, ಯಾಕಂದರೆ ಪುಂಡಿಯಿಂದ ನಾರು ಹೊರಡುತ್ತದೆ, ಅದರಿಂದಲೇ ಬೇಟೆಗಾರನು ಜಾಲವನ್ನು ಮಾಡುತ್ತಾನೆ, ಆ ಜಾಲದಿಂದ ನಾವು ವಶವಾಗುತ್ತೇವೆ ಎಂದು ಹೇಳಿತು. ಆಗ್ಯೆ ಆ ಪಕ್ಷಿಗಳು ಇದರ ಮಾತು ಕೇಳಲಿಲ್ಲವು. ಆ ಪುಂಡಿಬೀಜ ನಾಟಿ ಸಸಿ ಆದವು. ಆ ಸಮಯದಲ್ಲಿ ಮತ್ತು ಗುಬ್ಬಿಯು, ಈಗಾದರೂ ನಾವಷ್ಟರೂ ಕೂಡಿದರೆ ಉಪಾಯವಾದೀತು ಎಂಬೋಣ, ಇತರ ಪಕ್ಷಿಗಳು ಇದರ ಮಾತು ಉಪಹಾಸ ಮಾಡಿ, ಇದು ಕೇವಲ ಹುಚ್ಚು ಹಕ್ಕಿಯು, ತನಗೆ ಭವಿಷ್ಯ ತಿಳಿಯುತ್ತದೆ ಎಂದು ನಮ್ಮ ಮುಂದೆ ಬಡಾಯ ತೋರಿಸುತ್ತದೆ ಎಂಬೋಣ, ಆಗ ಆ ಗುಬ್ಬಿ, ತನ್ನ ಹೇಳಿಕೆ ವ್ಯರ್ಥವಾಯಿತೆಂದು, ಇನ್ನು ಮೇಲೆ ಇವುಗಳ ಸಂಗತಿ ತಕ್ಕದ್ದಲ್ಲವೆಂದು ಆ ದಿವಸದಾರಭ್ಯ ಎಲ್ಲಾ ಪಕ್ಷಿಗಳನ್ನ ಬಿಟ್ಟು ಮನುಷ್ಯರೊಳಗೆ ಬಂದು ಶೇರಿತು.

ತಾತ್ಪರ್ಯ.

ತಾವು ಮನುಷ್ಯರು ಇದ್ದೇವೆಂದು ಮನುಷ್ಯಜಾತಿಯ ಹಿತವು ಹ್ಯಾಗಾದೀತೋ, ಹಾಗೆ ಮಾಡುತ್ತಿರ ಬೇಕು. ಇದು ಸ್ವಧರ್ಮವೇ ಸರಿ. ಅದರೊಳಗೆ ತಮ್ಮ ಪರಿಚಿತಿಯವರೂ, ಸಹಸ್ರಾಂಶ ಸುಹೃದಯಸಂಬಂಧಿಗಳೂ ಆದವರ ಕಲ್ಯಾಣ ಮಾಡೋದು ಅವಶ್ಯವೇ ಸರಿ. ತನ್ನಿಂದ ಏನಾಗದಿದ್ದರೂ ಚೆಲೋ ಬುದ್ಧಿಯನ್ನಾದರೂ ಹೇಳ ಬೇಕು. ಒಂದು ವೇಳೆಗೆ ಅವರು ಕೇಳದಿದ್ದರೆ ಮತ್ತು ಒಮ್ಮೆ ಎರಡು ಭಾರಿ ಹೇಳಿ ನೋಡ ಬೇಕು, ಅಂದರೆ ತನ್ನ ಉಚಿತ ಮಾಡಿದ್ಹಾಗಾಯಿತು. ಇನ್ನು ಮೇಲೆ ಅವರ ಮಾತು ಕೆಟ್ಟರೆ ಅವರ ಗತಿ ಎನ್ನ ಬೇಕು, ತಮ್ಮ ಮೇಲೆ ದೋಷವಿಲ್ಲ. ಇಂಥಾ ಅವಿವೇಕಿಗಳ ಸಂಗತೀಲಿ ಕೆಡುವದಕ್ಕಿಂತಲು ಅವರ ಸಂಗತಿ ಬಿಡೋದೇ ಯುಕ್ತವದೆ. ತಮ್ಮ ಮಾತು ಅವರು ಕೇಳೋದಿಲ್ಲವೆಂದು ಅವರಿಗೆ ಉಪದ್ರ ಮಾಡೋದು ನೆಟ್ಟಗಲ್ಲ ಹ್ಯಾಗೋ, ಹಾಗೆ ಅವರ ಸ್ನೇಹ ಮಾಡಿ ಅವರ ಭಿಡಿಯಕ್ಕೆ ಅವರ ಸಂಗತೀಲಿ ತಾವು ಮುಣಗೋದು ಅಯೋಗ್ಯವು.

೧೫೮. ನೀತಿಕಥೆ.

ಹರೆಯದವನೂ ಬೆಕ್ಕೂ.

ಒಬ್ಬ ಹರೆಯದ ಪುರುಷನು ಒಂದು ಬೆಕ್ಕಿನ ಸಂಗಡ ಆಡುತ್ತಿದ್ದು, ಆ ಬೆಕ್ಕು ಚೆಲೋವೆಂದು ಬಹಳ ಪ್ರೀತಿ ಬಿದ್ದು, ಅಹೋರಾತ್ರಿಯಲ್ಲಿ ಅದರ ಚಿಂತೆಯಲ್ಲಿಂದ ವ್ಯಥಿತನಾಗಿ ಆ ದುಃಖಪರಿಹಾರಾರ್ಥವಾಗಿ ದೇವರ ಆರಾಧನೆಗೆ ಪ್ರಾರಂಭಿಸಿದನು. ದೇವರು ಕೃಪಾವಂತನಾಗಿ ಆ ಬೆಕ್ಕಿಗೆ ಲಾವಣ್ಯವಾದ ಸ್ತ್ರೀ ರೂಪವನ್ನು ಕೊಟ್ಟನು. ಆ ಸ್ತ್ರೀಯಳ ನೋಡಿದಂಥಾ ಪುರುಷರ ಆನಂದವನ್ನು ಹಿಡಿಯಲಿಕ್ಕೆ ಬ್ರಹ್ಮಾಂಡ ಸಾಲದು ಎಂದು ಅದೇ ದಿವಸವೇ ಲಗ್ನವಾಗಿ ಮಲಗಲಿಕ್ಕೆ ಕೋಣೆಯೊಳಗೆ ಹೋಗುತ್ತಿರಲಾಗಿ, ಅಲ್ಲೆ ಇಲಿಯ ಸಪ್ಪಳ ಕೇಳಿದಾಕ್ಷಣದಲ್ಲೆ ಗಂಡನನ್ನು ಬಿಟ್ಟು ಇಲಿಯ ಬೆನ್ನು ಹತ್ತಿದಳು. ಅದು ಕಂಡು ದೇವರಿಗೆ ಕ್ರೋಧ ಬಂದು, ನನ್ನ ಕೃತಿಗೆ ದೊಡ್ಡ ದೊಡ್ಡವರು ಮನ್ನಿಸುತ್ತಾರೆ, ಈಕೆ ಅನಾದರ ಮಾಡಿದ ಕಾರಣ ನೀಚಳಿದ್ದಾಳೆ; ಇವಳನ್ನ ಮನುಷ್ಯಳನ್ನ ಮಾಡಿದೆ, ಆದರೂ ಹೊರಭಾಗದಲ್ಲಿ ಮಾತ್ರ ಮನುಷ್ಯಳ ಹಾಗೆ ಕಾಣಿಸುತ್ತಾಳೆ; ಅಂತರಂಗದಲ್ಲಿ ಯಥಾ ಪ್ರಕಾರ ಬೆಕ್ಕಿನ ಪ್ರಕೃತಿಯೇ ಅದೆ; ಆದ್ದರಿಂದ ಅಂತರ್ಬಾಹ್ಯ ಒಂದೇ ಆಗಲಿ ಅಂತ ಪುನಹಾ ಮೊದಲಿನಂತೆ ಬೆಕ್ಕನ್ನೇ ಮಾಡಿದನು.

ತಾತ್ಪರ್ಯ.

ಶಿಕ್ಷೆಯೂ ಸಂಗತಿಯೂ ಇವು ಊಚ ನೀಚಕ್ಕೆ ಕಾರಣವಾಗುತ್ತಾವೆ ಖರೆ; ಆದರೂ ಅವರ ಸ್ವಭಾವವೇ ಮುಖ್ಯ ಕಾರಣವದೆ. ಸ್ವಭಾವಗುಣ ಚೆಲೋದಿದ್ದರೆ ಸದ್ಗುಣ ವೃದ್ಧಿ ಮಾಡುತ್ತ ಹೋಗುತ್ತದೆ. ಕೇವಲ ಸ್ವಭಾವಗುಣ ಬಿಡಿಸಿ ಹೊಸ ಭಾವ ಮಾಡೋದು ಕಠಿಣವದೆ. ದರಿದ್ರಸ್ವಭಾವವು ಇದ್ದ ಮನುಷ್ಯನ ಹತ್ತರ ಕೋಟ್ಯಾವಧಿ ದ್ರವ್ಯ ಇದ್ದಾಗ್ಯೂ ಸರ್ವ ವ್ಯವಹಾರದೊಳಗೆ ಅವನು ದರಿದ್ರಚಿಹ್ನವನ್ನೇ ತೋರಿಸುತ್ತಾನೆ. ದರಿದ್ರ ಭೋಗಿಸ ಬೇಕೆಂದು ಅವನಿಗೆ ಪ್ರಕೃತಿ ನೇಮ

ಕವಾದ ಮೇಲೆ ಭಾಗ್ಯ ಬಂದರೂ ಪ್ರಕೃತಿ ಇದ್ದದ್ದು ಬಿಡೋದಿಲ್ಲ. ದರಿದ್ರ ಹಾಗೂ ಮೂರ್ಖಪ್ರಕೃತಿ ಇದ್ದವಗೆ ಸಂಪತ್ತು ಪ್ರಾಶಸ್ತ್ಯ ಕೊಡಲಿಕ್ಕೆ ದಾರಿಂದಾದರೂ ಶಕ್ಯವಾಗೋದಿಲ್ಲ. ಚಿಕ್ಕ ಮನಸ್ಸಿನ ಪ್ರಕೃತಿಯುವಗೆ ಭಾಗ್ಯದಿಂದ ಮನ್ನಿಸಿದರೆ ಮನ್ನಿಸಲಿ; ಆದರೆ ಅವನು ಗುಣದಿಂದ ದೊಡ್ಡವನೇನು ಆಗೋದಿಲ್ಲ.

---

೧೫೯. ನೀತಿಕಥೆ.

ಜೇನುನೊಣವೂ ಗ್ರಾಮದ ಕುರುಡ ನೊಣವೂ.

ಗ್ರಾಮದ ನೊಣದ ಹಿಂಡುಗಳು ಕೂಡಿ ಕೊಂಡು ಜೇನಿನ ಹುಟ್ಟು ಇದ್ದಲ್ಲಿ ಬಂದು, ಈ ಜೇನುತುಪ್ಪ ನಮ್ಮದೆಂದು ಮುತ್ತಿ ಕೊಂಡದರಿಂದ ಈ ಉಭಯತರಿಗೂ ಬಡದಾಟ ಬಂದು ಭೃಂಗದ ಕಡೆಗೆ ನ್ಯಾಯಕ್ಕೆ ಹೋದವು. ಆ ಭೃಂಗನು — ನಾನು ಹೇಳಿದ ಹಾಗೆ ಕೇಳುತ್ತೇವೆ, ಎಂಬದಾಗಿ ನೀವು ಉಭಯತರು ಕಟ್ಟುತ್ತರ ಕೊಟ್ಟರೆ ಹೇಳ್ಯೇನೆಂಬ ಮಾತಿಗೆ ಎರಡು ಪಕ್ಷದವರು ರಾಜಿಯಾಗಿ ಕಟ್ಟುತ್ತರ ಕೊಟ್ಟರು. ಆ ಮೇಲೆ ಆ ಭೃಂಗನು ಎರಡು ಬರೇ ಜೇನುಹುಟ್ಟು ತರಿಸಿ ಎರಡು ಪಕ್ಷದವರಿಗೆ ಒಂದೊಂದು ಕೊಟ್ಟು, ಹುಟ್ಟಿನಲ್ಲಿ ನೀನು ಯಾವ ಕ್ರಮದಿಂದ ತುಂಬುತ್ತಿರುತ್ತೀರಿ ಅದರಂತೆ ಇವುಗಳಲ್ಲಿ ತುಂಬಿ ಕೊಂಡು ಬಂದರೆ ಅದರ ಸ್ವಾದ ವರ್ಣವನ್ನು ನೋಡಿ ಪರೀಕ್ಷೆ ಮಾಡಿ ಹೇಳಲಿಕ್ಕೆ ಬಂದೀತು ಎಂತ ಭೃಂಗ ಹೇಳೋಣ, ಜೇನುನೊಣಗಳು ಅಂಗೀಕರಿಸಿ ತಕ್ಕೊಂಡವು. ಗ್ರಾಮದ ನೊಣ ಹಿಂದೆ ಮುಂದೆ ನೋಡಿ ಅನುಮಾನಿಸಲಿಕ್ಕೆ ಹತ್ತೋಣ, ಆಗ ನೀವು ಸುಳ್ಳರಿದ್ದೀರಿ, ನಿಮಗೆ ಆ ಜೇನಿನ ಸಂಮಂಧವಿಲ್ಲ, ಜೇನುನೊಣಗಳು ಸಹ ಜವಂತರಿದ್ದಾರೆ ಅಂತ ಭೃಂಗ ಹೇಳಿತು.

ತಾತ್ಪರ್ಯ.

ತಮ್ಮ ಸುಳ್ಳುತನ ಬಂದು ಮಾತಿನಲ್ಲಿ ತೋರುವ ಹಾಗೆ ಕಾಣಿಸೋಣ ಸುಳ್ಳರು ಆ ಮಾತು ಬಿಟ್ಟು ಅದರಲ್ಲಿ ಅಡ್ಡಮಾತು ಬಹಳ ತಂದು ವಾದವನ್ನು ಬೆಳಸಿ ದೊ

ಡ್ಡ ಮನುಷ್ಯರನ್ನ ಸುಮ್ಮನಿರಿಸುತ್ತಾರೆ. ಅವರ ಮನಸ್ಸಿನೊಳಗಣ ಮಾತು ಹೀಗೆ ಅದೆ: ನ್ಯಾಯಾಧೀಶನ ದೃಷ್ಟಿ ಸ್ವಲ್ಪ ತಪ್ಪಿದಲ್ಲೆ ತಮ್ಮ ಕಾರ್ಯವಾದರೆ ಆದೀತು. ಖರೆ ಮಾತು ಇದ್ದವರಿಗೆ ದಾವ ದಾವ ಮಾತಿನ ಅಡಚಣೆಯೂ ಬೀಳೋದಿಲ್ಲ.

---

೧೬೦. ನೀತಿಕಥೆ.

ಕಳ್ಳನೂ ಕೋಳಿಯೂ.

ಒಂದು ಮನೆಯಲ್ಲಿ ಒಬ್ಬ ಕಳ್ಳ ಹೊಕ್ಕನು. ಅಲ್ಲೀ ಕಳವು ಮಾಡತಕ್ಕಂಥಾ ಪದಾರ್ಥಗಳು ಏನೂ ದೊರೆಯಲಿಲ್ಲ. ಒಂದು ಕೋಳಿಹುಂಜ ಮಾತ್ರ ಶಿಕ್ಕಿತು. ಅದನ್ನ ಕೊಲ್ಲಲಿಕ್ಕೆ ಹತ್ತ್ಯೋಣ, ಆ ಹುಂಜ ಕಳ್ಳಗೆ ಬಹಳ ಪ್ರಕಾರ ಬಿಂನ್ನೈಸಿ ಹೇಳುತ್ತದೆ: ನನ್ನಿಂದ ಮುಂದಿಗೆ ಬಹಳ ಉಪಯೋಗವದೆ, ಏನಂದರೆ, ಪ್ರಾತಃಕಾಲಕ್ಕೆ ನಾನು ಕೂಗಲಾಗಿ ಸಕಲರು ಜಾಗ್ರತರಾಗಿ ತಮ್ಮ ತಮ್ಮ ಕೆಲಸಗಳ ಮಾಡಿ ಕೊಳ್ಳುತ್ತಾರೆ, ಇದರ ದುಸಕ್ಕೆ ನೀನು ನನ್ನ ಕೊಲ್ಲ ಬೇಡ ಎಂದಲ್ಲಿ, ಕಳ್ಳನು — ಎಲೇ ಕೋಳಿಯೇ, ನೀನು ಒದರಿ ಸಕಲರಿಗೂ ಎಚ್ಚರ ಮಾಡೋಣದರಿಂದ ನಮಗೆ ಕಳವು ಶಿಕ್ಕೋದಿಲ್ಲ, ಆದ್ದರಿಂದ ನಿನ್ನ ಕೊಲ್ಲುತ್ತೇನೆ ಎಂದನು.

ತಾತ್ಪರ್ಯ.

ಸಂಭಾವಿತರ ಚೆಲೋ ಗುಣವೆಂದದಕ್ಕೆ ದುರ್ಜನರು ಕೆಟ್ಟದ್ದೆನ್ನುತ್ತಾರೆ.

---

೧೬೧. ನೀತಿಕಥೆ.

ಬಾವುಗನು ತನ್ನ ಬಳಗಕ್ಕೆ ಊಟದ ಆಮಂತ್ರಣ ಹೇಳಿದ್ದು.

ಒಬ್ಬ ಗೃಹಸ್ಥನು ಒಬ್ಬ ದೊಡ್ಡ ಮನುಷ್ಯನಿಗೆ ಭೋಜನಕ್ಕೆ ಹೇಳಿದ್ದನು. ಸಕಲ ಸಾಹಿತ್ಯ ಒದಗಿಸಿ ನಾನಾ ಜೀನಸಿನ ಪಕ್ವಾನ್ನಗಳ ಮಾ

ಡಿಸಿದ್ದನು. ಈ ಪದಾರ್ಥವನ್ನು ಬಾವುಗ ನೋಡಿ, ಇದೇ ಸಮಯದಲ್ಲಿ ನನ್ನ ಇಷ್ಟ ಮಿತ್ರರಿಗೆ ಭೋಜನಕ್ಕೆ ಹೇಳ ಬೇಕೆಂದು ನಿಶ್ಚಯ ಮಾಡಿ ಸರ್ವರಿಗೂ ಭೋಜನಕ್ಕೆ ಹೇಳಿ ತಾನು ಮೊದಲೇ ಅಡಿಗೀ ಮನಿಗೆ ಬಂತು. ಅಲ್ಲಿ ಅನೇಕ ಜೀನಸಿನ ಪದಾರ್ಥವನ್ನು ಕಂಡು ಮನಸ್ಸಿನಲ್ಲಿ ಅನ್ನುತ್ತದೆ: ಈ ಅನ್ನ ಉತ್ತಮ ಬದುಕು, ನನಗೆ ದೊರದಷ್ಟು ಎಲ್ಲಾ ನಾನೇ ತಿಂದು, ಮಿತ್ರರು ಕೇಳಿದರೆ ನನಗೆ ನಿದ್ದೆ ಹತ್ತಿತು, ಏನೂ ಸಿಗಲಿಲ್ಲ ಎಂದು ಹೇಳ ಬೇಕು. ಹೀಗೆ ಯೋಚಿಸಿ ಸಂತೋಷದಿಂದ ಬಾಲ ಝಾಡಿಸಿ ಓಡ್ಯಾಡುತ್ತಿತ್ತು. ಅಷ್ಟರೊಳಗೆ ಅಡಿಗಿ ಮಾಡುವನು ಅದನ್ನ ನೋಡಿ ಮೆಲ್ಲಗೆ ಬೆನ್ನ ಹತ್ತಿ ಹಿಂಚಾಗದಲ್ಲಿ ಬಂದು ಅದರ ಹಿಂಗಾಲವೆರಡು ಹಿಡಿದು ಎತ್ತಿ ಜೇರಗಂಡಿಯೊಳಗೆ ಹಾಯಿಸಿ ಹೊರಗೆ ಬಿಷ್ಟಕೊಟ್ಟನು. ಅದರ ಕೆಳಗೆ ಒಂದು ಕೊರಚಿಗಲ್ಲು ಇತ್ತು. ಅದರ ಮೇಲೆ ಬಿದ್ದು ಸರ್ವಾಂಗವೆಲ್ಲಾ ಘಾಯವಾಗಿ ಚೀರುತ್ತಾ ಬೀದಿದಾರಿ ಹಿಡಿದು ಓಡುತ್ತಿತ್ತು. ಆಗ ಎರಡನೇ ಬೆಕ್ಕು ಇದರನ್ನ ಕಂಡು, ಏನಯ್ಯ ತಮ್ಮನೆ ಭೋಜನಕ್ಕೆ ಕರದಿದ್ದಿರಲ್ಲಾ, ಅಲ್ಲಿಗೆ ಹೋಗಿದ್ದ್ಯಾ, ಸುದ್ದಿ ಏನು ಎಂಬೋಣ, ಅಪ್ಪನೇ, ಆ ಸುದ್ದಿ ಏನೆಂದು ವರ್ಣಿಸಲಿ, ಇಂಥಾ ಔತಣ ನನಗೆ ಬಹಳ ದಿವಸ ತುಟ್ಟಿ ಆಗಿದ್ದಿಲ್ಲ, ಆದದ್ದು ಏನು ಅಲ್ಲಿ ಸ್ವಲ್ಪ ಮಸಾಲಿ ಹೆಚ್ಚಾಯಿತು, ಅಮಲೇರಿ ಸ್ಮರಣೆ ತಪ್ಪಿ ನಾನು ಆ ಮನೆ ಬಿಟ್ಟು ಹ್ಯಾಗೆ ಹೊರಟೆನೋ ಎಚ್ಚರವೇ ಇಲ್ಲ, ಸುದ್ದಿ ಏನು ಹೇಳಲಿ.

ತಾತ್ಪರ್ಯ.

ಮುಖ್ಯ ಯಜಮಾನನ ಗುರ್ತು ಇಲ್ಲದೆ ಆ ಯಜಮಾನನು ಕರಿಯದಲೆ ಭೋಜನಕ್ಕೆ ಹೋದರೆ ಬಾವುಗನಂತೆ ಅಪಹಾಸ್ಯಕ್ಕೆ ಕಾರಣವಾಗುತ್ತಾರೆ. ಅಲ್ಲಿ ಮಾನ ಹೋದದ್ದು ಬಹಳ ಹಂಚಿಕೆಯಿಂದ ಮುಚ್ಚಿ ಕೊಳ್ಳ ಬೇಕಾಗುತ್ತದೆ.

೧೬೦. ನೀತಿಕಥೆ.

ಕುರುಬನು ವ್ಯಾಪಾರಿಗನಾಗಿದ್ದದ್ದು.

ಒಬ್ಬ ಕುರುಬ ಒಂದು ದಿವಸದಲ್ಲಿ ತನ್ನ ಕುರಿಹಿಂಡು ಸಮುದ್ರದ ದಂಡೆ ಹಿಡಿದು ಮೇಯಿಸಲಿಕ್ಕೆ ಬಿಟ್ಟು ತಾನು ಒಂದು ಕುದುರೆಯ ಮೇಲೆ ಹತ್ತಿ ಕೊಂಡು ಸಮುದ್ರವನ್ನು ನೋಡಿ ಕೊಳ್ಳುತ್ತ ನಿಂತಿದ್ದನು. ಆ ಕಾಲದಲ್ಲಿ ಘಾಳಿ ಇಲ್ಲದೆ ಸಮುದ್ರದ ನೀರು ಅಲ್ಲೋಲ ಕಲ್ಲೋಲವಾಗದೆ ಸ್ತಬ್ಧವಾಗಿ ನಿಂತದ್ದು ಕಂಡು ಸಂತೋಷಿತನಾಗಿ, ಹಹಾ ಸಮುದ್ರವೇ, ಸುಶಾಂತವಾಗಿ ಅದೆ, ನಾನು ಹಡಗದ ಉದ್ದಿಮಿ ಮಾಡಿದರೆ ಬಹಳ ಭಾಗ್ಯವಂತನಾದೇನು, ದೇಶಗಳನ್ನು ನೋಡೇನು, ಅಂಬುಪಷ್ಟರಲ್ಲಿ ಒಂದು ನಾವಿ ಅಲ್ಲಿಗೆ ಮಾರಲಿಕ್ಕೆ ಬಂತು. ಇದನ್ನು ಕೊಂಡು ಕೊಂಡು ಇದರ ಮೇಲೆ ಕುಳಿತು ಸಮುದ್ರಸಂಚಾರ ಮಾಡ ಬೇಕೆಂದು ತನ್ನ ಯಾಪತ್ತು ಕುರಿಗಳನ್ನು ಒಬ್ಬ ಗೃಹಸ್ಥಗೆ ಮಾರಲಿಕ್ಕೆ ಕೊಟ್ಟು ಆ ನಾವಿ ಕೊಂಡು ನಾವಾಡಿಗನು ಸಹವಾಗಿ ಏರಿ ಕೊಂಡು ಸಮುದ್ರದಲ್ಲಿ ಹೋದನು. ಹೋಗುತ್ತಾ ಹೋಗುತ್ತಾ ಮಹಾ ಉತ್ಪಾತಘಾಳಿ ಬಂದು ತೆರೆಗಳು ಮೇಲಿಂದ ಮೇಲೆ ಬರುವಾಗ್ಯೆ ನಾವಿ ಹೊಯ್ದಾಡಿ ಮೇಲೆ ಕೆಳಗೆ ಆಯಿತು. ಅದರ ಸರಪಳಿಯನ್ನು ನೀರಿನಲ್ಲಿ ಇಳಿ ಬಿಟ್ಟರೂ ನಿಲ್ಲದೆ ಇತ್ತು. ನಾವಡಿಗನು ಸತ್ತನು. ಆ ಕುರುಬನು ಅತ್ತಿತ್ತ ಮಾಡಿ ಬಡದಾಡಿ ಥಡಕ್ಕೆ ಬಂದು ಹತ್ತಿ ಕೊಂಡು, ಜೀವದಿಂದ ಉಳದ್ದೆ ಪರಮಲಾಭವೆಂದು ದರಿದ್ರನಾಗಿ ಮೊದಲಿಗೆ ತನ್ನ ಕುರಿ ಕೊಂಡ ಗೃಹಸ್ಥನಲ್ಲಿ ಚಾಕರಿ ನಿಂತು ಪುನಹಾ ಕುರಿ ಕಾಯೋ ಕೆಲಸದಲ್ಲಿ ಅದೇ ಸಮುದ್ರದ ದಂಡಿಗೆ ಹಿಂಡು ಹೊಡ ಕೊಂಡು ಬಂದು ಮೇಯಿಸುತ್ತಿರಲಾಗಿ, ಮತ್ತು ಪೂರ್ವದಂತೆ ಸಮುದ್ರ ಘಾಳಿ ಇಲ್ಲದೆ ಸ್ತಬ್ಧವಾದದ್ದನ್ನು ಕಂಡು, ಕುರುಬ ಅಂದದ್ದು: ಇನ್ನು ಮೇಲೆ ನನಗೆ ಮೂರ್ಖತನ ಹಿಡಿಯುವದಿಲ್ಲ, ಒಂದಾವರ್ತಿ ನಿ

ನ್ನ ನೋಡಿ ನೆಚ್ಚಿ ಮರುಳಾಗಿ ಈ ಗತಿಗೆ ಬಂದೆನು, ಈಗ ನಾನು ಜಾಣ ನಾಗಿದ್ದೇನೆ, ನಿನ್ನ ವಿಶ್ವಾಸ ಹಿಡಿಯಲಿಕ್ಕಿಲ್ಲ.

ತಾತ್ಪರ್ಯ.

ಒಂದಾವರ್ತಿ ದುಃಖ ಕಷ್ಟ ಅನುಭೋಗಿಸಿ ಪದಾರ್ಥಗಳ ಅನುಭವ ನೋಡಿ ಥಣ್ಣಗಾಗಿ ಇದ್ದವನು ತನ್ನ ಅವಸ್ಥೆ ತಿಳುಕೊಂಡು ಅದರಲ್ಲಿಯೇ ತೃಪ್ತಿ ಹೊಂದಿರುತ್ತಾನೆ, ಮತ್ತೊಂದು ಬಯಸೋದಿಲ್ಲ.

---

೧೬೩. ನೀತಿಕಥೆ.

ಯೌವನವಂತನೂ ಸಿಂಹದ ಚಿತ್ರವೂ.

ಒಬ್ಬ ಮುದುಕನ ಹೊಟ್ಟೆಲಿ ಒಬ್ಬನೇ ಹುಡುಗ ಇದ್ದನು. ಪ್ರಾಯಕ್ಕೆ ಬಂದು ಅವನಿಗೆ ಬೇಟೆ ಆಡ ಬೇಕೆಂಬೋ ವ್ಯಸನ ಬಹಳವಾಗಿತ್ತು. ಅದು ಕಂಡು ತಂದೆಯು ಈ ಮಗನ ಗತಿ ಏನಾದೀತು ಎಂದು ಚಿಂತಿಸುತ್ತ ಇರಲಾಗಿ, ಒಂದು ದಿವಸ ರಾತ್ರಿ ಸ್ವಪ್ನದಲ್ಲಿ ಸಿಂಹವು ಈ ಹುಡುಗನ್ನ ತಿಂದಂತೆ ಕಂಡು ಎಚ್ಚತ್ತು ಒಂದು ನೆಲಮನೆ ಕಟ್ಟಿಸಿ ಅದರ ಗೋಡಿಗೆ ಅಪರೂಪವಾದ ಚಿತ್ರಗಳ ಬರೆಸಿ ಆ ಮನೆಯಲ್ಲಿ ಮಗನನ್ನು ಇಟ್ಟನು. ಒಂದು ದಿವಸ ಆ ಹುಡುಗನು ಹೊತ್ತು ಹೋಗದೆ ಮನಸು ರಮಿಸೋದಕ್ಕೆ ಆ ಗೋಡೆಯ ಚಿತ್ರವನ್ನು ನೋಡಿ ಶೋಧೆ ಮಾಡುತ್ತಿರುವಾಗ್ಯೆ, ಅಲ್ಲಿ ಬರದ ಒಂದು ಸಿಂಹ ಕಣ್ಣಿಗೆ ಬಿತ್ತು. ಅದನ್ನ ನೋಡಿ ಬಹಳ ಕೋಪವುಳ್ಳವನಾಗಿ, ಎಲೇ ಸಿಂಹನೇ, ನಿನ್ನ ದೆಶೆಯಿಂದ ನನ್ನ ತಂದೆಯಾದಂಥಾತನು ನನ್ನ ಈ ಶೆರೆಮನೆಯಲ್ಲಿ ಇಟ್ಟಿದ್ದಾನೆ, ನನ್ನ ಕೈಯೊಳಗೆ ಈ ಸಮಯದಲ್ಲಿ ಒಂದು ಆಯುಧವಿದ್ದರೆ ನಿನ್ನ ಕೊಂದು ಹಾಕುತ್ತಿದ್ದೆ ಅಂತ ಹೇಳಿ ದ್ವೇಷದಿಂದ ದವಡಿ ಕಚ್ಚಿ ಮಹಾರೋಷಾಗ್ನಿ ಎದ್ದು ಅದೇ ಮದದಿಂದ ಕೈ ಮುಷ್ಟಿ ಮಾಡಿ ಸಿಂಹನ ಎದಿಗೆ ಗುದ್ದಲಾಗಿ ಆ ಗೋ

ಡೆಯೊಳಗೆ ನಟ್ಟಿರುವಂಥಾ ಕಬ್ಬಿಣದ ಮೊಳೆಯು ಮುಷ್ಟಿಗೆ ಚುಚ್ಚಿ ಪಾರಾಗಲಾಗಿ, ಪೂರ್ಣ ಘಾಯದಿಂದ ಆ ಹುಡುಗನು ಸತ್ತನು. ಇದಕ್ಕೆ ಅವನ ತಂದೆ ಅಂದದ್ದು: ನಾನು ಕನಸು ಕಂಡದ್ದು ಸುಳ್ಳಾಗ ಬೇಕೆಂತ ಯತ್ನ ಮಾಡಿದೆ, ಆದರೂ ಭವಿಷ್ಯಕ್ಕೆ ಉಪಾಯವಿಲ್ಲ, ನನ್ನ ಸಾಹಸ ವ್ಯರ್ಥವಾಗಿ ಹೋಯಿತು.

ತಾತ್ಪರ್ಯ.

ಆಗ ತಕ್ಕದ್ದು ತಪ್ಪೋದಿಲ್ಲ ಅಂದ ಮೇಲೆ ಸುಮ್ಮಗೆ ಚಿಂತೆ ಹಚ್ಚಿ ಕೊಂಡು ಜೀವವನ್ನು ಸಂಕಟದೊಳಗೆ ಯಾಕೆ ಹಾಕ ಬೇಕು.

---

೧೬೪. ನೀತಿಕಥೆ.

ಕೋಳಿಹ್ಯಾಟೆಯೂ ನರಿಯೂ.

ಒಂದು ನರಿಯು ತನಗೆ ಕಾಣಿಸುವ ಒಂದು ಗುಡಸಲು ಹೊಕ್ಕು, ಏನಾದರೂ ಹುಡುಕಿ ಕೊಂಡು ತಿನ್ನ ಬೇಕೆಂದು ಗುಡಸಲ ಸಮೀಪಕ್ಕೆ ಬರಲಾಗಿ ಅದರಲ್ಲಿ ಹಿಂಚಾಗಕ್ಕೆ ಒಂದು ಕೋಳಿ ಕೂತಿತ್ತು. ಅದರ ಮೇಲೆ ತನ್ನ ಪ್ರಯತ್ನ ಸಾಗದೆ, ಹ್ಯಾಗಾದರೂ ಮಾಡಿ ಈ ಕೋಳಿಯು ಜಾಗ ತಪ್ಪಿಸ ಬೇಕು ಎಂದು ನರಿಯು ಕೋಳಿಯ ಸಂಗಡ ಮಾತಾಡುತ್ತದೆ: ಏ ಯಜಿಯವ್ವಾ, ನೀನು ಈ ಗುಡಸಲೊಳಗೆ ಇರುವದು ನೆಟ್ಟಗೆ ಕಾಣಿಸೋದಿಲ್ಲ, ನಿನ್ನ ನೋಡಿ ನನ್ನ ಜೀವಕ್ಕೆ ಬಹಳ ಕಳವಳ ಹತ್ತಿಯದೆ, ನಿನ್ನ ಚರ್ಯ ನೆಟ್ಟಗೆ ಕಾಣಿಸೋದಿಲ್ಲ, ಎಲೇ ಅವ್ವಾ, ನಿನ್ನ ಕೈ ತಾ, ನಾಡಿ ನೋಡೇನು, ಮೋರೆ ತೋರಿಸು, ಮೋಡಿ ಬಹಳ ನೆಟ್ಟಗಿಲ್ಲ, ಈ ಸ್ಥಳ ಬಿಡ ಬೇಕವ್ವಾ ಎನ್ನಲಾಗಿ, ಕೋಳಿ ಅನ್ನುತ್ತದೆ: ಏ ತಾಯಿ, ಈಗ ಮಾತ್ರ ಈ ಸ್ಥಳ ಬಿಡೋದಿಲ್ಲ, ಅಶಕ್ತಳಾಗಿದ್ದೇನೆ, ಇದಲ್ಲದೆ ನಿನ್ನ ಕಡೆಗೆ ಬಂದರೆ ನನ್ನ ಜೀವ ಉಳಿಯಲಿಕ್ಕಿಲ್ಲ.

ತಾತ್ಪರ್ಯ.

ಸ್ತೋತ್ರ ಮಾಡ ಬೇಕಾದರೆ ಎಷ್ಟು ಅಷ್ಟು ಯೋಗ್ಯತೆ ಮೀರಿ ಸ್ತೋತ್ರ ಮಾಡೋಣದರಿಂದ ಏನೋ ಕಪಟವದೆ ಅಂತ ತಿಳಿಯ ತಕ್ಕದ್ದು. ಸಮಸ್ತರಿಗೂ ದ್ವೇಷಿ ಅಂತ ತಿಳದ ಮೇಲೆ ಎಲ್ಲರೂ ಅವನ ಸಂಗತೀಲಿ ಹಾಗೆ ಆಚರಣಿ ಮಾಡ ಬೇಕು. ಯಾಕಂದರೆ ಅವನ ಕೃತ್ರಿಮದ ಮಾತನ್ನು ಕಡೆಗಾಣಿಸಿ ಅವನ ಬಲೆಯೊಳಗೆ ಶಿಗದೆ ಇರುವಂಥಾ ಬುದ್ಧಿವಂತರು ಈ ಜಗತ್ತಿನಲ್ಲಿ ಕ್ವಚಿತು ಇದ್ದಾರೆ. ನಾಶ ಬೀಳುವವರೇ ಬಹಳ ಮಂದಿ.

---

೧೬೫. ನೀತಿಕಥೆ.

ಕಪ್ಪೆಯೂ ಇಲಿಯೂ.

ಒಂದಾನೊಂದು ಹೊಳೆಯ ತೀರದಲ್ಲಿ ಕಪ್ಪೆಗೂ ಇಲಿಗೂ ಥಳಿತನದ ನಿಮಿತ್ತವಾಗಿ ವ್ಯಾಜ್ಯ ಬಿದ್ದಿತ್ತು; ಇಲಿಯು ಮಹಾ ಧೂರ್ತತನದಿಂದ ಹುಲ್ಲುಸಂದಲಿಯೊಳಗೆ ಶೇರಿ ಕಪ್ಪೆಯನ್ನು ಬೈಲಿಗೆ ಬಾ ಎಂದು ಕರೆಯಲಾಗಿ, ಕಪ್ಪೆಯು ಹಾರಿಕೆಯೊಳಗೆ ಬಹಳ ಯೋಗ್ಯತೆಯುಳ್ಳದ್ದು, ಯುಕ್ತಿಯಲ್ಲಿಂದ ಇಲಿಗೆ ಗಂಟು ಬಿದ್ದು, ಕಳ್ಳನ ಹಾಗೆ ಯಾಕೆ ಓಡುತ್ತಿ, ದಾವದಾದರೂ ಇದುರಿಗೆ ನಿಂತು ಮಾತನಾಡ ಬೇಕು, ಹೀಗ್ಯಾಕೆಲೆ ಎಂದು ಒಬ್ಬರಿಗೊಬ್ಬರು ವಾದ ಮಾಡಿ ಹೆಚ್ಚಾಗಿ ಬಡದಾಡುವ ಸಮಯದಲ್ಲಿ ಒಂದು ಹಾಳಿಹದ್ದು ಬಂದು ಎರಗಿ ಎರಡನ್ನು ಕಚ್ಚಿ ಕೊಂಡು ಹೈದಿತು.

ತಾತ್ಪರ್ಯ.

ಇಬ್ಬರ ಝಗಳ ಮೂರನೆಯವಗೆ ಲಾಭವೆಂಬ ನೀತಿ ಉಂಟಲ್ಲಾ; ಇದರ ದೆಶೆಯಿಂದ ಒಬ್ಬರಿಗೊಬ್ಬರು ಝಗಳಾಡ ಹತ್ತ ಬಾರದು, ಯಾಕಂದರೆ ಆ ಝಗಳದಲ್ಲಿ ತಮ್ಮ ತಮ್ಮ ಮರ್ಮಕರ್ಮಗಳ ಮಾತನ್ನು ತೆಗೆಯುತ್ತಾರೆ. ಆಗ್ಯೆ ತೆಗೆಯ ಬಾರದೆಂಬೋದು ತಿಳಿಯೋದಿಲ್ಲ. ಮೂರನೆಯವರು ಯಾವನದಾದರೂ ಜುಟ್ಟು ಕಟ್ಟಿ ನಾಶ ಹೊಂದಿಸಿ ಹೋಗುವ ಯೋಚನೆಯಲ್ಲಿರುತ್ತಾರೆ. ತಾವು ಗುದ್ದಾಡುವ

ವಸ್ತುವಿನಲ್ಲಿ ಏನು ಜೀವ ಇರುವದಿಲ್ಲ. ಆದರೆ ನಾನು ಗೆದ್ದೆನು ಎಂಬ ಅಭಿಮಾನಕ್ಕೆ ಬಿದ್ದು ಜೀವ ಘಾತಕತನದ ಝುಗಳಕ್ಕೆ ಪ್ರಾರಂಭ ಮಾಡುತ್ತಾರೆ. ಇದರಿಂದ ಪರಾಧೀನರಾಗಿ ದುಖ್ಖಕ್ಕೆ ಒಳಗಾಗುತ್ತಾರೆ.

---

೧೬೬. ನೀತಿಕಥೆ.

ಮುಂಗಲಿಯೂ ಮನುಷ್ಯನೂ.

ಒಬ್ಬ ಗೃಹಸ್ಥನು ಒಂದು ಮುಂಗಲಿಯನ್ನು ಹಿಡಿದು ಪ್ರಾಣ ತೆಗೆಯ ಬೇಕೆಂಬ ಸಮಯದಲ್ಲಿ ಮುಂಗಲಿಯು ದೈನ್ಯದಿಂದ ಆರ್ತನಾಗಿ, ಎಲೋ ಅಪ್ಪನೇ, ನನ್ನ ಪ್ರಾಣ ತಕ್ಕೊಳ್ಳ ಬೇಡ, ನಾನು ನಿನಗೆ ಉಪಯೋಗವಾಗಿಪ್ಪೆನು, ಏನಂದರೆ: ನಿನ್ನ ಮನೆಯಲ್ಲಿ ಇಲಿ ಮೊದಲಾದ ಉಪದ್ರ ಆಗಗೊಡುತ್ತಿದ್ದಿಲ್ಲ, ಇನ್ನಾದರೂ ಜಾಗ್ರತೆಯಾಗಿರುತ್ತೇನೆ ಎಂದು ಬೇಡಿ ಕೊಳ್ಳಲಾಗಿ, ಆ ಮನುಷ್ಯನು — ಛೀ ಹೋಗು, ನಮ್ಮ ಮನೆಯಲ್ಲಿ ಇಲಿ ಉಪದ್ರ ಯಥಾಪ್ರಕಾರವೇ ಅದೆ, ನಿನ್ನ ಉಪಕಾರದಿಂದ ಕಾರಣವಿಲ್ಲ ಎಂದು ಆ ಮುಂಗಲಿಯ ಪ್ರಾಣ ತಕ್ಕೊಂಡು ಬಿಟ್ಟನು.

ತಾತ್ಪರ್ಯ.

ತನ್ನ ಸ್ವಾರ್ಥದ ದೆಶೆಯಿಂದ ಮಾಡಿದ ಕೆಲಸ ಎರಡನೆಯವರ ಉಪಯೋಗಕ್ಕೆ ಬಿದ್ದಾಗ್ಯೂ ಆ ಕೆಲಸ ಎರಡನೆಯವರ ದುಸಕ್ಕೆ ಮಾಡಿದೆ ಅಂದರೆ ಒಪ್ಪುವದಿಲ್ಲಾದ ಕಾರಣ ಹಾಗೆ ಅನ್ನಲಿಕ್ಕೆ ಬಾರದು.

---

೧೬೭. ನೀತಿಕಥೆ.

ಸೇವಕನೂ ಮಂಗವೂ.

ಒಬ್ಬ ಧಣಿಯು ತನ್ನ ಸೇವಕನಿಗೆ: ಎಲಾ ಈ ಹೊತ್ತು ಬಹಳ ಹಶಿವೆಯಾಗೆದೆ, ಹೊತ್ತುಂಟ್ಲೆ ಅಡಿಗಿ ಮಾಡು ಎನ್ನಲಾಗಿ, ಬೆಂಕಿ ತರೋದ

ರ ನಿಮಿತ್ತ ನೆರೆಮನೆಗೆ ಹೋಗಿ ಬತ್ತಿ ಹಚ್ಚಿ ಕೊಂಡು ಬರುವಷ್ಟಕ್ಕೆ ಮಾರ್ಗದೊಳಗೆ ಒಬ್ಬನು ಒಂದು ಮಂಗ ಹಿಡುಕೊಂಡು ಹೋಗುತ್ತಿದ್ದನು. ಆ ಮಂಗ ಈ ಸೇವಕನನ್ನು ಕೇಳಿದ್ದು: ಅಪ್ಪಾ, ಯಾರನ್ನ ಹುಡುಕುತ್ತಿಯನ್ನಲು, ಒಬ್ಬ ಬುದ್ಧಿವಂತನನ್ನ ಹುಡುಕುತ್ತೇನಪ್ಪ ಎಂಬೋಣ, ಮಂಗ ನಾಚಿ ಕೊಂಡು ಮುಂದಕ್ಕೆ ಹೋಯಿತು.

ತಾತ್ಪರ್ಯ.

ಕೆಲಸದಲ್ಲಿ ಆಗಲಿ ಅಥವಾ ವಿಚಾರದಲ್ಲಿ ಆಗಲಿ ಮನಸ್ಸು ಹಾಕಿದಂಥಾ ಮನುಷ್ಯನ ಸಮಯೋಚಿತವರಿಯದೆ ಮಾತಾಡಿಸಿ ಸಿಟ್ಟಿಗೆ ತರಿಸುವಂಥಾದ್ದು ಇದು ಮಂಗನ ಲಕ್ಷಣ ಖರೆ; ಇಂಥಾ ಮಂಗಬುದ್ಧಿಯುಳ್ಳ ಮನುಷ್ಯನನ್ನು ಬುದ್ಧಿವಂತರಾದವರು ಮನುಷ್ಯರೊಳಗಿನವನೆಂದು ತಿಳಿಯೋದಿಲ್ಲ.

---

೧೬೮. ನೀತಿಕಥೆ.

ನರಿಯೂ ಸಾಳವಪಕ್ಷಿಯೂ.

ಒಂದು ನರಿಯು ನದಿಯ ಒಳಗೆ ಇಳಿದು ದಂಡೆ ಹತ್ತಿ ಹೋಗ ಬೇಕು ಎಂದು ನೋಡಲಾಗಿ, ದಂಡೆ ಒಡದು ಹಾದಿ ನೆಟ್ಟಗಿಲ್ಲದೆ ಹೋಗುವದಕ್ಕೆ ಅನುಮಾನಿಸಿ ಅತ್ತ ಇತ್ತ ನೋಡುತ್ತಿತ್ತು. ಆ ಸಮಯದಲ್ಲಿ ಒಂದು ನೊಣವು ಓಡುತಾ ಬಂದು ಅದರ ನೆತ್ತಿಯ ಮೇಲೆ ಕುಳಿತು ರಕ್ತವನ್ನು ಪಾನ ಮಾಡುತ್ತ ಇರಲಾಗಿ, ಆ ಕಡೆಯಿಂದ ಬಂದು ಸಾಳವಪಕ್ಷಿ ಬರುತ್ತಿತ್ತು. ಅದಕ್ಕೆ ನರಿ ಹೇಳುತ್ತದೆ: ಅಪ್ಪನೇ, ಈ ನೊಣವು ನನ್ನ ನೆತ್ತಿಯ ಮೇಲೆ ಕುಳಿತು ರಕ್ತ ಕುಡಿಯುತ್ತದೆ, ನೀನು ಎಬ್ಬಿಸ ಬಾರದೆ? ಇಲ್ಲಿದಿದ್ದರೆ ಈ ನೊಣವು ತನ್ನ ಕುಲಕೋಟಿ ತಕ್ಕೊಂಡು ಬಂದು ನನ್ನ ರಕ್ತ ಸಮಗ್ರ ಕುಡಿದರೆ ಶರೀರದಲ್ಲಿ ಒಂದು ತಟಕುರಕ್ತ ಉಳಿಯಲಿಕ್ಕಿಲ್ಲ.

ತಾತ್ಪರ್ಯ.

ಅರಸಿನ ಬಳಿಯಲ್ಲಿ ಅನೇಕ ರಾಜಕಾರ್ಯದವರು ಇದುತ್ತಾರೆ. ಆದರೆ ಅ

ವರು ಲಂಚ ತಿನ್ನುತ್ತಾರೆ ಅಂತ ಅರಸನು ಅವರನ್ನ ಅಧಿಕಾರದಿಂದ ತೆಗಿಯುವ ಪ್ರಯತ್ನ ಮಾಡುತ್ತಾನೆ. ಅದರಲ್ಲಿ ಏನೂ ಫಲವಿಲ್ಲ. ಆ ತೆಗದವರ ಬದಲಿಗೆ ಬಂದವರಾದರೂ ಅದೇ ಕೆಲಸ ಮಾಡುತ್ತಾರಾಗಲಿಕ್ಕೆ ಇವರಿಗಿಂತ ಆ ಮೊದಲಿದ್ದವರೆ ಒಳ್ಳೆಯವರೆನ್ನಿಸಿ ಕೊಳ್ಳುತ್ತಾರೆ, ಹ್ಯಾಗಂದರೆ, ಕೆಲವು ದಿವಸ ಲಂಚ ತಿಂದು ತೃಪ್ತರಾಗಿರುತ್ತಾರೆ. ಆದ್ದರಿಂದ ಹೊಸದಾಗಿ ಬಂದವರ ಹಾಗೆ ಬಹಳ ಉಪದ್ರ ಬಡಿಸೋಣ ಅವರಿಂದ ಆಗೋದಿಲ್ಲ.

---

೧೬೯. ನೀತಿಕಥೆ.

ಕರೆ ಕಾಗಿಯೂ ಸರ್ಪವೂ.

ಒಂದು ಕರೆ ಕಾಗಿಯು ಒಂದು ಹಾವನ್ನು ತನ್ನ ಬಾಯಿಂದ ಕಚ್ಚಿ ಹಿಡಿದು, ಇನ್ನು ತಿನ್ನ ಬೇಕು ಎಂಬುವದರೊಳಗೆ ಆ ಹಾವು ಸಂವರಿಸಿಕೊಂಡು ತಿರಿಗಿ ಮೇಲಕ್ಕೆ ಮೋರೆ ಮಾಡಿ ಕಾಗಿಯ ತಡವರಿಸಿ ಅದರ ಕುತ್ತಿಗೆ ಕಚ್ಚಿತು. ಆ ವಿಷ ಏರಿ ಕಾಗಿಯು ಮೃತ ಹೊಂದುವ ವೇಳೆಯಲ್ಲಿ ಮನಸ್ಸಿನಲ್ಲಿ ಅಂದದ್ದು: ನಾನು ಎರಡನೆಯವನನ್ನ ಕೊಂದು ತಿಂದು ಸುಖ ಪಡ ಬೇಕೆಂದು ಮಾಡಿದ್ದೆ, ಅದು ವಿಪರೀತವಾಯಿತು, ನನಗೆ ಈ ಶಿಕ್ಷೆ ಆದದ್ದು ಚೆಲೋದೆ ಸರಿ.

ತಾತ್ಪರ್ಯ.

ಪರರನ್ನು ದುಃಖಿಸ ಬೇಕೆಂದರೆ ಒಮ್ಮೆಗಿಲ್ಲದಿದ್ದರೂ ಒಮ್ಮೆಗಾದರೂ ಅವನು ನಾಶ ಹೊಂದ್ಯಾನು ಸರಿ. ದಾರಿಗಾದರೂ ಈ ಮಾತು ಕೃತ ನಿಶ್ಚಯ. ತನ್ನ ಸ್ವಾರ್ಥ ಸಾಧಿಸಿ ಬರುತ್ತಿರಲಾಗಿ ಎರಡನೆಯವರಿಗೆ ಎಷ್ಟು ದುಖ್ಖವಾಗುತ್ತಿರಸಲ್ಲದ್ಯಾಕೆ, ತನ್ನ ಕಲ್ಯಾಣ ಹ್ಯಾಗಾದೀತು ಎಂಬುವದನ್ನು ಮಾತ್ರ ಮನಸ್ಸಿಗೆ ತರುತ್ತಾರೆ.

---

೧೨೦. ನೀತಿಕಥೆ.

ದೇವರೂ ಒಂಟೆಯೂ.

ಒಂದು ಕಾಲದಲ್ಲಿ ಒಂದು ಒಂಟೆಯು ಅತಿ ಆಶೆಯಾಗಿ ದೇವರಿಗೆ ಬೇಡಿ ಕೊಂಡದ್ದು: ಏ ಸ್ವಾಮಿ, ಸರ್ವವು ನಿರ್ಮಾಣ ಮಾಡಿ ನಮ್ಮ ಪಶುಜಾತಿಗೆ ಕೋಡುಗಳ ಕೊಟ್ಟಿದ್ಧಿ, ನನಗ್ಯಾಕೆ ದಯ ಮಾಡಲೊಲ್ಲಿ? ಕೋಡುಗಳು ಇದ್ದರೆ ಶತ್ರುಗಳ ಪರಾಜಯ ಮಾಡಿ ಕೊಂಡು ಇದ್ದೇನು ಎಂದು ಬಿನ್ನಹ ಮಾಡಿ ಕೊಳ್ಳಲಿಕ್ಕೆ, ದೇವರು ನಿರೂಪಿಸಿದನು: ಏನಂದರೆ, ಎಲೇ ಮೂರ್ಖನೆ, ಮುಂದಾಗಿ ವಿಚಾರ ಮಾಡಿ ಕೊಟ್ಟಿದ್ದೇನೆ, ಅದರಲ್ಲೆ ನೀನು ತೃಪ್ತನಾಗಿ ಇರ ಬೇಕು, ಹಾಗಿಲ್ಲದೆ ನಾನು ಎರಡನೆಯವರಿಗೆ ಕೊಟ್ಟಿದ್ದೇನೆಂಬುವ ಮಾತು ಮುಂದೆ ಮಾಡಿ ಕೊಂಡು ಬೇಡುತ್ತಿಯಲ್ಲಾ, ಇಂಥಾ ದಡ್ಡ ಪ್ರತಿಷ್ಟೆ ಯಾರು ಕೊಟ್ಟರು? ನಿನ್ನ ಕಿವಿ ಉದ್ದವಾಗೆವಲ್ಲಿ, ಅವು ಗಿಡ್ಡವಾಗಲಿ, ಮತ್ತು ನೀನು ಈ ಹೊತ್ತಿನಿಂದ ಲದ್ದಿ ಹೊತ್ತಿರು.

ತಾತ್ಪರ್ಯ.

ದೇವರು ಈ ಜಗತ್ತಿನಲ್ಲಿ ತಮ್ಮ ತಮ್ಮಗೆ ನೇಮಕ ಮಾಡಿ ಕೊಟ್ಟಿರುವಂಥಾದ್ದೇ ಚೆಲೋದು ಅಂತ ತಿಳಿಯ ಬೇಕು. ಅದಕ್ಕೆ ಅನ್ಯಥಾ ಮಾಡ ಬೇಕೆಂತ ಸಂಕಲ್ಪಿಸುವವನು ಸಣ್ಣ ಲಕ್ಷ್ಯದವನೂ ಹುಚ್ಚನೂ ಎಂದೆನ್ನ ಬೇಕು. ಅಂಥವನು ಮಾಡಿದ ಉದ್ಯೋಗ ವ್ಯರ್ಥವಾಗಿ ಹೋಗುತ್ತದೆ. ಮತ್ತು ಅವನು ಮೇಲಾಗಿ ದುಖ್ಖ ಪಡುವಂಥವನಾಗುತ್ತಾನೆ.

---

೧೨೧. ನೀತಿಕಥೆ.

ಲಾವಕ್ಕಿಯೂ ಅದರ ಪಿಳ್ಳಿಗಳೂ.

ಒಂದು ಬಿತ್ತಿದ ಹೊಲದ ಬೆಳೆಯೊಳಗೆ ಒಂದು ಲಾವಕ್ಕಿಯು ತನ್ನ ಎಳೇ ಪಿಳ್ಳಿಗಳ ಇಟ್ಟು ಕೊಂಡು ಸುಖದಿಂದ ಇರಲಾಗಿ, ಹೊಲದ ಬೆಳೆಯು ಕೊಯ್ಯುವ ಹದಕ್ಕೆ ಬಂತು. ಆಗ ಐಯ್ಯೋ ಸ್ವಾಮಿ ನನ್ನ ಕೂಸುಗಳಿಗೆ

ರೆಕ್ಕೆ ಬಲಿಯುವ ಪರಿಯಂತರಕ್ಕು ಈ ಸ್ಥಳ ಬಿಟ್ಟು ಯಾವ ಕಡಿಗೂ ಹೋಗಲಿಕ್ಕೆ ಬಾರದು, ಹ್ಯಾಗೆ ಮಾಡಲಿ ಎಂದು ಲಾವಕ್ಕಿಯು ಚಿಂತಿ ಮಾಡುತ್ತಿತ್ತು. ಅದೇ ಸಮಯದಲ್ಲಿ ಹೊಲದ ಧಣಿಯು ಬಂದು ಹೊಲ ಹಂಪವಾದ್ದು ಕಂಡು ತನ್ನ ಮಗನಿಗೆ ಹೇಳುತ್ತಾನೆ: ಎಲೋ ತಮ್ಮನೆ, ನಾಳಿನಿಂದ ಕೂಲಿಯವರನ್ನು ಹಾಗೂ ನೆರೆಹೊರೆಯವರನ್ನೂ ಬೀಗರನ್ನೂ ಬಿಜ್ಜರನ್ನೂ ಅಣ್ಣ ತಮ್ಮಂದರ ಬಳಗವನ್ನೂ ಕರಕೊಂಡು ಬಂದು ಕೊಯ್ಯಲಿಕ್ಕೆ ಹಚ್ಚು, ಹೀಗಂದದ್ದನ್ನು ಈ ಪಿಳ್ಳಗಳು ಕೇಳಿ ಬಹಳ ಚಿಂತೆಯಿಂದ ತಮ್ಮ ತಾಯಿಯ ಮುಂದೆ ವರ್ತಮಾನವನ್ನು ಹೇಳಿದವು. ಲಾವಕ್ಕಿಯು ಮಕ್ಕಳಿಗೆ: ಯಾಕೆ ಘಾಬರಾಗುತ್ತೀರಿ, ಅವರು ಆಡಿ ಆಡಿದ ಮಾತುಗಳನ್ನು ನನ್ನ ಮುಂದೆ ತಿಳಿಸಿರಿ ಎಂದು ಹೇಳಿತು. ಇತ್ತಲಾಗಿ ಕೂಲಿಯವರು ಕೂಡೋದಿಲ್ಲ ಅಂತ ಮಗನು ತನ್ನ ತಂದೆಯ ಮುಂದೆ ಹೇಳಲಾಗಿ ಹಾಗಾದರೆ ಬೀಗರನ್ನೆ ಕರತಂದು ಹಚ್ಚು, ನಾಲ್ಕು ದಿವಸದೊಳಗೆ ಕೊಯ್ದು ಕೊಟ್ಟಾರು ಎಂದು ತಂದೆ ಹೇಳಿದನು. ಆ ಮಾತು ಆ ಪಿಳ್ಳಗಳು ಕೇಳಿ ತಮ್ಮ ತಾಯಿಗೆ ಹೇಳಿದವು. ಆಗ್ಯೆ ಬೀಗರು ಬಂದರೂ ಚಿಂತೆ ಇಲ್ಲ, ನೀವು ಅಂಜ ಬೇಡಿರಿ, ಹೊಲದ ಧಣಿ ಆಡಿ ಆಡಿದ ಮಾತುಗಳನ್ನು ನನ್ನ ಮುಂದೆ ತಿಳಿಸಿರಿ ಎಂದು ಹೇಳಿ ಲಾವಕ್ಕಿ ಸಂಚಾರಕ್ಕೆ ಹೋಯಿತು. ಆಗ ಮಗನು: ಅಪ್ಪನೇ, ಬೀಗರಿಗೂ ಕೂಡೋದಿಲ್ಲ ಅಂತ ಹೇಳಲಾಗಿ, ತಂದೆಯು ಎರಡು ಕುಡುಗೋಲು ತಕ್ಕೊಂಡು ಬಾ, ನಾವೇ ಕೊಯ್ದು ಹಾಕೋಣ ಎಂದು ಹೇಳಿ ಕುಡುಗೋಲು ತರಲಿಕ್ಕೆ ಮನೆಗೆ ಹೋದನು. ಈ ವೃತ್ತಾಂತವನ್ನು ಆ ಪಿಳ್ಳಗಳು ತಮ್ಮ ತಾಯಿಯ ಮುಂದೆ ವಿಸ್ತಾರ ಮಾಡಿ ಹೇಳಲಾಗಿ, ಆ ಲಾವಕ್ಕಿಯು ಬಹಳ ಚಿಂತೆಗೊಂಡು, ಇನ್ನು ಮೇಲೆ ಮನೆಯಜಮಾನ ತಾನೇ ಕೈ ಹಚ್ಚಿ ಕೊಯ್ಯಲಿಕ್ಕೆ ಆರಂಭ ಮಾಡಿದನಂದರೆ ಏನೇನು ಉಳಿಸಲಿಕ್ಕಿಲ್ಲ, ಇನ್ನು ನಾವು ಇಲ್ಲಿ ಇರ ಬಾರದೆಂದು ತನ್ನ ಮಕ್ಕಳ ಕಟ್ಟಿ ಕೊಂ

ಡು ಮತ್ತೊಂದು ಸ್ಥಳಕ್ಕೆ ಹೋಯಿತು. ಮರುದಿವಸ ಹೊಲದಾತನು ತನ್ನ ಮಗನ ಕೂಡಿ ಕೊಂಡು ಹೊಲವನ್ನು ಕ್ರೊಯಿದು ಹಾಕಿದರು.

ತಾತ್ಪರ್ಯ.

ದಾವ ಕೆಲಸವಾದರೂ ತಾನು ಸ್ವಥಾ ಮಾಡ ಬೇಕೇ ಹೊರ್ತು ಬೀಗರು, ಬಂಧುಗಳು, ನೆರೆಹೊರೆಯುವರು ಮಾಡಿ ಕೊಟ್ಟಾರು ಎಂದು ನೆಚ್ಚಿದರೆ ಆ ಕೆಲಸ ನೆಟ್ಟಗೆ ಆಗೋದಿಲ್ಲ. ಅವರ ಭರವಸ ಹಿಡಿದು ಮೂರ್ಖನಂತೆ ಅವರ ದಾರಿ ನೋಡಿ ಕುದ್ದು ಕೊಳ್ಳುತ್ತ ಕೂಡ್ರೋಣ, ಮೋಸ ಹೊಂದಿದೆನಲ್ಲಾ ಎಂದು ಸಂತಾಪ ಬಡೋಣ, ಇಷ್ಟು ಮಾತ್ರ ಆಗುತ್ತದೆ. ಇದರ ದೆಶೆಯಿಂದ ತನ್ನ ಕೆಲಸವೆ ತನಗೆ ಮುಖ್ಯವಾದದ್ದು ಅಂತ ತಿಳುಕೊಂಡು ತನ್ನಲ್ಲೇ ತನ್ನ ಭರವಸ ಇಟ್ಟು ಕೊಂಡು ಇರುವಂಥವನ ಕೆಲಸ ಕೈಗೂಡಿ ಬರುತ್ತದೆ. ಒಂದು ವೇಳೆ ಸಿದ್ಧಿಗೆ ಬಾರದಾದರೆ ಮನಸ್ಸಿಗೆ ಸಮಾಧಾನ ಮಾಡಿ ಕೊಳ್ಳಲಿಕ್ಕೆ ಬರುತ್ತದೆ, ಹ್ಯಾಗಂದರೆ ನಾನು ನನ್ನಿಂದ ಪ್ರಯತ್ನ ಮಾಡಲಿಕ್ಕೆ ಆಲಸ್ಯ ಮಾಡಲಿಲ್ಲ, ಮತ್ತೊಬ್ಬರ ಭರವಸ ಮಾಡಿ ಸುಮ್ಮನೆ ಕೂತಿಲ್ಲ, ಹೀಗಾದರೂ ಕೆಲವಾಗಲಿಲ್ಲವಲ್ಲ, ಒಳ್ಳೇದು, ನನ್ನ ಕಡೆಗೆ ಶಬ್ದವೇನದೆ.

---

೧೩೨. ನೀತಿಕಥೆ.

ಕರೆ ಕಾಗಿಯೂ ಟಗರೂ.

ಒಂದಾನೊಂದು ಟಗರಿನ ಬೆನ್ನ ಮೇಲೆ ಕಾಗಿ ಕುಳಿತು ಕೊಂಡು ಕಾಕಾ ಎಂದು ಒದರಿ ಕೊಳ್ಳುತ್ತ ಉಪದ್ರ ಕೊಡಲಿಕ್ಕೆ ಹತ್ತಿತು. ಆಗ ಟಗರು — ಎಲೋ ದುಃಖಕಾರಿ, ಸುಮ್ಮಗೆ ಯಾಕೆ ಕೂಡ್ರುವಲ್ಲಿ, ಗೊಂದಲ ಯಾಕೆ ಮಾಡುತ್ತೀ, ಎಲೇ ನಾನು ಸ್ವಲ್ಪ ಹುಲಿಯೇ ಅಥವಾ ನಾಯಿಯೇ ಆಗಿದ್ದರೆ ನೀನು ಇಷ್ಟು ಉಪದ್ರ ನನಗೆ ಮಾಡುತ್ತಿದ್ದ್ಯಾ ಎನ್ನಲಾಗಿ, ಆ ಕಾಗಿಯು ಅಂದದ್ದು: ಎಲೋ ನೀನು ಅಂಬುವ ಮಾತು ಖರೇವು, ಇದ್ದದ್ದೆ ಹೇಳಿದಿ, ನೀನು ಅದಲ್ಲವಂತ ತಿಳದು ನಾನು ಹೀಗೆ ವರ್ತಿಸಿದೆನು, ಶಿಟ್ಟಿನವರಾಗಿ ಮುಯ್ಯಿಗೆ ಮುಯ್ಯಿ ಮಾಡುವಂಥವರ ಪಾಳಿ

ಇದ್ದಲ್ಲಿ ಸಹ ನಾನು ನಿಂದಿರುವದಿಲ್ಲ, ನಿನ್ನ ಹಾಗೆ ದೈನ್ಯವುಳ್ಳವರು, ದಿಕ್ಕಿಲ್ಲದವರು, ಇವರಿಂದ ನನಗೇನು ಹೆದರಿಕೆ ಇಲ್ಲ ಅಂತ ತಿಳದು ಅವರಿಗೆ ಉಪದ್ರ ಮಾಡುತ್ತೇನೆ.

ತಾತ್ಪರ್ಯ.

ಬಹಳವಾಗಿ ಜನರಿಗೆ ಈ ಕರೆಯ ಕಾಗಿಯ ಹಾಗೆ ಸ್ವಭಾವವು ಇರುತ್ತದೆ. ಆದರೆ ಅಪಕಾರಕ್ಕೆ ಅಪಕಾರವನ್ನು ಮಾಡುವಂಥವರ ಹಾದಿಗೆ ಮಾತ್ರ ಅವರು ಹೋಗೋದಿಲ್ಲ. ದಿಕ್ಕಿಲ್ಲದೆ ನಿರ್ಬಲವಾದಂಥವರಿಗೆ ಉಪದ್ರ ಮಾಡಿ ತಮ್ಮ ಮನಸ್ಸಿಗೆ ಸಮಾಧಾನ ಮಾಡಿ ಕೊಳ್ಳುತ್ತಾರೆ. ತಮ್ಮ ಪ್ರಾಯಶ್ಚಿತ್ತ ಆಗದ್ದಲ್ಲಿ ಉಪದ್ರ ಮಾಡ ಬೇಕು, ಆಗುವಲ್ಲಿ ಮಾಡ ಬಾರದು ಎಂಬದು ಮಾತ್ರ ಅವರಿಗೆ ತಿಳಿಯುತ್ತದೆ.

---

೧೭೩. ನೀತಿಕಥೆ.

ಒಕ್ಕಲಿಗನೂ ಅವನ ಗತಿಯೂ.

ಒಬ್ಬ ಒಕ್ಕಲಮಗನು ತನ್ನ ಹೊಲದಲ್ಲಿ ರಂಟೆ ಹೊಡೆಯುತ್ತಿರುವ ಸಮಯದಲ್ಲಿ ರಂಟೆಮೊನಿಗೆ ದ್ರವ್ಯ ತುಂಬಿದ ಹಂಡೆ ತಾಕಿ ಮೇಲಕ್ಕೆ ಬಂತು. ಅದನ್ನ ಕಂಡು ಬಹಳ ಸಂತೋಷಿತನಾಗಿ ಕಣ್ಣಲ್ಲಿ ಆನಂದಬಾಷ್ಪ ತುಂಬಿ ಆ ಹೊಲವನ್ನು ಸ್ತೋತ್ರ ಮಾಡಿ, ಎಲೆ ತಾಯಿಯೇ, ನನ್ನ ಬಡವನ ದಾರಿದ್ರ ನೋಡಿ ವಿಭಿನ್ನ ಮಾಡಿದಿಯಲ್ಲ, ನಿನ್ನ ಸಮಾನ ದಯಾಳುಗಳು ದಾರು ಇದ್ದಾರೆ ಎಂದು ಕೊಂಡಾಡುವಷ್ಟರಲ್ಲಿ ಅವನ ಗತಿ ಮನುಷ್ಯಾಕೃತಿಯಾಗಿ ಬಂದು, ಎಲಾ ಮೂರ್ಖನೇ, ನೀನು ಸುಮ್ಮ ಸುಮ್ಮನೆ ಹೊಲದ ಸ್ತೋತ್ರ ಮಾಡುತ್ತಿಯಲ್ಲ, ನೀನು ಮೊದಲಿನ ಹಾಗೆ ಇದ್ದರೆ ನನ್ನ ಹೆಸರಲ್ಲಿ ಅಳುತ್ತಿದ್ದಿಯಲ್ಲ ಅಂದಿತು.

ತಾತ್ಪರ್ಯ.

ಒಂದು ವರಿ ಕೆಲಸ ಭೋಗಿಸಿ ಎಲ್ಲಾ ಚೆಲೋದಾಯಿತು ಅಂದರೆ ಆ ಕೆಲಸದಲ್ಲಿ ಇದ್ದವರನ್ನೆ ನೆನಸುತ್ತಿರ ಬೇಕು. ತನ್ನ ಕೆಲಸ ಕೆಟ್ಟ ಬಳಿಕ ತನ್ನ ಗತಿ ಹೀಗೆಂದು ಶಬ್ದ ಹೊರಿಸುತ್ತಿರ ಬೇಕು. ಹೀಗೆ ಲೋಕದಲ್ಲಿ ರೂಢಿ ಬಿದ್ದದೆ.

---

೧೭೪. ನೀತಿಕಥೆ.

ಕೋಳಿಯೂ ನರಿಯೂ.

ಒಂದಾನೊಂದು ದಿವಸ ಬೆಳಗು ಮುಂಜಾನೆ ಒಂದು ನರಿಯು ಒಬ್ಬ ಗೃಹಸ್ಥನ ಮಾಳಿಗೇ ಮೇಲೆ ಬಂದು ಅಲ್ಲಿ ಹಾಕಿದ ಹಗ್ಗದ ಬಲೆಯೊಳಗೆ ಶಿಕ್ಕು ಬಳಲುತ್ತಿರಲಾಗಿ ಒಂದು ಕೋಳಿಯು ದೂರದಿಂದ ಕಂಡು ಮೆಲ್ಲಗೆ ಅದರ ಸಮೀಪಕ್ಕೆ ಬಂದು ಆ ನರಿಯ ಕಡೆಗೆ ತಿರಿಗಿ ನೋರಿ ನೋಡುತ್ತಿತ್ತು. ಆ ಕೋಳಿಯ ಕಂಡು ನರಿಯು ಕರದು ಮಾತಾಡುತ್ತದೆ: ಎಲಾ ಅಂಣಾ, ನನ್ನ ಮೇಲೆ ಉಪಕಾರ ಮಾಡ ಬಾರದೆ, ಏನಂದರೆ, ಒಂದು ಚೂರಿ ತಂದು ಈ ಬಲೆಯನ್ನು ಕೊಯ್ಯಿ, ಇಲ್ಲದಿದ್ದರೆ ಈ ವರ್ತಮಾನ ದಾರ ಮುಂದು ಹೇಳ ಬೇಡ, ನನ್ನಿಂದ ನಾನಾದರೂ ಕತ್ತರಿಸಿಕೊಂಡು ಹೋದೇನು ಎಂಬೋಣ, ಆ ಕೋಳಿಯು ಗುಪ್ತಮುಖವಾಗಿ ತಿರಿಗಿ ಬಂದು ತನ್ನ ಮನೆಯವರ ಮುಂದೆ ಹೇಳಿತು. ಅವರು ಆಶ್ಚರ್ಯಪಟ್ಟು ಓಡಿ ಬಂದು ನೋಡಲಾಗಿ, ನರಿಯು ತನ್ನ ಬಾಯ್ಯಿಂದ ಬಲೆಯನ್ನು ಕತ್ತರಿಸುತ್ತಿತ್ತು. ಅದು ಕಂಡು ಅವರು ನರಿಗೆ ಪ್ರಾಯಶ್ಚಿತ್ತ ಮಾಡಿದರು.

ತಾತ್ಪರ್ಯ.

ದುಷ್ಟರಿಗೆ ಉಪಕಾರವನ್ನು ಮಾಡ ಬಾರದು; ಇದನ್ನು ಮೀರಿ ಸಂಕಟಸಮಯದಲ್ಲಿ ಉಪಕಾರ ಮಾಡ ಬೇಕೆಂಬೋದು ನೀತಿ ಉಂಟು ಖರೆ. ಆದರೆ ಆ ನೀತಿಯು ಮೇಲೆ ಕಳ್ಳರಿಗೆ ಸಹಾಯು ಮಾಡ ಬೇಕಲ್ಲ, ಹೀಗೆ ಆಗುತ್ತದೆ. ಆದರೆ ಹಾಗಲ್ಲ, ದುಷ್ಟರಿಗೆ ದುಷ್ಟರು, ಕಳ್ಳರಿಗೆ ಕಳ್ಳರು, ಸಹಾಯ ಮಾಡ ಬೇಕೇ ಹೊರ್ತು ಉಳಿದಾದವರಿಗೆ ಆ ನೀತಿ ಕೆಲಸದಲ್ಲ.

೧೨೫. ನೀತಿಕಥೆ.

ಬರೆ ಕುದುರೆಯೂ ಹೊರೆ ಹೊತ್ತ ಕತ್ತೆಯೂ.

ಒಂದು ಕುದುರೆಯು ಹೊರೆ ಇಲ್ಲದೆ ಒಂದು ಹೊರೆ ಹೇರಿದ ಕತ್ತೆಯ ಸಂಗಡ ಬರುತ್ತಿತ್ತು. ಆ ಕತ್ತೆ ಹೊತ್ತು ನಡಿಯಲಾರದೆ ತ್ರಾಣಗುಂದಿ ನಿಂದಿರಲಾಗಿ, ಅದರ ಧಣಿಯು ಜರಲು ತಕ್ಕೊಂಡು ಹಿಂದೆ ಹಿಂದೆ ಹೊಡಿಯುತ್ತ ಬರುತ್ತಿದ್ದನು. ಆ ಸಮಯದಲ್ಲಿ ಈ ಕತ್ತೆಯು ಕುದುರೆಗೆ ಹೇಳಿ ಕೊಂಡಿತು: ಏ ಕುದುರೆಯೇ, ನಾನಂತು ಹೊರೆ ಹೊರಲಾರದೆ ದಣಿದೆನು, ನನ್ನ ಹೊರೆ ನೀನು ಸ್ವಲ್ಪ ತಕ್ಕೊಳ್ಳ ಬಾರದೆ? ಬಹಳ ಪ್ರಕಾರ ವಿನಯಪರನಾಗಿ ದೈನ್ಯ ಸ್ವರದಿಂದ ಹೇಳಿ ಕೊಂಡಾಗ್ಯೂ ಚಿತ್ತಕ್ಕೆ ತಾರದೆ ತಾತ್ಸರ ಮಾಡಲಾಗಿ, ಆ ಕತ್ತೆಯ ಧಣಿಯು ಮೇಲಿಂದ ಮೇಲೆ ಬಡಿಗಿ ತಕ್ಕೊಂಡು ಬಡ ಬಡದು ನಡಿಸುತ್ತಿರಲಾಗಿ, ಆ ಕತ್ತೆಯು ನೆಲಕ್ಕೆ ಬಿದ್ದು ಏನು ಪ್ರಯತ್ನ ಮಾಡಿದ ಕಾಲಕ್ಕು ಸಾಮರ್ಥ್ಯ ಹುಟ್ಟದೆ ಸತ್ತು ಹೋಯಿತು. ಅಲ್ಲಿಂದ ಆ ಧಣಿಯು ಕತ್ತೆಯ ತೊಗಲು ತರೆಸಿ ಆ ಕತ್ತೆಯ ಮೇಲೆ ಹೇರಿದ ಹೊರೆ ಸಹಿತ ಈ ಕುದುರೆಯ ಮೇಲೆ ಹೇರಿ ಕೊಂಡು ನಡದನು. ಕುದುರೆ ಸ್ವಲ್ಪವಾದರೂ ಉಪಕಾರ ಮಾಡದೆ ತನಗೆ ತಾನೇ ಬಹಳ ಶ್ರಮ ಮಾಡಿ ಕೊಂಡಿತು.

ತಾತ್ಪರ್ಯ.

ಒಬ್ಬರಿಗೊಬ್ಬರು ಉಪಯೋಗಕ್ಕೆ ಬೀಳದಿದ್ದರೆ ಇಬ್ಬರಿಗೂ ಕೆಡಕು ಉಂಟು. ಇಂಥಾ ಜನರಿಗೆ ಅಲ್ಪ ದೃಷ್ಟಿಯವರು ಎನ್ನ ಬೇಕು. ಒಬ್ಬರಿಗೊಬ್ಬರು ಸಾಹಿತ್ಯ ಮಾಡುತ್ತಾರಂತ ಸೃಷ್ಟಿಯಲ್ಲಿ ವ್ಯವಹಾರ ನಡಿಯುತ್ತದೆ. ಈ ಮಾತು ಅಗದಿ ಆಗದೆ ಇದ್ದಲ್ಲಿ ಎಲ್ಲರಿಗೂ ಸ್ವಾರ್ಥವೆಂಬೋದು ಮುಣುಗಿ ಹೋದೀತು.

---

೧೩೬. ನೀತಿಕಥೆ.

ತೋಳವೂ ನರಿಯೂ.

ಒಂದು ತೋಳವು ಗುದ್ದಿನೊಳಗೆ ತಾನು ತಿನ್ನ ತಕ್ಕ ಸಾಹಿತ್ಯವನ್ನು ತುಂಬಿ ಕೊಂಡು ಸ್ವಸ್ಥದಿಂದ ಇರುತ್ತಿರಲಾಗಿ, ಒಂದು ನರಿಯು ಅದರ ಭೇಟಿಗೆ ಬಂತು. ಆ ನರಿ ಮನಸ್ಸಿನೊಳಗೆ, ಅದರ ಸಾಹಿತ್ಯವನ್ನೆಲ್ಲಾ ತನ್ನ ದೃಷ್ಟಿಯಿಂದ ನೋಡ ಬೇಕೆಂದು ಯೋಚನೆ ಮಾಡಿತು. ಆದರೆ ತೋಳವು ತನ್ನ ಗುದ್ದಿನೊಳಗೆ ಕೂತು ಕೊಂಡು ಮಾತನಾಡುತ್ತದೆ: ಅಪ್ಪಾ, ನರಿಯೆ, ಈ ಹೊತ್ತಿಗೆ ದಯ ಮಾಡಿ ಹೋಗ ಬೇಕು, ನಿನ್ನ ಸಂಗಡ ಮಾತಾಡ ಬೇಕಾದರೆ ನನ್ನ ಮೈಯೊಳಗೆ ಸ್ವಸ್ಥವಿಲ್ಲ ಅಂಬೋಣ, ನರಿಯು ಬಹಳ ಧೂರ್ತವಾದದ್ದು, ಇದರ ಮನಸ್ಸಿನಲ್ಲಿ ಮೊದಲೆ ಸಂಶಯ ಇದ್ದೇ ಇತ್ತು; ಅದೇ ಖರೆ ಆಯಿತು. ಅದೇ ಸಮಯಕ್ಕೆ ನರಿಯು ಒಬ್ಬ ಕುರಿಕಾಯುವವನ ಬದೀಲಿ ಹೋಗಿ ಮಾತಾಡುತ್ತದೆ: ಏಯಪ್ಪ, ಇನ್ನು ಒಂದು ಕೆಲಸವದಲ್ಲ, ನಿನ್ನ ಕೈಯೊಳಗೆ ಒಂದು ಗುದಿಗಿ ತಕ್ಕೊಂಡು ಹೊರಟೆಯಂದರೆ ಒಂದು ಗುದ್ದಿನೊಳಗೆ ತೋಳ ಕೂತದೆ, ತೋರಿಸೇನು ಎನ್ನಲಾಗಿ, ಆ ಕುರುಬನು ಅದರಂತೆ ಬಂದು ಆ ತೋಳನ ಜೀವ ತಕ್ಕೊಂಡನು. ಆ ಮೇಲೆ ದುಷ್ಟ ನರಿಯು ತೋಳನು ಕೂಡಿ ಹಾಕಿದ ಸಾಹಿತ್ಯವನ್ನು ತಿಂದು ಬಿಟ್ಟಿತು. ಅದಕ್ಕೆ ಏನು ಬಹಳ ದಿವಸ ಹೋಗಲಿಲ್ಲ. ಒಂದು ದಿವಸ ಅದೇ ಹಾದಿಗುಂಟಾ ಆ ಕುರುಬನು ಹೋಗುತ್ತಿರಲಾಗಿ, ಆ ಗುದ್ದಿನೊಳಗೆ ಈ ನರಿಯನ್ನು ಕಂಡು ಹೊಡೆದು ಕೊಂದನು.

ತಾತ್ಪರ್ಯ.

ಅನ್ಯಾಯದಿಂದ ಎರಡನೆಯವರಿಗೆ ಘಾತ ಮಾಡಿ ತಾನು ಐಶ್ವರ್ಯ ಅನುಭೋಗಿಸ ಬೇಕೆಂಬ ಘಾತಕನು ಬಹಳ ದಿವಸವೇನು ಅನುಭೋಗಿಸೋದಿಲ್ಲ.

೧೭೭. ನೀತಿಕಥೆ.

ಚಿಗರಿಯೂ ದ್ರಾಕ್ಷೀ ಬಳ್ಳಿಯೂ.

ಒಂದು ಚಿಗರಿಗೆ ಬೇಟೆಗಾರನು ಬೆನ್ನು ಹತ್ತಿ ತಿರುಗುತ್ತಿರಲಾಗಿ ಓಡ ಓಡುತ್ತಾ ಹೋಗುವಾಗ್ಯೆ ಮಧ್ಯ ದ್ರಾಕ್ಷೀ ಬಳ್ಳಿ ಮೊರೆ ಆಯಿತು. ಚಿಗರಿಯು ದೃಷ್ಟಿಗೆ ಬೀಳಲಿಲ್ಲ. ಬೇಟೆಗಾರನು ಅದರ ಆಶೆಯನ್ನು ಬಿಟ್ಟು ಕೊಟ್ಟು ತಿರುಗಲಾಗಿ ಚಿಗರಿಯು ದ್ರಾಕ್ಷೆಯ ಯಲೆಯಲ್ಲಿ ತರತರದು ತಿಂಬೋಣ, ಆ ಶಬ್ದವನ್ನು ಬೇಟೆಗಾರನು ಕೇಳಿ ಅಗಳಾಡುತ್ತಿದ್ದ ಬಳ್ಳಿಯನ್ನು ಕಂಡು ನಿಂತು ನೋಡಿ ಭ್ರಾಂತಿಯಾಗಿ, ಮತ್ತು ದಾವ ಮೃಗ ಶೇರಿ ಕೊಂಡದೋ ಎಂಬ ಧೂರ್ತದಿಂದ ಒಂದು ಬಾಣವನ್ನು ಹೊಡದನು. ಆ ಬಾಣವು ಚಿಗರಿಗೆ ತಾಕಿ ಮೃತ ಹೊಂದಿ ಹೋಯಿತು. ಆಗ್ಯೆ ಚಿಗರಿಯು ತನಗೆ ತಾನೇ ಅಂದು ಕೊಂಡದ್ದು: ಎಲೋ ಕೃತಘ್ನನೆ, ನನಗೆ ಪ್ರಾಯಶ್ಚಿತ್ತವಾದದ್ದು ಚೆಲೋದಾಯಿತು, ನನ್ನ ಸಂಕಟಸಮಯಕ್ಕೆ ಕೆಲಸಕ್ಕೆ ಬಿದ್ದಂಥಾ ದ್ರಾಕ್ಷೀ ಬಳ್ಳಿಗೆ ನಾನು ಉಪಕಾರ ಮಾಡ ತಕ್ಕದ್ದಾಗಿತ್ತು, ಅದು ಬಿಟ್ಟು ಉಪದ್ರ ಮಾಡಿದೆ.

ತಾತ್ಪರ್ಯ.

ಕೃತಘ್ನುತ್ವ ಎಂಬ ದೋಷ ಎಲ್ಲಾ ದೋಷಗಳಿಗೂ ಅರಸ ಇದ್ದ ಹಾಗದೆ. ಹಿತವನ್ನು ಮಾಡಿದಂಥವರಿಗೆ ತಿರಿಗಿ ಉಪದ್ರ ಮಾಡುವ ಪ್ರಾಣಿ ಉಳಿದ ಜನರಿಗೆ ಉಪದ್ರ ಮಾಡುವದರಲ್ಲಿ ಹಿಂದೆ ಮುಂದೆ ಯಾಕೆ ನೋಡ್ಯಾನು. ಇದರಿಂದ ಕೃತಘ್ನನಾದನಂದರೆ ಅವನ ದುಷ್ಟತನಕ್ಕೆ ತೀರಗಡಿ ಆಯಿತು.

---

೧೭೮. ನೀತಿಕಥೆ.

ಹಾಳಿಹದ್ದೂ ಒಕ್ಕಲಿಗನೂ.

ಒಂದು ಹಾಳಿಹದ್ದು ಪಾರಿವಾಳದ ಬೆನ್ನ ಹತ್ತಿ ಆಕಾಶದಲ್ಲಿ ತಿರುಗುತ್ತ ಇರಲಾಗಿ, ಒಬ್ಬ ಒಕ್ಕಲಮಗನು ತನ್ನ ಹೊಲದೊಳಗೆ ಬಲೆ ಹಾ

ಕಿದ್ದನು. ಹದ್ದು ಹೋಗಿ ಆ ಬಲೆಯೊಳಗೆ ಶಿಕ್ಕು ಬಿಪಿಸಿ ಕೊಳ್ಳ ಬೇಕೆಂದು ತನ್ನ ರೆಕ್ಕೆಗಳ ಪಸರಿಸಿ ಥಡಬಡವೆಂದು ಸಪ್ಪಳ ಮಾಡುತ್ತಿರಲಿಕ್ಕೆ, ಆ ಒಕ್ಕಲಿಗನ ಆಳುಮಗ ಈ ಶಬ್ದವನ್ನು ಕೇಳಿ ಸಮೀಪಕ್ಕೆ ಬಂದು ಹಿಡಿಯುತ್ತಿರಲಾಗಿ, ಹಾಳಿಹದ್ದು ಬಹಳ ಪ್ರಕಾರ ಆ ಗೃಹಸ್ಥಗೆ ದೈನ್ಯದಿಂದ ಬೇಡಿಕೊಳ್ಳುತ್ತದೆ; ಏಯಪ್ಪ, ದಯೆಯುಳ್ಳ ಮಹಾರಾಯನೇ, ನನ್ನ ಪ್ರಾಣದಾನವನ್ನು ಕೊಡ ಬಾರದೆ, ನಿನಗೆ ಪುಣ್ಯ ಬಂದೀತು, ಈ ಪಾರಿವಾಳನ ಸಹವಾಸದ ದುಸಕ್ಕೆ ಶಿಕ್ಕಿದೆನು ಎನ್ನಲಾಗಿ, ಆ ಆಳುಮಗನು, ಎಲೋ ನಿನ್ನ ಮಾತು ಎಂಥಾದು, ಆ ಪಾರಿವಾಳದ ಹೆಸರು ಯಾಕೆ ತೆಗಿಯುತ್ತಿ ಎಂದು ಶಿಟ್ಟಿಗೆ ಬಂದು ಹದ್ದಿನ ಕುತ್ತಿಗೆ ಮುರಿದು ಹಾಕಿದನು.

ತಾತ್ಪರ್ಯ.

ಮೊದಲೆ ಪರರಿಗೆ ಉಪದ್ರ ಮಾಡೋಣವೆ ದೋಷ. ಅದಲ್ಲದೆ ದೊಡ್ಡವರಿದಿರಿಗೆ ಎರಡನೆಯವರ ಮೇಲೆ ಶಬ್ದ ಇಟ್ಟು ತನ್ನ ದೋಷ ಮುಚ್ಚಿ ಕೊಂಡೇನಂದರೆ ಆ ವ್ಯಥೆ ಸಣ್ಣವರಿಗೂ ದೊಡ್ಡವರಿಗೂ ಕೂಡೆ ಸಹನಾಗುವದಿಲ್ಲ. ತಾನು ದೋಷಿಯಾಗುವಂಥಾದ್ದು ಬೇರೆ ತಪ್ಪೋದಿಲ್ಲ.

---

೧೩೯. ನೀತಿಕಥೆ.

ಹೆಣ್ಣುಮುಂಗವೂ ಅದರ ಎರಡು ಮರಿಗಳೂ.

ಒಂದಾನೊಂದು ಹೆಣ್ಣುಮುಂಗದ ಹೊಟ್ಟೇಲಿ ಎರಡು ಮರಿಗಳು ಹುಟ್ಟಿದ್ದವು. ಅದರೊಳಗೆ ಒಂದು ಮರಿಯ ಮೇಲೆ ಬಹಳ ಪ್ರೀತಿ ಮಾಡಿ ಎದಿಗೆ ಅವಚಿ ಕೊಂಡು ತಿರುಗುತ್ತ ಇರಲಾಗಿ, ಒಬ್ಬ ಬೇಟೆಗಾರನು ಆ ಮುಂಗನ್ನ ಹಿಡಿಯ ಬೇಕೆಂದು ಬೆನ್ನು ಹತ್ತೋಣ, ಪ್ರೀತಿಯ ಮರಿ ಅವಚಿ ಕೊಂಡು ಅತ್ತ ಇತ್ತ ತಿರುಗುತ್ತ ಇತ್ತು; ಎರಡನೇ ಮರಿಯು ಅದರ ಬೆನ್ನ ಹತ್ತಿ ಹಾಗೆ ತಿರುಗುತ್ತಿತ್ತು; ಎತ್ತಿ ಕೊಂಡ ಮರಿಯು ಆ ಕಲ್ಲಿಗೆ

ಈ ಕಲ್ಲಿಗೆ ಹಾದು ತಲೆ ಒಡದು ಸತ್ತು ಹೋಯಿತು; ಪ್ರೀತಿ ಇಲ್ಲದ ಮರಿಯು ಬದುಕಿತು.

ತಾತ್ಪರ್ಯ.

ಬಹಳ ಅಂತಃಕರಣದಿಂದ ಜೋಪಾನ ಮಾಡುತ್ತಿರುವಂಥಾ ಹುಡುಗರು ಅಗಲುತ್ತಾರೆ. ಅವರು ತಮ್ಮಗೂ ತಮ್ಮ ತಂದೆ ತಾಯಿಗಳಿಗೂ ಸಂತೋಷ ಕೊಟ್ಟಾರು ಎಂಬುವದು ಆಗುವದಿಲ್ಲ. ಅಂಥಾ ವಿಪರೀತ ಅಂತಃಕರಣ ತಮ್ಮ ತಂದೆ ತಾಯಿಗಳಿಂದ ಅನುಭವಿಸದೆ ಬೆಳದ ಹುಡುಗರೆ ಬಹಳವಾಗಿ ಭಾಗ್ಯವಂತರಾಗುತ್ತಾರೆ.

---

೧೮೦. ನೀತಿಕಥೆ.

ಕರೆ ಮನುಷ್ಯನು.

ಕೆಂಪ ಜನದ ದೇಶದೊಳಗೆ ಒಬ್ಬ ಕರೆ ಮನುಷ್ಯನನ್ನು ತಕೊಂಡು ಹೋಗಿ, ಆ ಕೆಂಪ ಜನರು, ಇವನನ್ನ ಕೆಂಪಗೆ ತಮ್ಮಂತೆ ಮಾಡ ಬೇಕೆಂದು ಅವನಿಗೆ ಸಬಕಾರ, ಸೌಳು, ಸೀಗಿಕಾಯಿ ಮುಂತಾದ ಸಾಹಿತ್ಯ ಹಚ್ಚಿಸಿ ಬಚ್ಚಲೊಳಗೆ ಕೂಡ್ರಿಸಿದರು. ಕೂಲಿಮನುಷ್ಯರಿಂದ ನೀರು ತಂಬಿಗಿ ತುಂಬಿಸಿ ಒಬ್ಬನ ಕಡೆಯಿಂದ ನೀರಧಾರಾ ಬಿಡಿಸಿದರು; ಉಳಿಕೆ ಇಬ್ಬರೂ ಮೂರು ಮಂದಿಯಿಂದ ಇಟ್ಟೆಕಲ್ಲುಗಳಿಂದ ಮೈ ತಿಕ್ಕಿಸಿದರು. ಹೀಗೆ ಮುಂಜಾನೆ ಹಿಡದು ಸಂಜೆಯ ತನಕ ಮಾಡಿದರು. ಆದರೆ ತಿಕ್ಕಿ ತಿಕ್ಕಿ ತೊಳದ ಕಾಲಕ್ಕಾದರೂ ವರ್ಣ ಹೋಗಲಿಲ್ಲ. ಥಂಡಿ ಹತ್ತಿ ಆ ಮನುಷ್ಯ ಸತ್ತು ಹೋದನು.

ತಾತ್ಪರ್ಯ.

ಎಂದೆಂದಿಗೂ ಆಗದಂಥಾ ಕೆಲಸ ಆಗಲೇ ಬೇಕು ಅಂತ ದುರಾಲೋಚನೆ ಮಾಡಿ ಸುಮ್ಮನೆ ಕಷ್ಟ ಪಡುತ್ತಿರುವವನ ಕಾರ್ಯ ಹೊಟ್ಟು ಕುಟ್ಟಿ ಕೈಗೆ ಗುಳ್ಳಿ ಮಾಡಿ ಕೊಂಡ ಹಾಗೆ ಅದೆ.

---

೧೮೧. ನೀತಿಕಥೆ.

ನರಿಯೂ ವೃದ್ಧ ಸಿಂಹವೂ.

ಒಂದು ಸಿಂಹವು ಮುಪ್ಪಾಗಿ ತನ್ನ ಆಹಾರಕ್ಕಾಗಿ ಮೃಗಗಳನ್ನು ಹಿಡಿಯಲಿಕ್ಕೆ ಸಂಚಾರ ಮಾಡುವ ತ್ರಾಣ ಸಾಲದೆ ಬಿತ್ತು. ಆದರೆ ಆಲೋಚನೆ ಮಾಡಿ ಒಂದು ಉಪಾಯವನ್ನ ಕಂಡಿತು. ಏನಂದರೆ, ಒಂದು ಗವಿಯಲ್ಲಿ ಶೇರಿ ಕೊಂಡು ಬೇನೆಯವನ ಹಾಗೆ ಬಿದ್ದಿರ ಬೇಕು, ಹೀಗೆ ಮಾಡಲಾಗಿ ಮೃಗಗಳು ದರ್ಶನಕ್ಕಾಗಿ ಬಂದಾವು, ಅವನ್ನ ಹಿಡಿದು ತಿನ್ನಬೇಕು. ಈ ಯುಕ್ತಿ ನಡಿಸಿ ಕೆಲವು ದಿವಸ ಉಪಜೀವನ ಮಾಡಿ ಕೊಳ್ಳುತ್ತಾ ಬಂತು. ಬಹಳ ಮೃಗಗಳನ್ನು ಹೀಗೆ ತಿಂದ ಮೇಲೆ ನರಿ ಈ ಯುಕ್ತಿ ತಿಳುಕೊಂಡು ಸಿಂಹದ ಬಳಿಗೆ ಬಂದು ಗವಿಯ ಹೊರಗೆ ನಿಂತು ಅದರ ಕ್ಷೇಮಸಮಾಚಾರ ಕೇಳಿತು. ನನ್ನ ಮೈಯೊಳಗೆ ನೆಟ್ಟಗಿಲ್ಲವೆಂದು ಸಿಂಹ ಉತ್ತರ ಕೊಟ್ಟು, ನೀನು ದೂರ ಯಾಕೆ ನಿಂತಿ, ಒಳಗೆ ಏನು ಕಾರಣ ಬರುವದಿಲ್ಲವೆಂದು ನರಿಯನ್ನು ವಿಚಾರಿಸುವಾಗ, ಅದು — ಒಳಗೆ ಹೋದ ಅನೇಕ ಮೃಗಗಳ ಹೆಜ್ಜೆಗಳನ್ನು ನೋಡಿದ್ದೇನಲ್ಲದೆ ಹೊರಗೆ ಬಂದ ಮೃಗಗಳ ಹೆಜ್ಜೆ ಏನು ಕಾಣಲಿಲ್ಲ ಅಂದಿತು.

ತಾತ್ಪರ್ಯ.

ದಾವದಾದರೂ ಮಾತು ಪ್ರಚುರಕ್ಕೆ ಬಂದರಾಯಿತೇ, ಅದನ್ನು ವಿಚಾರ ಮಾಡಿದ ಹೊರ್ತು ಅದರಲ್ಲಿ ಬಿದ್ದರೆ ನಷ್ಟವೆ ಅದೆಯಲ್ಲಾ. ಜನರು ನಡದದ್ದೆ ತನ್ನ ಹಾದಿಯಂತ ಒಂದು ಪಕ್ಷಕ್ಕೆ ತಿಳುಕೊಂಡು ಹೋಗ ಬೇಕಾದರೆ ಜನರಷ್ಟು ಬಹಳವಾಗಿ ತಮ್ಮ ಬುದ್ಧಿಯಿಂದ ನಡಿಯುತ್ತಿರೋದಿಲ್ಲ. ಅವರೊಳಗೆ ಒಬ್ಬೊಬ್ಬರು ದಾರಾದರೂ ತಮ್ಮ ಸ್ವಾರ್ಥ ಸಾಧಿಸ ಬೇಕೆಂಬುವವರು ಇರುತ್ತಾರೆ. ಅವರು ಜನರನ್ನು ಒಲಿಸುತ್ತಾರೆ, ಅವರು ಒಲಿಯುತ್ತಾರೆ. ಅದರಿಂದ ಬಹು ಜನರು ಒಂದೇ ರೀತೀಲಿ ಮಾಡುತ್ತಾರೆ. ತಾನಾದರೂ ಹಾಗೆ ಮಾಡ ಬೇಕೆಂತೇನು ಅಲ್ಲ, ಅದರಲ್ಲಿ ತಾನು ಸಾರಾಸಾರ ತಿಳದು ನೋಡ ಬೇಕು. ಬುದ್ಧಿವಂತರಾದವರು ತಮಗೆ ಆಗ

ಲಿರುವ ಗಂಡಾಂತರಗಳನ್ನು ಗುರುತುಗಳಿಂದ ತಿಳಿದು ಕೊಂಡು ಉಪಾಯ ಮಾಡಿ ತಪ್ಪಿಸಿ ಕೊಳ್ಳುವರು.

---

೧೪೨. ನೀತೀಕಥೆ.

ಸರಾಯಿ ಕುಡಿಯುವ ಗಂಡನು.

ಒಬ್ಬಾನೊಬ್ಬನು ಬಹಳ ಸರಾಯಿ ಕುಡಿಯುತ್ತಿದ್ದ ಕುಡಕನಾಗಿದ್ದನು. ಆ ವ್ಯಸನ ತಪ್ಪಿಸ ಬೇಕೆಂದು ಅವನ ಹೆಂಡತಿಯು ಬಹು ಪ್ರಯತ್ನ ಮಾಡಿದಳು. ಅದಷ್ಟು ವ್ಯರ್ಥವಾಯಿತು. ಒಂದು ದಿವಸ ರಾತ್ರಿಯಲ್ಲಿ ನಿತ್ಯಪ್ರಕಾರ ಸರಾಯಿ ಕುಡಿದು ಬಹಳ ಅಮಲಾಗಿ ಎಚ್ಚರದಪ್ಪಿ ಬೀದಿಯೊಳಗೆ ಬಿದ್ದಿರಲಾಗಿ, ಹೆಂಡತಿ ಹೋಗಿ ಅವನ್ನ ಹೊತ್ತು ಕೊಂಡು ಸುಡಗಾಡಿನ ಬಯಲೊಳಗೆ ವೈದು, ಥಂಡಿ ಘಾಳಿ ಹತ್ತುವ ಹಾಗೆ ಕೆಡವಿ ಬಂದಳು. ಕಂಡ ಕಂಡವರಿಗೆ ಸತ್ತನೆಂಬುವ ಹಾಗೆ ತೋರುತ್ತಿತ್ತು. ಕೆಲವು ಹೊತ್ತಿನ ಮೇಲೆ ಹೆಂಡತಿಯು ಗಂಡಗೆ ಎಚ್ಚರ ಹುಟ್ಟಿದ್ದೀತು ಎಂದು ಬುತ್ತಿ ತಕ್ಕೊಂಡು ಹೋಗಿ, ಉಣ್ಣಿಸಿ ಕರಕೊಂಡು ಬರ ಬೇಕೆಂದು ಅಲ್ಲಿ ಹೋಗಿ ನಿಂತು ಮಾತಾಡಿಸಿದಳು. ಥಂಡಿಯಿಂದ ಎಚ್ಚರ ವೈಗೊಂಡು ಅವನು, ನೀನು ದಾರು ಎಂದು ಹೆಂಡತಿಯನ್ನು ಕೇಳಲಾಗಿ, ಆಕೆಯು — ನಾನು ಈ ಸುಡಗಾಡಿನಲ್ಲಿ ಸತ್ತವನ ಸೇವೆ ಮಾಡುವಾಕಿ, ಊಟ ತಕ್ಕೊಂಡು ಬಂದಿದ್ದೇನೆ ಎಂಬೋಣ, ಅವನು ಕಣ್ಣು ಮುಚ್ಚಿ ಕೊಂಡು, ಹಾಗಾದರೆ ನೀನು ನನ್ನಾಕಿಯಾಗಿದ್ದುಂಟಾದರೆ ಊಟದ ಮಾತು ಹಾಗಿರಲಿ, ನನಗೆ ತುಸ ಕುಡಿಯಲಿಕ್ಕೆ ಸರಾಯಿ ತಂದು ಕೊಡ ಬಾರದೆ ಎನ್ನಲಾಗಿ, ಈಕೆಯು ತನ್ನ ಹಣೆಹಣೆ ಬಡಕೊಂಡು—ಐಯ್ಯೋ ನನ್ನ ಭೋಗವೇ, ಇವಗೆ ಮಾಡುವ ಉಪಾಯ ಇದು ಒಂದು ಉಳಿದಿತ್ತು, ಇದು ವ್ಯರ್ಥವಾಗಿ ಹೋಯಿತು, ಇವನು ಈ ವ್ಯಸನವನ್ನು ಸಾಯದ ಹೊರ್ತು ಬಿಡೋದಿಲ್ಲ.

ತಾತ್ಪರ್ಯ.

ಯಾವದಾದರೂ ಒಂದು ಮಾತು ಯುಕ್ತವಲ್ಲವೆಂದು ತಿಳದರೆ ಬಿಡಲಿಕ್ಕೂ ಬಿಡಿಸಲಿಕ್ಕೂ ಕೂಡೇ ಬಂದೀತು. ವ್ಯಸನ ಅತಿ ಆದರೆ ಮಾತ್ರ ಬಿಡಿಸೋಣ ಬಿಡೋಣ ಎರಡೂ ಬಹಳ ಕಷ್ಟವಾಗುತ್ತದೆ.

---

೧೮೩. ನೀತಿಕಥೆ.

ಮನುಷ್ಯನೂ ಗುಂಗಾಡಿಯೂ.

ಒಬ್ಬ ಮನುಷ್ಯನು ಅಡವಿಯಲ್ಲಿ ಒಂದು ಉನ್ನತವಾದ ವೃಕ್ಷದ ನೆರಳಿಗೆ ಬರೆ ಮೈಯಲ್ಲಿ ತೊಡೆ ಕೆರ ಕೊಂಡು ಮಲಗಿರಲಾಗಿ, ಒಂದು ಗುಂಗಾಡಿಹುಳವು ಬಂದು ತೊಡೆ ಕಡಿದು ಉಪದ್ರ ಮಾಡಿತು. ಅವನು ತನ್ನ ಕೈಯಿಂದ ಥಪ್ಪನೆ ಹೊಡದನು. ಅದು ತಪ್ಪಿಸಿ ಕೊಂಡು ಪುನಹಾ ಪುನಃ ಬಂದು ಬಂದು ಕೂಡ್ರೋಣ, ಇವನು ತೊಡೆಯನ್ನು ಬಡಬಡದು ಅದನ್ನ ಹಾರಿಸಲಿಕ್ಕೆ ಹತ್ತಿದನು. ಈ ಪ್ರಕಾರ ಐವತ್ತಾವರ್ತಿ ಆಗೋಣ, ತೊಡೆಯು ಬಹಳವಾಗಿ ಬಾತು ಜೇರು ಮಾಡಿದ ಕಾಲಕ್ಕೂ ಆ ಹುಳ ಬಿಡದ್ದನ್ನು ಕಂಡು, ಅವನು ದೇವರಿಗೆ ಪ್ರಾರ್ಥನೆ ಮಾಡುತ್ತಾನೆ; ಹೆ ಸ್ವಾಮಿಯೇ, ನೀನು ಮಹಾ ಪರಾಕ್ರಮಿ, ಸಾಮರ್ಥ್ಯ ಉಳ್ಳಾತನು, ಈ ಗುಂಗಾಡೀ ಉಪದ್ರವ ಬಿಡಿಸ ಬಾರದೇ, ಇದರ ಜೀವವನ್ನು ತಕ್ಕೊಂಡು ನನ್ನಂಥಾ ಅನಾಥನನ್ನು ಉಳಿಸು ಎಂದು ಬೇಡಿ ಕೊಂಡನು.

ತಾತ್ಪರ್ಯ.

ಸಣ್ಣ ಕೆಲಸದ ದುಸಕ್ಕೆ ದೊಡ್ಡವನನ್ನು ಭಿಡಿಯಕ್ಕೆ ಹಾಕುವದು ದಡ್ಡತನ. ದೇವರು ಅಕ್ಷಯವಾದ ಸುಖವನ್ನು ಕೊಡುವಂಥವನು. ತನ್ನ ಕೈಲಾಗುವ ಸಣ್ಣ ಕೆಲಸದ ಸಂಕಟ ಆತನಿಗೆ ಹಚ್ಚ ಬಾರದು.

---

೧೪೪. ನೀತಿಕಥೆ.

ಎರಡು ಭಂಡಿಗಳು.

ಹಿತ್ತಾಳಿಯದು ಒಂದು, ಮಣ್ಣಿನದು ಒಂದು ಈ ಪ್ರಕಾರವಾದ ಎರಡು ಚಂಡಿಗಳನ್ನು ಒಬ್ಬ ಗೃಹಸ್ಥನು ಹೊಳೆಯ ಸಮೀಪದಲ್ಲಿ ಬಿಟ್ಟಿದ್ದನು. ಅವುಗಳ ಮೇಲೆ ಹೊಳೆ ಏರಿ ಬರುತ್ತಿತ್ತು. ಆಗ ಮಣ್ಣಿನ ಚಂಡಿಯು ಚಿಂತೆ ಮಾಡುತ್ತದೆ: ಈ ನದಿಯ ನೀರು ಬರುವ ಚಯಕ್ಕೆ ನಾನು ಓಡುವಾಗ್ಗೆ ಹಿತ್ತಾಳಿಯ ಚಂಡಿಗೆ ಸೊಂಕಿದೆ ಎಂದರೆ ಒಡದು ಹೋದೇನು ಎಂದು ಆಲೋಚನೆ ಮಾಡುತ್ತಿರುವದನ್ನು ಹಿತ್ತಾಳೀ ಚಂಡಿ ಕಂಡು ಹೇಳುತ್ತದೆ: ಎಲೋ ನೀನೇನು ಹೆದರ ಬೇಡ, ನಿನ್ನ ನಾನು ಸಂಬಾಳಿಸಿ ಕೊಂಡು ಹೋದೇನು ಎಂಬೋಣ, ಅಪ್ಪ ನೀನು ತುಸ ದೂರದಿಂದ ಮಾತಾನಾಡು ಕಂಡ್ಯಾ, ನನಗೆ ನದಿನೀರಿಗಿಂತಲು ನಿನ್ನಿಂದ ಹೆದರಿಕೆ ಆಗುತ್ತದೆ, ಯಾಕಂದರೆ ನನ್ನ ನೀನು ತಗಲಿದರೂ ನಿನ್ನ ನಾನು ತಾಕಿದರೂ ಸರಿಯೇ ನನ್ನ ನಾಶನಕ್ಕೆ ಕಾರಣವಾಗುತ್ತದೆ.

ತಾತ್ಪರ್ಯ.

ಬಡವನು ದೈವುಳ್ಳವರ ಸಂಗಡ ನೆಂಟುತನ ಅಥವಾ ಸಹವಾಸ ಮಾಡಿದರೂ ವಿಪತ್ತಿನೊಳಗೆ ಬಡವನೇ ಬೀಳುತ್ತಾನೆ. ದೈವುಳ್ಳವರ ನೆರ ಹೊರೆಯಲ್ಲಿ ಇದ್ದರೆ ಅವರು ಝುಗಳಾಡಿದರೂ ಅಥವಾ ತಾನು ಝುಗಳಾಡಿದರೂ ಅಂತು ಸರಿಯೇ ಎತ್ತಲಿಂದಾದರೂ ಕಡಿಗೆ ಕೇಡು ಬಡವಗೆ ಆಗುತ್ತದೆ.

---

೧೪೫. ನೀತಿಕಥೆ.

ನರಿಯೂ ಹುಲಿಯೂ.

ಒಬ್ಬ ಬೇಟೆಗಾರನು ಬಾಣ ಹೊಡೆಯುವದರಲ್ಲಿ ಬಹಳ ಸಮರ್ಥನಾಗಿದ್ದನು. ಅವನು ಒಂದಾನೊಂದು ದಿವಸದಲ್ಲಿ ಬೇಟೆ ಆಡೋದಕ್ಕೆ

ವನಕ್ಕೆ ಹೋಗಿ ಬಹಳ ಮೃಗಗಳ ಜೀವದಿಂದ ಹೊಡದನು. ಮತ್ತು ಕೆಲವು ಮೃಗಗಳ ಬೆನ್ನು ಹತ್ತಿದನು. ಅದು ನೋಡಿ ಎಲ್ಲಾ ಮೃಗಗಳು ಬೆದರಿ ಜಯದಿಂದ ಓಡಿ ಗುಡ್ಡ ಗಂಹರ ಗಿಡಗಳ ಮರೆಗೊಂಡು ಅಡಗಿ ನಿಂತಿರಲಾಗಿ ಒಂದು ಹುಲಿಯು ಧೈರ್ಯ ಮಾಡಿ ಮೃಗಗಳಿಗೆ ಅನ್ನುತ್ತದೆ: ಎಲೋ ಮೃಗಗಳಿರಾ, ನಾನು ಜೀವದಿಂದ ಇರುತ್ತಿರಲಿಕ್ಕೆ ನಿಮ್ಮಗೇನು ಹೆದರಿಕೆ, ಹೀಗಾದ ಮೇಲೆ ನಾನು ಇದ್ದದ್ದು ವ್ಯರ್ಥ, ನನ್ನಂಥಾ ಪರಾಕ್ರಮಿ ಇದ್ದ ಮೇಲೆ ನೀವೆಲ್ಲರು ಧೈರ್ಯಶಾಲಿಗಳಾಗಿ ಸಂತೋಷದಿಂದ ಇರ್ರಿ. ಹೀಗೆ ಹೇಳಿ ಆ ಹುಲಿಯು ತಾನು ಬಾಲವನ್ನು ಮಿಸಿಗ್ಯಾಡಿಸಿ ಕೊಳ್ಳುತ್ತ ಶಿಟ್ಟಿನಿಂದ ಕಾಲಿಲೆ ಭೂಮಿಯನ್ನು ಕೆದರಿ ಆರ್ಜಟ ಮಾಡುವಷ್ಟರೊಳಗೆ ಆ ಕಿರಾತ ಬಿಟ್ಟಂಥಾ ಒಂದು ಬಾಣ ಬಂದು ಕುಡಿಯಳ್ಳಿಗೆ ಬಡದು ನಟ್ಟು ಬಹಳ ಜೇರು ಮಾಡಿತು. ಆ ನೋವಿನಿಂದ ಚಂಚಲವುಳ್ಳದ್ದಾಗಿ ಆ ಹುಲಿಯು ಮಹಾ ಧ್ವನಿಯಿಂದ ಒದರಿ ಮತ್ತು ತನ್ನ ಬಾಯ್ಯಿಂದ ನಟ್ಟ ಬಾಣದ ಬುಡವನ್ನು ಹಿಡಿದು ಕಿತ್ತಿ ಕೊಳ್ಳುತ್ತಿತ್ತು. ನರಿಯು ಸಮೀಪಕ್ಕೆ ಬಂದು ಆಶ್ಚರ್ಯ ಮಾಡಿ ಹುಲಿಯನ್ನು ಕೇಳಿದ್ದು: ಹುಲಿರಾಜನೇ, ನಿಮ್ಮಂಥಾ ಉತ್ಕೃಷ್ಟ ಪರಾಕ್ರಮಿಗಳಿಗೆ ಘಾಯವನ್ನು ಮಾಡಿದ ಮೇಲೆ ಉಳಿದವರನ್ನು ಯಾರು ಕೇಳುತ್ತಾರೆ ಎಂಬೋಣ, ಹುಲಿಯು — ಇಕ್ಕೊಳ್ಳಪ್ಪ, ನನ್ನ ಆವಂಕಿ ತಪ್ಪಿತು ಸರಿ, ನನ್ನ ಒಬ್ಬನನ್ನು ಘಾಯ ಮಾಡಿದರೇನು, ಅದೇ ಮನುಷ್ಯನೇ ನಮ್ಮ ಮೃಗಗಳನ್ನೆಲ್ಲಾ ಗೆದ್ದಾನೆಂಬುವದೇನು?

ತಾತ್ಪರ್ಯ.

ಬಲವೂ ಶೌರ್ಯವೂ ಇವುಗಳಿಂದ ದೊಡ್ಡ ಕೆಲಸಗಳು ನಡಿಯುತ್ತವೆ, ಅವುಗಳ ಸಾಹಿತ್ಯಕ್ಕೆ ಬುದ್ಧಿ ಒಂದು ಇಲ್ಲದೆ ಹೋದರೆ ಅವೇ ತಿರಿಗಿ ಅವನಿಗೆ ದುಃಖ ಕೊಡುವಂಥಾವು ಆಗುತ್ತವೆ. ಬರೇ ಶೌರ್ಯ ಸತ್ತು ಉಳ್ಳವರು ತಮ್ಮ ಸತ್ತುವಿನ ಮೇಲೆ ಭರವಸ ಇಟ್ಟು ಉತಾವಳಿ ಮಾಡೋಣ, ಅವರ ಮರ್ಮಗಳು ವೈರಿ

ಗಳಿಗೆ ತಿಳಿಯದಂಥಾದು ಸಹಾ ವಿಪರೀತವಾಗಿ ತಿಳಿಯ ಬರುತ್ತದೆ. ಅದೇ ಅವರ ಘಾತಕ್ಕೆ ಕಾರಣವಾಗುತ್ತದೆ. ಬುದ್ಧಿ ಯುಕ್ತಿಯುಳ್ಳವರು ಅಧಿಕ ಬಲವಂತರನ್ನು ವ್ಯಸನದೊಳಗೆ ಹಾಕೋದಕ್ಕೆ ಸಮರ್ಥರಾಗುತ್ತಾರೆ. ಪಶುಗಳಿಗೂ ಮನುಷ್ಯಗೂ ಹ್ಯಾಗೋ ಹಾಗೆ ಬುದ್ಧಿ ಇಲ್ಲದ ಬಲವಂತಗೂ ಚಾತುರ್ಯ ಪುರುಷಗೂ ಅಭ್ಯಂತರ ತಿಳಿಯ ತಕ್ಕದ್ದು. ಬುದ್ಧಿಶೂನ್ಯನ ಕೈಯೊಳಗಿದ್ದ ಕಟ್ಟಿಗೆಯನ್ನು ಮುಂದಿದ್ದ ಒಬ್ಬ ಬರೆಗೈಯವನು ಯುಕ್ತಿಯಲ್ಲಿಂದ ತಕ್ಕೊಂಡು ತಿರಿಗಿ ಅವನನ್ನು ಹೊಡಿಯಲಿಕ್ಕೆ ಶಕ್ತನಾಗುತ್ತಾನೆ. ಸಾರಾಂಶ, ವಣ ಶಿಟ್ಟಿರೋಣ, ಅಥವಾ ಸತ್ವ ಇರೋಣ, ಇಂಥವರು ಬುದ್ಧಿವಂತನ ಪೇಚಿನೊಳಗಿಂದ ಎದ್ದು ಹೋಗೋದಿಲ್ಲ.

---

೧೮೬. ನೀತಿಕಥೆ.

ನರಿಯೂ ಮಾಡಿದ ಮುಖವೂ.

ಒಂದಾನೊಂದು ನರಿಯು ಒಂದು ರಾತ್ರಿಯಲ್ಲಿ ಒಬ್ಬ ಜೀನಗಾರನ ಅಂಗಡಿಗೆ ಕಳವಿಗೆ ಹೊಕ್ಕಿತು. ಅಲ್ಲಿ ಮಾಡಿದ ಮುಖಗಳು ಇಟ್ಟಿದ್ದವು. ನರಿಯು ಆ ಮೋರೆಗಳ ಅಗಳಿಸ್ಯಾಡಿ ನೋಡಿ ಕಾಲಿಡೋಣ ಶಬ್ದ ಮಾಡಿದವು. ಆಗ ನರಿಯು ಅಂದದ್ದು: ಇವಂತು ಬಹಳ ಚೆಲೋ ಮುಖಗಳು ಕಾಣುತ್ತಾವೆ, ಅದರೂ ಇದರಲ್ಲಿ ಮಿದಡೆ ಇಲ್ಲ, ಇದರಿಂದ ಇವು ಠಕ್ಕಿಸಲಿಕ್ಕೆ ಮಾತ್ರ ಉಪಯೋಗವು.

ತಾತ್ಪರ್ಯ.

ಮಸ್ತಕದಲ್ಲಿ ಎಣ್ಣೆ ಇಲ್ಲದಂಥವನ ವಣ ಚೆಲುವಿಯು ಠಕ್ಕಿಸಲಿಕ್ಕೆ ಮಾತ್ರ ಯುಕ್ತವೇ ಸರಿ.

---

೧೮೭. ನೀತಿಕಥೆ.

ಬೇಟೆಗಾರನೂ ಗುಬ್ಬಿಯೂ.

ಒಬ್ಬ ಬೇಟೆಗಾರನು ಪಕ್ಷಿಗಳ ಹಿಡಿಯೋದರ ದುಸಕ ಜಾಲವನ್ನು ಹಾಕಿ ಕೊಂಡು ಇರಲಾಗಿ, ಅದರೊಳಗೆ ಒಂದು ಗುಬ್ಬಿ ಶಿಕ್ಕು ದುಃಖದಿಂದ

ಮಾತನಾಡುತ್ತದೆ: ಎಲೋ ದೇವರೇ, ನನ್ನನ್ನು ಸಂಕಟದಲ್ಲಿ ಹಾಕಿದಿ, ನಾನು ಇಂಥಾ ಅನ್ಯಾಯ ಮಾಡಿದ್ದೇನು? ನಾನು ದಾರ ದ್ರವ್ಯವನ್ನೂ ಅಪಹರಿಸಿಲ್ಲ, ಈ ಒಂದು ಅಕ್ಕಿಕಾಳಿನ ದುಸಕ ಪ್ರಾಣಾಂತಿಕ ಪ್ರಾಯಶ್ಚಿತ್ತವು ಯುಕ್ತವಲ್ಲವು.

ತಾತ್ಪರ್ಯ.

ಈ ಜಗತ್ತಿನಲ್ಲಿ ನ್ಯಾಯದ ರೀತಿ ಹ್ಯಾಗಂದರೆ, ಬಡವನು ಹೊಟ್ಟೆಯ ದುಸಕ ಅಲ್ಪ ಕಳವು ಮಾಡಿದರಿಂದ ಅವನಿಗೆ ಪ್ರಾಣದ ಸಂಕಟ ಬರುತ್ತದೆ, ಅದಲ್ಲದೆ ಸಧನಿಕನಿದ್ದವನು ಪ್ರತಿಷ್ಟಿತನು ಎನ್ನಿಸಿ ಕೊಂಡು ಜನಗಳಿಗೆ ಲಕ್ಷಾವಧಿ ರೂಪಾಯಿ ಠಿಂತರಿಸಿದ್ದಾಗ್ಯೂ ತಾನೇ ಅವರಿಗೆ ಕೇವಲ ಇಷ್ಟನೆನ್ನಿಸುತ್ತಾನೆ. ಲಂಚದ ಯೋಗದಿಂದ ಅವನಿಗೆ ಹೀಗೆ ನಡೆಯುತ್ತದೆ.

---

೧೮೮. ನೀತಿಕಥೆ.

ಚಿಗರಿಯೂ ಸಿಂಹವೂ.

ಒಂದು ಚಿಗರಿಗೆ ಬೇಟೆಗಾರನು ನಾಯಿ ಬೆನ್ನ ಹತ್ತಿಸಿರಲಾಗಿ ಜೀವದ ಭಯದಿಂದ ಓಡಿ ಹೋಗಿ ಒಂದು ಗವಿ ಹೊಗುತ್ತಿರಲಾಗಿ, ಅಲ್ಲಿ ಒಂದು ಸಿಂಹವಿತ್ತು. ಅದು ತಾತ್ಕಾಲಕ್ಕೆ ಅದರನ್ನ ಭಕ್ಷಿಸುವ ಸಮಯದಲ್ಲಿ ಚಿಗರಿಯು ತನಗೆ ತಾನೆ ಅಂದು ಕೊಳ್ಳುತ್ತದೆ: ದೇವ ದೇವ ನಾನು ಎಂಥಾ ನಿರ್ಭಾಗ್ಯನು! ಮನುಷ್ಯನ ಕೈಯಿಂದ ನಾಯಿಗಳ ಕಡೆಯಿಂದ ಜೀವ ಉಳಿಸಿ ಕೊಳ್ಳ ಬೇಕೆಂದು ಈ ಗವಿಯಲ್ಲಿ ಬಂದು ಮಹಾ ಕ್ರೂರ ಕ್ಷುಧಿತ ಸಿಂಹನ ಕೈಗೆ ಶಿಕ್ಕೆ.

ತಾತ್ಪರ್ಯ.

ದಾರಾದರೂ ಭಯದಿಂದ ಘಾಬರಿಯಾಗಿ ಅದು ತಪ್ಪಿಸುವ ನಿಮಿತ್ತ ನಿರ್ಭಯದ ಸ್ಥಳಕ್ಕೆ ಹೋಗುವ ಉದ್ಯೋಗ ಮಾಡುವವರು ತತೋಪ್ಯಧಿಕ ವಿಪತ್ತಿನೊಳಗೆ ಬೀಳುತ್ತಾರೆ, ಯಾಕಂದರೆ ವಿಪರೀತಕಾಲ ಬಂದಾಗ್ಯೆ ಒದಗಿದಂಥಾ ವಿಪತ್ತು

ಅವ ಯಾವ ಕಡೆಗೆ ಹೋದರೂ ಕಷ್ಟವಾದೀತು. ಅದರ ಸಲುವಾಗಿ ಜ್ಞಾನಿಗಳಾದವರು ಪಾತಕಕ್ಕೆ ಮಾತ್ರ ಅಂಜುತ್ತಾರೇ ಹೊರ್ತು ಈ ಸೃಷ್ಟಿ ಚೂರುಚೂರು ಆದರೂ ಅಥವಾ ಆಕಾಶವೆ ಕಡಕೊಂಡು ಬಿದ್ದಾಗ್ಯೂ ಅವರ ಚಿತ್ತ ಚಂಚಲವಾಗೋದಿಲ್ಲ.

ಸಮಾಪ್ತಿ

ಅನುಕ್ರಮಣಿಕೆ.

ಪುಟ



ÆSOP'S FABLES

IN CANARESE.

ಈಸೋಪನ

ನೀತಿಕಥೆಗಳು.

THIRD EDITION.

MANGALORE:
PFLEIDERER & RIEHM, MISSION BOOK-SHOP.
1865.